
೨೪೩೨-೨೭

ಸ್ವಾತಂತ್ರ್ಯ ಸಮರದ ಗೀಗಿಯ ಗೀತೆಗಳು



8K1.043
KAM

ಸಂಪಾದಕ ಡಾ. ಸೂರ್ಯನಾಥ ಕಾಮತ್

ಕರ್ನಾಟಕ ಸಾಹಿತ್ಯ ಅಕಾಡೆಮಿ

౧౪.౫-౭౬

[illegible]

[illegible]

[illegible]

[illegible] -19

ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು

ಸಂಪಾದಕರು
ಡಾ|| ಸೂರ್ಯನಾಥ ಕಾಮತ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

Swathantraya Samarada Geyageetegalu :
An Anthology of Kannada Poems Edited by :
Dr. Suryanath Kamath & Published by D.K. Shyamsundara Rao, Registrar **Karnataka Sahitya Academy**, Nrupathunga Road, Bangalore-560002 First Impression 1988. Pp.
248+vi+xxvi

೧೪೩-೭೬
894.043
KAM
೭೨12833

ಬೆಲೆ : ಹತ್ತು ರೂಪಾಯಿ

ಮುದ್ರಕರು : ಪಲ್ಲವಿ ಮುದ್ರಣ
ನಂ. 1, 3ನೇ ಕ್ರಾಸ್, ಬಾಲಾಜಿನಗರ
ಸುದ್ದುಗುಂಟೇಪಾಳ್ಯ, ಡಿ.ಆರ್. ಕಾಲೇಜ್ ಅಂಚೆ,
ಬೆಂಗಳೂರು–560029

ಸಾಹಿತ್ಯ ಅಕಾಡೆಮಿಯ ಕೋರಿಕೆಯ ಮೇರೆಗೆ, ಸಂಪಾದಿಸಿಕೊಟ್ಟ ಡಾ. ಸೂರ್ಯನಾಥ ಕಾಮತ್ ಅವರನ್ನು ನಾನು ತುಂಬ ಕೃತಜ್ಞತೆಯಿಂದ ನೆನೆಯುತ್ತೇನೆ. ಮತ್ತು ಈ ಕೃತಿಯ ಅಚ್ಚಿನ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕೊಟ್ಟ....ಪಲ್ಲವಿ ಮುದ್ರಣಾಲಯದ ಅವರಿಗೆ ನಮ್ಮ ವಂದನೆಗಳು.

ಜಿ. ಎಸ್. ಶಿವರುದ್ರಪ್ಪ

ನವೆಂಬರ್ 1988

ಅಧ್ಯಕ್ಷರು ಸಾಹಿತ್ಯ ಅಕಾಡೆಮಿ

ಸಂಪಾದಕರ ಮಾತು

'ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು' 1988ರಲ್ಲಿ ಪ್ರಕಟವಾಗುತ್ತಿರುವ ನನ್ನ ಮೂರನೇಯ ಪುಸ್ತಕ. 'ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಇನ್ ಕರ್ನಾಟಕ' ಇಂಗ್ಲಿಷ್ ಕೃತಿ ಹಾಗೂ 'ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು' ಕನ್ನಡ ಸಂಪ್ರಬಂಧಗಳ ಸಂಗ್ರಹ ಆಗಸ್ಟ್‌ನಲ್ಲಿ ಪ್ರಕಟವಾದುವು. ಪ್ರಸಕ್ತ ಗೀತೆಗಳ ಸಂಗ್ರಹವು ಈ ಹಿಂದೆಯೇ ಪ್ರಕಟವಾಗಬೇಕಿತ್ತು. ಅದನ್ನು ಸಂಕಲಿಸಿ ಕೊಡಲು ನನ್ನಿಂದಲೇ ವಿಳಂಬವಾಯಿತು. ಈ ಸಂಕಲನದಲ್ಲಿ ನನಗೆ ನೆರವಾದ ವ್ಯಕ್ತಿಗಳ ಉಪಕಾರವನ್ನು ನಾನು ಈ ಪುಸ್ತಕದ ಬೇರೆಡೆ ಸ್ಮರಿಸಿದ್ದೇನೆ. ಈ ಬಗ್ಗೆ ನಾನು ಮಾಡಿಕೊಂಡ ವಿನಂತಿಗೆ ಸೂಕ್ತ ಪ್ರಚಾರ ನೀಡಿದ ನಾಡಿನ ಹಿರಿಯ ದಿನ ಪತ್ರಿಕೆಗಳಾದ 'ಸಂಯುಕ್ತ ಕರ್ನಾಟಕ', 'ಉದಯವಾಣಿ', 'ಕನ್ನಡಪ್ರಭ' ಹಾಗೂ 'ಪ್ರಜಾವಾಣಿ'ಗಳು ನೀಡಿದ ಪ್ರಚಾರಕ್ಕಾಗಿ ಅವರ ಅಪಾರವಾದ ನೆರವನ್ನು ನಾನು ಇಲ್ಲಿ ನೆನೆಯುತ್ತೇನೆ. ಅಲ್ಲದೆ ನನ್ನ ನೆರೆಹೊರೆಯವರೂ ಸ್ವಾತಂತ್ರ್ಯ ಯೋಧರೂ ಆದ ಶ್ರೀ ನಾರಾಯಣಸ್ವಾಮಿ ಕರಡನ್ನು ತಾಳೆ ನೋಡಿದ್ದಾರೆ. ಶ್ರೀ ಎಚ್. ಎಸ್. ಗೋಪಾಲಕೃಷ್ಣ ಇದನ್ನು ಅಚ್ಚುಕಟ್ಟಾಗಿ ಬೆರಳಚ್ಚು ಮಾಡಿಕೊಟ್ಟಿದಾರೆ. ಅಕಾಡೆಮಿಯ ಅಧ್ಯಕ್ಷರು ಹಾಗೂ ನನ್ನ ಹಿತೈಷಿ ಪ್ರೊ|| ಜಿ. ಎಸ್. ಶಿವರುದ್ರಪ್ಪನವರು ಇದಕ್ಕೆ ಮುನ್ನುಡಿ ಬರೆದು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಇವರಿಗೆಲ್ಲ ನನ್ನ ವಂದನೆಗಳು.

25-11-1988 ಸೂರ್ಯನಾಥ ಕಾಮತ್

ನಾಲ್ಕು ಮಾತು

ಭಾರತೀಯ ಸ್ವಾತಂತ್ರ್ಯ ಚಳುವಳಿ, ಭಾರತದಲ್ಲಿ ಸಂಭವಿಸಿದ ಮೊಟ್ಟ ಮೊದಲ ರಾಷ್ಟ್ರವ್ಯಾಪಿಯಾದ ಒಂದು ಸಮಗ್ರ ಆಂದೋಲನವಾಗಿದೆ. ಪರಕೀಯ ಪ್ರಭುತ್ವದಿಂದ ಈ ದೇಶವನ್ನು ಬಿಡುಗಡೆ ಮಾಡಲು ಮಹಾತ್ಮಾ ಗಾಂಧಿಯವರ ಮುಂದಾಳುತನದಲ್ಲಿ ನಡೆದ ಈ ಅಭೂತ ಪೂರ್ವವಾದ ಹೋರಾಟ ಇಡೀ ಭಾರತದ ಎಲ್ಲ ಸ್ತರಗಳವರನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡು, ಹೇಗೆ ಕ್ರಿಯಾಶೀಲವೂ, ಯಶಸ್ವಿಯೂ ಆಯಿತೆಂಬುದು ಈಗ ಚರಿತ್ರೆಯ ಒಂದು ಭಾಗವಾಗಿದೆ. ಚಾರಿತ್ರಕವಾದ ಈ ಹೋರಾಟದಲ್ಲಿ ಪಾಲುಗೊಂಡ ಶ್ರೀ ಸಾಮಾನ್ಯ ಹಾಗೂ ಅಸಾಮಾನ್ಯರನ್ನು ಕುರಿತು, ಅವರ ತ್ಯಾಗ ಸೇವೆ-ಬಲಿದಾನಗಳನ್ನು ಕುರಿತು, ಅವರು ಎತ್ತಿಹಿಡಿದ ಮೌಲ್ಯಗಳನ್ನು, ನಂಬಿಕೊಂಡ ಆದರ್ಶಗಳನ್ನು ಕುರಿತು, ಕನ್ನಡ ನಾಡಿನ ಶಿಷ್ಟ ಹಾಗೂ ಜಾನಪದೀಯ ದನಿಗಳು, ಕವಿತೆಗಳ ಮೂಲಕ, ಹಾಡುಗಳ ಮೂಲಕ, ಲಾವಣಿ-ಗೀಗೀ ಪದ-ದುಂದುಮೆಗಳ

ಮೂಲಕ, ಎಂಥ ಸಮೃದ್ಧವಾದ ಅಭಿವ್ಯಕ್ತಿಯನ್ನು ನೀಡಿ ಅಂದಿನ ಆಂದೋಲನಕ್ಕೆ ನೆರವಾದವು ಎಂಬುದನ್ನು, ಡಾ. ಸೂರ್ಯನಾಥ ಕಾಮತ್ ಅವರು ಸಂಪಾದಿಸಿರುವ 'ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು' ಎಂಬ ಈ ಸಂಗ್ರಹ, ದಾಖಲಿಸಿರುವ ಕ್ರಮ ವಿಶೇಷ ರೀತಿಯದಾಗಿದೆ.

ಭಾರತೀಯ ಸ್ವಾತಂತ್ರ್ಯ ಚಳುವಳಿಯಿಂದ ಸ್ಫೂರ್ತಿಗೊಂಡ ಹಾಗೂ ಅಂದಿನ ಹೋರಾಟಗಾರರಿಗೆ ಸ್ಫೂರ್ತಿ ನೀಡಿದ ಈ ಗೇಯಗೀತೆಗಳು ಅಂದಿನ ಕುದಿಗೊಂಡ ಪರಿಸರದ ಚಿತ್ರವೊಂದನ್ನು ತೆರೆಯುತ್ತಾ, ಒಂದು ಅರ್ಥದಲ್ಲಿ ಪ್ರತಿಭಟನಾ ಸಾಹಿತ್ಯದ ಎಲ್ಲ ಲಕ್ಷಣಗಳನ್ನೂ ಒಳಕೊಳ್ಳುವ ಸ್ವರೂಪದವುಗಳಾಗಿವೆ. ಮತ್ತು ಅಂದು ಎಚ್ಚರ ಗೊಂಡ ಆ ರಾಷ್ಟ್ರಪ್ರಜ್ಞೆ, ಹೋರಾಟದ ಕೆಚ್ಚು, ಸರ್ವೋದಯದ ಆದರ್ಶ ಇತ್ಯಾದಿಗಳು ಭಾರತವು ಸ್ವಾತಂತ್ರ್ಯವನ್ನು ಪಡೆದು ನಾಲ್ಕು ದಶಕಗಳಿಗೂ ಮೀರಿದೆ ಇಂದಿನ ಕಾಲದಲ್ಲಿ ಇನ್ನೂ ಯಾಕೆ ನಿಜವಾದ ವಾಸ್ತವಗಳಾಗುತ್ತಿಲ್ಲ ಎಂಬ ವಿಷಾದದ ನೆಲೆಯಲ್ಲಿ ನಮ್ಮನ್ನು ನಿಲ್ಲಿಸುತ್ತವೆ.

ಈ ಗೇಯ ಗೀತೆಗಳನ್ನು, 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಎಂಬ ಬೃಹತ್ ಸಂಪುಟಗಳನ್ನು ಪ್ರಕಟಿಸಿದ ಡಾ. ಸೂರ್ಯನಾಥ ಕಾಮತ್ ಅವರೇ ಸಂಪಾದಿಸಿ ಕೊಟ್ಟಿರುವುದು ತುಂಬ ಅರ್ಥ ಪೂರ್ಣವಾಗಿದೆ. ಈ ಗೇಯ ಗೀತೆಗಳ ಸಂಗ್ರಹ ಕಾರ್ಯದಲ್ಲಿ ಅವರು ಅನುಸರಿಸಿರುವ ಕ್ರಮಗಳನ್ನು ಮತ್ತು ಇದರಲ್ಲಿ ಸೇರ್ಪಡೆ ಯಾಗಿರುವ ಗೀತೆಗಳ ಔಚಿತ್ಯವನ್ನು ಕುರಿತು ಡಾ. ಕಾಮತರು, ಈ ಕೃತಿಗೆ ಪ್ರಸ್ತಾವನೆಯಾಗಿ ಬರೆದಿರುವ 'ಸಮೀಕ್ಷೆ' ಯಲ್ಲಿ ವಿವರಿಸಿದ್ದಾರೆ. ಸಾಹಿತ್ಯಕವಾಗಿ, ಅದಕ್ಕಿಂತಲೂ ಮಿಗಿಲಾಗಿ ಚಾರಿತ್ರಿಕವಾಗಿ, ಮೌಲಿಕವಾದ ಈ ಗೇಯ ಗೀತೆಗಳನ್ನು, ಕರ್ನಾಟಕ

ಸಮೀಕ್ಷೆ

ಸ್ವಾತಂತ್ರ್ಯ ಚಳವಳಿಯ ಕಾಲಕ್ಕೆ ಸಭೆ ಸಮಾರಂಭಗಳಲ್ಲಿ ಜನರು ಸೇರುವಂತೆ ಆಕರ್ಷಿಸಲು, ಸಭೆಗೆ ನೆರೆದ ಜನರ ಮನೋಭೂಮಿಕೆಯನ್ನು ಭಾಷಣಕ್ಕಾಗಿ ಸಿದ್ಧಪಡಿಸಲು, ಮೆರವಣಿಗೆಗಳಲ್ಲಿ ಸಾಗಿದಾಗ ಜನರಿಗೆ ವಿಚಾರಗಳನ್ನು ತಿಳಿಸಿ ಹೇಳಲು, ಮತ್ತು ಅದಕ್ಕೂ ಹೆಚ್ಚಾಗಿ ಸ್ವತಃ ಚಳವಳಿಯ ಕಾರ್ಯಕರ್ತರಲ್ಲಿ ಸ್ಫೂರ್ತಿತುಂಬಿ, ಅವರ ಮನೋನಿರ್ಧಾರವನ್ನು ಬಲಪಡಿಸಿ, ಅವರಲ್ಲಿ ತಾತ್ವಿಕ ವಿಚಾರಗಳನ್ನು ಬಿಂಬಿಸಿ ಧ್ಯೇಯವಾದದಲ್ಲಿ ಅವರ ನಂಬಿಕೆಯನ್ನು ಬಲಪಡಿಸಲು ಗೇಯವಾದ ಹಾಡುಗಳನ್ನು ಹಾಡುತ್ತಿದ್ದುದು ಸರ್ವವಿದಿತ. ಇಂಪಾದ ದನಿಯಲ್ಲಿ, ವೀರಾವೇಶದಿಂದ ಇಲ್ಲವೆ ಸಾಲಾಗಿ ಸಾಗುವ ಕವಾಯತಿನ ಕಾಲಕ್ಕೆ ಸಂಚಲನ ಗೀತೆಯಾಗಿ ('ಮಾರ್ಚಿಂಗ್ ಸಾಂಗ್') ಅವುಗಳನ್ನು ಹಾಡುವುದರಿಂದ ನಾನಾ ರೀತಿಯ ಪ್ರಭಾವಗಳಾಗುತ್ತಿದ್ದುವು. ಜೊತೆಯಲ್ಲಿ ಲಾವಣಿ ಮತ್ತು ಗೀಗೀ ಪದಗಳ ರೂಪದಲ್ಲಿ, ಒಂದು ರೀತಿಯ ಜಾನಪದ ಶೈಲಿಯಲ್ಲಿ ಕೂಡ ಅದನ್ನು ಹಾಡಲಾಗುತ್ತಿತ್ತು. 'ಸ್ವಾತಂತ್ರ ಸಂಗ್ರಾಮದ ಸ್ಮೃತಿಗಳು' ಬೃಹತ್ ಸಂಪುಟಗಳನ್ನು ಪ್ರಕಟಿಸುವ ಕಾಲದಲ್ಲಿ ಇಂಥ ಹಲವಾರು ಗೀತೆಗಳನ್ನು ಸಂಗ್ರಹಿಸಿದ್ದೆ. ಈಗ ಈ ಕೃತಿಯ ಸಂಪಾದನೆಯ ಪ್ರೇರಣೆ ದೊರೆತಾಗ ಇನ್ನಷ್ಟು ಹಾಡುಗಳನ್ನು ಸಂಗ್ರಹಿಸಿದೆ. ಅವುಗಳ ಸಂಖ್ಯೆ 400 ಮೀರಿತು, ಅವುಗಳಲ್ಲಿ ಕೆಲವನ್ನು ಮಾತ್ರ–ಪ್ರಾತಿನಿಧಿಕವಾಗಿ–ಇಲ್ಲಿ ಸಂಕಲಿಸಿದೆ.

ಇಲ್ಲಿನ ಹಾಡುಗಳಲ್ಲಿ ಕೆಲವು ಪ್ರಸಿದ್ಧ ಕವಿಗಳಿಂದ ರಚಿತವಾದವುಗಳು. ಕೆಲವು ಸ್ವಾತಂತ್ರ್ಯಪ್ರೇಮಿ ಸಾಮಾನ್ಯ ಕವಿಗಳಿಂದ ರಚಿತವಾದವು. ಕೆಲವು ಬಾರಿ ಅವುಗಳಲ್ಲಿ ಕಾವ್ಯಗುಣ ಕಡಿಮೆ ಇದೆ ಅನಿಸಿದರೂ ಅವುಗಳ ಗೇಯಗುಣ, ಅಂದು ಹಾಡುತ್ತಿದ್ದ ಸ್ವಾತಂತ್ರ್ಯಯೋಧರ ಮತ್ತು ಸ್ವಯಂಸೇವಕರ ಮನಮುಟ್ಟುವಲ್ಲಿ ಅವು ಕಂಡ ಯಶಸ್ಸು ಹಾಗೂ ಪ್ರಾಸಬದ್ಧವಾಗಿ ಅಥವಾ ಮಾರ್ಮಿಕವಾಗಿ ಅವುಗಳಲ್ಲಿ ಮೂಡಿಬಂದ ಸಕಾಲಿಕ ಮತ್ತು ಸಾರ್ಥಕ ವಿಚಾರ ವೈಶಿಷ್ಟ್ಯ ಅವುಗಳ ಜನಪ್ರಿಯತೆಗೆ ಸಾಕ್ಷಿ. ಚಳವಳಿಯ ಕಾಲಕ್ಕೆ ಹಾಡುತ್ತಿದ್ದ

ಹಾಡುಗಳಿಗೇ ಇಲ್ಲಿ ಪ್ರಾಶಸ್ತ್ಯ ನೀಡಿದೆ. ಏಕೆಂದರೆ ಅಷ್ಟರ ಮಟ್ಟಿಗೆ ಅವು ಪ್ರೇರಕ ಹಾಗೂ ಜೀವಂತ ಸಾಹಿತ್ಯ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬರೆದ ಹಾಡುಗಳನ್ನು ಈ ಸಂಕಲನದಿಂದ ದೂರವಿರಿಸಿದೆ. ಮುಖ್ಯವಾಗಿ 1947 ಕ್ಕೂ ಮೊದಲು ಪ್ರಕಟವಾದ ಹಾಡಿನ ಪುಸ್ತಿಕೆಗಳೇ ಇದಕ್ಕೆ ಆಧಾರ, ಅವುಗಳಲ್ಲಿನ ಹೆಚ್ಚಿನ ಸಂಕಲನಗಳು ಆ ಕಾಲದಲ್ಲಿ ಚಳವಳಿಗೆ ಸಂಬಂಧವುಳ್ಳವರುಗಳಿಂದ ಪ್ರಕಟವಾದವುಗಳು. ಹಾಗೂ ಜನಪ್ರಿಯವಾಗಿ ಹಾಡಲ್ಪಡುತ್ತಿದ್ದುದರಿಂದ ಅಂಥ ಸಂಕಲನಗಳಲ್ಲಿ ಅವುಗಳಿಗೆ ಸ್ಥಾನದೊರೆಯಿತು. ಕರ್ಣಾಕರ್ಣಿಯಾಗಿ ಸಾಗಿದ ಎಷ್ಟೋ ಹಾಡುಗಳ ಲೇಖಕರು ಯಾರೆಂಬುದೂ ಅನೇಕ ಸಂದರ್ಭಗಳಲ್ಲಿ ತಿಳಿಯದೇ ಹೋಗಿದೆ. ಆದರೆ ಹಾಡುಗಳನ್ನು ಬರೆದು, ಹಾಡುತ್ತಲೂ ಇದ್ದ ಅನೇಕ ದೇಶಭಕ್ತ ಕವಿಗಳು ತಮ್ಮದೇ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇಂಥವರಲ್ಲಿ ಹುಲಕುಂದ ಜೀವಕವಿ ಎಂದು ಪ್ರಸಿದ್ಧರಾದ ಬಸಪ್ಪ ಸಂಗಪ್ಪ ಬೆಟಗೇರಿಯವರು ("ರಾಷ್ಟ್ರೀಯ ಗೀಗೀ ಪದಗಳು"), ಅದೇ ರೀತಿ ಪ್ರಸಿದ್ಧ ಲಾವಣಿಕಾರರೆಂದು ಖ್ಯಾತರಾಗಿ, ಅದನ್ನೇ ತಮ್ಮ ಉದ್ಯೋಗವಾಗಿ ಮಾಡಿ ಕೊಂಡು. ರಾಷ್ಟ್ರೀಯ ವಿಚಾರಗಳ ಪ್ರಚಾರಕ್ಕೂ ತಮ್ಮ ಶಕ್ತಿ. ಸಾಮರ್ಥ್ಯಗಳನ್ನು ವಿನಿಯೋಗಿಸಿದ ಬಿ. ನೀಲಕಂಠಯ್ಯ (ಬೆಂಗಳೂರು) ಹಾಗೂ ಅವರ ಶಿಷ್ಯರೆಂದು ತಮ್ಮನ್ನು ಕರೆದುಕೊಂಡು ಅವರಿಗೆ ನಿಕಟರಾಗಿದ್ದ ಮೈಸೂರಿನ ಎನ್. ವಿಷಕಂಠ ರಾವ್ ಸೇರಿದ್ದಾರೆ. ಕೊನೆಯ ಇಬ್ಬರು ವ್ಯಕ್ತಿಗಳು ಹಳೆಯ ಮೈಸೂರಿನ ಪ್ರಸಿದ್ಧ ಲಾವಣಿಕಾರರು. ಇವರಿಗೂ ಹಿರಿಯರಾಗಿದ್ದ ರಾಮಸ್ವಾಮಿ ಎಂಬವರ ರಚನೆಗಳು ಸಿಕ್ಕಿಲ್ಲ. ನೀಲಕಂಠಯ್ಯನವರ ಹಾಡುಗಳು ಅವರೇ ಹಾಡಿದಂತೆ ಗ್ರಾಮಫೋನ್ ರೆಕಾರ್ಡ್‌ಗಳಾಗಿಯೂ ಬಂದಿವೆ. ಬಿ. ನೀಲಕಂಠಯ್ಯನವರ 'ನವಯುಗ ಪದ್ಧತಿ ನವಸ್ತ್ರೀಪುರುಷರ ನವರಂಗಾಟಗಳೆಚ್ಚಾಯ್ತು' ಹಾಗೂ 'ಭೈಷಕ್ ತಮಾಷಾ ಟೈಗರ್ ನಿಶಾನಾ' ನಾಲ್ಕು ದಶಕಗಳಹಿಂದೆ ಇದ್ದ ಪ್ರತಿ ಯೊಬ್ಬ ಕನ್ನಡಿಗನೂ ಕೇಳಿರಬಹುದಾದ ಲಾವಣಿಗಳಾಗಿವೆ. ಮೊದಲಿನ ಹಾಡಿನಲ್ಲಿರುವ ಪಾಶ್ಚಾತ್ಯ ನಾಗರಿಕತೆಯ ಅಂಧಾನುಕರಣೆಯ ಹರಿತವಾದ ಲೇವಡಿ ಅದ್ವಿತೀಯವಾಗಿದ್ದು ರಾಷ್ಟ್ರೀಯ ಜಾಗೃತಿಯ ಕ್ಷೇತ್ರದಲ್ಲಿ ಅದು ಗಣನೀಯ ಸಾಧನೆ ಮಾಡಿರಬೇಕು. ಇದಲ್ಲದೆ, ದಕ್ಷಿಣ ಕನ್ನಡದ (ಈಗ ಕೇರಳ

ದಲ್ಲಿರುವ) ಕಾಸರಗೋಡಿನವರಾದ ಖ್ಯಾತ ರಾಷ್ಟ್ರಭಕ್ತ ಕವಿ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ 'ಸ್ವರಾಜ್ಯಗೀತಾಮೃತ' (1947) ಹಾಗೂ 'ರಾಷ್ಟ್ರಗೀತ ರತ್ನಾಕರ' (1924), ಆಗಲೇ ಕರ್ನಾಟಕದ ಎಲ್ಲ ಭಾಗಗಳ ಪತ್ರಿಕೆಗಳಲ್ಲಿ ಹಲವಾರು ಬಾರಿ ಪ್ರಕಟವಾದ ಅವರ ಜನಪ್ರಿಯ ಗೀತೆಗಳ ಪ್ರಮುಖ ಸಂಗ್ರಹಗಳು. ಸಿದ್ಧಾಪುರದ ತಿಪ್ಪಯ್ಯ ಮಾಸ್ತರರ ಹಾಡುಗಳ ಸಂಗ್ರಹ 'ರಾಷ್ಟ್ರೀಯ ಪದ್ಯಗಳು' 1930 ರಲ್ಲೇ ಪ್ರಕಟವಾಗಿತ್ತು. ಕಾಂಗ್ರೆಸ್ ಕಮಿಟಿಯ ಪ್ರೇರಣೆಯಿಂದಲೋ ಸ್ವಯಂ ಪ್ರೇರಣೆಯಿಂದಲೋ ಆ ಕಾಲದಲ್ಲಿ ಹಲವು ಹಾಡಿನ ಸಂಗ್ರಹಗಳು ಪಾಕೆಟ್ ಬುಕ್‌ಗಳ ಆಕಾರದಲ್ಲಿ (ಸಭೆ, ಮೆರವಣಿಗೆಗಳ ಕಾಲಕ್ಕೆ ಹಾಡಲು ಜೇಬಿನಲ್ಲಿ ಇಟ್ಟು ಕೊಳ್ಳಲೆಂದೇ ಅವುಗಳನ್ನು ಆ ಗಾತ್ರದಲ್ಲಿ ಮುದ್ರಿಸಲಾಗುತ್ತಿತ್ತು). ಹೊರಬಂದಿವೆ. 'ಜೈ ಭಾರತ ಗೀತೆಗಳು' ಬೆಂಗಳೂರಿನ ಖ್ಯಾತ ರಾಷ್ಟ್ರೀಯವಾದಿ ಪ್ರಕಾಶನ ಸಂಸ್ಥೆ 1947 ರಲ್ಲಿ ಹೊರತಂದ ಇಂಥ ಒಂದು ಕಿರುಹೊತ್ತಿಗೆಯಾಗಿದ್ದು, ಇಂಥ ಹಿಂದಣ ಪ್ರಕಟಣೆಗಳ ಕೊನೆಯ ಆವೃತ್ತಿಯಾಗಿರಲಿಕ್ಕೆ ಸಾಕು. ಕ್ರೌನ್ 1/16 ರ ಆಕಾರದಲ್ಲಿ ಕನ್ನಡ ಎಂಟು ಪಾಯಿಂಟಿನ ಮೊಳೆಗಳಲ್ಲಿ, ಬಹುಶಃ ಮಂಗಳೂರಿನಿಂದ ಪ್ರಕಟವಾದ ನನಗೆ ದೊರೆತ ಎರಡು ಕಿರು ಹೊತ್ತಿಗೆಗಳ ಹಿಂದು ಮುಂದಿನ ಹಲವು ಪುಟಗಳೂ ಕಟ್ಟು ಹಾಕಿದ ಹೊರ ಪುಟವೂ ಕಿತ್ತು ಹೋಗಿರುವುದರಿಂದ, ಅವುಗಳ ಹೆಸರು, ಅವುಗಳ ಪ್ರಕಟನೆಯ ವರ್ಷ ಹಾಗೂ ಪ್ರಕಾಶಕರ ಮತ್ತು ಸಂಪಾದಕರ ಹೆಸರೂ ತಿಳಿಯದಾಗಿದೆ. ಅವುಗಳು ಆ ಚಳವಳಿಯ ಕಾಲಕ್ಕೆ ಜನಪ್ರಿಯವಾಗಿ ಹಾಡುತ್ತಿದ್ದ ಹಾಡುಗಳ ಸಂಗ್ರಹಗಳಾಗಿದ್ದು, ಆಗಲೇ ಅವುಗಳ ಕವಿಗಳ ಹೆಸರೂ ತಿಳಿಯದಷ್ಟು ಕರ್ಣಾಕರ್ಣಿಯಾಗಿ ಹರಡಿದ ಹಾಡುಗಳು ಅವಾಗಿದ್ದವು. ಈ ಪೈಕಿ ಒಂದು ಈ ಸಂಗ್ರಹದಲ್ಲಿ ತಿಪ್ಪಯ್ಯ ಮಾಸ್ತರರ 'ಗಾಂಧಿಯೇ ಗಾಂಧಿ ಸರ್ವತ್ರ ಗಾಂಧಿ' ಅವರ ಹೆಸರಿಲ್ಲದೇ ಪ್ರಕಟವಾಗಿದೆ. ಆದರೆ ಶಾಂತಕವಿಗಳ 'ನಮ್ಮದೀ ನಮ್ಮದೀ ಭರತ ಭೂಮಿ' ಹಾಗೂ ಎಂ. ಎನ್. ಕಾಮತರ ಹಲವು ರಚನೆಗಳಲ್ಲಿ ಕವಿಗಳ ಹೆಸರನ್ನು ಇದರಲ್ಲಿ ಗುರುತಿಸಲಾಗಿದೆ. ಇನ್ನೊಂದು ಸಂಗ್ರಹದಲ್ಲಿ, ದಕ್ಷಿಣ ಕನ್ನಡದಲ್ಲಿ ತೀರ ಜನಪ್ರಿಯವಾಗಿದ್ದ ಹಾಡು 'ಭಾರತೀಯರೆ ನಮ್ಮ ಭಾಗ್ಯ ಸಂಪತ್ತು' ಎಂಬುದನ್ನು 'ಪೆ. ರ. ಮ.' ಎಂಬ

ಕವಿಯ ಹೆಸರನ್ನು ಕೊನೆಗೆ ಗುರುತಿಸಿ ಹೇಳಲಾಗಿದೆ. ಖ್ಯಾತ ರಾಜಕಾರಣಿ ಆನಂದ ಕುಂದಹೆಗ್ಗಡೆಯವರು ಇದನ್ನು ಪುಣೆಂಚತ್ತಾಯರ ಕವಿತೆ ಎಂದು ನನಗೆ ತಿಳಿಸಿದರು. ಆದರೆ ಈ ಕವಿತೆಯ ಕೊನೆಗೆ 'ಪೇಳಿದ ತಾ ರಘುರಾಮ ದಾಸ ತಾಕರೆದೂ' ಎಂದು ಹೇಳಿರುವುದರಿಂದ ರಘುರಾಮ ಎಂಬುದು ಕವಿಯ ಹೆಸರಿನ ಭಾಗವೆಂದು ಊಹಿಸಿಬಹುದಾಗಿದೆ. ಪೆ. ರ. ಮ. ಎಂಬ ಕವಿ ನಾಮ ಕೊನೆಗೆ ಸೂಚಿಸಿದೆ 'ಪೆ' ಎಂಬುದು ಅವರ ಊರ ಹೆಸರಿನ ಪ್ರಥಮಾಕ್ಷರ ಹಾಗೂ 'ಮ' ಎಂಬುದು ಮನೆತನದ (ಧಾರವಾಡ ಕಡೆಯ 'ಅಡ್ಡಹೆಸರು') ಹೆಸರಿನ ಭಾಗವಾಗಿರಬಹುದು. ಪುಂಡೂರರ ಕವಿತೆಯಲ್ಲಿ 'ಲಕ್ಷ್ಮೀಕಾಂತ', 'ಲಕ್ಷ್ಮೀಶ' ಮುಂತಾದ ಮುದ್ರಿಕೆಗಳಿವೆ. ಇದೇ ರೀತಿ ಬಿ. ನೀಲಕಂಠಯ್ಯ, ಭೀಮಕವಿ, ವಿಷಕಂಠರಾವ್ ಮುಂತಾದವರು ತಮ್ಮ ಹಾಡುಗಳ ಕೊನೆಗೆ ತಮ್ಮ ಮುದ್ರಿಕೆಗಳನ್ನು ಸೂಚಿಸಿದ್ದು ಅವುಗಳನ್ನು ದಪ್ಪಕ್ಷರದಲ್ಲಿ ಗುರುತಿಸಿದೆ.

ಪ್ರಸಿದ್ಧ ಕವಿಗಳಾದ ಬೇಂದ್ರೆ (ಉದಾ : 'ಇದೊಹೊರಟಿವು ಬಿಡುಗಡೆಗಾಗಿ' ಇತ್ಯಾದಿ), ಕುವೆಂಪು ('ನಡೆಮುಂದೆ ನಡೆಮುಂದೆ' ಇತ್ಯಾದಿ), ಬಿ. ಎಂ. ಶ್ರೀ ('ಭರತಮಾತೆಯ ಎಂದು ನೀಂತಲೆ ಎತ್ತುವೆ ?') ಇವರುಗಳು ಬರೆದ ಹಾಡುಗಳು ಚಳವಳಿಯ ಕಾಲದಲ್ಲಿ ಹಾಡಲ್ಪಡುತ್ತಿದ್ದವು. ಅವುಗಳನ್ನು ಈ ಸಂಗ್ರಹದಲ್ಲಿ ಸೇರಿಸಿಲ್ಲ. ಕಾರಣ, ಅವು ಅವರ ವಿವಿಧ ಸಂಗ್ರಹಗಳಲ್ಲಿ ಪ್ರಕಟವಾಗಿವೆ. ಹಾಗೂ ಓದುಗರಿಗೆ ಗ್ರಂಥಾಲಯಗಳಲ್ಲಿ ಉಪಲಬ್ಧವಾಗುತ್ತವೆ. ಇಲ್ಲಿ ಪ್ರಕಟವಾದ ಹಲವು ಹಾಡುಗಳು ಅಜ್ಞಾತ ಕವಿಗಳವು ಇಲ್ಲವೆ, ಈಗ ಅಷ್ಟೊಂದು ಮುದ್ರಣದಲ್ಲಿ ಬಾರದೇ ಇದ್ದವುಗಳು. ಪಂಜೆಯವರಂತೆ ಪ್ರಸಿದ್ಧರಾದ ಬರಹಗಾರರ ಹಲವು ಕವಿತೆಗಳನ್ನು ಇಲ್ಲಿ ಸೇರಿಸಿದ್ದು ಅವು ಈಗ ಮುದ್ರಣದಲ್ಲಿ ಸುಲಭವಾಗಿ ದೊರೆಯುತ್ತಿಲ್ಲ, ಎಂಬುದು ಮುಖ್ಯ ಕಾರಣ. ಮತ್ತು ಇಂಥವರಲ್ಲಿ ಅನೇಕರ ರಾಷ್ಟ್ರೀಯ ಚಳವಳಿಯಲ್ಲಿ ವಹಿಸಿದ ಪಾತ್ರದ ಪರಿಚಯ ಕೂಡ ಇಲ್ಲಿ ಮಾಡಿಕೊಡುವ ಯತ್ನ ಮಾಡಿದೆ,

ಸಾಹಿತಿಗಳಾದ ಬಸವರಾಜ ಕಟ್ಟೀಮನಿ, ಭಾರತೀಸುತ, ನಿರಂಜನ, ಶಂ. ಭಾ. ಜೋಶಿ, ತಿ. ತಾ. ಶರ್ಮ, ತ. ರಾ. ಸು, ಸಿದ್ಧವನಹಳ್ಳಿ ಕೃಷ್ಣಶರ್ಮ,

ರಂ. ರಾ. ದಿವಾಕರ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಿ. ಕೆ. ಭಾರದ್ವಾಜ, ಆಲೂರು ವೆಂಕಟರಾವ್, ಮಿರ್ಜಿ ಅಣ್ಣಾರಾವ್, ಕೋ. ಚನ್ನಬಸಪ್ಪ, ಚಳವಳಿಯ ಜೊತೆ ನಿಕಟ ಸಂಪರ್ಕ ಹೊಂದಿದ್ದರು, ಅಥವಾ ಅದರಲ್ಲಿ ಭಾಗವಹಿಸಿ ಜೈಲು ಕಂಡವರು, ಆದರೆ ಇವರು ರಾಷ್ಟ್ರೀಯ ಪ್ರೇರಣೆಯ ಹಾಡುಗಳನ್ನು ರಚಿಸಿದ್ದಾರೇ ಎಂಬುದು ತಿಳಿಯದು. ಶಿವರಾಮ ಕಾರಂತರು ತಾವು ಬರೆದಿದ್ದ (ರಾಷ್ಟ್ರೀಯ) "ರಾಷ್ಟ್ರಗೀತ ಸುಧಾಕರ" 1924 ರಲ್ಲಿ ಪ್ರಕಟವಾಗಿತ್ತೆಂದು ಹೇಳಿದ್ದಾರೆ. ಇದಲ್ಲದೆ ಕೆ. ಕೆ, ಶೆಟ್ಟಿ, ಬಿ. ದಾಮೋದರ ಬಾಳಿಗಾ, ಎಸ್. ಎಸ್. ಕಿಲ್ಲೆ, ದೇವುಡು, ಪಂಡಿತ ತಾರಾನಾಥ, ಎಸ್. ಎನ್. ಹೊಳ್ಳ, ಮ್ಹಾಳಪ್ಪ ಪೈ, ಭಾಲಚಂದ್ರ ಘಾಣೇಕರ, ವಾಮನ ಹೊದಿಕೆ, ಹಿರಿಯಡ ರಾಮರಾಯ ಮಲ್ಯ. ಕೃಷ್ಣಕುಮಾರ ಕಲ್ಲೂರ, ಜಯರಾಮಾಚಾರ್ಯ ಕೊಪ್ಪಳ ಮುಂತಾದ ಹಲವಾರು ಗಣ್ಯರು ಬರೆದಿದ್ದರೆಂದು ಹೇಳಲಾದ ಹಾಡುಗಳು ನನಗೆ ದೊರೆತಿಲ್ಲ. ಅಥವಾ ಇಲ್ಲಿ ಬಂದಿರುವ ಅಜ್ಞಾತ (ಹೆಸರು ತಿಳಿಯದ) ಕವಿಗಳ ಹಾಡುಗಳಲ್ಲಿ ಅವುಗಳ ಸಮಾವೇಶವಾಗಿರಲಿಕ್ಕೂ ಸಾಕು.

ಖ್ಯಾತ ಬರಹಗಾರರೂ ಶಾಂತಕವಿಗಳು (ಬಾಳಾಚಾರ್ಯ ಸಕ್ಕರಿ, 1856–1920) ಬರೆದ ಹಾಡು ಇಲ್ಲಿ ಪ್ರಕಟವಾಗಿದೆ. ಅವರ 'ಏಳು ಸಾಯುಣ ಕಟ್ಟು ಗ್ರಂಥವ ಏಳು ಪಂಪಾಶೀರಕೆ' ಎಂಬ ಹಾಡು ದೊರೆಯದೆ ಹೋಯಿತು. ಅವರು ರಾಷ್ಟ್ರೀಯ ಕೀರ್ತನಕಾರರೂ ಆಗಿದ್ದರು. "ರಾಷ್ಟ್ರೀಯತ್ವವೇ ಯುಗಧರ್ಮ ಎಂದು ಸಾರಿದ್ದು, ಈ ದಿಶೆಯಲ್ಲಿ ದುಡಿದದ್ದು ಶಾಂತಕವಿಗಳ ಹಿರಿಮೆ".

ಸಾಲಿ ರಾಮಚಂದ್ರರಾಯರ (1888–1978) ಒಂದು ಹಾಡು ಇಲ್ಲಿ ಪ್ರಕಟವಾಗಿದೆ. ಅವರು ಗಣ್ಯ ದೇಶಭಕ್ತರು ಹಾಗೂ ಉದ್ದಾಮ ಸಾಹಿತಿಗಳು ; ಬೇಂದ್ರೆ, ಆಲೂರರ ಸಹವರ್ತಿಗಳಾಗಿದ್ದರು.

ತಿಪ್ಪಯ್ಯ ಮಾಸ್ತರರು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ಊರಿನವರು.

ಆರಂಭದಲ್ಲಿ ಅಧ್ಯಾಪಕರಾಗಿದ್ದ ಮುಂದೆ ನವಕರಿ ಹಾಗೂ ದೃಷ್ಟಿಯನ್ನು ಕಳೆದು ಕೊಂಡ ಈ ಅಭಿಜಾತಕವಿ ಬರೆದ ಹಾಡುಗಳ ಒಂದು ಸಂಗ್ರಹ 1930ರಲ್ಲಿ ಪ್ರಕಟವಾಯಿತು. ಇವರು ಕೀರ್ತನಕಾರರೂ ಆಗಿದ್ದರು. 'ಗಾಂಧಿಯೇ ಗಾಂಧಿ ಸರ್ವತ್ರ ಗಾಂಧಿ' ಇವರ ಶೀರ ಪ್ರಸಿದ್ಧವಾದ ಕವಿತೆಯಾಗಿದೆ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ (1939) ಆಗಿದ್ದ ಮುದವೀಡು ಕೃಷ್ಣರಾಯರು (1874–47) ಧಾರವಾಡದ ಗಣ್ಯ ಪತ್ರಕರ್ತರೂ ಅದ್ವಿತೀಯ ವಾಗ್ಮಿಗಳೂ ಏಕೀಕರಣ ವಾದಿಗಳೂ ನಟರೂ ನಾಟಕಕಾರರೂ ಆಗಿದ್ದು ಚಳವಳಿಯಲ್ಲಿ ಜೈಲುಕಂಡವರು. ಅವರ ಹಲವು ಹಾಡುಗಳನ್ನು ಇಲ್ಲಿ ಪ್ರಕಟಿಸಿದೆ.

'ಆನಂದಕಂದ' ರೆಂದು ಪ್ರಸಿದ್ಧರಾದ ಕವಿ, ಸಾಹಿತಿ, ಪತ್ರಕರ್ತ (ಸಂಪಾದಕ : 'ಜಯಂತಿ') ಬೆಟಗೇರಿ ಕೃಷ್ಣಶರ್ಮ ಬೆಳಗಾವಿಯ ರಾಷ್ಟ್ರೀಯ ಶಾಲೆಯಲ್ಲಿ ಅಧ್ಯಾಪಕರಾಗಿ ಹಲವು ವರ್ಷ ದುಡಿದವರಾಗಿದ್ದು ಅವರ ಹಲವು ಹಾಡುಗಳು ಜನಪ್ರಿಯವಾಗಿ ಹಾಡಲ್ಪಡುತ್ತಿದ್ದವು.

ಶ್ರೀಧರ ಖಾನೋಲ್ಕರ್ (ಶಂ. ಭಾ. ಜೋಶಿಯವರ ಊರಾದ) ಗುರ್ಲ ಹೊಸೂರಿನಲ್ಲಿ ಹುಟ್ಟಿದವರು. ಧಾರವಾಡದಲ್ಲಿ ಬೆಳೆದ ಅವರು ಗೆಳೆಯರ ಗುಂಪಿನ ಸದಸ್ಯ ಹಾಗೂ ಬೇಂದ್ರೆಯವರ ಪರಮಮಿತ್ರ. ಜೈಲು ಇಲಾಖೆಯಲ್ಲಿ ಕೆಲಸಕ್ಕಿದ್ದ ಅವರು ಬರೆದು ದೇಶೀದುಮದುಮ್ಮೆ ಒಂದು ಅತ್ಯಂತ ಜನಪ್ರಿಯ ಹಾಗೂ ಪರಿಣಾಮಕಾರಿಯಾದ ಲಾವಣಿ. ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ ನಡೆದಾಗ, ಸಭೆಗೆ ಮೊದಲು ಅದನ್ನು ನಿತ್ಯ ಹಾಡುತ್ತಿದ್ದರೆಂದು ಅಲ್ಲಿನವರು ಹೇಳಿದ್ದಾರೆ. ಈ ಲಾವಣಿಯನ್ನು 1921 ರಲ್ಲಿ 'ಸೀತಾತನಯ' ಎಂಬ ಕಾವ್ಯ ನಾಮದಿಂದ ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು. ಇದರ ಕವಿ ಪೋಲೀಸರಿಗೆ ಅಜ್ಞಾತನಾಗಿ ಉಳಿದು, ಇದರ ಪ್ರಕಾಶಕರಾದ ರಂ. ರಾ. ದಿವಾಕರರಿಗೆ ಇದಕ್ಕಾಗಿ ಮೂರು ವರ್ಷ ಶಿಕ್ಷೆ ಆಯಿತು.

ಸಿಂಪಿ ಲಿಂಗಣ್ಣ ನಾಡಿನ ಗಣ್ಯ ಹಿರಿಯ ಸಾಹಿತಿಗಳು, ಹಲಸಂಗಿಯ

ಮಧುರಚೆನ್ನರ ಸಹವರ್ತಿಗಳು ಚಳವಳಿಯ ಕಾಲಕ್ಕೆ ವಿಜಾಪುರ ಜಿಲ್ಲೆಯಲ್ಲಿ ಮಾಸ್ತರಿಕೆಮಾಡುತ್ತ ಚಳವಳಿಯ ಜೊತೆ ಸಂಪರ್ಕವಿರಿಸಿಕೊಂಡ ಕಾರಣದಿಂದ ಹಲವು ಬಾರಿ 'ಎತ್ತಂಗಡಿ'ಗೆ ಒಳಗಾದವರು. ಈ ಬಗ್ಗೆ ವಿವರ ತಿಳಿಯ ಬಯಸುವವರು 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಸಂಪುಟ III ರಲ್ಲಿ ಅವರ ಬರಹವನ್ನು ನೋಡಬಹುದು. ಜಾನಪದ ಶೈಲಿಯ ಸೊಗಡಿಗೆ ಹೆಸರಾದ ಅವರ ಇಲ್ಲಿ ಪ್ರಕಟವಾಗಿರುವ ಕವಿತೆಗಳಲ್ಲೂ ಅದನ್ನು ನೋಡಬಹುದಾಗಿದೆ.

ಎಂ. ಎನ್. ಕಾಮತ್ (1883-1940) ಕನ್ನಡದ ಆದ್ಯ ಕತೆಗಾರರೂ ಬಹುಮುಖ ಪ್ರತಿಭೆಯ ಸಾಹಿತಿಗಳೂ ಆಗಿದ್ದವರು. ಚಳವಳಿಯ ಪ್ರಭಾವಕ್ಕೆ ಒಳಗಾಗಿ ಹಲವು ಹಾಡುಗಳನ್ನು ರಚಿಸಿದವರು. ರವೀಂದ್ರರ ಹಲವು ಹಾಡು ಗಳನ್ನು ಭಾಷಾಂತರಿಸಿದ್ದಾರೆ. 'ಎಲ್ಲಿ ಮನಕಳುಕಿರದೊ' ಅವರದೇ ಭಾಷಾಂತರ. 'ಜನಗಣಮನ' ವನ್ನು ಅವರು ಭಾಷಾಂತರಿಸಿದ್ದು ಇಲ್ಲಿ ಅದು ಪ್ರಕಟವಾಗಿದೆ. ಹರಿ ಜನರ ಜೊತ ಸಹಭೋಜನಮಾಡಿ ಜಾತಿಯಿಂದ ಬಹಿಷ್ಕೃತರಾಗಿದ್ದವರು, ಅವರ ಹಲವಾರು ಅನ್ಯ ಕೃತಿಗಳಲ್ಲೂ ದೇಶ ಭಕ್ತಿಭಾವ ಉಕ್ಕುತ್ತದೆ.

ಕಯ್ಯಾರ ಕಿಞ್ಞಣ್ಣ ರೈ ಕಾಸರಗೋಡಿನ, ಕನ್ನಡದ ಗಡಿನಾಡಿನ, ದಿಗ್ಗಜವಾಗಿರುವ ಕವಿ. 1942 ರ ಚಳವಳಿಯ ಕಾಲಕ್ಕೆ 'ರಾಷ್ಟ್ರಬಂಧು' (ಮಂಗಳೂರು) ಪತ್ರಿಕೆಯ ಸಂಪಾದಕ ವರ್ಗದಲ್ಲಿದ್ದಾಗಲೇ ಭೂಗತ ಚಟುವಟಿಕೆ ಗಳನ್ನು ಪ್ರಚೋದಿಸುತ್ತಿದ್ದವರು. ಅವರ 'ಶ್ರೀಮುಖ' ಸಂಗ್ರಹದಲ್ಲಿ ಹಲವು ದೇಶಭಕ್ತಿ ಪರ ಹಾಡುಗಳಿವೆ. ಚಳವಳಿಯ ಕಾಲಕ್ಕೆ ಹಾಡುತ್ತಿದ್ದ ಎರಡು ಕವನಗಳನ್ನು ಇಲ್ಲಿ ಪ್ರಕಟಿಸಿದೆ,

'ಚುಟುಕ ಬ್ರಹ್ಮ' ದಿನಕರ ದೇಸಾಯಿ (1900-1982) ಅಂಕೋಲೆಯ ದೇಶಭಕ್ತರ ಮನೆತನದವರು. ಅವರ ಅಣ್ಣ ಶಂಕರ ದೇಸಾಯಿ ಚಳವಳಿಯಲ್ಲಿ ಜೈಲು ಕಂಡಿದ್ದರು. ದಿನಕರರು ಬರೆದ ಹಲವು ದೇಶಭಕ್ತಿ ಪೂರಿತ ಹಾಡುಗಳಲ್ಲಿ ಜನಪ್ರಿಯವಾದ ಒಂದನ್ನು ಇಲ್ಲಿ ಪ್ರಕಟಿಸಿದೆ. ಅಂಕೋಲೆಯ ಧೀರ ನಾಡವರ ಕುರಿತು ಆ ಹಾಡು ಇದೆ.

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ (1899-1952) ಕಾಸರಗೋಡು ಬಳಿಯ ನೆಕ್ರಾಜೆಯವರು. ಅಭಿಜಾತ ಕವಿಗಳಾಗಿದ್ದು ಇವರಷ್ಟು ದೇಶಭಕ್ತಿ ಗೀತೆಗಳನ್ನು ಇನ್ನಾರೂ ಬರೆದಿರಲಾರರು. ಅವರ ಎರಡು ಹಾಡಿನ ಸಂಗ್ರಹಗಳ ಉಲ್ಲೇಖ, ಈ ಮೊದಲೇ ಮಾಡಿದೆ. ಮಂಗಳೂರು, ಉಡುಪಿ, ಬೆಂಗಳೂರು, ಮೈಸೂರು, ಧಾರವಾಡ, ಹುಬ್ಬಳ್ಳಿ ಹೀಗೆ ಎಲ್ಲ ಗಣ್ಯ ಕೇಂದ್ರಗಳ ಪತ್ರಿಕೆಗಳಲ್ಲೂ ಇವರ ಕವಿತೆಗಳು ಪ್ರಕಟವಾಗಿವೆ. ಇವರ 'ಬಾಲ ಗಂಗಾಧರ ಸ್ತವ' 56 ನುಡಿಗಳ ಹಾಡಾಗಿದ್ದು, 1920 ರಲ್ಲಿ ಮಂಗಳೂರಿಗೆ ಗಾಂಧೀಜಿಯ ಮುಂದೆ ಅದನ್ನು ಇವರು ಹಾಡಿ ಮೆಚ್ಚಿಗೆ ಪಡೆದರಂತೆ, 'ಗಾಂಧೀವಿಜಯ' ಎಂಬ ಇನ್ನೊಂದು ನೀಳ್ಗವಿತೆ 101 ನುಡಿಗಳದು. ಬೆಳಗಾವಿ ಕಾಂಗ್ರೆಸ್ಸಿನ ಕಾಲಕ್ಕೆ ಪ್ರಕಟವಾದ (1924) 'ರಾಷ್ಟ್ರಗೀತ ರತ್ನಾಕರ'ಕ್ಕೆ ಗಂಗಾಧರರಾವ್ ದೇಶಪಾಂಡೆ ಮುನ್ನುಡಿ ಬರೆದಿದ್ದಾರೆ. ದೇಶದ ಎಲ್ಲ ಗಣ್ಯ ನಾಯಕರ ಬಗೆಗೆ, ಚಳವಳಿಯ ಕಾಲದ ಎಲ್ಲ ಮುಖ್ಯ ಘಟನೆಗಳ ಬಗೆಗೆ ಸ್ಪಂದಿಸಿ ಅವರು ಕವಿತೆಗಳನ್ನು ರಚಿಸಿದ್ದಾರೆ. ಸಾಮ್ಯವಾದ ಬಗೆಗೂ ಅಂದು ಅವರು ಬರೆದ ಒಂದು ಕವಿತೆಯನ್ನು ಇಲ್ಲಿ ಪ್ರಕಟಿಸಿದೆ. ಅಸ್ಪೃಶ್ಯತೆಯ ಬಗ್ಗೆ ಅವರ ಬರೆದಿರುವ ಹಾಡು ಇಂದಿಗೂ ಆಧುನಿಕವೆನಿಸುವಂತಿದೆ.

ಸ. ಪ. ಗಾಂವಕರ ಉತ್ತರ ಕನ್ನಡ ಜಿಲ್ಲೆಯ ಗಣ್ಯ ಬರಹಗಾರರು. ನಾಡವರು ಚಳವಳಿಯಲ್ಲಿ ಗಣ್ಯ ಪಾತ್ರವಹಿಸಿದ್ದ ಅಂಕೋಲಾ ತಾಲೂಕಿಗೆ ಸೇರಿದವರಾದ ಇವರು 1942 ರಲ್ಲಿ ಜೈಲು ಕಂಡಿದ್ದರು. ಮುಂದೆ ಶಾಸಕರೂ ಆದರು. ಅವರ ಒಂದು ಜನಪ್ರಿಯ ಹಾಡು ಇಲ್ಲಿ ಬಂದಿದೆ, ಇವರು ಪ್ರತಿಭಾ ಶಾಲಿಯಾದ ಕವಿ ಹಾಗೂ ಸಾಹಿತಿಗಳು.

ಜಿ. ನಾರಾಯಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದು 'ವಿನೋದ' ಪತ್ರಿಕೆಯ ಸಂಪಾದಕರಾಗಿ ಪರಿಚಿತರು, 1942 ರಲ್ಲಿ ಬೆಳಗಾವಿ ಜಿಲ್ಲೆಯ ಹುದಲಿ ಆಶ್ರಮದಲ್ಲಿ ಖಾದಿ ಉತ್ಪನ್ನದಲ್ಲಿ ತರಬೇತಿ ಪಡೆಯು ತ್ತಿದ್ದಾಗಲೇ ಸತ್ಯಾಗ್ರಹಮಾಡಿ ಜೈಲು ಕಂಡವರು. 'ಅಕ್ಷರವ ನೀವ್ ಕಲಿಯಿರಿ' ಎಂಬ 100 ನುಡಿಗಳ ಒಂದು ನೀಳ್ಗವನವನ್ನು ಅವರು ಪ್ರಕಟಿಸಿದ್ದಾರೆ. ಚಳವಳಿಯ ಹಿನ್ನೆಲೆಯಲ್ಲಿ ಬರೆದು ಅಂದು ಸಭೆ ಸಮಾರಂಭಗಳಲ್ಲಿ ಅವರೇ

ಅದನ್ನು ಹಾಡುತ್ತಿದ್ದರು, ಅಲ್ಲದೇ 1946 ರಲ್ಲಿ ದೇಶಹಳ್ಳಿಯ ಗ್ರಾಮ ಸೇವಾನಿಲಯ ಪ್ರಕಟಿಸಿದ 'ರಾಷ್ಟ್ರೀಯ ಪದಗಳು' ಎಂಬ ಅವರ ಹಾಡುಗಳ ಸಂಗ್ರಹದಿಂದ ಮೂರು ಹಾಡುಗಳನ್ನು ಆಯ್ದು ಇಲ್ಲಿ ಪ್ರಕಟಿಸಿದೆ.

ನಲವಡಿ ಶ್ರೀಕಂಠಶಾಸ್ತ್ರಿಗಳು (1889–1967) ಗದಗಿನಲ್ಲಿ ನಲೆಸಿದ್ದ ಖ್ಯಾತ ಸಂಸ್ಕೃತ ವಿದ್ವಾಂಸರು ಹಾಗೂ 50 ಕೃತಿಗಳನ್ನು ರಚಿಸಿದ ನಾಟಕಕಾರರು. 'ಹೇಮರೆಡ್ಡಿ ಮಲ್ಲಮ್ಮ' ಇವರ ಖ್ಯಾತ ನಾಟಕ. ರಾಷ್ಟ್ರೀಯವಾದಿಗಳಾದ ಇವರು ಬರೆದ ಹಲವು ಹಾಡುಗಳಲ್ಲಿ 'ಕೇಳಿರಿದೋ ಈ ಕ್ರಾಂತಿಯ ಕಥೆಯಾ ಹೈದರಾ-ಬಾದಿನ ಶರಣಾಗತಿಯ ॥' ಅತ್ಯಂತ ಪ್ರಸಿದ್ಧ ಲಾವಣಿ, ಸ್ವಾತಂತ್ರ್ಯೋತ್ತರ ಕಾಲದ ರಚನೆಯೆಂದು ಅವನ್ನು ಈ ಸಂಗ್ರಹದಲ್ಲಿ ಸೇರಿಸಿಲ್ಲವಾದರೂ ಅವರ ಇತರ ಹಾಡುಗಳನ್ನು ಸೇರಿಸಿದೆ. ಡಾ॥ ಮೃತ್ಯುಂಜಯ ಹೊರಕೇರಿ ಅವರು ಶಾಸ್ತ್ರಿಗಳ ಸಾಹಿತ್ಯವ ಕುರಿತು ಪಿ. ಎಚ್. ಡಿ. ಅಧ್ಯಯನದ ಪ್ರಬಂಧ ರಚಿಸಿದ್ದಾರೆ. ಇದರಲ್ಲಿ 'ರಿವಾಯತ್' ಶೈಲಿಯ ಮೊಹರಂ ಪದಗಳೂ ಇದೆ.

ಗಣ್ಯ ಸ್ವಾತಂತ್ರ್ಯಯೋಧರೂ ರಾಷ್ಟ್ರೀಯ ಕೀರ್ತನಕಾರರೂ ಡಾ॥ ಹರ್ಡೀಕರರ ಸಹವರ್ತಿಗಳೂ ಆದ ದಿ॥ ರಾ. ವೆ. ಕರಗುದರಿ (1905–?) ಹುಬ್ಬಳ್ಳಿ ಊರವರಾಗಿದ್ದು ಮೂಲತಃ ಹಾನಗಲ್ಲಿನಿಂದ ಬಂದು ಅಲ್ಲಿ ನೆಲೆಸಿದವರು. ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದುದ ರಿಂದ ಬೇಂದ್ರೆಯವರು ಅವರ ಅಧ್ಯಾಪಕ. ಉಪ್ಪಿನ ಸತ್ಯಾಗ್ರಹಕ್ಕೆ ಅಂಕೋಲೆಗೆ ಹುಬ್ಬಳ್ಳಿಯಿಂದ ಹೊರಟ ಸ್ವಯಂಸೇವಕರ ತಂಡನ್ನು ಬೀಳ್ಕೊಡುವ ಸಂದರ್ಭದಲ್ಲಿ 'ಧನ್ಯ ಭಾರತ ವೀರಕೇಸರಿಗಳೇ ಭಾಪು' ಎಂಬ ತಾವು ರಚಿಸಿದ ಹಾಡನ್ನು ಹಾಡಲಾಗಿ "ಕೂಡಿದ ಸರ್ವರೂ ಸತ್ಯಾಗ್ರಹಿಗಳೂ ಆನಂದ ಭಾಷ್ಪ ವನ್ನು ಸುರಿಸಿದರು" ಎಂದಿರುವರಲ್ಲದೆ, ಅದೇ ರೀತಿ ತಾವು ಜೈಲಿನಲ್ಲಿ ಇದ್ದಾಗ "ಮನೆ–ಮಾರು, ಆಪ್ತೇಷ್ಟರನ್ನು ಬಿಟ್ಟು ಕಷ್ಟಕಾರ್ಪಣ್ಯಗಳನ್ನು ನಗುತ್ತ ಸಹಿಸಿಕೊಂಡು ಇರಬೇಕಾಗಿದ್ದು ಆ ಜೀವನದಿಂದ ಆಗಾಗ ಮನಸ್ಸು ಬೇಸರ ಗೊಳ್ಳುತ್ತಿತ್ತು. ಅಂತಹ ಮನೋವೃತ್ತಿಯಲ್ಲಿಯೂ ಸಮಾಧಾನದಿಂದ ಇರಲು

ಸಾಧ್ಯವಾಗುವಂತೆ ಮಾಡಲು" ಕಟ್ಟಿದ ಹಾಡುಗಳಲ್ಲಿ 'ಚಿಂತಿಸದಿರು ಮನಸೇ, ನೆನೆಸೆ' ಎಂದು ತಿಳಿಸಿದ್ದಾರೆ (ಸ್ವಾ. ಸಂ. ಸ್ಮೃತಿಗಳು I, ಪು 670-78 ನೋಡಿ). ಇವರ ಹಾಡುಗಳು ಅಣ್ಣು ಗುರೂಜಿಯವರು ಬರೆದ "ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ "ದಲ್ಲೂ ಮುದ್ರಿತವಾಗಿದೆ.

ರಾಮರಾವ್ ಹೆಜೀಬ ಅವರು ಬರೆದ 'ಕರ್ಣಾಟಕ ವೀರರೇಳಿ' ಎಂಬ ಹಾಡು ತೀರ ಜನಪ್ರಿಯವಾಗಿತ್ತು. ಹೆಜೀಬರ ಬಗ್ಗೆ ಹೆಚ್ಚಿನ ವಿವರಗಳೇನೂ ತಿಳಿಯದು. ಅವರು ಧಾರವಾಡದ ರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಯಾಗಿ ಇದ್ದರಂತೆ. ಅವರ ಹಾಡು ಎಷ್ಟು ಜನಪ್ರಿಯವಾಗಿತ್ತೆಂದು ಸೂಚಿಸಲು ಒಂದು ಉದಾಹರಣೆ: 1942 ರಲ್ಲಿ ಹೊಸಪೇಟೆಯ ಕೆಲವು ಗಣ್ಯನಾಯಕರು ಚಳ ವಳಿಯಲ್ಲಿ ಭಾಗವಹಿಸದೆ ಮೂಲೆ ಹಿಡಿದಿರಲು ಈ ಹಾಡನ್ನೇ ವ್ಯಂಗ್ಯವಾಗಿ ಈ ರೀತಿಯಾಗಿ ಬರೆದು ಪ್ರತಿಮಾಡಿ ಅಂಥ ನಾಯಕರ ಮನೆ ಮುಂದೆ ಅಂಟಿಸಿದ್ದ ರಂತೆ: ಹೊಸಪೇಟೆ ಸೂರರೇಳಿ, ಬಳೆಗಾರ ಕೂಗಕೇಳಿ, ಬಳೆಯನ್ನು ಇಟ್ಟು ಕೊಳ್ಳಿ...."(—ಕೋರಿಶೆಟ್ಟಿ ಜಂಬಣ್ಣ, 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿ ಗಳು,' I, ಪು. 921). ಬೈಲಹೊಂಗಲದ ಮ. ಬಾ. ಕುಲಕರ್ಣಿ ಎಂಬುವರು ಬರೆದ ಹಾಡು "ಹೇಳಿನ್ನು ಭರತಮಾತೆ, ಏನಿದಾಯ್ತು...." ತೀರ ಮಾರ್ಮಿಕ ವಾಗಿದ್ದು ಅದನ್ನು ಇಲ್ಲಿ ಸೇರಿಸಿದೆ. ಆದರೆ ಆ ಕವಿಯ ಬಗ್ಗೆ ಯಾವುದೇ ವಿವರಗಳನ್ನು ತಿಳಿಯಲು ಆಗಲಿಲ್ಲ.

ಮಹಿಳೆಯರ ಪೈಕಿ ತಿರುಮಲೆ ರಾಜಮ್ಮ ('ಭಾರತಿ' ಕಾವ್ಯ ನಾಮಾಂಕಿತೆ) ಬರೆದ ಎಲ್ಲೆಡೆ ಜನಪ್ರಿಯವಾಗಿದ್ದ 'ಜೈ ಭಾರತ ಭುವಿಗೆ' ಹಾಡನ್ನು ಇಲ್ಲಿ ಪ್ರಕಟಿಸಿದೆ. ಖ್ಯಾತ ಸ್ವಾತಂತ್ರ್ಯಯೋಧ, ಪತ್ರಿಕೋದ್ಯಮಿ ದಿ॥ ತಿರುಮಲೆ ತಾತಾಚಾರ್ಯ ಶರ್ಮರ ಪತ್ನಿಯಾಗಿದ್ದ ಇವರು ದೇಶಭಕ್ತರಾದ ಕಂದಾಡೆ ಮನೆ ತನದ ಕನ್ಯೆ. ವೀಣೆ ಶೇಷಣ್ಣನವರ ಶಿಷ್ಯೆ. ಗಾಂಧೀಜಿಯವರೂ ಇವರ ವೀಣಾವಾದನಕ್ಕೆ ತಲೆದೂಗಿದರು. ತಿರುಮಲೆ ರಾಜಮ್ಮ ಕನ್ನಡದ ಖ್ಯಾತ ಬರಹಗಾರ್ತಿ ಕೂಡ.

ಇಲ್ಲಿ ಪ್ರಾತಿನಿಧ್ಯ ಪಡೆದ ಇನ್ನೊಬ್ಬ ಮಹಿಳಾ ಲೇಖಕಿ ಮೊಗೇರಿ

ಚಂದ್ರಮ್ಮ. ಇವರು ಖ್ಯಾತ ಕನ್ನಡ ಕವಿ ಪ್ರೊ. ಗೋಪಾಲಕೃಷ್ಣ ಅಡಿಗರ ತಂದೆಯ ತಂಗಿ. ಪ್ರೊ॥ ಅಡಿಗರ ತಂದೆ ಮೊಗೇರಿ ರಾಮಪ್ಪ ಅಡಿಗರು ಬರೆದ ಒಂದು ಹಾಡೂ ಅವರ ಸಂಬಂಧಿಗಳಾದ ಬಲವಾಡಿ ಸೀತಾರಾಮ ಹೆಬ್ಬಾರ (ಪ್ರೊ॥ ಬಿ. ಎಚ್. ಶ್ರೀಧರರ ತಂದೆ), ಅವರ ಸೋದರ ಬಲವಾಡಿ ಹಿರಿಯಣ್ಣ ಹೆಬ್ಬಾರ ಇವರು ಬರೆದ ಒಂದೊಂದು ಹಾಡೂ ಇದರಲ್ಲಿ ಪ್ರಾತಿನಿಧ್ಯ ಪಡೆದಿವೆ. ಇವರು ಬರೆದಿದ್ದ ಇತರ ಹಾಡುಗಳು ಕೈಸೇರಿದ್ದರೂ ಸ್ಥಳಾಭಾವದಿಂದ ಅವುಗಳನ್ನು ಪ್ರಕಟಿಸಿಲ್ಲ.

ಇನ್ನು ಗೀತೆಗಳನ್ನು ರಚಿಸುವುದರ ಜೊತೆ ಅವುಗಳನ್ನು ಹಾಡುವುವಲ್ಲಿಯೂ ಅಗ್ರಗಣ್ಯರಾದ ಹಾಗೂ ಚಳವಳಿಯ ಜೊತೆ ನಿಕಟ ಸಂಪರ್ಕ ಹೊಂದಿ ಹಲವು ಬಾರಿ ಜೈಲುವಾಸ ಅನುಭವಿಸಿದವರೂ ಆದ ಖ್ಯಾತ ಲಾವಣಿಗಾರ 'ಲಾವಣಿ ವಿದ್ವಾನ' 'ತುರಾಬಿರುದಾರ್' ಬಿ. ನೀಲಕಂಠಯ್ಯನವರ ಅನೇಕ ಜನಪ್ರಿಯ ಲಾವಣಿಗಳನ್ನು ಇಲ್ಲಿ ಸೇರಿಸಿದೆ. ಗಣಪತಿ ಗಲಾಟೆ, ವಿದುರಾಶ್ವತ್ಥ ದುರಂತ, ಮುಂದೆ ಮೈಸೂರು ಕಾಂಗ್ರೆಸಿನ ಸಮಗ್ರ ಚಟುವಟಿಕೆಗಳ ಪರಿಚಯ ನೀಡುವ ಇವರ ಲಾವಣಿಗಳು ತೀರ ಖ್ಯಾತ. 3-9-79ರಲ್ಲಿ ತಮ್ಮ 72ನೇಯ ವಯಸ್ಸಿನಲ್ಲಿ ತೀರಿಕೊಂಡ ಅವರು ಹುಟ್ಟಿನಿಂದ ದೇವಾಂಗ ಜಾತಿಗೆ ಸೇರಿದವರಾಗಿ ನೇಕಾರರಾಗಿದ್ದರೂ ಮುಂದೆ ಲಾವಣಿ ಹೇಳುವುದನ್ನು ತಮ್ಮ ವೃತ್ತಿಯಾಗಿ ಮಾಡಿಕೊಂಡರು. ಇವರ ಲಾವಣಿಗಳಿಲ್ಲದೇ ಕಾಂಗ್ರೆಸ್ಸಿನ ಯಾವ ಸಭೆ, ಸಮ್ಮೇಳನಗಳು ಬೆಂಗಳೂರಿನಲ್ಲಿ ನಡೆಯುತ್ತಿರಲಿಲ್ಲ, ರಾಷ್ಟ್ರೀಯವೇ ಅಲ್ಲದೆ ಇತರ ಅನೇಕ ಕಥನ ಲಾವಣಗಳನ್ನೂ ಅವರ ಬರೆದಿದ್ದಾರೆ. ಅವು ಗ್ರಾಮೊಫೋನ್ ತಟ್ಟೆಗಳಾಗಿ ಬಂದ ವಿಚಾರ ಈ ಮೊದಲೇ ಹೇಳಿದೆ. 'ನೀಲಕಂಠ' ಎಂಬ ಹೆಸರು ಸೂಚಿಸುವ ಇವರೆ ಮುದ್ರಿಕೆ ಇವರ ಲಾವಣಿಗಳ ಕೊನೆಗೆ ಇದೆ.

ಇವರ ಶಿಷ್ಯರೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮೈಸೂರಿನ ಎನ್. ವಿಷಕಂಠರಾಯರೂ ಇನ್ನೊಬ್ಬ ಖ್ಯಾತ ಲಾವಣಿಕಾರರು. ನೀಲಕಂಠಯ್ಯನವರ ಲಾವಣಿಗಳನ್ನು ಹಾಡುವುದರ ಜೊತೆ ಸ್ವತಃ ಇವರೇ ಬರೆದ ಲಾವಣಿಗಳೂ ಇಲ್ಲಿ ಪ್ರಕಟವಾಗಿವೆ.

ಬೆಳಗಾವಿ ಜಿಲ್ಲೆಯ ಕಿತ್ತೂರ ಬಳಿಯ ಭಿಷ್ಟಪ್ಪ ಮುಂಡೇದ ಅವರು ಸ್ವಾತಂತ್ರ್ಯ ಯೋಧರೂ ಹಾಡುಗಾರರೂ ಸ್ವತಃ ಪದಗಳನ್ನು ರಚಿಸುವ ಕವಿಗಳೂ ಆಗಿದ್ದರು. 1911ರಲ್ಲಿ ಹುಟ್ಟಿದ ಇವರು ತಮ್ಮ ಊರ ಇಬ್ಬರು ಹರಿಜನ ಬಾಲಕರನ್ನು ಜೊತೆಗೆ ಸೇರಿಸಿಕೊಂಡು ಗೀಗೀಮೇಳ ಕಟ್ಟಿ ಪ್ರಚಾರ ಮಾಡುತ್ತಿದ್ದರು. ಕ್ವಿಟ್ ಇಂಡಿಯಾ ಚಳವಳಿಯ ಕಾಲಕ್ಕೆ ತಿಗಡೊಳ್ಳಿ ಸ್ವಾತಂತ್ರ್ಯಯೋಧರ ಗುಂಪಿನಲ್ಲಿ ಕೆಲಸಮಾಡಿ ವಿಧ್ವಂಸಕ ಕೃತ್ಯಗಳಲ್ಲಿ ಪಾಲು ಗೊಂಡು ದೀರ್ಘಕಾಲ ಜೈಲಿನಲ್ಲಿ ಇದ್ದರು. ಸ್ವಾತಂತ್ರ್ಯಾನಂತರ ಇವರ ಹಲವು ಕಾರ್ಯಕ್ರಮಗಳು ಧಾರವಾಡ ಆಕಾಶವಾಣಿಯಲ್ಲೂ ಬಂದಿವೆ. ಕಥನ, ವರ್ಣ ನಾತ್ಮಕ ಕವನಗಳ ಜೊತೆ, ಉತ್ತಮ ಕಾವ್ಯಗುಣದ ದೇಶಭಕ್ತಿಭಾವದ ಕವನ ಗಳನ್ನೂ ಇವರು ಬರೆದಿದ್ದಾರೆ. ಇವರ ಯಾವುದೇ ಹಾಡುಗಳ ಪುಸ್ತಕ ಕಂಡು ಬರಲಿಲ್ಲ. ಆದರೆ ಇವರು ದಿವಂಗತರಾಗುವ ಮೊದಲು ಅವರೇ ಸ್ವತಃ ಕೆಲ ವನ್ನೂ ಚನ್ನಪ್ಪಾ ವಾಲಿಯವರು ಕೆಲವನ್ನೂ ನನಗೆ ಒದಗಿಸಿದ್ದರು. 'ಬಿಷ್ಟಂಣ' ಎಂಬ ಇವರ ಮುದ್ರಿಕೆ ಹಾಡುಗಳ ಕೊನೆಗೆ ಇದೆ,

ಇನ್ನೊಬ್ಬ ಪ್ರಸಿದ್ಧ ಲಾವಣಿಕಾರ ಹಾಗೂ ಕವಿ ಹುಲಕುಂದ ಭೀಮ- ಕವಿ ಎಂದು ಪ್ರಸಿದ್ಧರಾದ ಹುಲಕುಂದದ (ರಾಮದುರ್ಗ ತಾ||) ಬಸಪ್ಪ ಸಂಗಪ್ಪ ಬೆಟಗೇರಿ; ಅವರು ತಮ್ಮದೇ ಗೀಗೀಮೇಳ ಹೊಂದಿದ್ದರು. ಇವರ ಮೇಳವು ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿತ್ತು. ಇವರ ಮುದ್ರಿತ ಪುಸ್ತಕ ಒಂದರಿಂದ ಹಲವು ಹಾಡುಗಳನ್ನು ಇಲ್ಲಿ ಆರಿಸಿ ಪ್ರಕಟಿಸಿದೆ. ಇನ್ನೊಬ್ಬ ಸ್ವಾತಂತ್ರ್ಯಯೋಧ ಹಣಮಪ್ಪ ಬಸಪ್ಪ ಮಿರ್ಜಿ ಇವರ ಮೇಳದಲ್ಲಿ ಇದ್ದು, ಅವರು ರಚಿಸಿದ ಹಾಡುಗಳೂ ಈ ಸಂಗ್ರಹದಲ್ಲಿ ಇವೆ. 1930ರಲ್ಲಿ ರೂಪು ತಾಳಿದ ಈ ಮೇಳದ ಬಗ್ಗೆ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಹಣಮಪ್ಪ ಬಸಪ್ಪ ಮಿರ್ಜಿಯವರು ಹೀಗೆ ಹೇಳಿದ್ದಾರೆ: "ಅಖಿಲ ಕರ್ನಾಟಕದಲ್ಲಿ ಮೊದಲಿ ನಿಂದ ರೂಢಿಯೊಳಗಿದ್ದ ಗೀಗೀ ಪದಗಳು ಕಾಲಮಾನ ಪರಿಸ್ಥಿತಿಯನ್ನು ಅನು ಸರಿಸಿ ಆಧ್ಯಾತ್ಮಿಕ, ಸಾಮಾಜಿಕ, ಧಾರ್ಮಿಕ, ನೈತಿಕ ವಿಷಯಗಳ ಪ್ರಚಾರ ಮಾಡುತ್ತ ಬಂದ ಸಂಗತಿಯು ತಮ್ಮೆಲ್ಲರಿಗೆ ಗೊತ್ತಿರಲಿಕ್ಕೆ ಸಾಕು. ಆದರೆ ಇತ್ತೀಚೆಗೆ ದೇಶವು ಪಾರತಂತ್ರ್ಯದಲ್ಲಿ ಸಿಲುಕಿ ಜನತೆಯು ಅಜ್ಞಾನಾಂಧಕಾರದಲ್ಲಿ

ಮುಖ್ಯಾಗಿ ಕೇವಲ ಸ್ವಾರ್ಥಲೋಲುಪರಾಗಿ ಪಾರಮಾರ್ಥಿಕ ವಿಷಯಗಳನ್ನು ಮರೆತು ವಿಷಯಾಸಕ್ತರಾಗಿ ಶ್ರಿಂಗಾರ ಪದಗಳಿಗೆ ಮೋಹಿತರಾದ್ದರಿದ ಪದ ಗಳನ್ನು ಮಾಡುಪವನೂ ಹಾಡುವವರೂ ಭಿಬತ್ಸ ಶಬ್ದಗಳಿಂದ ಕೂಡಿದ ಶ್ರಿಂಗಾರ ಪದಗಳನ್ನು (ಹರದೇಶಿ ನಾಗೇಶಿ ಅಥವಾ ಕಲಿಗಿ ತುರಾಯಿಯೆಂಬ) ಪದಗಳನ್ನು ಹಾಡತೊಡಗಿದರು, ಹಳ್ಳಿಯ ಜನರಂತೂ ತಮ್ಮ ವಿರಾಮ ಕಾಲ ವನ್ನೆಲ್ಲ ಇಂಥ ಪದಗಳನ್ನು ಕೇಳುವುದರಲ್ಲದೆ ಬೇರೊಂದು ವಿಷಯವನ್ನು ತಿಳಿದು ಕೊಳ್ಳದಷ್ಟು ಅಸಮರ್ಥರಾದರು....'' ಎಂದು ಹೇಳಿರುವರಲ್ಲದೆ ಗಾಂಧಿ ಪ್ರಣೀತ ಸ್ವಾತಂತ್ರ್ಯ ಮಂತ್ರವನ್ನು ಹಳ್ಳಿಯ ಅಜ್ಞಾನಿ ಜನರಿಗೆ ತಿಳಿಸಿಹೇಳಲು ''ಹಳ್ಳಿಗರಲ್ಲಿ ಹುಟ್ಟಿ ಹಳ್ಳಿಗರಲ್ಲಿ ಬೆಳೆದು ಹಳ್ಳಿಗರ ಸ್ಥಿತಿಯನ್ನರಿತ ಪಳ್ಳಿಗರಾದ ಶ್ರೀ ವೆಂಕಟರಡ್ಡಿ ಹೂಲಿಯವರಿಗೆ ಗೀ, ಗೀ ಪದಗಳಿಂದ ತಿಳಿಸಿದರೆ ತಿಳಿಯಬಹು ದೆಂದು ಭರವಸೆಯಾಯಿತು.'' ಅವರ ಪ್ರೇರಣೆಯೇ ಇಂಥ ಮೇಳವನ್ನು 1930ರಲ್ಲಿ ಹುಟ್ಟುಹಾಕಲು ಕಾರಣವೆಂದು ಅವರು ಬರೆದಿದ್ದಾರೆ. ನನಗೆ ದೊರೆತ ಮುದ್ರಿತವಾದ ಈ ''ರಾಷ್ಟ್ರೀಯ ಗೀ ಗೀ ಪದಗಳು'' ಸಂಗ್ರಹದಲ್ಲಿನ ಆದರ ಕೊನೆಯ ಹಲವು ಹಾಳೆಗಳು ಕಿತ್ತು ಹೋಗಿವೆ, ಹಲವು ಹಾಡುಗಳನ್ನು ಇಲ್ಲಿ ಆಯ್ದುಕೊಂಡಿದ್ದು ಅವುಗಳ ಕೊನೆಗೆ ಭೀಮಕವಿಯ ಅಂಕಿತವಿದೆ. ಆದರೆ ಹಣಮಪ್ಪ ಬಸಪ್ಪ ಮಿರ್ಜಿ ಬರೆದ ಖಾದಿಯ ಮಹತ್ವ, ಹುಲಕುಂದ ಪಟ್ಟದೇವರು ಬರೆದ ಹಿಂದುಸ್ಥಾನದ ಪ್ರಾಚೀನ ವೈಭವದ ವರ್ಣನೆ, ಸಿದ್ದ ರಾಯ ಗಿರಿಮಲ್ಲ ಸಂಗಯ್ಯನವರ ಚರಖಾ, ಆಧುನಿಕ ಹೆಣ್ಣುಗಂಡಿನ ಉಡುಪು ವದುಷ್ಟ ಚಟಗಳ ವರ್ಣನೆಯುಳ್ಳ ಹಾಡುಗಳನ್ನು ರಚಿಸಿದ್ದಾಗಿ ಹೇಳಿದ್ದಾರೆ. ಇವು ನನಗೆ ದೊರೆತ ಪ್ರತಿಯಲ್ಲಿ ಇಲ್ಲ.

ತೀರ್ಥಹಳ್ಳಿಯ ಬಿ. ವಿ. ಕಾಮತ್ ಎಂಬ ಸ್ವಾತಂತ್ರ್ಯಯೋಧರು 1942ರ ಚಳವಳಿಯ ಕಾಲದಲ್ಲೇ ಮಂಗಳೂರಲ್ಲಿ ಮುದ್ರಿಸಿ ಪ್ರಕಟಿಸಿದ್ದ 'ಸತ್ಯಪ್ರಕಾಶ' ಎಂಬ ಹೆಸರಿನ ಕಿರುಪುಸ್ತಿಕೆಯನ್ನು ಕಳುಹಿಸಿದ್ದು 1942 ರ ಚಳ ವಳಿಯನ್ನು ವರ್ಣಿಸುವ ಒಂದು ಲಾವಣಿ ಅದರಲ್ಲಿ ಇದೆ. ಅದನ್ನೂ ಇನ್ನೊಂದು ಅದರೊಳಗಿನ ಹಾಡನ್ನೂ ಇಲ್ಲಿ ಸೇರಿಸಿದೆ. ರಾಣೆಬೆನ್ನೂರಿನ ಖ್ಯಾತ ಲಾವಣಿಕಾರ ಸಮುದ್ ಸಾಹೇಬರು ಬರೆದಿದ್ದ ಮೈಲಾರರ ಬಗೆಗಿನ ಹಾಡನ್ನು ಇಲ್ಲಿ ಸೇರಿಸಿದೆ.

ಸಮದ್ ಸಾಹೇಬರು ಖ್ಯಾತ ಲಾವಣಿಕಾರರಾಗಿದ್ದು ಆಕಾಶವಾಣಿಯಲ್ಲೂ ಅವರು ಹಾಡಿದ್ದಾನೆ.

ಇಲ್ಲಿನ ಹಾಡುಗಳ ವಿಷಯ ನಿರೂಪಣೆಯ ಬಗ್ಗೆ ಕೆಲವು ಮಾತು ಇಲ್ಲಿ ಹೇಳಬೇಕು. ನಾನು ತಜ್ಞ ವಿಮರ್ಶಕನಲ್ಲ, ಗುಣಗ್ರಾಹಿ ರಸಿಕ ಓದುಗನಾಗಿ ಮಾತ್ರ ನನ್ನ ಅಭಿಪ್ರಾಯಗಳನ್ನು ಹೇಳಿದ್ದೇನೆ, ತಜ್ಞ ವಿಮರ್ಶಕರಿಗೆ ಈ ಸಂಗ್ರಹ ಈಗ ಉಪಲಬ್ಧವಾಗಲಿದ್ದು ನನಗಿಂತ ಉತ್ತಮವಾಗಿ ಸಮರ್ಥವಾಗಿ ಅವುಗಳ ವಿಮರ್ಶೆ, ವಿಶ್ಲೇಷಣೆ ಅವರಿಂದ ಆಗಬಹುದು. ಇಲ್ಲಿ ಮೊದಲು ಭಾರತಮಾತೆ, ಭಾರತದೇಶದ ವರ್ಣನೆ, ಅದರ ಗತವೈಭವ, ವರ್ತಮಾನದ ದುಸ್ಥಿತಿಯನ್ನು ವರ್ಣಿಸುವ ಹಾಡುಗಳನ್ನು ನೀಡಿದೆ. ಮೊದಲ 19 ಹಾಡುಗಳು ಇಂಥವಾಗಿವೆ. ಮುಂದೆ, ಹೋರಾಟಕ್ಕೆ ಕರೆನೀಡುವ, ಅಸಹಕಾರದ ಕಾರ್ಯಕ್ರಮಗಳನ್ನು ನಿರೂಪಿಸುವ, ಸ್ವಯಂಸೇವಕ ಅಥವಾ ಸತ್ಯಾಗ್ರಹಿಯ ಗುಣಗಳು, ಸಾಧನೆಗಳನ್ನು ನಿರೂಪಿಸುವ ಹಾಡುಗಳಿವೆ. ಕೆಲವು ಹಾಡುಗಳಲ್ಲಿ ಹೋರಾಟಗಾರನಲ್ಲಿರಬೇಕಾದ ವೀರವ್ರತ, ಧೃಢನಿಶ್ಚಯ, ಕಷ್ಟಸಹಿಷ್ಣುತೆ, ತ್ಯಾಗಭಾವ, ಬಲಿದಾನಕ್ಕಾಗಿ ಸಿದ್ಧತೆ ಮುಂತಾದ ಗುಣಗಳ ವಿವರಣೆ, ಸೂಚ್ಯವಾಗಿ, ವಾಚ್ಯವಾಗಿ, ಮಾರ್ಮಿಕವಾಗಿ ಬಂದಿದೆ. ದಾಸರ ಪದಗಳಂತೆ ಕಾಣುವ 'ನಾನೋಡಿದ ಮಂಗ' ಹಾಗೂ 'ಕಳ್ಳಿ' ಎಂಬ ಹಾಡುಗಳು ಪರಿಸರದ ರೂಪಕಗಳೊಂದಿಗೆ ಮೂಡಿಬಂದ ಪ್ರಭಾವೀ ಕವಿತೆಗಳು. ಇಲ್ಲಿ ಜಾತಿ ವೈಷಮ್ಯ, ಬ್ರಾಹ್ಮಣ-ಬ್ರಾಹ್ಮಣೇತರ ವೈಷಮ್ಯ, ಹಿಂದು-ಮುಸಲ್ಮಾನ್ ಐಕ್ಯ ಇವುಗಳ ವಿಚಾರ ಸೂಚನೆ ನೀಡುವ ಹಾಡುಗಳೂ ಇವೆ. ದೇಶದ ಕೃಷಿ, ಕೈಗಾರಿಕೆ, ಕಸಬು, ಆಡಳಿತ ಪರಿಸ್ಥಿತಿಯ ಚಿತ್ರಣವನ್ನು ಸೂಚ್ಯವಾಗ ಹೇಳುವ ಕವಿತೆಗಳೂ ಉಂಟು. ಕ್ರಮಾಂಕ 51ರಿಂದ ಮುಂದಿನ ಹಾಡುಗಳು ಗಾಂಧಿ ಎಂಬ ಹೆಸರು ಯಾವ ಸಂಗತಿಗಳನ್ನು ಪ್ರತಿನಿಧಿಸುತ್ತಿತ್ತು. ಜನರು ಮಹಾತ್ಮರನ್ನು ಹೇಗೆ ಸ್ವೀಕರಿಸುತ್ತಿದ್ದರು, ಎಂಬ ಕಲ್ಪನೆ ನೀಡುತ್ತವೆ. ಕ್ರಮಾಂಕ 72ರಿಂದ ಮುಂದಿನ ಹಾಡುಗಳು ಖಾದಿಯ ಮಹಿಮೆ, ನೂಲುವುದರ ಅವಶ್ಯಕತೆ. ಗೃಹಕೈಗಾರಿಕೆಗಳ ಮಹತ್ವ, ವಿದೇಶೀಯರ ಆರ್ಥಿಕ ಶೋಷಣೆಯ ಸ್ವರೂಪ ಇವುಗಳನ್ನು ವಿವಿಧ ರೀತಿಯಲ್ಲಿ ತಿಳಿಸಿ ಹೇಳುವ ಯತ್ನ ಮಾಡುತ್ತವೆ.

ಕ್ರ. 70ರ 'ಭಾರತೀಯರೆ ನಮ್ಮ ಭಾಗ್ಯ ಸಂಪತ್ತು' ಬ್ರಿಟಿಷರ ಆಡಳಿತ ತಂದ ಆರ್ಥಿಕ ಸಂಕಷ್ಟಗಳನ್ನು ವಿಷದವಾಗಿ ತಿಳಿಸುತ್ತದೆ. ಸಂಗ್ರಹದ ಕೊನೆಗೆ ಕೊಟ್ಟಿರುವ 'ದೇಶೀದುಮದುಮ್ಮೆ' ಸಮಗ್ರ ಭಾರತದುರ್ದೆಶೆ, ಬ್ರಿಟಿಷರ ಆಡಳಿತದಿಂದ ಸಕಲ ರಂಗಗಳಲ್ಲಿ ಆದ ಪತನ, ಆರ್ಥಿಕ, ಆಡಳಿತಾತ್ಮಿಕ ನೈತಿಕ ಸಂಕಟಗಳ ಸಮರ್ಪಕ ಚಿತ್ರಣವನ್ನು ಸಮಗ್ರವಾಗಿ ನೀಡುತ್ತದೆ. ಭಗತ್‌ಸಿಂಗ್, ಸಂಗೊಳ್ಳಿ ರಾಯಣ್ಣ, ಗಂಗಾಧರರಾವ್, ಚೆನ್ನಪ್ಪ ವಾಲಿ, ಮೈಲಾರ ಮಹಾದೇವ, ಹೀಗೆ ಅನೇಕ ಗಣ್ಯ ದೇಶಭಕ್ತರ ಬಗೆಗಿನ ಹಾಡು, ಲಾವಣಿಗಳು ಮುಂದೆ ಬಂದಿವೆ. ಕ್ರ. 83ರಿಂದ ಮುಂದೆ 13 ಹಾಡುಗಳು ಮದ್ಯಪಾನದ ನಿಷೇಧವನ್ನು ಎತ್ತಿ ಹೇಳುವ ಕವಿತೆಗಳು. ಕಾಂಗ್ರೆಸ್ಸಿನ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾದ ಮದ್ಯಪಾನ ನಿಷೇಧಕ್ಕೆ ಸಂಬಂಧಿಸಿದ ಈ ಹಾಡುಗಳ ಈ ಚಟಗಳಿಂದ ದೇಶಕ್ಕಾಗುವ ಆರ್ಥಿಕ ನಷ್ಟ, ಬಡವರಿಗಾಗುವ ಆರ್ಥಿಕ, ದೈಹಿಕ, ಕೌಟುಂಬಿಕ ಹಾಗೂ ನೈತಿಕ ಹಾನಿಗಳ ವಿವಿಧ ಮುಖಗಳನ್ನು ಎಳೆಎಳೆಯಾಗಿ ಬಿಡಿಸಿ ಹೇಳುತ್ತವೆ. ಚಹಾಪಾನದ ವಿರುದ್ಧವೂ ಧ್ವನಿಯೆತ್ತಿರುವುದು ಇಲ್ಲಿ ಕಾಣುತ್ತದೆ. 'ಹರಿಜನ ಸಂಧಾನ' ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ದೀರ್ಘ ಕವನವಾಗಿದ್ದು ಅಸ್ಪೃಶ್ಯತಾ ಸಮಸ್ಯೆಯ ಹಲವು ಮುಖಗಳನ್ನು ಬಿಡಿಬಿಡಿಸಿ ಹೇಳಿ ಮನಃಪರಿವರ್ತನೆಯ ಯತ್ನ ಮಾಡುತ್ತದೆ. ಖ್ಯಾತ ಕವಿ ಪಂಜೆಯವರೂ ಇಂಥದೇ ಒಂದು ಕಿರು ಹಾಡನ್ನು ಬರೆದಿದ್ದರು. ದೇಶಭಕ್ತಿಪರವಾದ ಅವರ 'ತೂಕಡಿಕೆಯು ಕಳೆಯದೇಕೆ ಕುಳಿತಿಹೆ ಗೆಳೆಯ' ಆ ಕಾಲದ ಹಾಡುವ ಉದ್ದೇಶಕ್ಕಾಗಿ ಮುದ್ರಿಸಿದ್ದ ಕಿರುಪುಸ್ತಕದಲ್ಲಿ ಬಂದಿರುವುದರಿಂದ ಅದನ್ನು ಈ ಸಂಗ್ರಹದಲ್ಲಿ ಸೇರಿಸಿದೆ. ಉಳಿದ ಅವರ ಹಾಡುಗಳು. ರಾಷ್ಟ್ರೀಯತೆಗೆ ಸಂಬಂಧಿಸಿದವುಗಳಾಗಿದ್ದರೂ ಚಳವಳಿಯ ಕಾಲಕ್ಕೆ ಹಾಡಲ್ಪಡುತ್ತಿರಲಿಲ್ಲವೆಂದು ಕೈ ಬಿಟ್ಟಿದೆ.

ಚಳವಳಿಯ ವಿವಿಧ ಸಂದರ್ಭಗಳಲ್ಲಿ ವಿವಿಧ ಕಾಲದಲ್ಲಿ ಮೂಡಿಬಂದ ಹಾಡುಗಳನ್ನು ಕೊನೆಗೆ ಕೊಟ್ಟಿವೆ. ಇಲ್ಲಿನ ವರ್ಗೀಕರಣ ತೀರ ಸ್ಥೂಲವಾದದ್ದು. ಎಲ್ಲ ಭಾಗಗಳ ಎಲ್ಲ ಕಾಲದ ಹಾಡುಗಳನ್ನು ಪ್ರಾತಿನಿಧಿಕವಾಗಿ ಇಲ್ಲಿ ಸಂಗ್ರಹಿಸಿದೆ. ಆದರೆ ಹೈದರಾಬಾದ್ ಕರ್ನಾಟಕದ ಹಾಡುಗಳೊಂದೂ ಪ್ರಯತ್ನಿಸಿದರೂ ಸಿಗಲಿಲ್ಲ. ಸಲವಡಿ ಶ್ರೀಕಂಠ ಶಾಸ್ತ್ರಿಗಳ ಹಾಡುಗಳು ಅಲ್ಲಿ ಜನಪ್ರಿಯವಾಗಿದ್ದವು.

ಅದರೆ ಸ್ವತಃ ಅವರು ಧಾರವಾಡ ಜಿಲ್ಲೆಯವರು. ಹೈದರಾಬಾದ್ ಕರ್ನಾಟಕ ದಲ್ಲಿ ಕನ್ನಡಕ್ಕಿಂತ ಹಿಂದೀ ಹಾಡುಗಳು ಜನಪ್ರಿಯವಾದ್ದವು. ಉಳಿದ ಕಡೆಯೂ ಹಿಂದೀ, ಮರಾಠೀ, ಬಂಗಾಳಿ ಹಾಡುಗಳನ್ನು ಹಾಡುತ್ತಿದ್ದರು. 'ಸಾರೇ ಜಹಾಂಸೇ ಅಚ್ಛಾ' 'ಝಂಡಾ ಉಂಚಾ ರಹೇ ಹಮಾರಾ' 'ಬಸೇಹಮ ಹಿಂದ ಕೇ ಯೋಗಿ', ಮುಂತಾದ ಹಲವು ಜನಪ್ರಿಯ ಹಿಂದೀ ಹಾಡುಗಳನ್ನು ಇಲ್ಲಿ ಉಲ್ಲೆಖಿಸಬಹುದುದು. ಆದರೆ ಇಲ್ಲಿ ಕನ್ನಡ ಹಾಡುಗಳನ್ನು ಮಾತ್ರ ಸಂಗ್ರಹಿಸಿದೆ. ಶೇಕಡಾ 90 ಹಾಡುಗಳು ಆ ಕಾಲದ ಮುದ್ರಿತ ಹಾಡುಗಳ ಪುಸ್ತಿಕೆಗಳಿಂದ ಆಯ್ದವು. ಗೇಯವಾಗಿದ್ದ, ಜನಪ್ರಿಯ ಹಾಡುಗಳಷ್ಟೇ ಅಂಥ ಪುಸ್ತಿಕೆಗಳು ಬರುತ್ತಿದ್ದವು. ಆದರೆ ಅಂಥ ಎಲ್ಲ ಹಾಡುಗಳನ್ನು ಇಲ್ಲಿ ಸೇರಿಸಿಲ್ಲ. ಒಂದು ಪ್ರಾತಿನಿಧಿಕ ಸಂಕಲನ ಇದು ಅಷ್ಟೆ. ನನ್ನಲ್ಲಿ ಒಟ್ಟು 400ಕ್ಕೂ ಹೆಚ್ಚು ಹಾಡುಗಳು ಸಂಗ್ರಹವಾಗಿವೆಯೆಂದು ಮೊದಲೇ ಹೇಳಿದ್ದೇನೆ.

ಸ್ವಾತಂತ್ರ್ಯ ದೊರೆತು ನಾಲ್ಕು ದಶಕಗಳಾದ ಸಂದರ್ಭದಲ್ಲಿ ಇಂಥ ಒಂದು ಸಂಗ್ರಹವನ್ನು ಪ್ರಕಟಿಸುವುದು ಸೂಕ್ತವೆಂದು ನಾನು ಹೇಳಿದಾಗ ಅದಕ್ಕೆ ಒಪ್ಪಿಗೆ ನೀಡಿ ಸಾಹಿತ್ಯ ಅಕಾದೆಮಿ ಅಧ್ಯಕ್ಷರು ಮುಂದೆ ನನಗೇ ಈ ಕೆಲಸ ಒಪ್ಪಿಸಿದಾಗ ಅಚ್ಚರಿ ಆಯಿತು. ನನಗಿರುವ ಹಲವಾರು ಇತಿಮಿತಿಗಳ ನಡುವೆ ಈ ಕೆಲಸ ಮಾಡಿದ್ದೇನೆ.

ಕೊನೆಯದಾಗಿ, ಈ ಪ್ರಕಟನೆಯಲ್ಲಿ ನಾನು ಬಳಸಿಕೊಂಡ ಮುದ್ರಿತ ಪುಸ್ತಕಗಳ ಪಟ್ಟಿಯನ್ನು ಇಲ್ಲಿ ಕೊಟ್ಟಿದ್ದೇನೆ. ಕೆಲವು ಜನಪ್ರಿಯ ಹಾಡುಗಳು ಮುದ್ರಿತ ರೂಪದಲ್ಲಿ ದೊರೆಯಲಿಲ್ಲ, ಅವುಗಳನ್ನು ಒದಗಿಸಿದ ವ್ಯಕ್ತಿಗಳನು. ಆಯಾ ಹಾಡನ್ನು ಇಲ್ಲಿ ಮುದ್ರಿಸಿದ್ದರ ಜೊತೆಗೆ, ಅದರ ಕೆಳಗಡೆ ಹೇಳಿದ್ದೇನೆ ನನ್ನಲ್ಲಿ ಸಂಗ್ರಹವಾದ ಹಾಡುಗಳಲ್ಲಿ ಅರ್ಧದಷ್ಟು ಮೊದಲೇ, 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಸಂಕಲನದ ಕಾಲಕ್ಕೇ ನನ್ನ ಕೈ ಸೇರಿಸಿದ್ದು, ಉಳಿ ದರ್ಧವನ್ನು ಈ ಪುಸ್ತಕದ ಸಂಕಲನ ಕಾಲಕ್ಕೆ ಪತ್ರಿಕಾ ಪ್ರಕಟಣೆ ನೀಡಿ ಸಾರ್ವ ಸಾರ್ವಜನಿಕರಿಂದ ಸಂಗ್ರಹಿಸಿದೆ.

1. 'ರಾಷ್ಟ್ರೀಯ ಗೀಗಿ ಪದಗಳು ಲೇಖಕರು: ಬಸಪ್ಪ ಸಂಗಪ್ಪ,'

ಬೆಟಗೇರಿ (ಹುಲಕುಂದ ಭೀಮಕವಿ)ವ ಹಣಮಪ್ಪ ಬಸವ್ವ ಮಿರ್ಜಿ, ಬಾಗಲಕೋಟೆ. 1939 ? ಇದನ್ನು ಮಿರ್ಜಿಯವರೇ ನನಗೆ ಒದಗಿಸಿದ್ದರು).

2. ದೇಶೀ ದುಮದುಮ್ಮೆ.' ಸೀತಾತನಯ, ಧಾರವಾಡ, ಸು. 1921. ಗೋಕರ್ಣ ಸ್ಟಡಿ ಸರ್ಕಲ್ ಗ್ರಂಥಾಲಯದಿಂದ.

3. 'ಸೇವಾದಲ ಗೀತೆಗಳು,' ಸಂ॥ ಬುರ್ಲಿ ಬಿಂದು ಮಾಧವ, ಧಾರವಾಡ, 1946 (ಶ್ರೀ ಗೋವಿಂದಮೂರ್ತಿ ದೇಸಾಯಿ ಒದಗಿಸಿದ್ದು).

4. 'ಕಾಂಗ್ರೆಸ್ ವಿಶೇಷ ಲಾವಣಿ,' ಎನ್ ವಿಷಕಂಠರಾವ್, ಮೈಸೂರು, 1939. (ಎನ್. ರಂಗರಾವ್ ಸ್ವಾತಂತ್ರ್ಯ ಯೋಧರು, ಹುಮಚ, ಇವರು, ಒದಗಿಸಿದ್ದು)

5. 'ಕರ್ನಾಟಕ ವಿಜಯ' ಎನ್. ವಿಷಕಂಠರಾವ್, ಮೈಸೂರು, 1937 (ಶ್ರೀ ಎನ್. ರಂಗರಾವ್, ಸ್ವಾತಂತ್ರ್ಯ ಯೋಧರು, ಹುಮಚ, ಇವರು ಒದಗಿಸಿದ್ದು)

6. 'ಜಯಂತಿ ಲಾವಣಿ ಕಾಣಿಕೆ,' ಎನ್. ವಿಷಕಂಠರಾವ್. ಮೈಸೂರು, 1949 (ಶ್ರೀ ಜಿ. ಎನ್. ವಿಶ್ವನಾಥಶೆಟ್ಟಿ, ರಾಜಾಜಿನಗರ, ಬೆಂಗಳೂರು ಇವರು ಒದಗಿಸಿದ್ದು).

7. 'ಜೈಭಾರತ್ ರಾಷ್ಟ್ರ ಗೀತೆಗಳು'' ವಿಜಯರ ಸಾಹಿತ್ಯ ಬೆಂಗಳೂರು, 1947 (ಶ್ರೀ ಬಿ. ಪಾಂಡುರಂಗ ಬಾಳಿಗಾ, ರಮಾಶಕ್ತಿ ಮಿಶನ್, ಮಂಗಳೂರು, ಇವರು ಒದಗಿಸಿದ್ದು).

8. 'ರಾಷ್ಟ್ರೀಯ ಪದ್ಯಗಳು,' ಸಿದ್ದಾಪುರ ತಿಪ್ಪಯ್ಯ ಮಾಸ್ತರ, ಕುಮಟಾ, 1930. (ಶ್ರೀ ಮಾರುತಿ ಬೆಟಗೇರಿ ಹಾಗೂ ಶ್ರೀ ವಿ. ಎನ್, ಪೈ, ಮಾಲ್ಕೋಡಕರ, ಸಿದ್ದಾಪುರ, ಇವರು ಒದಗಿಸಿದ್ದು).

9. ತೀರ ಕಿರಿದಾದ, ಎರಡು ಪುಸ್ತಕಗಳು, ತೀರ ಕಿರು ಅಕ್ಷರಗಳಲ್ಲಿ ಮುದ್ರಿತವಾಗಿವೆ. ಅವುಗಳು ಮುಖ ಪುಟಗಳು ಹರಿದುದರಿಂದ ಪುಸ್ತಕಗಳ

ಹೆಸರು, ಮುದ್ರಣದ ವರ್ಷ ಅವುಗಳಲ್ಲಿ ಇದ್ದ ಹಾಡುಗಳನ್ನು ಕೇವಲ 'ಮುದ್ರಿತ' ಎಂದು ಸೂಚಿಸಿದೆ. ಇವುಗಳಲ್ಲಿ ಒಂದನ್ನು ಮೇಲೆ ಉಲ್ಲೇಖಿಸಿದ ಶ್ರೀ ಬಿ. ಪಾಂಡುರಂಗ ಬಾಳಿಗಾ, ಇನ್ನೊಂದನ್ನು ಒದಗಿಸಿದವರು ಶ್ರೀಮತಿ ರಾಜೀವಿ ಯಾನೆ ರಾಧಾ ಕಾಮತ್, ಸಂತೆಕಟ್ಟೆ, ದ.ಕ.

10. 'ಸತ್ಯಪ್ರಕಾಶ,'1942 (ಮಂಗಳೂರಿನಿಂದ ಮುದ್ರಿತವೆಂದೂ ತಾವೇ ಅದರಲ್ಲಿನ ಹಾಡುಗಳನ್ನು ಬರೆದುದೆಂದೂ ಅದನ್ನು ಒದಗಿಸಿದ ತೀರ್ಥ ಹಳ್ಳಿಯ ಬಿ. ವಿ, ಕಾಮತ್ ಹೇಳಿದ್ದಾರೆ.)

11. ನೂತನ ತುರಾ ಲಾವಣಿ, ಶ್ರೀ ಬಿ, ಬಿ. ನೀಲಕಂಠಯ್ಯ, ಬೆಂಗಳೂರು. 1946 ಹಾಗೂ ಅದರ ಇದರ ಹಸ್ತಪ್ರತಿಗಳನ್ನು ಬೆಂಗಳೂರಲ್ಲಿರುವ ಅವರ ಮಗ ಶ್ರೀ ಬಿ. ಎನ್. ರಾಮಕೃಷ್ಣ ಒದಗಿಸಿದರು.

12. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ 'ರಾಷ್ಟ್ರಗೀತ ರತ್ನಾಕರ,' ಮಂಗಳೂರು, 1924 ಹಾಗೂ 'ಸ್ವರಾಜ್ಯಗೀತಾಮೃತ,' ಕಾಸರಗೋಡು 1947 ಇವುಗಳನ್ನು ಅವರ ಪುತ್ರಿ ಶ್ರೀಮತಿ ಸುಲೋಚನಾ ಆರ್. ಬಲ್ಲಾಳ್, ಮಂಗಳೂರು ಅವರು ಒದಗಿಸಿದರು.

ಪರಿವಿಡಿ

೧. ನಮ್ಮದೀ ನಮ್ಮದೀ ಭರತಭೂಮಿ

(ರಾಗ: ಕಾಂಬೋಧಿ ತಾಳ: ಝಂಪೆ)

ನಮ್ಮದೀ ನಮ್ಮದೀ ಭರತಭೂಮಿ ॥ ಪ ॥
ಹೆರವರಂ ನಂಬದಲೆ ಜಗದೀಶ್ವರಂತಾನೇ ।
ಧರಿಸಿ ನಾನಾವತಾರಂಗಳನ್ನು ॥
ಕರೆವ ಸರ್ವಸ್ವಮಂ ಧರೆಯು ಸಂರಕ್ಷಿಸುವ ।
ತೆರವ ಕಲಿಸಿದ ಪೂರ್ವ ಪಾಠಶಾಲೆ ॥

ಉಚ್ಚ ತತ್ವಾರ್ಥಗಳ ನಾಚರಿಸಿ ಲೋಕವು ।
ನೆಚ್ಚರಿಸಿ ದೇವರಿಚ್ಛಾಜ್ಯೋತಿಯಂ ॥
ಅಚ್ಚಳಿಯದೊಲು ಗೈದ ಋಷಿಪದವೀಧರರು
ಸ್ವೇಚ್ಛೆಯಿಂ ನೆಲೆಗೈದ ಸುಕ್ಷೇತ್ರವು ॥

ಪದವೀಧರರ್ ಪೇಳ್ದ ಪದ್ಧತಿಗಳಂ ಬಿಡದೆ ।
ಸದಭಿಮಾನೈಕ್ಯ ಶೌರ್ಯೋತ್ಸಾಹದಿಂ ॥
ಉದಿತ ಸುಸ್ಫೂರ್ತಿಯಿಂದೆಮ್ಮ ಪೂರ್ವಜರಿದ್ದ ।
ಮುದದ ಭಾಗ್ಯದ ನಿಧಿಯು ಮಂದಿರವಿದು ॥

ದೇವಋಷಿಪೂರ್ವಜರುದಾತ್ತವೃತ್ತಿಪ್ರಭಾ ।
ಭಾವನಾಮೃತ ದೃಷ್ಟಿಯಿಂ ಬೆಳೆಯುವ ॥
ಭಾವಿಸುಖ ಸಾಮ್ರಾಜ್ಯಮೆಂಬ ಸತ್ಫಲಗಳಂ ।
ನೀವ ಸರ್ವೋತ್ಕೃಷ್ಟ ನಂದನವನಂ ॥

ಲೇಖಕರು : **ಶಾಂತಕವಿ**

("ಜೈಭಾರತ ರಾಷ್ಟ್ರಗೀತೆಗಳು" ಸಂಗ್ರಹದಿಂದ)

೨. ಮರೆತೆ ಏತಕಯ್ಯಾ

ಮರೆತೆ ಏತಕಯ್ಯಾ ನಿನ್ನ ಮಾತೃಭೂಮಿಯ ॥ ಪಲ್ಲವಿ ॥
ನಿರುತ ನಿನ್ನ ಹೊರೆಯ ಹೊತ್ತು ಪೊರೆವ ತಾಯಿಯ ॥
ಮರೆತೆ ಏತಕಯ್ಯಾ ॥ ಅನು ಪಲ್ಲವಿ ॥

ಒಂಭತ್ತು ತಿಂಗಳು ತನ್ನೊಳಿಂಬು ಗೊಟ್ಟವಳು ತಾಯಿ ।
ತೊಂಬತ್ತು ವರುಷವಾದರು ಪೊರೆವ ಕುಂಭಿನಿ ತಾಯಲ್ಲೋ ।
ಮಾತೃಭೂಮಿಯ ॥ ೧ ॥

ನಡೆನುಡಿ ಬರುವತನಕ ಒಡಲಿಗನ್ನ ಕೊಡುವಳು ತಾಯಿ
ಕಡೆತನಕ ನಿನ್ನೊಡಲಿಗೆ ಅನ್ನ ಕೊಡುವಳು ತಾಯಲ್ಲೊ
ಮಾತೃಭೂಮಿಯ ॥ ೨ ॥

ಗೇಣು ಭೂಮಿಗಾಗಿ ಎನ್ನ ಪ್ರಾಣ ಹೋಗಲಿ ಎಂದೆನ್ನುವಿ ।
ಕಾಣದೇನೂ ನಾಡೇ ಪರರಾಧೀನವಾಗಿರುವದು ಮನುಜಾ ।
ಮಾತೃಭೂಮಿಯ ॥ ೩ ॥

ಲೇಖಕರು : ಮುದವೀಡು ಕೃಷ್ಣರಾಯರು (1920

('ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ)

೩. ಮಾತೃಭೂಮಿ ಜನನಿ

ಮಾತೃಭೂಮಿ ಜನನಿ ನಿನ್ನ ಚರಣ ಸೇವೆ ಮಾಡುವಾ ।
ಪರಮ ಹರುಷದಿಂದ ನಿನ್ನ ಸುಖಕೆ ಪ್ರಾಣವೀಯುವಾ ॥ ಪಲ್ಲವಿ ॥

ತನುಮನಧನದಿಂದ ನಿನ್ನ ಘನತೆಯನ್ನು ಬೆಳೆಸುವಾ ।
ದಣಿಯದೆ ಅನುದಿನವು ದುಡಿದು ಗುಣಗಳೆನಿಸಿಕೊಳ್ಳುವಾ ॥ ೧ ॥

ಬಂದುನಿಂದ ತೊಂದರೆಗಳ ಸಂದಣಿಯನು ಸರಿಸುವಾ ।
ಮುಂದೆ ಅಡಿಯನಿಡುತ ಒಂದುಗೂಡಿ ಜಯವ ಪೊಂದುವಾ ॥ ೨ ॥

ಹಿಂದಮಾತೆ ಬಂಧುಭಾವದಿಂದ ನಿನ್ನ ಕಂದರು ।
ಒಂದುಗೂಡಿ ಪಾರತಂತ್ರ್ಯ ಬಂಧವ ಹರಿದೊಗೆವೆವು ॥ ॥ ೩ ॥

ಕೆಟ್ಟ ಕಣ್ಣಿನಿಂದ ನೋಳ್ಪ ದುಷ್ಟಜನರಿಗಂಜದೆ ।
ದಿಟ್ಟತನದೊಳೆಲ್ಲರೊಟ್ಟುಗೂಡುತಿಹೆವು ಕಷ್ಟಕೆ ॥ ೪ ॥

ಲೇಖಕರು : **ಕವಿಭೂಷಣ ಬೆಟಗೇರಿ ಕೃಷ್ಣಶರ್ಮ**

('ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ)

೪. ಭರತ ಭೂಮಿಯ ಸುಪ್ರಭಾತ

ಅವಿನದು ನೊರೆವಾಲನೊಲ್ಲೆನು । ದೇವಲೋಕದ ಸುತೆಯನೊಲ್ಲೆನು ॥
ದೇವಿ ನಿನ್ನಯ ನಾಮದದ್ಭುತ ರುಚಿಯನರಿತಿಹೆನು ॥
ಪಾವನಳೆ ನಿನ್ನಂಘ್ರಿ ಕಮಲವು । ಸೇವಿಸಲು ದೊರೆತಿರಲಿ ಭಾರತಿ ॥
ಶ್ರೀವರನ ಕೃಪೆಯಿಂದ ಮತ್ತಿನ್ನೇನು ಬೇಡೆನಗೆ ॥ ॥ ೧ ॥

ಬರಲಿ ಬ್ರಾಹ್ಮಣರಲಿ ಜನ್ಮವು । ಬರಲಿ ಮಾದಿಗರಲ್ಲಿ ಇಲ್ಲವೆ ।
ಇರದು ಚಿಂತೆಯು ತಾಯೆ ನಿನ್ನುದರದಲಿ ಜನಿಸಿದರೆ ॥
ಪರಮ ಭಾಗ್ಯವು ಎಂಬುದರಿವೆನು । ಮರೆಯದೆಲೆ ಪ್ರತಿಜನ್ಮದೊಳು ॥ಶ್ರೀ॥
ಧರನು ದಯೆಯಿಂದೆನಗೆ ನಿನ್ನೊಳು ಕೊಡಲಿ ಜನುಮವನು ॥ ॥ ೨ ॥

ಇರಲೆನಗೆ ಕರಕನ್ನ ಉಣ್ಣಲು । ಬರಿಯ ನೆಲವಿರಲೆನಗೆ ಮಲಗಲು ।
ಹರಕು ಬಟ್ಟೆಗಳೆನ್ನ ಮೈಯನು ಮುಚ್ಚಿದರು ಸಾಕು ॥
ಮುರುಕು ಗುಡಿಸಲು ಇರಲಿ ವಾಸಕೆ । ಸಿರಿಯುರಸ ಮತ್ತೇನು ಬೇಡೆನು ।
ಭರತ ಭೂಮಿಯಲಿರುವುದೇ ಎನಗೊಂದು ಸುಖ ಸಾಕು ॥ ॥ ೩ ॥

ಧನವಬೇಡೆನು ನಾನು ನಾರಾಯಣನೆ ಸನ್ಮಾನವನುವಿದ್ವ-
ಜ್ಜನರ ಸಭೆಯಲಿ ಬೇಡೆನ್ನೈ, ನಾಬೇಡೆ ಕೀರ್ತಿಯನು ।
ಕನಸುಮನಸಿನಲಿರಲಿ ಕರುಣಾಘನನೆ ಧ್ಯಾನವು ಜನ್ಮಭೂಮಿಯ
ತನುವು ಸವೆಯುತಲಿರಲಿಹಗಲಿರುಳವಳ ಸೇವೆಯಲಿ ॥ ೪ ॥

ಲೇಖಕರು : ಸಾಲಿ ರಾಮಚಂದ್ರರಾಯರು

(ಸಂಗ್ರಾಹಕಿ ; ಇಂದಿರಾ ಹಾಲಂಬಿ–(ಅತ್ರಾಡಿ–ಉಡುಪಿ)

೫. ನಮ್ಮ ಭಾರತವರ್ಷ

ರಾಗ : ಕಾಂಬೋದಿ, ತಾಳ–ಝಂಪೆ

ನಮ್ಮವರು ನಾವು ನಮ್ಮದು ಭರತದೇಶಾ ।
ಸುಮ್ಮನೇ ಒಡಕು ಮತ್ಸರ ಜಾತಿದ್ವೇಷಾ ॥ ಪಲ್ಲವಿ ॥

ಸಿಂದು ಪಂಜಾಬ ವರ್ಹಾಡ ಕಾಶ್ಮೀರವಾ ।
ಬಂಗಾಲವಾಸಾಮು ಬ್ರಹ್ಮದೇಶಾ ॥
ಮುಂದೆ ಮಹಾರಾಷ್ಟ್ರ ಗುಜರಾಥ ಕರ್ಣಾಟಕವಿ ।
ಒಂಬು ಮದ್ರಾಸ ಸಿಂಹಳದ್ವೀಪ ಕೂಡಿ ॥ ೧ ॥

ಕೇರಳವು ಆಂಧ್ರ ಮಧ್ಯಪ್ರಾಂತ ವುತ್ಕಲ ಬಿ ।
ಹಾರತಂಜಾವರವು ಮಳಿಯಾಳ ದೇಶಾ ।
ಭೂರುಹ ಹಿಮಾಚಲವು ಕನ್ಯಾಕುಮಾರಿಯಳ ।
ಸೇರಿಸುತ್ತಿರುವ ಸಮುದ್ರ ಮೇರೆಯೊಳು ॥ ೨ ॥

ಹಿಂದಿಯರು ಗಾಂಧಿಯರು ವಂದಲ್ಲದೇಕಿನ್ನು ।
ಹಿಂದು ಮುಹಮ್ಮದಿ ಪಾರ್ಸಿ ಕ್ರೈಸ್ತಯಹುದೀ ॥
ಸಂದೇಹವೇನಿದಕೆ ಹಿಂದೂಮಾತೆಯು ಸುತರು ।
ನಂದನರು ನಾವೆಲ್ಲ ಬಂಧುಬಾಂಧವರೂ ॥ ೩ ॥

ವೀರಶೈವರು ತಾವು ದೂರವೆಂದೆನ್ನುವರು ।
ವೀರವೈಷ್ಣವ ಸ್ಮಾರ್ತ ಬ್ರಾಹ್ಮಣೇತರರೂ ।
ದಾರಿಯನು ತೋರಿಸುವ ಗಾಂಧಿಮತವನೆ ಬಿಟ್ಟು ।
ಬೇರೆಬೇರೆಂತೆಂದು ವಾರಿ ನೋಡುವರೂ ॥ ೪ ॥

ನಿತ್ಯದಲಿ ಬಳಸುತಿಹ ಉಪ್ಪು ಕಟ್ಟಿಗೆಚೂರು ।
ಭತ್ತನುಚ್ಚುಂಗಳಿಗೆ ದಾರಿದ್ರ್ಯವೂ ॥
ಅತ್ತೆ ಸೊಸೆಯನು ಬೈದುಫಲವೇನು ನಾವೆಲ್ಲ ।
ರೊತ್ತಾಗಿ ನಿತ್ಯಮಾತೆಯು ಮಕ್ಕಳೆನಿಸಿ ॥ ೫ ॥

ಅವರಕಂಡರೆ ದ್ವೇಷ ಇವರು ಉಂಡರೆ ದ್ವೇಷ ।
ಭುವನದೊಳು ಅಣ್ಣ ತಮ್ಮರ ದ್ವೇಷವೂ ।
ನವನವೀನರು ಬಂದು ನೆರೆಯುವರ ಸುಲಿದೊಯ್ಯೆ ।
ದ್ವೇಷವಿಲ್ಲದೆ ಮಂದಹಾಸವ್ಯಾಕಯ್ಯಾ ॥ ೬ ॥

ಹೊಟ್ಟೆಗಿಲ್ಲದ ದೇಶವೆನಿಸಿತೀ ಭಾರತವು ।
ರಟ್ಟೆಯೊಳಗಿಲ್ಲ ದುಡಿಯುವ ಶಕ್ತಿಯೂ ।
ಕೊಟ್ಟೆನೆಂಬುವರಿಲ್ಲ ಕೆಟ್ಟೆನೆಂಬುವರೆಲ್ಲ ।
ಇಷ್ಟಾದರೊಟ್ಟು ಗೂಡುವ ಬುದ್ಧಿಯಿಲ್ಲಾ ॥ ೭ ॥

ಬಲ್ಲವರು ಬಲ್ಲಿದರು ನಾವೆಂಬ ಬಡಿವಾರ ।
ದಲ್ಲಿ ಸ್ಪರ್ಶಾಸ್ಪರ್ಶವದಗಣಿಸುತಾ ।
ಕೊಲ್ಲುವರು ಗೆಲ್ಲುವರು ನಿಲ್ಲುವವ ಕಾಯುವವ ।
ರೆಲ್ಲಿರುವರೆಂದು ಮಂಥನ ಗೈಯ್ಯುತಿಹರೋ ॥ ೮ ॥

ಭಂಗಾರ ಬೆಳೆಯುತಿಹ ಸಿದ್ಧನಗರವು ಭೂಮಿ ।
ಭಂಗಾರದಾ ಭೂಮಿ ಹಿಂದೂಸ್ಥಾನ ।
ಕಂಗೆಡುವ ಕಾರಣದ ಇಂಗಿತವ ತೂಗದೆಲೆ ।
ಮುಂಗಾಣದಿರುವದೇ ಮಂಗ ದೋಷಾ ॥ ೯ ॥

ಲೇಖಕರು : **ತಿಪ್ಪಯ್ಯ ಶಾಸ್ತ್ರಿಗಳು**

(ರಾಷ್ಟ್ರೀಯ ಪದಗಳು . 1936)

೬. ಹೇಯುನ್ನ ಭರತಮಾತೆ

ಹೇಯುನ್ನ ಭರತಮಾತೆ । ಏನಿದಾಯ್ತು । ಏನಿದಾಯ್ತು ॥ ಪಲ್ಲವಿ ॥

ಮೊಲ ಹಸಿಯುಲು ಹುಲಿಯು ಮೊಲೆ ಕುಡಿದು ।
ಒಲಿವಂತೆ ವೈರವನು ಗೆಲಿದು ।
ಬಲವಾದ ಐಕ್ಯವನು ಗೈದು ।
ನಲಿದ ಆ ಋಷಿಗಳಾಶ್ರಮವು । ಧೀರರಾಗರವು ।
ತೋರದಂತಾಯ್ತು । ತೋರದಂತಾಯ್ತು ॥ ಹೇ ಯುನ್ನ ॥ ೧ ॥

ವೈರಾಗ್ಯದ ಧ್ವಜಮೇಲೆ ಹಿಡಿದಾ ।
ಕ್ರೂರರನು ಪಾದದಲಿ ತುಳಿದಾ ।
ಗೌರವದಿ ಲೋಕವನು ಪೊರೆದಾ
ಭಾರತೀಯುರ ನೃಪಾಸನವು । ಕಲಿಗಳಾಗರವು ।
ಇಲ್ಲದಂತಾಯ್ತೇ । ಇಲ್ಲದಂತಾಯ್ತೇ ॥ ಹೇ ಯುನ್ನ ॥ ೨ ॥

ಮನಸೆಳೆಯುುವ ಒಡವೆಯು ರಚಿಸಿ ।
ಜನಕೊಳ್ಳ ದೇಶ ಸಂಚರಿಸಿ ।
ಘನ ವಿಭವವಿಲ್ಲಿ ನೆಲೆಗೊಳಿಸಿ।
ನೆಲೆಸಿದಾ ಕನಕ ಪರ್ವತವು । ಧನದ ಮಂದಿರವು ।
ಕನಸಿನಂತಾಯ್ತು । ಕನಸಿನಂತಾಯ್ತು ॥ ಹೇ ಯುನ್ನ ॥ ೩ ॥

ಲೇಖಕರು : **ಮ. ಬಾ. ಕುಲಕರ್ಣಿ**, ಬೈಲಹೊಂಗಲ, 1920

('ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ)

೭. ಪುಣ್ಯ ಭೂಮಿ

ಪುಣ್ಯಭೂಮಿ ಭಾರತೀ, ರಮ್ಯಭೂಮಿ ಭಾರತೀ !

ಹಿಮಗಿರಿ ಕನ್ಯಾಕುಮರಿ ವಿಹಾರೇ,
ಗೌರೀಶಂಕರ ತುಂಗ ಸಮೀರೇ,
ಪೂರವ ಪಶ್ಚಿಮ ಸಾಗರಧಾರೇ ॥

ಸಿಂಧೂಗಂಗಾ ಸುರಜಲ ರಂಗ,
ಆ ಕಾವೇರಿಯ ಸಲಿಲ ತರಂಗ,
ಋಷ್ಯಾಶ್ರಮಗಳ ಕೀರ್ತಿಪತಂಗ ।

ಗಿರಿಕಂದರವನ ಕುಂಜಕುಟೀರೇ,
ಲಲಿತ ಲತಾಸುಮ ಪರಿಮಳಧಾರೇ,
ಮಂಜುಳ ಖಗಕುಲ ಕಂಠವಿಹಾರೇ ॥

ಮಲೆಯಾಭರಣದ ಚಂದನ ರಂಜಿನಿ,
ಶಾಲಿಯವನಗಳ ಸ್ವರ್ಣಪ್ರಕಾಶಿನಿ,
ಜೀವನ ಸುಖಸಾಮ್ರಾಜ್ಯ ಕಿರೀಟಿನಿ ॥

ಜೋಗ ಅಜಂತದ ಕೀರ್ತಿಯಕಿರಣೆ,
ತಾಜಾಮಹಲಿನ ದಿವ್ಯಾಭರಣೆ,
ಜಕಣನ ಶಿಲ್ಪದ ಶೋಭಾವರಣೆ ॥

ಪ್ರಾಚ್ಯಕಲಾಧ್ರುಮ ಕುಸುಮಿತ ನಯನೆ,
ಪಾವನ ಧರ್ಮವಿರಾಜಿತ ವದನೆ,
ಮಾನವಕುಲ ಕಲ್ಯಾಣದ ಸದನೆ

ಲೇಖಕರು : ತಿಳಿಯದು

("ಜೈಭಾರತ ರಾಷ್ಟ್ರಗೀತೆಗಳು" ಸಂಗ್ರಹದಿಂದ)

೮. ಹಿಂದೂ ದೇಶವನ್ನು ರವೀಂದ್ರನಾಥ ಠಾಕೂರರು ಕೊಂಡಾಡುವುದು

ಇದೋ, ಇವಳೆ ಆ ಭುವನಮನ ಮೋಹಿನಿಯು ।
ನಿರ್ಮಲವಾದ ಸೂರ್ಯಕಿರಣಗಳಿಂದ ಬೆಳಗುತಲಿರುವ
ಭೂಮಿಯು ॥
ತಂದೆಯೂ ತಾಯಿಯೂ ಆಗಿರುವ ಜನನಿಯು ।

ನೀಲವಾದ ನೀರುಹನಿಗಳು ತೊಳೆವ ಪಾದಗಳನುಳ್ಳವಳು ॥
ಗಾಳಿಯಲ್ಲಿ ಅಲುಗುತಲಿರುವ ನೀಲಮೇಲುದವನುಳ್ಳವಳು ।
ಆಕಾಶವನ್ನು ಮುದ್ದಿಡುವ ಹಿಮಾಚಲವೆಂಬುವ ಹಣೆಯುವಳು ॥
ಶುಭ್ರವಾದ ಹಿಮದ ಕಿರೀಟದವಳು ।

ಮೊದಲನೆಯ ಸೂರ್ಯೋದಯವು ನಿನ್ನ ಹೊಸಬಾನಿನಲ್ಲಿ ॥
ಮೊದಲನೆಯ ಸಾಮಗಾನವು ನಿನ್ನ ತಪೋವನದಲ್ಲಿ ।
ಮೊದಲಾಗಿ ದಾನ–ಧರ್ಮ ತತ್ವ ಪುಣ್ಯಕಥೆಗಳೆಲ್ಲವು ।
ಪ್ರಚಾರಕ್ಕೆ ಬಂದುದು–ನಿನ್ನ ವನಭವನಗಳಲ್ಲಿ ॥

ನಿತ್ಯವೂ ಕಲ್ಯಾಣವನ್ನು ತಳೆದಿರುವಾಕೆಯೆ–ನೀನೆ ಧನ್ಯೆಯು ।
ದೇಶ ವಿದೇಶಗಳಿಗೂ ಅನ್ನವನ್ನು ಹಂಚುತಲಿರುವೆ ।
ಗಂಗಾ–ಯಮುನೆಗಳು ಬೆರಸಿರುವ ಕರುಣಾಮೃತವಾದ ।
ಪುಣ್ಯತೀರ್ಥವನ್ನು ಮೊಲೆಹಾಲಾಗಿ ಸುರಿಸುತಲಿರುವೆ ॥

(ಕವಿ ರವೀಂದ್ರರ "ದೇವಿ ಭುವನಮನ ಮೋಹಿನಿ"
ಹಾಡಿನ ಭಾಷಾಂತರ: ಎಂ. ಎನ್. ಕಾಮತ್. ಮುದ್ರಿತ)

೯. ಸ್ವದೇಶ ಗಾನ

ಪದ–ರಾಗ : ಅಸಾವೇರಿ

ಜನಗಣ ಮನ ಅಧಿನಾಯಕ ಜಯ ಹೇ ಭಾರತ ಭಾಗ್ಯವಿಧಾತಾ ।
ಜಯ ಹೇ ಜಯ ಹೇ ಜಯ ಹೇ ಜಯ ಜಯ ಜಯ ಜಯ ಹೇ ॥
ಪಂಜಾಬ ಸಿಂಧು ಗುಜರಾತ ಮರಾಠಾ ದ್ರಾವಿಡಾ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ ಉಚ್ಚ್ವಲ ಜಲಧಿ ತರಂಗ ।
ಜಾಗ್ರುತವಿವು ತವನಾಮದಲೀ । ಬಾಗಿಹವಾಶೀರ್ವಾದದಲೀ ।
ಅನುರಾಗದಿ ವಿಜಯ ಪಾಡುತಲಿ ॥
ಜನಗಣ ಮಂಗಲದಾಯಕ ಜಯಹೇ ಭಾರತ ಭಾಗ್ಯವಿಧಾತಾ ।
ಜಯ ಹೇ ಜಯ ಹೇ ಜಯ ಹೇ ಜಯ ಜಯ ಜಯ
ಜಯ ಹೇ ॥೧॥

ಪ್ರತಿ ದಿನ ನಿನ್ನಯ ಸ್ತುತಿಗಾನದಿ ನಾ ನರಿತಿಹೆ ನಿನ್ನಮೃತವಾಣೀ ।
ಮತಕುಲ ಜಾತೀ ಭಿನ್ನತೆಯಿಲ್ಲದೆ ಹಿತದಿಂದೊಂದೇ ಭಕ್ತಶ್ರೇಣೀ,
ಮೂಡು ಪಡುಗಳೊಂದಾಗುತಲಿ । ಕೂಡಿಪೆ ನಿನ್ನೊಡ್ಡೋಲಗದಿ ।
ಹಾಡಿ ಪ್ರೇಮ ಕೊಂಡಾಡುತಲೀ ॥
ಜನಗಣ ಐಕ್ಯವಿಧಾಯಕ ಜಯ ಹೇ ಭಾರತ ಭಾಗ್ಯವಿಧಾತಾ ।
ಜಯ ಹೇ ಜಯ ಹೇ ಜಯ ಹೇ ಜಯ ಜಯ ಜಯ
ಜಯ ಹೇ ॥೨॥

ಏಳುತ ಬೀಳುತ ಸಾಲು ನಡಿಗೆಯಲೆ ಕಾಲನಡಿಸಿ ಚಿರಕಾಲದಲಿ ।
ಪಾಲಕನಾಲಯಕೊಯ್ಯುದ್ದ ವಾಳುಗಳ ನಾಯಕ । ಸಾರಥಿತನದಲ್ಲೀ ।
ಸಂಕಟ ಗೋಳಾಟಗಳಲ್ಲೀ । ಜಯ ಶಂಖವನೂದುವೆ ಸೊಗದಲ್ಲೀ ।
ಕಿಂಕರರಾಶ್ರಯ ನಿನ್ನಲ್ಲೀ ॥
ಸಂಕಟಹಾರೀ, ದುಃಖನಿವಾರೀ, ಜಯ ಭಾರತಭಾಗ್ಯವಿಧಾತಾ ।
ಜಯ ಹೇ ಜಯ ಹೇ ಜಯ ಹೇ ಜಯ ಜಯ ಜಯ
ಜಯ ಹೇ ॥೩॥

ಸುತ್ತಲು ಕತ್ತಲೆ ಮುತ್ತಿದ ಭೀತಿಯ ರಾತ್ರಿಯೊಳಾರ್ಯಾವರ್ತದಲೀ ।
ನಿತ್ಯಸನಾತನ ಚಿನ್ಮಯ ಮೂರ್ತಿಯೆಚ್ಚೆತ್ತಿಹೆ ಸತ್ಯಜ್ಯೋತಿಯಲೀ ।
ಕುತ್ತದ ಮಾರಿಯನಣಗಿಸುತಾ । ಎತ್ತಿಕೊಳ್ಳೆ ತೋಳಲಿ ಸತತಾ ।
ಮಾತಾಸ್ನೇಹವ ಬೀರುತ್ತಾ ।
ಆತ್ಮೋನ್ನತಿ ಪಥಪರಿಚಯ ಕೊಡು ಜಯ ಭಾರತ ಭಾಗ್ಯವಿಧಾತಾ ।
ಜಯ ಹೇ ಜಯ ಹೇ ಜಯ ಹೇ ಜಯ ಜಯ ಜಯ
ಜಯ ಹೇ ॥೪॥

ಇರುಳು ಅರಳಿ ಮುಂಬೆಳಗು ಹರಿಯೆ ಮುಂದುರಿಯಲು ನವಯುಗ
ನವತರಣೀ ।
ಮೊರೆಯೆವಿಹಗತತಿ, ಸುರಿಯೆ ಪುಣ್ಯಾನಿಲ, ಮೆರೆಯಲು ಸೊಗದೀ
ನವಧರಣೀ ।
ಸುಪ್ರಭಾತದರುಣವು ಹರಿಯೆ, ಕ್ಷಿಪ್ರದಿ ಭಾರತಿ ಕಣ್ದೆರೆಯೆ ।
ಅಪ್ಲುತ ಮಣಿಯೆ ಮನದಣಿಯೆ ॥
ಜಯ ಪ್ರಜ್ಞೇಶ್ವರ ಜಯರಾಜೇಶ್ವರ ಜಯ ಭಾರತ ಭಾಗ್ಯವಿಧಾತಾ ।
ಜಯ ಹೇ ಜಯ ಹೇ ಜಯ ಹೇ ಜಯ ಜಯ ಜಯ
ಜಯ ಹೇ ॥೫॥

ಭಾಷಾಂತರ: **ಎಂ. ಎನ್ ಕಾಮತ್**

(ಮುದ್ರಿತ)

೧೦. ಸ್ವರಾಜ್ಯ ಮಂಗಳ

ರಾಗ ಕಲ್ಯಾಣಿ, ರೂಪಕತಾಳ

ಜೈ ಭಾರತ ಭೂಮಿಗೆ ಮಾತೆಗೆ
ಜೈಪಾವನ ಮೂರ್ತಿಗೆ
ಸನ್ಮಂಗಳವಾಗಲಿ ಸತತಂ॥

ಸ್ವರಾಜ್ಯಾಭಿಲಾಷಿಗಳಿಗೆ
ಸರಕಾರದ ಸಹಾಯ ತೊರೆವ
ವೀರ ಭಾರತೀಯರಿಗೆ॥ ೧ ॥

ಧಾರುಣಿಯಲಿ ಜೀವಿತವನು
ಸ್ವರಾಜ್ಯಕ್ಕೆ ಧಾರೆಯೆರೆದ
ಧೀರಕರ್ಮ ವೀರರಿಗೆ ॥ ೨ ॥

ದೇಶಸೇವೆಯಿಂದ ಸುಖಿಪ
ದೇಶಾಭಿಮಾನಿಗಳಿಗೆ
ದೇಶಾ ಬಾಂಧವರಿಗೆ ಸದಾ ॥ ೩ ॥

(ಮುದ್ರಿತ)

ಇನ್ನೊಂದು ಪಾಠ :

ದೇಶಸೇವೆಯಿಂದ ಸುಖಿಪ
ದೇಶಾಭಿಮಾನಿಗಳಿಗೆ
ದೇಶಾ ಬಾಂಧವರಿಗೆ ಸದಾ ॥ ೧ ॥

ಭೀಷ್ಮದ್ರೋಣ ಪರಶುರಾಮ
ಭೀಮಾರ್ಜುನಾದಿ ಸುತರ

ಧೀರ ಕರ್ಮ ವೀರರಿಗೆ ॥ ೨ ॥
ರಾಮಕೃಷ್ಣ ಪರಮಹಂಸ
ವಿವೇಕಾನಂದ ಸುತರ
ಪೆತ್ತ ವೀರ ಮಾತೆಗೆ ॥ ೩ ॥

ಲೇಖಕಿ : **ತಿರುಮಲೆ ರಾಜಮ್ಮ (ಭಾರತಿ)**

(ಸಂಗ್ರಹ : ಶ್ರೀಮತಿ ಚಿ. ನ. ವೆಂಕಮ್ಮ ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು.)

೧೧. ಭಾರತಿಗೆ ಮಂಗಲ

ಮಾತೇ ಜಯು ಜಯು ಭಾರತೀಜಯು |
ಮಂಗಲಾಕರೆ ಮಂಗಲಂ ॥ಪ॥
ಖ್ಯಾತೇ ಭವ್ಯಾಸೇತು ಹಿಮಗಿರಿ ।
ಗಾತ್ರೆ ಜಯು ಜಯು ಮಂಗಲಂ ॥ ಅ. ಪ. ॥
ಶ್ರೀ ಸ್ವರಾಜ್ಯದ ಬೀಜ ಬಿತ್ತಿದ |
'ಭೀಷ್ಮ' ದಾದ ಗೆ ಮಂಗಲಂ |
ಆಸ್ವರಾಜ್ಯಾಂಕುರವ ಸಲಹಿದ |
'ದ್ರೋಣ' ಗೋಖ್ಲೆಗೆ ಮಂಗಲಂ ॥ ೧ ॥

ಧರೆಯೊಳಕ್ಷಯು ತರುವ ಬೆಳೆಸಿದ ।
ಸೂರ್ಯ ತಿಲಕಗೆ ಮಂಗಲಂ ।
ಜನರಿಗದರ ಸುಫಲವ ನೀಡುವ ।
'ಕೃಷ್ಣ' ಗಾಂಧಿಗೆ ಮಂಗಲಂ ॥ ೨ ॥

ರಾಷ್ಟ್ರಧರ್ಮೋದ್ಧಾರ ''ಲಾಲಾ'' ।
ಧುರ್ನುರಾಯುಗೆ ಮಂಗಲಂ ।
ರಾಷ್ಟ್ರಧರ್ಮೋದ್ಧಾರ ''ಶೌಕತ'' ।
ಭೀಮಕಾಯುಗೆ ಮಂಗಲಂ ॥ ೩ ॥

ವೈರಿ ಭೀಕರ ಭಾರತಾರ್ಜುನ ।
'ಚಿತ್ತರಂಜನ' ಮಂಗಲಂ ।
ಶೂರ "ನಕುಲ" 'ಸುಭಾಸ' ಸುತ ಸಹ ।
ದೇವ ''ನೆಹರೂ" ಮಂಗಲಂ ॥ ೪ ॥
''ವಿಜಯುವಾಣಿ'' ಸಮಸ್ತಮಹಿಳಾಮಣಿ ಸರೋಜಿನಿ-ಮಂಗಲಂ
ಸ್ವಜನ ಮೋಹನಮಾಲವೀಯು ।
'ವ್ಯಾಸ' ಭೂಷಣ ಮಂಗಲಂ । ೫ ॥

ಭಾರತಾಂಬೆಯ ಸೇವೆಗೈಯ್ಯುವ ।
ಸಕಲ ಜನರಿಗೆ ಮಂಗಲಂ ।
ಭಾರತೀ ಹಿತವರದ ಲಕ್ಷ್ಮೀ ।
ಲೋಲನಿಗೆ–ಶುಭಮಂಗಲಂ ॥ ೬ ॥

ಲೇಖಕರು : ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ

(ಸಂಗ್ರಹ : ಶ್ರೀಮತಿ ಪಿ. ಸೀತಮ್ಮ, ನೆಕ್ರಾಜೆ.)

೧೨. ನನ್ನ ನಾಡು ಚೆನ್ನ ನಾಡು

ನನ್ನ ನಾಡ ಚೆನ್ನ ನಾಡ ಬನ್ನಬಡುತ ಪೊರೆಯುವಾ
ನನ್ನಿಯಿಂದ ತಾಯಿನಾಡ ಹೊನ್ನಸಿರಿಯ ಬೆಳಗುವ

ನಾಡ ಬವರ ಬವಣೆಯಲ್ಲಿ ಜೀವವನ್ನು ನೀಡುವ
ಹೇಡಿತನವ ಹೊಡೆದುಹಾಕಿ ರೂಢಿಯಲ್ಲಿ ಮೆರೆಯುವ

ನಾಡನುಡಿಯು ನಾಡನಡೆಯು ನಾಡಿನಲ್ಲಿ ನಡಿಸುವ
ಕಾಡುತಿರುವ ಕಾಡುಜನರ ಕೋಡುತಾನೆ ಉಡಿಯುವ

ನಾಡಮೇಲ್ಮೆ ನೋಡಿಯೊಡಲು ಪೊಡವಿಯೊಡೆಯ ನಡೆಯಲಿ
ಬೇಡಿಕೊಂಡು ಪೊಡವಿಗಿಳಿದು ಬಡವರಿಂಗೆ ಬಡಿಸಲಿ

ಚತುರತನದೆ ಜಾತಿಮತವ ರೀತಿ ನೀತಿಗಿಳಿಸುವ
ಜಾತಿಮತಕೆ ಸೋತುಬಿದ್ದ ಮಾತೆಯನ್ನು ಎತ್ತುವ

ಜಾತಿ ಬಿಳಿಸಿ ಅತುಕೊಂಡು ಘಾತಿಸಿಪ್ಪ ಜನರನು,
ಭೀತಿ ಬಿಡಿಸಿ ಹೊತುಬಿಟ್ಟು ಸಾತಿಶಯದೆ ಮೆರೆಯುವ

ನನ್ನ ಮಾತು ನಿನ್ನ ಮಾತು ಹೊನ್ನಮಾತದೆನ್ನದೆ
ಉನ್ನತಾಗ್ರ ಸಭೆಯು ಮಾತ ಮನ್ನಿಸೆಲ್ಲ ನಡೆಯುವ

ಕಾವನನ್ನು ಕಾಂಬ ಬಗೆಯು ಕಾಣೆಬೇರೆ ತರದಲಿ
ನಾಡಸೇವೆಗಾಗಿ ತನುವ ನೀಡೆ ದೇವ ಕಾಂಬನು
ದೇವರಿಂದ ಬಂದ ನಾವು ದೇವರಾಗಿ ಮೆರೆಯುವ
ಜೀವಕಂಜಿ ಹೆದರಿ ಹೆದರಿ ಸಾವ ಜನರ ಕರೆಯುವ
ನಾಡಧರ್ಮ ರೂಢಿಯಲ್ಲಿ ನಾಡ ತಾನೆ ನಡಿಸುವ
ನಾಡದೇವಿ ಬೀಡಿನಲ್ಲಿ ಕೂಡಿಯಾಡಿ ಮೆರೆಯುವ

ಸ. ಪ. ಗಾಂವಕರ.

ನಾಡಹಾಡುಗಳು (ಮುದ್ರಿತ. ಮಿಂಚಿನಬಳ್ಳಿ)

ಭರತ ಭೂಮಿಯ ಮಹತ್ವ ೧೩

ರಾಗ–ಮುಖಾರಿ, ತಾಳ-ಝಂಪೆ
(ಧಾಟಿ-ಶಕ್ತನಾದರೆ ನೆಂಟರೆಲ್ಲ ಹಿತರು ಎಂಬಂತೆ)

ಶ್ರೇಷ್ಠವಾಗಿಹುದೆಮ್ಮ ಭರತಭೂಮಿ ।
ದುಷ್ಟರಿಗೆ ನಾವಿದನು ಬಿಟ್ಟು ಬಿಡಬಹುದೇ ॥ಪಲ್ಲವಿ॥
ಭತ್ತ ಬೆಳೆಯುವದಿಲಿ। ಹತ್ತಿ ಬೆಳೆಯುವದಿಲಿ।
ಮುತ್ತು ರತ್ನಗಳೆಲ್ಲ ಬೆಳೆವುದಿಲಿ॥
ಮತ್ತೀಸ್ಥಳದೊಳೇನು ಬಿತ್ತಿದರು ಬೆಳೆಯುವುದು।
ಪೃಥ್ವಿಯೊಳಗೀ ದೇಶಕೆಣೆಯಿಲ್ಲವೈಯ್ಯ॥
ಅನವರತವೀ ಭರತ । ಜನನಿಯುಲಿ ಬೆಳೆಯುವವು ।
ಕನಕಾದಿ ಲೋಹತೃಣ ತರುಲತೆಗಳು ॥
ಇನಿತಲ್ಲದಿನ್ನು ಬೇ । ಕೆನಿಸುವುತ್ತಮ ವಸ್ತು ।
ಜನಿಸಿ ವರ್ಧಿಸುತಿಹುದು ಪುಸಿಯಲ್ಲವಯ್ಯಾ ॥
ಆವದೇಶದಿ ಜನರ । ಜೀವನದ ವಸ್ತುಚಯ ।
ವೀವಿಧದೊಳೆಲ್ಲವೂ ಬೆಳೆವುತಿಹುದೇ ॥
ಆ ವಿಧಾತನು ಭರತ ಭೂವಲಯವನು ಮನದೊ ।
ಳೋವಿ ನಿರ್ಮಿಸಿಹನೋ । ನಾವರಿಯೆವಯ್ಯ ॥
ಗಿರಿಗಹ್ವರಂಗಳಿವೆ । ವರನದೀ ನದಗಳಿವೆ ।
ನೆರೆವಿಪಿನ ಸರಸಿ ಸಾಗರಗಳಿಹವು ॥
ಪರಿಪರಿಯೊಳಿದರೊಳಿಹ । ಸಿರಿಯನೆಲ್ಲವ ನೋಡೆ ।
ಧರಣಿಗತಿರಮ್ಯವಾಗಿರುವದೀ ದೇಶ ॥
ಸಕಲ ವಿದ್ಯೆಗಳಿಂದ । ಸಕಲ ಶಾಸ್ತ್ರಗಳಿಂದ ।
ಸಕಲ ಸನ್ಮಂತ್ರ ತಂತ್ರಂಗಳಿಂದ ॥
ಸಕಲ ಧರ್ಮಗಳಿಂದ । ಸಕಲ ಕರ್ಮಗಳಿಂದ ।
ಸಕಲ ಸೌಭಾಗ್ಯ ಸಂಪತ್ಸುಖಗಳಿಂದ ॥

ಲೇಖಕರು : **ಬವಳಾಡಿ ಸೀತಾರಾಮ ಹೆಬ್ಬಾರ.**

ಸಂಗ್ರಹ : ಉಳ್ಳೂರು ರಾಮಕೃಷ್ಣ ಐತಾಳ, ಕಂಬದ ಕೋಣೆ.

೧೪. ಭಾರತ ಭೂಮಿಯ ಪ್ರಾರ್ಥನೆ

ರಾಗ–ಧನಾಶ್ರಿ ತಾಳ-ಮಟ್ಟೆ

ಭರತಮಾತೆ ಪಾಲಿಸೆಮ್ಮನು । ಕರುಣದಿಂದ । ಭರತಮಾತೆ
ಪಾಲಿಸೆಮ್ಮನು ॥ಪಲ್ಲವಿ॥

ಭರತಮಾತೆ ಪಾಲಿಸೆಮ್ಮ । ನೆರಗಿಬೇಡಿಕೊಂಬೆನಿನ್ನ ।
ಪರಮಪಾವನಾತ್ಮ ಸುಗುಣ । ಭರಿತೆ ಪುಣ್ಯ ಚರಿತೆದೇವಿ ॥ಪಲ್ಲವಿ॥

ಸಗರ ಶಿಬಿ, ಭಗೀರಥಾಂತ । ರಘುಜರಾಮ ಯಮಸುತಾದಿ
ಸುಗುಣಯುತರ ಧರ್ಮಕೊಲಿದು । ಮಿಗೆ ಮನೋಭಾಷೆ
ಯಿತ್ತು । ಜಗದೊಳಗ್ರ ಗಣ್ಯರೆನ್ನುತ್ತಾ ॥
ಅವರನೆಲ್ಲ । ಹೊಗಳುವಂತೆ ಮಾಡಿ ಸಲಹುತಾ
ಪ್ರಜೆಗಳಿಗೆ । ಸೊಗಸುದೋರಿ ಸೌಖ್ಯವಿತ್ತು ।
ಸುಗತಿಗೊಟ್ಟು ಪೊರೆದ ದೇವಿ ॥ ಭರತಮಾತೆ ಪಾಲಿಸೆಮ್ಮನು ॥

ಅನಘ ಭೋಜರಾಜ ವಿಶ್ವ । ವಿನುತ ವಿಕ್ರಮಾರ್ಕವೀರ ।
ವಿನಯಮತಿ ಶಿವಾಜಿ ಮುಖ್ಯ । ಜನಪತಿಗಳ ನಡತೆಗೊಲಿದು ।
ಘನ ಸಮರ್ಥತೆಯನು ಪಾಲಿಸಿ । ಅವರ ಕೀರ್ತಿ ।
ವನಿತೆಗರಸರೆಂದು ಹೇಳಿಸಿ । ಪ್ರಜೆಗಳಿಂಗೆ ।
ವಿನುತ ಭಾಗ್ಯವಿತ್ತು ಪೊರೆದ । ಜನನಿ ಜನಿತ ವಸ್ತುಜಾತೆ ।
॥ ಭರತಮಾತೆ ಪಾಲಿಸೆಮ್ಮನು ॥

ಧೀರ ಕೃಷ್ಣ ಮಧ್ವ ಶಂಕ । ರಾರ್ಯಮಾಧವಾಂಕ ವಲ್ಲ ।
ಭಾರ್ಯ ನಾನಕಾದಿ ಬಹಳ । ಸೂರಿ ಜನರು ದಾಶರಥಿಯ ।
ನಾರಿ ಸೀತೆ ದ್ರುಪದ ನಂದಿನೀ । ಲಕ್ಷ್ಮಿಬಾಯಿ ।
ಚಾರು ಚಂದ್ರವದನೆ ಪದ್ಮಿನಿ । ಮುಖ್ಯ ಸತಿಯ ।
ರೋರಣದಲಿ ನಿನ್ನ ದಯದಿ । ಭೂರಿ ಕೀರ್ತಿ ಪಡೆದರವ್ವ
॥ ಭರತಮಾತೆ ॥

ಕಾಲ ಕೆಲವು ಕಳೆದು ಹೋದ । ಮೇಲೆ ಕ್ರಮದಿ ನಾವು ಪರದ ।
ಯಾಳುವಲ್ಲದಿರುವ ಹೆರವ । ರಾಳಿಕೆಯಲಿ ಸಿಲುಕಿಕೊಂಡು ।
ಬಾಳಿ ನಿಃಸ್ವತಂತ್ರ ಕೃತಿಯಲಿ । ಕೆಟ್ಟುದೆಮ್ಮ ।
ಶೀಲವಕಟ । ನೊಂದೆವಿದರಲಿ । ತಾಯೆ । ಸುಗುಣ ।
ಮಾಲೆ ಕರುಣ ರಸವ ನೆಮ್ಮ । ಮೇಲೆ ಸುರಿಸಿ ಮಮತೆಯಿಂದ
॥ ಭರತಮಾತೆ ॥

ಲೋಕ ಮಾನ್ಯ ತಿಲಕ ಬುಧಜ । ನೈಕಮಣಿ ಮಹಾಂತ ಮತಿವಿ ।
ವೇಕ ಚಿತ್ರನರಿದು ನಮ್ಮ । ಶೋಕವಿದನು ಶಾಂತಿಗೈಯು ॥
ಬೇಕೆನ್ನುತ ಮುಂದೆ ನಿಂದನು ॥ ಸತ್ಯದಿಂದ । ನೇಕ ಕಾರ್ಯ
ಗಳನು ಗೈದನು । ತಾಯೆ । ನೀಮ । ಹಾಕ್ಕೃಪಾಳುವದನು
ಮನದಿ । ಸ್ವೀಕರಿಸಿ ವಿಚಾರದಿಂದ ॥ ಭರತಮಾತೆ ॥

ವರಮಹಾತ್ಮ ಗಾಂಧಿ ಸತ್ಯ । ಶರದಿ ಸಾಧುವರ್ಯ ಧರ್ಮ ।
ಗುರುದಯಾಳು ದೇವತಾಂಶ । ದುರಿತದೂರ ನೀಗಲೆಮ್ಮ ।
ಕೊರತೆಗಳನ್ನು ಕಳೆವ ರೀತಿಗೆ । ಜೀವದಾಸೆ । ದೊರೆದು
ದಣಿವು ತಿರ್ಪನಾತಗೆ । ಮೆಚ್ಚಿ ನಿನ್ನ । ಪರಹಿತೈಕ ಭಾವಗುಣವ ।
ಮೆರೆದು ಕರುಣ ಭಾವದಿಂದ ॥ಭರತಮಾತೆ॥

ಖ್ಯಾತಿವಂತ ಗಾಂಧಿ ನುಡಿವ । ಮಾತಿನಂತೆ । ನಾವು ನಮ್ಮ ।
ಜಾತಿ ವೈರವಿಲ್ಲದೈಕ್ಯ । ರೀತಿಯಿಂದ ವಾಂಛಿತಾರ್ಥ ।
ಜಾತವಾಗುವಂಥ ಕಾರ್ಯವ । ಮೊಳ್ಪುದೆಮಗೆ ।
ರೀತಿಯಿಪ್ಪುದದಕೆ ಧೈರ್ಯವ । ಕೊಟ್ಟು ಜನ್ಮ ।
ಪೂತರೆನಿಸು ನಮ್ಮನಿಮ್ಮ।ಪ್ರೀತಿಯಿಂದ ಪದುಳವಿತ್ತು॥ಭರತಮಾತೆ ॥

ಹಲವು ಮಾನ್ಯ ಜನರು ಗಾಂಧಿ । ತಿಳುಹುವಂತೆ ನಿಷ್ಠೆಯಿಂದ ।
ಕೆಲಸಗಳನು ಗೈವುತಿರ್ಪ । ರಲಸದುತ್ತ ಶಕ್ತಿಯಂತೆ ॥
ಕೆಲರು ತಮ್ಮೊಳೈಕಮತ್ಯವು । ಸಾಲದೆಂದು । ಕುಳಿತು
ಕೊಂಬರವರ ಚಿತ್ತವು । ರಾಷ್ಟ್ರ ಕಾರ್ಯ । ಕಳುಕದಂದ
ದೈಕ್ಯತೆಯನು । ಸಲಿಸು ಸಕಲ ಮನುಜರಿಗೆ ॥ಭರತಮಾತೆ॥

ನಿನ್ನೊಳುಳಿಸಿ ಬೆಳೆದ ಸರ್ವ್ವೊ । ಅನ್ಯಭಾವವಿಲ್ಲದೆಲ್ಲ।
ರನ್ನು ಕೊಡಿ ಕೊಂಬ ಮತಿಯು । ಮುನ್ನ ಕೊಟ್ಟು ರಾಷ್ಟ್ರ
ಕಾರ್ಯ ॥ ವನ್ನು ಮಾಳ್ಪಸಕಲ ಜನರಿಗೆ । ಕಾಮಿತಾರ್ಥ ।
ವನ್ನು ನೀಡಿ ನಮ್ಮ ರೀತಿಗೆ ।
ದೇವ ದೇವ । ಚಿನ್ಮಯಾತ್ಮಲಿಂಗ ಸುಪ್ರ ।
ಸನ್ನನಾಗುವಂತೆ ಮಾಡು ॥ಭರತಮಾತೆ॥

ಲೇಖಕರು : **ಬವಳಾಡಿ ಹಿರಿಯಣ್ಣ ಹೆಬ್ಬಾರರು**

(ಸಂಗ್ರಹ : ಶ್ರೀ ಉಳ್ಳೂರು ರಾಮಕೃಷ್ಣ ಐತಾಳ, ಕಂಬದಕೋಣೆ)

೧೫. ಭರತ ಭೂಮಿಯ ದುರವಸ್ಥೆ

ಪದ–ರಾಗ : ಕಾಂಬೋಧಿ, ಝಂಪೆತಾಳ

ಕಂಡ ಮೇಲಾದರೂ ಕಣ್ದೆರೆಯದಿಹರೇ ॥ ಪಲ್ಲವಿ ॥
ಉದ್ದಂಡ ಭಾರತದ ದುರ್ದಶೆಯ ಕಣ್ಣಾರೇ ॥ ಅನುಪಲ್ಲವಿ ॥

ಅಂಗ ವಂಗ ಕಳಿಂಗ ಮೊದಲಾದ ತುಂಗವಿಭ ।
ವಂಗಳಿಂ ಮೆರೆವ ದೇಶಂಗಳಿಂದ ॥ ಕಂಗೊಳಿಸುತಿರ್ದ ಭಾರತವಿಂದು
ಪರದೇಶ । ದಾಂಗಲೆಯರ ಹಂಗಿನೊಳು ಬಳಲುತಿಹುದೂ ॥ ೧ ॥

ವೇದಘೋಷಗಳು ಸ್ಮೃತಿಬೋಧಗಳು ಸುಕಥಾನು ।
ವಾದಗಳು ನ್ಯಾಯಾದಿ ಶಾಸ್ತ್ರಂಗಳಾ ॥ ಬೋಧಗಳು ಕಾವ್ಯದ
ವಿನೋದಂಗಳಿಲ್ಲ ಪರ।
ರಾಧಿಪತ್ಯದಿ ಮಾಯವಾದುವಿಂತಕಟಾ । ॥ ೨ ॥

ಹೊನ್ನು ಬೆಳೆಯುವ ಖನಿಯು ರನ್ನದಾಗರ ಲೋಕ ।
ಮಾನ್ಯರುದ್ಭವಿಸಿದಾ ಮಾಹಾತ್ಮರೂ ॥ ಜನ್ಮಿಸಿದ ಘನ್ನಸಂಪನ್ನ
ಭಾರತವಿಂದು ಗನ್ನಘಾತಕರಲ್ಲಿ ಬನ್ನಬಡುತಿಹುದೂ ॥ ೩ ॥

ಸುತ್ತಲೂ ಹಲವು ವಿಧದಿಂದ ಭಾರತದ ಸಂಪತ್ತು ಪರದೇಶ
ಕೈದುವುದಲ್ಲದೆ ॥ ಎತ್ತಪೋದರು ಬ್ರಹ್ಮಹತ್ಯೆಯಂತೆಲ್ಲರನು ।
ವೃತ್ತಿತೆರಿಗೆಯು ಬೆಂಬತ್ತಿ ಬರುವುದನೂ ॥ ೪ ॥

ಚರಕವನು ಬಿಡದೆ ಪರದೇಶವಸ್ತುಗಳ ಕಡೆ ॥ ತಿರುಗದೇ ದೇಶೀ
ಯ ವ್ರತವ ಧರಿಸಿ ॥ ವರುಷವೊಂದಕೆ ಬಟ್ಟೆಯೊಂದರೊಳು
ಪರದೇಶ । ಕರವತ್ತುಕೋಟಿ ಪೋಗುವದಪ್ರತ್ಯಕ್ಷಾ ॥ ೫ ॥

ಉಡುವುದೂ ಪರದೇಶಿ ತೊಡುವುದೂ ಪರದೇಶಿ ।
ನುಡಿವುದೂ ಕುಡಿವುದೂ ಪರದೇಶಿಯೂ ॥ ಕೊಡುವುದೂ
ಕೊಂಬುದೂ ಪರದೇಶಿ । ಪರದೇಶಿಯೊಡನಾಟದಿಂದ ಪರದೇಶಿ
ಯಾದುದನೂ ॥ ೬ ॥

ಭಾರತೋದ್ಧಾರದೊಳುದಾರತೆಯನಾಂತ ಗೃಹ ।
ಧಾರಾಪ್ತ ಸುತರ ಪರಿಹಾರಮಾಡಿ ॥ ಧೀರಭಾವದಿ ಕಾರ್ಯಭಾರವನು
ಬಿಡದಿನಿತು ಕಾರಾಗೃಹದೊಳಿಹ ಗಭೀರ ಚರಿತರನೂ ॥ ೭ ॥

ಏರುವುದು ಸ್ವಾರ್ಥಪರಿಹಾರ ರಥವನು ಸತ್ಯ । ಸಾರಥಿಯು
ನೆರೆದಸಹಕಾರವೆಂಬಾ ॥ ಕೂರಸಿಯಹಿಂಸಾಖ್ಯಧಾರೆಯಿಂ ರಿಪುಗಳನಿ ।
ವಾರಿಸಲು ಕಾಂಗ್ರೆಸ್ಸು ಸಾರಿ ಪೇಳ್ದದನೂ ॥ ೮ ॥

ಲೇಖಕರು : ತಿಳಿಯದು

(ಮುದ್ರಿತ)

೧೬. ಭಾರತಾಂಬೆಯ ಹೀನ ಸ್ಥಿತಿ

ಭಾರತಾಂಬೆಯ ಹೀನ ಸ್ಥಿತಿಯನು ಕಣ್ಣು ತೆರೆಯುತ ನೋಡಿರಿ ।
ಪಾರತಂತ್ರ್ಯದಿ ಸಿಲುಕಿ ಬಳಲುವ ತಾಯಿಯನು ನೀವ್ ಬಿಡಿಸಿರಿ
॥ ಪಲ್ಲವಿ ॥

ಒಮ್ಮೆಯಾದರೂ ದೇಶಸೇವೆಯ ಮಾಡಿ ಪುಣ್ಯವ ಪಡೆಯಿರಿ ;
ಉಮ್ಮಳಿಸುತಿಹ ಭರತಭೂಮಿಯ ಸುಖದ ಯುದ್ಧಕೆ ನಡೆಯಿರಿ ॥ ೧ ॥

ನಮ್ಮ ನಾಡಿನ ಹೆಣ್ಣು ಮಕ್ಕಳು ವೀರಶ್ರೀಯನ್ನು ಬೀರುತ ।
ಒಮ್ಮನಸಿನೊಳೆ ರಾಷ್ಟ್ರಕಾರ್ಯಕೆ ಪ್ರಾಣಕೊಡುತಿಹರಲ್ಲವೇ ॥ ೨ ॥

ನಮ್ಮ ದೇಶದ ಸಿರಿಯು ಎಲ್ಲವು ಅನ್ಯ ದೇಶವ ಸೇರಿತು ।
ಒಮ್ಮೆಯಾದರೂ ಹೊಟ್ಟೆತುಂಬಾ ಅನ್ನಸಿಗದಂತಾಯಿತು ॥ ೩ ॥

ಸಕಲ ಸಂಪತ್ತುಗಳ ಶಿಖರವ ಪಡೆದ ನಮ್ಮೀ ದೇಶವು ।
ವಿಕಲವಾಗುತ ಪಾರತಂತ್ರ್ಯದಿ ಸಿಲುಕಿ ಆಯಿತು ನಾಶವು

ದೇಶಸೇವೆಯ ಸಮರಕಾಲದಿ ಪ್ರಾಣಹೋದರು ನೋಡದೇ ।
ದೇವಕೃಪೆಯನು ಪಡೆದು ದೇಶವನುಳಿಸಿಕೊಳ್ಳಲು ನಡಿಯಿರಿ ॥ ೫ ॥

ಲೇಖಕರು : ತಿಳಿಯದು

('ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ)

೧೭. ವಂದೇಮಾತರಂ

ರಾಗ–ಹಿಂದೂಸ್ಥಾನಿ ತಾಳ–ಆದಿ

ಧಾಟಿ–ಸಾರೇಜಹಾಂಸೆ ಅಚ್ಛಾ ಎಂಬಂತೆ

ನಾವೆಂತಮನುಜರೇಳಿ । ಸ್ವಾತಂತ್ರ್ಯವಿಲ್ಲವರು ।
ನೀವಾರು ಎನಲು ಪರರು । ನಿಮ್ಮ ದಾಸರೆನ್ನುವವರು ॥ ಪಲ್ಲವಿ ॥

ವಿಪಿನಾಂತ್ರಪಶುವಿಗಿಂತ । ಅಪಕೀರ್ತಿಪಡೆದು ಧರೆಲಿ ।
ಅಪಮಾನವಾಗಲೆಮಗೆ । ಉಪಮಾನವೆನ್ನುವವರು ॥ ೧ ॥

ದೇಶಾಭಿಮಾನವಿಲ್ಲ । ಲೇಸೈಕಮತ್ಯವಿಲ್ಲಾ ।
ದಾಸಾನುದಾಸರಾಗಿ । ಪರಸೇವೆ ಮಾಡುವವರು ॥ ೨ ॥

ನಮಗಾಗಿ ಗಾಂಧಿಯವರೂ । ಶ್ರಮದಿಂದ ಹೋರುತಿಹರು ।
ಗಮನಿಸದೆ ನಮ್ಮಜನರು । ತಮ್ಮದೆಚ್ಚು ಎಂಬುವವರು ॥ ೩ ॥

ವರ್ಜಿಸದೆ ಮದ್ಯಪಾನ । ದುರ್ಬಲದಿ ನರಳಿಕಡೆಗೆ ।
ನಿರ್ಜೀವವಂತರಾಗಿ । ನಿರ್ಭಾಗ್ಯರೆನ್ನುವವರು ॥ ೪ ॥

ಪರಸೇವೆಹಿತವೆ ನಮಗೆ । ಗುರುಮಂತ್ರವೆನ್ನುತಿಹೆವು ।
ಭಾರತಿಯ ಪುತ್ರರಾಗಿ । ಪುರುಷಾರ್ಥವಿಲ್ಲದವರು ॥ ೫ ॥

ನಾರಿಯುರಮೋಹದಿಂದ । ಮನೆಮಠಗಳೆಲ್ಲ ಮಾರಿ ।
ತಿರಿದುಂಬಜನರತೆರದಿ । ಬರೆದಾಗಿ ನರಳುವವರು ॥ ೬ ॥

ಲಾಲಾಜಿ ಭಗತಸಿಂಗ । ಶುಕದೇವ ರಾಜಗುರುವು ।
ಬಲಿಯಾಗೆದೇಶಹಿತಕೆ । ಕರತಾಳ ಹೊಡೆಯುವವರು ॥ ೭ ॥

ಶ್ರೀಪತಿಯುಸಖನೆ ನಿಮ್ಮ ಭೋಪರಿಲಿ ಬೇಡುತಿಹೆವು ।
ನೀಪೊರೆಯೊ **ನೀಲಕಂಠ** । ಕಾಪಾಡು ಎನ್ನದವರು ॥ ೮ ॥

ಬಿ. ನೀಲಕಂಠಯ್ಯ (ಮುದ್ರಿತ)

ರಾಷ್ಟ್ರಗೀತಾವಳಿಯಿಂದ (ತಾರೀಕಿಲ್ಲ)

೧೮. ಭಾರತೀಯರು ನಾವು

ಭಾರತೀಯರು ನಾವು ಭಾರತೀಯರು ॥ ಪ ॥

ಮಲೆತು ನಿಂತ ವೈರಿಗಳನು
ಗೆಲಿದು ನನ್ನಿ ನಲುಮೆಯಲಿಯೆ
ಚಲುವಿನಿಂದೆ ಇಳೆಯನಾಳಿ
ಬಲುಹುಗಾರರೆಂದು ನಲಿದ

ಭೋಗಗಳಿಗೆ ನೀರನೀಡಿ
ತ್ಯಾಗದಲಿಯೆ ಭೋಗನೋಡಿ
ಯೋಗಿಶ್ವರನೊಡನೆ ಬೆರೆಯೆ
ಯೋಗಪಥವ ಕಂಡುಹಿಡಿದ

ಜಗದೊಡೆಯನ ನೆಲೆಯರಿಯದೆ
ಜಗದ ಜನರ ಜಂಗುಳಿಗಳು
ವಿಗಡವಾಗಿ ತೊಳಲುತಿರಲು
ಬಗೆಯ ಮುಗಿಲೊಳಗೆಯೆ ಕಂಡ

ಭಾವನೆಗಳ ಕೊಳಲನೂದಿ
ಭಾವರಾಗಗಳನೆ ಹಾಡಿ
ದೇವರಾಯನೊಡನೆ ಆಡಿ
ಸಾವನೋವ ತುಳಿದು ನಿಂತ

ಲೇಖಕರು : ಆನಂದ ಕಂದ (ಬೆಟಗೇರಿ ಕೃಷ್ಣಶರ್ಮ)

('ನಾಡಹಾಡುಗಳು,' ಮಿಂಚಿನ ಬಳ್ಳಿ)

೧೯. ಎದ್ದೇಳು ! ಎದ್ದೇಳು !!

ಪದ–ರಾಗ : ಕಾಂಬೋಧಿ, ತಾಳ : ಝಂಪೆ,

ತೊಕಡಿಕೆಯನು ಕಳೆಯು । ದೇಕೆ ಕುಳಿತಿಹ ಗೆಳೆಯ ।
ಸಾಕು ಸುತ್ತಲುನೋಡು ಕಣ್ದೆರದು ನಿಂದೂ ॥
ಲೋಕದಲೆ ವಂದೆಮಾತರವೆಂಬುದೊಂದೆ ಪದ ।
ಈ ಕಿವಿಯ ನೊಡೆಯುತಿದೆ । ಉಚ್ಚಳಿಸಿ ಬಂದೂ ॥ ೧ ॥

ಮತಜಾಲದೊಳ್ ಸಿಲುಕಿ । ಅತಿ ಜಾತಿಯೊಳು ಕುಹುಕಿ
ಗತಿಗೆಟ್ಟು ಸರ್ವರಲಿ ನೀಸಾದಿ ಹಿಂದೂ ॥
ಪತಿತರಿಗೆ ಕೈಗೊಟ್ಟು ಭಾರತ ಧ್ವಜನೆಟ್ಟು ।
ಪಥದೋರ್ ಗಾಂಧಿ, ನೀ ನಡೆ, ಧೀರ ಮುಂದೂ ॥ ೨ ॥

ನುಗ್ಗು ನುಗ್ಗುತ ಪರರು, ಮುಗ್ಗುತ್ತ ಬರುತಿಹರು ।
ಬಗ್ಗಿರದೆ, ಬಾಗುವದೆ. ನಿನಗಾಯಿತಿಂದೂ ॥
ಹಗ್ಗವಿಲ್ಲದ ಕಟ್ಟು, ಬೆತ್ತವಿಲ್ಲದ ಪೆಟ್ಟು ।
ಹೊಗ್ಗಿತೇ ಈ ಗತಿಯು ಸವಿವಿಷವ ತಿಂದೂ ॥ ೩ ॥

ಚಿತ್ತವಸನಾಕುಲೆಯು । ಕುತ್ತಿಗೆಯ ಸಂಕೊಲೆಯು ।
ಕತ್ತರಿಸುತೆನ್ನ ನೆರೆ ಬಿಡಿಸಬೇಕೆಂದೂ ॥
ನೆತ್ತಿಬೊಟ್ಟನಂ ಇಡದೆ ಬಿರುದುಬಾವಲಿ ತೊಡದೆ ।
ಅತ್ತತ್ತು ಹಲಬುತಿದೆ, ಭೂಮಾತೆ ಯಿಂದೂ ॥ ೪ ॥

ಸತ್ತಿತೇ ಸಾಹಸವು, ಬತ್ತಿತೇ ಧೃತರಸವು ।
ಮತ್ತೆ ಮಡಿದಾಕರ್ಣ, ನಾ ಬೆನ್ನಹಿಂದೆ ॥
ಎತ್ತಪೋದುದೊ ಪರಶುರಾಮನಾ ತೋಳ್ವಿರಿಸು ।
ನೆತ್ತರೊಳಗಿಲ್ಲವೈ ವಿಕ್ರಮದ ಬಿಂದೂ ॥ ೫ ॥

ಕಳವಾದಮೇಲ್ ನೀನು, ಕಳವಳಿಸಿ ಫಲವೇನು ।
ಕಳೆದಪುದೇ ಸ್ವಾತಂತ್ರ್ಯ ಮಣಿಯು ನಿನಗಿಂದೂ ॥
ಕೆಳಕೋಟೆ ಕೈಸೋಂಕೆ ಕಹಳೆ ಕೂಗುವುದೇಕೆ ।
ಕಳಚಿಬಿಡು ಅಧ್ಯಾತ್ಮನಿದ್ದೆ ಮಮ ಬಂಧೂ

ಎದ್ದೇಳು ಎದ್ದೇಳು, ನಿದ್ದೆ ಕಣ್ಣೆವೆ ಕೀಳು ।
ಪೊದ್ದಿರ್ದ ವೇದಕಂಬಳಿ ಮೂಲೆಗೊಂಡು ॥
ಎದ್ದು ಬರುತಿರೆ ಭಾನು, ಎದ್ದಿತೆತ ಜಾಪಾನು ।
ಬಿದ್ದುಕೊಂಡರುವೇಕೆ ? ಕತ್ತಲೆಯೊಳಿಂದೂ ॥ ॥ ೭ ॥

ತಳರು ಭರತಕುಮಾರ ಸತ್ಯಬಲದಿಂ ಧೀರ ।
ಝಳಪಿಸುತಲಸಹಕಾ ರಾಯುಧವನಿಂದೂ ॥
ಆಳುತದಲೆ ಧರ್ಮಯುದ್ಧದಿ ಕಾದು ಕಲಿತನವ ।
ತಳೆದು ಭಾರತಮಾತೃ ಸೌಭಾಗ್ಯಕಿಂದೂ । ॥ ೮ ॥

ಲೇ : **ಪಂಜೆ ಮಂಗೇಶರಾಯರು**

(ಮುದ್ರಿತ)

೨೦. ಸ್ವಯಂ ಸೇವಕರಾಗಿರಿ

('ಶಿಪಾಯಿ ಬನಾರೇ' ಎಂಬಂತೆ)

ಸಿಪಾಯಿಯಯು ಆಗು । ಸ್ವಾತಂತ್ರ್ಯ ವಿಜಯಿ ನೀನಾಗು ॥ ಪಲ್ಲ ॥

ಅಸಹಕಾರತೆಯು ಶಸ್ತ್ರವ ಹಿಡಿದು । ಧೈರ್ಯದ ಢಾಲವ
ಕೈಯಲಿ ಪಡೆದು । ದೇಶಭಕ್ತಿ ಚಿಲಖತವನು ಜಡಿದು ।
ಯುದ್ಧಕೆ ಪೋಗು ॥ ಸ್ವಾತಂತ್ರ್ಯ ವಿಜಯಿನೀನಾಗು ॥ ೧ ॥

ಸ್ವಾರ್ಥತ್ಯಾಗ, ಶಿಸ್ತು ಇವೆರಡು ॥ ರಾಯ್ಟ್ ಲೆಫ್ಟ್ ಎಂಬ
ಹೆಜ್ಜೆಯ ಜೋಡು । ಪರರ ಪದ್ಧತಿಗೆ ಹೊಲ್ಬನು ದೂಡಂ ।
ಕೂಟದಿ ಸಾಗು ॥ ಸ್ವಾತಂತ್ರ್ಯ ವಿಜಯಿ ನೀನಾಗು ॥ ೨ ॥

ಸ್ವಾವಲಂಬನದ ಖಂದಕ ತೋಡಿ । ಸಹನಶೀಲತೆಯು
ಮಶಿನ್‌ಗನ್ ಹೂಡಿ । ವಿದೇಶಿ ವಸ್ತ್ರದ ಗುಂಡುಗಳನು ಜಡಿ ।
ಹೊಡಿ ಹೊಡಿ ಪೋಗು ॥ ಸ್ವಾತಂತ್ರ್ಯ ವಿಜಯಿ ನೀನಾಗು ॥ ೩ ॥

ಮಹಾತ್ಮಾಗಾಂಧಿ ಸೇನಾಪತಿಯೆಂದು । ಅಬ್ಬಾಸ್ ತಯ್ಯಬ್ಜಿ
ಮಾರ್ಶಲರೆಂಧು । ಇತರ ಪುಢಾರರು ಕರ್ನಜಲರೆದು । ಹುಕು
ಮಿನೊಳೆ ಸಾಗು ॥ ಸ್ವಾತಂತ್ರ್ಯ ವಿಜಯಿ ನೀನಾಗು ॥ ೪ ॥

ಜಾಗ್ರತನಾಗು। ಸ್ವಾತಂತ್ರ್ಯ ವಿಜಯಿನೀನಾಗು

ಲೇಖಕರು : **ತಿಪ್ಪಯ್ಯ ಮಾಸ್ತರ್**

(ಮುದ್ರಿತ)

೨೧. ಕಹಳೆಯ ಕೂಗು

ಕೂಗುತಿಹುದುದು ನಮ್ಮ ಕಹಳೆ ನಾಡವೀರರೇ ।
ಸಾಗಿಬನ್ನಿ ಕಳಕೆಕೂಡಿ–ಎಂದು ತರಣರೇ ।
ಹೊಸಕಾಲದರುಣರೇ ॥ ಪ ॥

ನಾಡಿನಾಸ್ತಿ ನೀವು ಎಂದು ಕೊಳಲು ಉಲಿವುದು ।
ನಾಡನಾಳ್ವ ಬಂಟರೆಂದು ತಾಳ ನಲಿವುದು ।
ನಾಡಹಿರಿಮೆ ನಮ್ಮ ತೋಳಲುಂಟು ಎನುವುದು ।
ಕಣ್ಣುಕಿವಿಗಳಿಂದ ಹುರುಪಿನಮೃತ ಕುಡಿಸುತ ।
ಇನ್ನು ಬಗೆಯ ಕುಣಿಸುವಂತೆ ಹೃದಯಮಿಡಿಸುತ ।
ಮನದ ಭ್ರಾಂತಿ ಕೆಡಿಸುತ ॥ ೧ ॥

ಜಿಗಿದು ಬನ್ನಿ ನಾಡತಾಯ ಮೋರೆ ನೋಡಿರಿ ।
ನೆಗೆದು ಏಳಿ ಹೊನ್ನನಾಡ ಬೆಳೆಯ ನೋಡಿರಿ ।
ಬಗಿದು ಬನ್ನಿ ಹಳೆಯ ಕತೆಯ ಕೇಳಿ ಕಲಿತಿರಿ ?
ಉಸುರು ಉಸುರಿಗೊಮ್ಮೆ ಮಾತ್ರ ಶಕ್ತಿಯೂದುತ
ಉಸುರುತಿಹುದು ಬಂಟರಂಶವೆಂದು ನಂಬುತ ।
ಮನದಿ ಧೈರ್ಯತುಂಬುತ । ॥ ೨ ॥

ನನ್ನ ಕೂಗು ತಾಯಕರೆಯು ಎಂದು ಭಾವಿಸಿ
ನನ್ನ ರಾಗ ಮಂತ್ರಯಾಗವೆಂದು ಧಾವಿಸಿ
ನನ್ನತಾಳ ಬಾಳಿನಾಳವೆಂದು ಪಾಲಿಸಿ
ಹೇಡಿತನದ ಹೆಸರು ನಾಡಿನಿಂದ ದೂಡುತ
ಮೂಢತನದ ವಿಷದ ಬೀಜಮೊದಲು ತೊಡೆಯುತ ।
ನಮ್ಮ ಕುತ್ತುಕಡಿಯುತ ॥ ೩ ॥

ಸಿಂಪಿಲಿಂಗಣ್ಣ,–ಚಡಚಣ–(19-11-41)

೨೨. ಐಕ್ಯಗಾನ

ಐಕ್ಯವೊಂದೆ ಮಂತ್ರ ಐಕ್ಯದಿಂದೆ ಸ್ವತಂತ್ರ
ಐಕ್ಯಗಾನದಿ ರಾಷ್ಟ್ರ–ತೇಲುತಿರಲಿ ।
ಭಾರತದಿ ಮಮ ಜನ್ಮ । ಸ್ವಾತಂತ್ರ್ಯವೇ ಧರ್ಮ
ಒಕ್ಕೊರಲಿನುದ್ಘೋಷ–ಕೇಳುತಿರಲಿ । ॥ ೧ ॥

ಹೊಲೆಯರೇ ಬ್ರಾಹ್ಮಣರೇ ಮುಸ್ಲಿಮರೇ ಕ್ರಿಶ್ಚನರೆ ।
ಎಲ್ಲರೂ ನಮ್ಮವರೆ–ಎದೆಯೆರಳಲಿ ।
ರಾಷ್ಟ್ರವೊಂದೇ ಜೀವ ಎಂದು ಸಾರಿರಿ–ಯಾವ
ರಕ್ಕಸರುಯಿರಿಲ್ಲ–ನಾವ್‌ಕಡುಗಲಿ । ॥ ೨ ॥

ಅಜ್ಞಾನಪಂಕದಲಿ ಅದ್ದಿರುವ ಜನರಲ್ಲಿ
ಮತಭೇದ ಬರಲುಂಟೆ–ಎಲ್ಲರೊಂದೇ,
ಪಕ್ಷವೇ, ಪಂಥವೇ, ಜಾತಿಯೇ ನೀತಿಯೇ,
ಮೌಢ್ಯಮರೆಯುತ ಬನ್ನಿ–ಎಲ್ಲರೊಂದೆ । ॥ ೩ ॥

ಸ್ವಾತಂತ್ರ್ಯ ಪಡೆಯುವೆವು । ತಲೆಯೆತ್ತಿ ನಡೆಯುವೆವು
ವಜ್ರದೇಹಿಗಳಾವು–ಬನ್ನಿರೆಲ್ಲ । ಸ್ವಾತಂತ್ರ್ಯವೇ ಪಕ್ಷ
ಸ್ವಾತಂತ್ರ್ಯವೆ ಪಂಥ । ಸ್ವಾತಂತ್ರ್ಯವೇ ಜಾತಿ–ಎನ್ನಿರೆಲ್ಲ ॥ ೪ ॥

ಭಾರತದ ಬಿಡುಗಡೆಗೆ । ಹೋರಾಡುತಿಹ
ನಮಗೆ ಯಾರಭಯ ? ನಾವಿಂದು ಮುಂದಾಗಿರೆ ।
ತೇಲುವೆವೊ, ಮುಳುಗುವೆವೊ । ಏಳುವೆವೊ, ಬೀಳುವೆವೊ ।
ಎಲ್ಲರೂ ಒಮ್ಮೆಗೇ ಒಂದಾಗಿರೆ, । ॥ ೫ ॥

ಐಕ್ಯದಮೃತದ ರಸಕೆ । ಜೀವ ಜೀವದ ಬೆಸುಗೆ ।
ಕೂಡಿ ಬರೆಭೀಮಬಲ– ನಮ್ಮೊಳುಂಟು ।
ಹದಿನಾಲಕ್ಕು ಲೋಕವನು ಸಪ್ತ ಸಾಗರವನ್ನು
ಗೆದ್ದು ದಾಟುವ ಶಕ್ತಿ–ವೇಗವುಂಟು.

ಲೇಖಕರು : ಕಯ್ಯಾರ ಕಿಞ್ಞಣ್ಣ ರೈ

(ಲೇಖಕರು ಒದಗಿಸಿದ ಹಸ್ತಪ್ರತಿ)

೨೩. ಸತ್ಯಾಗ್ರಹ

ಪದ–ರಾಗ : (ಮಧ್ವಮತದ ಸಿದ್ಧಾಂತ ಎಂಬಂತೆ)

ಸತ್ಯಾಗ್ರಹ ಸ್ವಾತಂತ್ರ್ಯ ಸುಪಂಥವ ॥ ಬಿಡಬ್ಯಾಡಿ ಬಿಡಬ್ಯಾಡೀ ॥
ಬಿಟ್ಟು । ಕೆಡಬ್ಯಾಡಿ ಕೆಡಬ್ಯಾಡೀ ॥ ಪಲ್ಲವಿ ॥

ಸತ್ಯಂ ವದ. ಧರ್ಮಂಚರವೆನುತಾ । ಸ್ಮೃತ್ಯಾದೀಮತ
ಗ್ರಂಥಗಳ್ ಸತತಾ ॥ ಪ್ರತ್ಯೊಬ್ಬನಿಗೀ ಸುಪಥ ತೋರಿಸುತ ।
ನಿತ್ಯ ಘೋಷಿಸುತ್ತಿಹವು ಬೋಧಿಸುತಾ । ಬಿಡಬ್ಯಾಡಿ ॥ ೧ ॥

ಮಾನಿಯುರೆನಿಪ ಮಾನವರಿದಬಿಟ್ಟೊ । ಹೀನದಾಸ್ಯ ವೃತ್ತಿ
ಯೊಳಳವಟ್ಟೊ ॥ ನಾನಾತೆರ ಸಂಕಷ್ಟವಪಟ್ಟೊ । ಧ್ಯಾನಿಪರಿಂದು
ಸುರಿಹೆನೀಗುಟ್ಟೊ ॥ ಬಿಡಬ್ಯಾಡೀ ॥ ೨ ॥

ಶೋಧಿಸಿ ಪೇಳ್ದ ಮಹಾತುಮ ಗಾಂಧೀ । ಖಾದಿಯು
ಧರಿಸಿ ಮುಂದರಿಸಲು ಹಾದೀ ॥ ಸಾಧಿಸಿದಂತೆ ಸ್ವರಾಜ್ಯವು ಮುದದೀ।
ಆದರಿಸಲಿಕ್ಕೈತಹುದತಿ ಜವದೀ ॥ ಬಿಡಬ್ಯಾಡಿ ॥ ೩ ॥

ಧುರಜಯುಕ್ಕಾಗಿಯೇ ಸ್ವಾರ್ಥವ ತ್ಯಜಿಸೀ । ಸ್ಥಿರ ಸ್ವಾತಂತ್ರ್ಯದ
ಮೇಲೆ ಕಣ್ಣರಿಸೀ ॥ ವರಸತ್ಯಾಗ್ರಹ ಕವಚವ, ಧರಿಸೀ ।
ಪರದೇಶಿ ಪಶುಬಲವ ಧಿಃಕ್ಕರಿಸೀ ॥ ಬಿಡಬ್ಯಾಡಿ ॥ ೪ ॥

ಕಷ್ಟಸಹಿಸಿ ಮುಂದರಿದ ಹಾಗೆಲ್ಲಾ । ಇಷ್ಟಸಿದ್ಧಿಯುಪ್ಪುದು ಸುಳ್ಳಲ್ಲಾ॥
ದುಷ್ಟರ ನಿಗ್ರಹ ಶಿಷ್ಟ ಪರಿಗ್ರಹ । ಸ್ಪಷ್ಟ ಶ್ರೀ ರಘುರಾಮಾವರ
ಬಲ್ಲಾ ॥
ಬಿಡಬ್ಯಾಡಿ ಬಿಡಬ್ಯಾಡೀ ॥ ಬಿಟ್ಟು ॥ ಕೆಡ ಬ್ಯಾಡೀ ಕೆಡಬ್ಯಾಡೀ ॥
॥ ೫ ॥

ಲೇಖಕರು : ತಿಳಿಯದು (ಮುದ್ರಿತ)

೨೪. ಎಚ್ಚರಿಕೆ ಎಚ್ಚರಿಕೆ !!

ಎಚ್ಚರಿಕೆಚ್ಚರಿಕಂತರಂಗದ ಗುಟ್ಟು ಬಿಚ್ಚುವೆನೆಚ್ಚರಿಕೆ ।
ಜುಚ್ಚು ಮಾತುಗಳೆಂದು ತುಚ್ಛ ಮಾಡಲು ಬ್ಯಾಡ ನಿಶ್ಚಯವೆಚ್ಚರಿಕೆ ।

ಪರದಾಸ್ಯ ಪರತಂತ್ರ ಪರರಾಜ್ಯವೆಂದಿಗೂ ಸ್ಥಿರವಲ್ಲ ಎಚ್ಚರಿಕೆ ।
ಹರಸಿ ಪೌರುಷವ ಕುಕ್ಕರಿಸಿ ನೆಲಕೆ ಬಾಯ್ತೆರಿಸುವದೆಚ್ಚರಿಕೆ ॥ ೧ ॥

ಮಾನಕಳೆದು ಅಭಿಮಾನ ತಳೆದು ಸತ್ವಹಾನಿಗೈದೆಚ್ಚರಿಕೆ ।
ಮಾನವನನ್ನು ಶುದ್ಧ ಶ್ವಾನಂಗೈವುದು ಪರಾಧೀನತೆ ಎಚ್ಚರಿಕೆ ॥ ೨ ॥

ಮಳೆಯಾಗಿ ಬೆಳೆಬಂದು ಗಳಿಗೆ ತುಂಬಿದ ಕಾಳು ಉಳಿಯದಾಯ್ತೆಚ್ಚರಿಕೆ।
ಬಳಲಿಕೆ ತಪ್ಪದು ಅಳವು ಬಂದು ನಿಂದಿತಳಿಗಾಲವೆಚ್ಚರಿಕೆ ॥ ೩ ॥

ರಾಟಮುರಿದು ಮಕ್ಕಳಾಟಕ್ಕೆಹೋಯಿತು ಗೂಟವಾಯ್ತೆಚ್ಚರಿಕೆ ।
ರಾಟಿಕಾಣದೆ ಬಿದ್ದರ್ ಕೋಟಿ ಹೆಂಗಸರು ಗೋಳಾಟದೊಳೆಚ್ಚರಿಕೆ ॥ ೪ ॥

ಮಗ್ಗದ ವ್ಯವಸಾಯ ಮುಗ್ಗಲು ನೇಕಾರರ್ ಕುಗ್ಗಿದರೆಚ್ಚರಿಕೆ ।
ಅಗ್ಗಾಗಿ ಹೊಟ್ಟೆಯು ತಗ್ಗು ತುಂಬಲು ಕಾಡು ಕಗ್ಗುಂಬರೆಚ್ಚರಿಕೆ ॥ ೫ ॥

ಬಣ್ಣದ ಬಟ್ಟೆಗಳು ತಣ್ಣಗಾದವು ಬಲು ತಿಣ್ಣಬಂತೆಚ್ಚರಿಕೆ ।
ಬಣ್ಣಗಾರರು ಸತ್ತು ಮಣ್ಣು ಕೂಡಿದರಯ್ಯಾ ಕಣ್ಣಿಲ್ಲೇನೆಚ್ಚರಿಕೆ ॥ ೬ ॥

ಜಾಲಗಾರರ ಕುಲಮೂಲವಡಗಿ ಹೋಯಿತೇಳದಾಯ್ತೆಚ್ಚರಿಕೆ ।
ಕೂಲಿಕಂಬಳಿ ಮಾಡಿಕಾಲವಾದರು ತಿನಲು ಕೂಳಿಲ್ಲವೆಚ್ಚರಿಕೆ ॥ ೭ ॥

ಕಸಬೆಲ್ಲ ಮುಳುಗಿರೆ ಕಸಬುದಾರರು ಬಿದ್ದರ್‌ವೆಸನದೊಳೆಚ್ಚರಿಕೆ ।
ಕಸಿವಿಸಿಪಟ್ಟು ಕಾಲ್ ಹೊಸೆದರೂ ಹೊಟ್ಟೆಗೆ ಅಶನವಿಲ್ಲೆಚ್ಚರಿಕೆ ॥ ೮ ॥

ಯಾರ ನೋಡಿದರೂ ವ್ಯಾಪಾರವೆಂಬುದು ಮೊಟ್ಟೆಗಾರಿಕೆ ಎಚ್ಚರಿಕೆ ॥
ಹೇರಿತಂದಿಲ್ಲ ಕೈಗಾರಿಕೆ ಪರರದು ಮಾರುವರೆಚ್ಚರಿಕೆ ॥ ೯ ॥

ಹತ್ತಿಬೀಳ ಬೀಜ ಬಿತ್ತಿ ಬೆಳೆದಕಾಳು ಹೊತ್ತೊಯ್ದರೆಚ್ಚರಿಕೆ ।
ಅತ್ತಣವರು ಇತ್ತಸತ್ತರು ಸರಕಾರ ಚಿತ್ತೈಸದೆಚ್ಚರಿಕೆ ॥ ೧೦ ॥

ಈ ರೀತಿ ಮಾಯಾ ಬಜಾರದೊಳಗೆ ಮೋಸಗಾರಿಕೆ ಎಚ್ಚರಿಕೆ ।
ಯಾರು ಯಾರಿಗೆ ಹೇಳಿಕೇಳಿದರೂ ದಾರಿ ತಿಳಿಯದಾಯಿತೆಚ್ಚರಿಕೆ ॥೧೧॥

ಮದ್ದುಗುಂಡುಬ್ಯಾಡ ಯುದ್ಧಮುತ್ತಿಗೆಬ್ಯಾಡ ಬುದ್ಧಿಸಾಕೆಚ್ಚರಿಕೆ ।
ಗದ್ದಲಕೊಲೆಗಳ ಸದ್ದು ಇಲ್ಲದ ರಾಜ್ಯ ಗೆದ್ದೇವು ಎಚ್ಚರಿಗೆ ॥ ೧೨ ॥

ಕೈರಾಟಿತೋಘಿನ ಗುಂಡಿಗೆ ಮದ್ದು ಸಹಕಾರವೆಚ್ಚರಿಕೆ ।
ಕಾರಾಗ್ರಹವೆ ರಣಧೀರತೆ ವಿಜಯಕೆ ದಾರಿಕಾಣೆಚ್ಚರಿಕೆ ॥ ೧೩ ॥

ಇದ್ದಸ್ಥಿತಿಯನ್ನೆಲ್ಲ ಇದ್ದಕ್ಕಿದ್ದಹಾಗೆ ಹೇಳಿದ್ದು ಎಚ್ಚರಿಕೆ ।
ಮುದ್ದು ದೋಹನನ ತತ್ವ ಶುದ್ಧ ಮನದಿ ತಿಮ್ದೋತಿದ್ದೆಚ್ಚರಿಕೆ ॥೪೧॥

ಲೇಖಕರು : **ಮುದವೀಡು ಕೃಷ್ಣರಾಯರು 1920**

('ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ)

೨೫. ಗಾಂಧಿಯವರ ಸಂದೇಶ

ಸಂದೇಶಾ ಪೂಜ್ಯ ಗಾಂಧಿಕ–ಎಂಬಂತೆ

ಸಂದೇಶಾ ಪೂಜ್ಯ ಗಾಂಧಿಯವರಾ । ಜಗತ್ತಿನ ಮುಂದಿಡುವೆ ನಿದರಾ
॥ ಪಲ್ಲವಿ ॥

ಇದರ ಸಮೂಲವೃಚ್ಚರಿಸಿ ಭೂಲೋಕದ ಜನರನೆಚ್ಚರಿಸೀ ॥ಅ.ಪ.॥

ಕೌನ್ಸಿಲದ ಆಶೆಯನು ಬಿಟ್ಟು ಸ್ವದೇಶಾಭಿಮಾನವನು ತೊಟ್ಟು ।
ಅಂಶತಾ ಮಾತೃಭೂಮಿಯನು ಸೇವಿಸಿ ಧನ್ಯನಾಗುವೆನೂ ॥ ೧ ॥

ವಕಿಲಾತ್ ಬಿಟ್ಟು ನಡೆಯುವೆನು । ಶಾಲೆ ಕಾಲೇಜು ತ್ಯಜಿಸುವೆನೂ।
ಸ್ವದೇಶಿ ವಸ್ತ್ರ ಧರಿಸುವೆನು । ವಿದೇಶಿ ವಸ್ತ್ರ ಬಿಡಿಸುವೆನು ॥ ೨ ।

ಆದಾಲತ್ ಕೋರ್ಟು ಬಲುಚಿಂತೆ। ಮಾಡುವೆನೂ ಗ್ರಾಮ ಪಂಚಾಯಿತಿ
ಕೊರ್ಟಿನ ನ್ಯಾಯ ತಿಳಿಸುವೆನೂ । ಬೀಗಿದ ಕಲ್ಮಷವ ತಿಳಿಸುವೆನೂ
॥ ೩ ॥

ಜಡಿದ ಬಂದುಕ ತೋಪುಗಳಾ । ಬೆದರುಂದೀಸು ನಮಗಿಲ್ಲಾ ।।
ಆತ್ಮಬಲವೆಂದೆನ್ನುತ ಭೇರಿ । ಹೊಡಿಸುವೆನು ಲೋಕದಲಿ ಸಾರಿ ॥೪॥

ಲಡಾಯಿಯ ಸೈನ್ಯಗಳು ಬೇಡಾ । ಬೇಡ ಶಸ್ತ್ರಾಸ್ತ್ರಗಳು ಬೇಡಾ॥
ಹತ್ತಿಬರುವಂಥಾ ಬೆಂಕಿಯನು । ನಂದಿಸುವೆ ನಮ್ಮ ವ್ರತದಿ ನಾನು
॥ ೫ ॥

ನಮಗೆ ಸ್ವರಾಜ್ಯ ಸಿದ್ಧಿಯನು । ಕೊಡುವ ಕೈರಾಟಿಯಿದು ತಾನು ॥
ವಿದೇಶಿ ಮಾಲಿಗಿದು ಮೂಲಾ । ಬೇರುಗಳ ಕೀಳುವದದ ಸಕಲಾ
॥೬॥

ಕೃಷ್ಣ ಬುಧ ವೀರರಾಘವರಾ । ಚರಿತ ಇಸಾ ಮಹಮ್ಮದರಾ ॥
ತಿಲಕ ದಾದಾಭಾಯಿಯವರಾ । ವಾಕ್ಯಗಳ ತತ್ವ ಸಾರಾ ॥ ೭ ॥

ಲೇಖಕರು : **ತಿಪ್ಪಯ್ಯ ಮಾಸ್ತರ್**

(ರಾಷ್ಟ್ರೀಯ ಪದಗಳು 1930)

೨೬. ಪದಾ

ಚಳವಳಿ ಅಂದರೇನ ತಿಳಿಸಿ ಹೇಳತೀನ ಕೂತ ಕೇಳರಿ ಸರ್ವಜನಾ ।
ಅಳಗಾಡ ಆಪವರನ್ನ ಎಳಕೊಂಡ ಬಾಳ್ವಿಕಹಚ್ಚುದು ಚಳವಳಿರಣ್ಣಾ ॥

ಕಟಪಟ ಮಾಡಿ ನಿಮ್ಮ ಚಟಗಳ ಬಿಡಸಲಿಕ್ಕೆ ಕೈಕಾಲ ಬೀಳುವದು
ಒಂದೇ ಸವನಾ। ಸಟಿಮಾತ ಅಲ್ಲ ಸತ್ಯ ತಿಳಿಯಿರಿ ರಾಷ್ಟ್ರದ ದೆಶೆಯಿಂದ
ಆಗತತಿ ಸಣ್ಣಾ ॥

ಅರಹೊಟ್ಟಿ ಉಣ್ಣವರಿಗೆ ಪೂರಾ ಕೊಡಸಲಿಕ್ಕೆ ಘೋರ ಬಿಟ್ಟ
ಮಾಡುದಕದನಾ ॥

ಹಿರಿಯ ಸಂಪತ್ತಿನಿಂದ ಮೆರೆಯುವ ಜನರಿಗೆ ಗುರು ಬೋಧ ಕೊಡುವರು
ದಿನಾದಿನಾ। ಸಣ್ಣವರ ದೊಡ್ಡವರ ಭಿನ್ನ ಬೇಧವಿಲ್ಲ ಮನ್ನಣೆ
ಕೊಡುವದು ಸಂಪೂರ್ಣಾ। ಉನ್ನತ ಖಾದಿಯ ಚೆನ್ನಾಗಿ ಧರಸಿ
ಚಿನ್ನದಂತೆ ಇರುವದು ಹಸನಾ ॥

ಕೌರವರ ಗುಣದ ಫಿರಂಗ್ಯಾರ ಕೈಯಾಗ ಸಿಕ್ಕ ಸೆರೆಯಾಳಾಗಿತ್ತ
ಇಲಿತನಾ। ಪಾಂಡವರಂತೆ ವನವಾಸ ಸೋಸಿ ಮರಿಮರಿಗಿ ಆದೀತ
ಜೀರ್ಣಾ ॥

ಶಕುನಿಯಂತಾ ಭಾರತ ಮಂತ್ರಿ ಕುಟಿಲ ತಂತ್ರದಿಂದ ಕಳದಿಟ್ಟ ಭಾರತ
ಮಾತೆಯನಾ। ತುರಂಗ ಎಂಬುವ ಅರಗಿನ ಮನೆಯಿಂದ ಪಾರಾಗಿ ಬಂತ
ಆಗಲಿಲ್ಲ ಏನಾ ಚ್ಯಾಲ॥

ಸ್ವಯಂಸೇವಕರಾಗಿ ತಿರಕೊಂಡಾ। ಪಾಂಡವರಂತೆ ಆತ ಬಾಳಬಂಡಾ॥
ಮನಿಮನಿ ಬಿಕ್ಷ ಇಸಕೊಂಡಾ। ತಿಳಿಸಿ ಹೇಳುದು ಬೇಕಾದಲ್ಲಿ ಉಂಡಾ॥
ಎಷ್ಟೋ ಮಂದಿದ ಹೋದಾವ ರುಂಡಾ। ನೋಡಿದಿರಿ ನೀವ ಕೂಡಾ
ಅಭಿಮನ್ಯುನಂಥ ಮಿಗಿಲಾದವನೊಬ್ಬನು ಭಗತಸಿಂಗನು ಕೊಟ್ಟನು
ಪ್ರಾಣ ॥

॥ ಏರ ॥

ಮೂರು ಲೋಕದ ಗಂಡ ಅರ್ಜುನನಂತೆ ಜವಹಿರಲಾಲ
ನೆಹರು ಪ್ರಖ್ಯಾತಿ। ಭೀಮಸೇನನಂತೆ ಅರ್ಭಾಟ ಮಾಡುವ।
ಸುಭಾಶ್ಚಂದ್ರ ಬೋಸ ರಾಷ್ಟ್ರಪತಿ। ಧರ್ಮರಾಜನಂತೆ ಸೌಮ್ಯ ಗುಣದವ
ಅಬ್ದುಲ್ ಗಫರಖಾನ ಮಹಾಮೂರ್ತಿ। ನಕುಲ ಸಹದೇವರೆಂಬು
ಸ್ವಯಂ ಸೇವಕರುಹಗಲಿ ರಾತ್ರಿ ಮಾಡತಾರ ಚಿಂತಿ ॥

ದ್ರೌಪತಿ ತಾಯಿಯೆಂಬ ಸ್ವತಂತ್ರ ಭೂದೇವಿಯ ಮಾನ ಉಳಿಸುದಕ
ಮಾಡತಾರ ಯುಕ್ತಿ। ಕೃಷ್ಣ ಪರಮಾತ್ಮನಂತೆ ಮಹಾತ್ಮಾ ಗಾಂಧಿ
ಯವರು ತಯಾರಾಗಿ ನಿಂತಾರ ಸಾರಥಿ ॥

ಕುದರಿ ರಥಾ ಹೂಡಿತಾ ಲಗಾಮತಗೊಂಡಾನ ತನ್ನ ಹಂತಿ।
ರಾಟಿಯೆಂಬ ಸುದರ್ಶನ ಚಕ್ರವ ತಿರುವ ತಾನ ಅವ ದಿನಂಪ್ರತಿ।
ಸತ್ಯ ಶಾಂತಿಯೆಂಬು ಬಾಣ ತಯಾರ ದೂಡಿಕೊಟ್ಟ ಬಿಟ್ಟಾನ
ಪಾಂಡವರಂತಿ। ಅದೇ ಬಾಣಾ ಇವರು ಉಪಯೋಗ ಮಾಡಿದರ
ದೊರಿತದ ನೋಡ ಹಸ್ತಿನಾವತಿ

॥ ಚ್ಯಾಲ ॥

ಅಜ್ಞಾತವಾಸ ಪರದೇಶವನ್ನಾ। ದಾಟಿದರ ಆಗತದ ಹಸನಾ। ಅದರ
ಸಲುವಾಗಿ ಗಾಂಧಿ ಬಗವಾನಾ। ಹಗಲಿರುಳು ಕಟಪಟಿ ಮಾಡುವನಾ ॥
ಪಾರಾದಿಂದ ಘೋರಯಿಲ್ಲಿ ಏನಾ ಸ್ವರಾಜ್ಯ ಪಾಂಡವರ ಸ್ವಾಧೀನಾ

॥ ಏರ ॥

ವಿರಾಟನಗರವೆಂಬ ಕೀಚಕನ ಕಮೀಟಿಯೊಳು ಕುಂತೀ ಪುತ್ರರರು
ಆಗತಾರ ಸಣ್ಣ ॥ ದ್ವಾಪಾರ ಯುಗದಂತೆ ಕಲಿಯುಗದೊಳಗ ಚಾಲು
ಆಗತಾವ ಅವತಾರಾ। ಕರ್ಣನೆಂಬುವಂಥಾ ಸಂಸ್ಥಾನದವರನ್ನ
ಇಂಗ್ಲೀಷರು ಬಾಲಾ ಬಡಿಯುವರಾ। ಕವಚಕುಂಡಲಾ ಕಸಕೊಳ್ಳಲಿಕ್ಕೆ
ಮಹಾತ್ಮಾ ಮಾಡತಾನ ವಿಚಿಯಾರಾ। ಕಸಗೊಂಡ ಮ್ಯಾಲ ಕೌರವರ
ಕಡೆಯಿದ್ದ ಕರ್ಣ ಸಾಯುದು ನಿರ್ಧಾರಾ ॥

ತಮ್ಮ ದೇಶದ ಅನ್ನಾ ತಾವು ತಿಂದ ಫಿರಂಗ್ಯಾರ ಬೆನ್ನ ಕಟ್ಟುವರಾ ।
ಪ್ರಜಾಸತ್ತಾತ್ಮಕ ರಾಜ್ಯ ಆಗಲೆಂತ ಸಂಸ್ಥಾನ ಪ್ರಜೆಗಳು ಅನ್ನುವರಾ ॥
ದೂರ ಯಾಕ ಮೈಸೂರ ಸಂಸ್ಥಾನದಾಗ ವಿದುರಾಶ್ವತ್ಥದಲ್ಲಿ ಆತ
ಅತ್ಯಾಚಾರಾ ।ಚಳವಳಿ ಮಾಡುವ ಪ್ರಜೆಗಳ ಮೇಲೆ ಅಪಘಾತ
ಮಾಡಿದರ ಗೋಳಿಬಾರ ॥ ಮೂವತ್ತೆರಡು ಮಂದಿ ಪ್ರಾಣಬಿಟ್ಟರಾ
ನಾಲ್ವತ್ತೆಂಟು ಮಂದಿ ಗಾಯ ಹೊಂದಿದರಾ । ಅಲ್ಲೋಲ ಕಲ್ಲೋಲ
ವಾಗಿ ವಲ್ಲಭಬಾಯಿಯವರು ಸಲ್ಲಾ ಮಾಡಿ ಧ್ವಜ ಏರಿಸಿದರಾ
॥ ಚ್ಯಾಲ ॥

ಇದನ್ನ ನೋವಿ ಜಮಖಂಡಿ ಸಂಸ್ಥಾನಾ । ಅಪ್ಪಾಸಾಹೇಬ ತಗದಾನ
ರಚನಾ । ಪ್ರಜಾ ಅಧ್ಯಕ್ಷರ ಕರಸ್ಯಾನಾ । ಅಲ್ಪ ಸ್ವಲ್ಪ ಸವಲತ್ತ
ಮಾಡಿದಾನ । ಉಳಕಿದವರು ತೆರದರಪ್ಪಾ ಕಣ್ಣಾ । ಒಳಗಿಂದೊಳಗ
ನಡಸ್ಯಾರ ಕಲ್ಪನಾ
॥ ಏರ ॥

ಸ್ವರಾಜ್ಯ ದೊರೆ ದೊರಕಿತೆಂದು **ಭೀಮರಾಯ** ಮಾಡಿದ ಕವನ.

ಹುಲಕುಂದ ಭೀಮಕವಿ ('ರಾಷ್ಟ್ರೀಯ ಗೀ ಗೀ ಪದಗಳು', ಬಾಗಲಕೋಟೆ)

೨೭. ಲಾವಣಿ

ಧರಣಿಯೊಳು ಭರತಖಂಡದ ಸಿರಿಗೆ ಸರಿಗಾಣೆವೆಂದು ।
ಮರು ಮರು ಮರುಗುತ ಪರನಾಡುಗಳು ।
ವನಚರದಂ ರುಗುತ ಗುಡ್ಡಗಾಡಿನೊಳು ।
ಪರಿ ಪರಿ ಕಷ್ಟ ಹೊಂದಿದವು ಪೂರ್ವ ಕಾಲದೊಳು ।
॥ ಏರು ॥—ಸಿರಿಯು ಹರಿದುಹೋಗಿ ಈಗ ತಿರಿದು ತಿಂದರಿನ್ನು ಕಣ್
ತೆರೆದು ನೋಡವಲ್ಲರೀ ಹಿಂದುಗಳು ।
ಎಂಥ ಮರುಳ ಮಂದಿ ಹುಟ್ಯಾರ ನಮ್ಮ ನಾಡಿನೋಳು ॥೧॥

ಬೆಳ್ಳಿ ಬಂಗಾರ ಹೊಗೆಯು ಬಹಳ ನೆಳ್ಳಗವಿಸಿ ದೇಶವೆಲ್ಲ ।
ಪೊಳ್ಳ ಬಿಡದೇ ತುಂಬಿತ್ತು ಗಗನದೊಳು ।
ವಿದ್ಯೆಯ ಕೊಳ್ಳಿ ಮಿಂಚುತಿತ್ತು ಹೀಮಾದ್ರಿಯೊಳು ।
ಕಂಡು ಸಳ್ ಹೊಡೆದು ಹೋಗತಿದ್ರು ವೈರಿಗಳು ।
॥ ಏರು ॥—ಸುಳ್ಳು ಮಾತ ಅಲ್ಲ ಕೀರ್ತಿಬಳ್ಳಿ ಹಬ್ಬಿಕೊಂಡು ವೀರ
ಡೊಳ್ಳು ಹೊಡೆಯುತ್ತಿತ್ತು ದಿಗ್‌ದೇಶದೊಳು ॥೨॥

ದೂರಿನ ಮಾತ ಅಲ್ಲ ಅರ್ಧನೂರ ವರುಷದೊಳಗ ಮಿತಿ
ಮೀರಿ ಸಾಹಸ ಮಾಡ್ಯಾರ ಜಪಾನಿಗಳು ।
ನೆರೆ ಸೂರಿ ಮಾಡಿ ಬಿಟ್ಟಾರ ವಿದ್ಯಾ ಬುದ್ಧಿಯಲಿ ।
ತಮ್ಮ ವೀರಕಾಳಿ ಹಿಡಿಸ್ಯಾರ ಪಂಚ ಖಂಡದಲಿ ।
॥ ಏರು ॥—ಅರತಿಂಗಳೆದಾರಿ ಹಡಗಾ ಏರಿ ಬಂದು ಇಂಗ್ರೇಜರು ।
ವೀರಗಳಿಕೆ ಮಾಡ್ಯಾರ ಭೂಲೋಕದೋಳು ।
ಸೂರ್ಯ ಮೂಡಿ ಮುಳುಗವಲ್ಲರಿ ರಾಜ್ಯದೊಳು । ॥೩॥

॥ ಇಳಿವು ॥—ಬಳೆದ ರಾಜ್ಯವೆಲ್ಲ ಅಳಿದು ಹೋದರಿನ್ನು ತಿಳಿಯುವಲ್ಲು
ಜನರಿಗೆ ।
ಹೇಳಿದರ ಕಾಣಸ್ತತಿ ನಗಿ ।

ಹೊಳೆಯು ನೀರ ಪರಿ ಹರಿದು ಹೋಗತತಿ ।
ಉಳಿಯುವಲ್ತು ಒಂದ ಮಗಿ ।
ನೋಡಿ ಆಗತೈತಿ ತಗಬಗಿ ।
ಹೋತು ಹರವಿ ಒಡೆದು ಹಂಚಾಗಿ ।
ಅಂನಕ್ಕ ಬಂತು ಬಲು ಬಿಗಿ
ಅಭಿಮಾನವಿಲ್ಲ ಜನರಿಗಿ ।
ಸುಡಲಿವರ ಜನ್ಮ ತಗಿ ತಗಿ ।
॥ ಏರು ॥—ಸಾರಿಹೇಳತೇನ ಕೇಳ್ರೋ ಕೋರಿಹರಕ ಮುಂಡ್ಯಾ ಗಂಡ್ರ್ಯಾ ।
ಮಾರಿ ಮುಚ್ಚಿಕೊಂಡ್ರ ನಿಮನ್ಯಾರ ಕೇಳವರು ।
ಸೋಮಾರಿತನ ಬಿಟ್ಟು ಬಿಡ್ರೋ ನೀವೆಲ್ಲರು ॥೪॥

ಸಿರಿಯು ಹರಿದು ಹೋಗಿ ಈಗ ತಿರಿದು ತಿಂದರಿನ್ನು ।
ಕಂಣ್ ತೆರೆದು ನೋಡವಲ್ಲರೀ ಹಿಂದುಗಳು ।
ಎಂಥ ಮರುಳ ಮಂದಿ ಹುಟ್ಯಾರ ನಮ್ಮ ನಾಡಿನೊಳು ।

ಲೇಖಕರು ; ತಿಳಿಯದು

('ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ)

೨೮. ಸತ್ಯಾಗ್ರಹ

ಭರತಖಂಡವೆಂಬನಭದಿ ತರಣಿತೆರದಿ ಕನ್ನಡದೇಶ ।
ಮೆರೆಯುತಿಹುದು ರಾಮರಾಜ್ಯ ಪೆಸರಿನಿಂದಲಿ ।
ದುರುಳಜನರ ತರಳತನದಿ ಬರಿದೆಬಂತು ಕೆಟ್ಟಪೆಸರು ।
ಬರೆಯಲಾಗದಂಥ್ಹಾ ನಾನು ಯೇನಹೇಳಲಿ ॥ ೧ ॥

ತುಕ್ಕು ಹಿಡಿಯುತ್ತಿದ್ದ ಪರಮ ಚೊಕ್ಕರಾಷ್ಟ್ರತೇಜವನ್ನು ।
ತಿಕ್ಕಿ ಬೆಳಗಿದಂಥ ವೀರರಿದ್ದನಾಡು ॥
ಬೊಕ್ಕಸಾವೆತುಂಬಲೂ್ಮರು ಮುಕ್ಕಾಲ್ಗಳಿಗ ಹೊನ್ನಮಳೆಯ ।
ಮಿಕ್ಕಿಸುರಿಸಿದಂಥ ಮಾಧವರಿದ್ದನಾಡು ॥ ೨ ॥

ಹುಕ್ಕಬುಕ್ಕರ ಹಿಂದೆ ತಾವು ಬೊಕ್ಕೆಲಿಕ್ಕಿವೈರಿಗಳನು ।
ತಿಕ್ಕಿಮೆರೆದ ಸ್ವಾತಂತ್ರ್ಯದ ಮಲೆನಾಡು ॥
ಅಕ್ಕಾದೇವಿಯಂಥ ಹೆಣ್ಣು ಮಕ್ಕಳ್ ರಾಷ್ಟ್ರಕ್ಕೆಂದು ತಮ್ಮ ।
ಚೊಕ್ಕದಂಥದೇಹವಿತ್ತ ಸಿರಿನಾಡು ॥ ೩ ॥

ಗಾಂಧಿಹಿಂದೂಮಾತೆಯನ್ನು ಬಂದಮುಕ್ತ ಮಾಡಲೆಂದು ।
ಹಿಂದೆ ಹೂಡಿಯಿದ್ದ ಶಾಂತಿಸಮರದಲಿ ॥
ಹಿಂದುಮುಂದು ನೋಡದಂತೆ ನಿಂದು ಅಸಹಕ್ಕಾರಕ್ಕಿರಿದು ।
ಇಂದು ಮಹಿಮನೆನಿಸಿಕೊಂಡ ಧರಣಿಯಲಿ ॥ ೪ ॥

ಹಿಂದೆಯಿದ್ದ ತಮ್ಮವರಂತೆ ಇಂದುಯಿರುವ ತಾವುಕೂಡ ।
ಬಂಧೂರಾದ ಸ್ವಾತಂತ್ರ್ಯಕ್ಕೆ ಪ್ರಿಯುದಲ್ಲಿ ॥
ಇಂದುಜಗವು ತಿಳಿಯುವಂತೆ ಸಂಧಿಸಿರುವ ಸಮರದಲ್ಲಿ ।
ನಿಂದು ಕಾಯಬೇಕು ಧೈರ್ಯಬಿಡದಿಲ್ಲಿ ॥ ೫ ॥

ಸ್ವಾರ್ಥತ್ಯಾಗವೆಂಬ ಪದದ ಅರ್ಥವನ್ನು ಪೂರ್ತಿತಿಳಿದ ।
ಕೀರ್ತಿವಂತರಾದ ನಮ್ಮ ಹಿರಿಯರಂತೆ ॥

ಸ್ಫೂರ್ತಿಯಿಂದ ಮನಕೆತರದೆ ಅರ್ಥಪ್ರಾಣಹಾನಿಗಳನು ।
ವರ್ತಿಸೀರಿಯಿಂದು ವೀರಭಟರಂತೆ ॥ ೬ ॥

ತಪ್ಪು ತಮ್ಮದಿಲ್ಲದಿರಲು ಒಪ್ಪಿಕೊಂಡುಪರರತಪ್ಪ ।
ಒಪ್ಪಿಸಿಹರುಪ್ರಾಣ ಕಾಂಗ್ರೆಸ್ ಬೋರ್ಡಿನವರು ॥
ಸೊಪ್ಪುಹಾಕರೆಂದು ಬರಿದೆ ಬೆಪ್ಪು ಹಿಡಿದು ಬೆದರಿಪರಿಗೆ ।
ಒಪ್ಪುವಂತೆಮನವು ಕಾದಾಡಿದರು ॥ ೭ ॥

ಸಿದ್ದಲಿಂಗಸ್ವಾಮಿಯವರು ಬುದ್ಧಿಗೆಡಿಸಿ ಜನರಿಗೆಲ್ಲ ।
ಜಿದ್ದುನಡಿಪರೆಂದು ಹೇಳಿ ಸೆರೆಯಹಿಡಿದರು॥
ಮುದ್ದಾ ಕರಕೆ ಜೋಡಿತೊಡಿಸಿ ಮದ್ದುಗುಂಡು ಪಾರವಿರಿಸಿ ।
ಖುದ್ದುಮನದ ಜಿದ್ದಿನಿಂದ ಸೆರೆಯೊಳಿಟ್ಟರು ॥ ೮ ॥

ವೀರಕೇಸ್ರಿಯಾರ್ಥಟಕ್ಕೆ ಜ್ವರವು ಬಂದಂಗಾಯಿತೆಂದು ।
ನರಿಯಕೂಗಿನವರು ಅವರಸೆರೆಯಹಿಡಿದರು ॥
ಹಿರಿಯಬೇಟೆಗಾರರೆಂಬ ಮರವೆಯಿಂದ ಮೆರೆವನಮ್ಮ ।
ಪರಮಪುದ್ದೇದಾರರವರ ಸೆರೆಯೊಳಿಟ್ಟರು ॥ ೯ ॥

ಗ್ರಾಮೋದ್ಧಾರಕ್ಕಾಗಿದುಡಿವ ರಾಮಚಂದ್ರರಾಯರನ್ನು ।
ಪ್ರೇಮಹಾನಿಗೈದರೆಂದು ಸೆರೆಯಹಿಡಿದರು ॥
ಜಾಮೀನನ್ನು ಕೊಟ್ಟಹೊರತು ನಿಮಗೆಬಿಡುವದಿಲ್ಲವೆಂದು ।
ನೇಮಿಸಿದ್ದರೊಂದುವರುಷ ಸಜವಕೊಟ್ಟರು ॥೧೦॥

ಕೆ.ಟಿ. ಭಾಷ್ಯಂಅಯ್ಯಂಗಾರ್ರ ಕಾಟತಡೆಯಲಾಗದೆಂದು ।
ಚಟುಲಪಂಥಹೂಡಿ ನಮ್ಮಾ ಸಚಿವರು ॥
ನೀಟಿನಿಂದರೆಸ್ಟುಗೈಸಿ ತಾಟಿಪೋಟಿಕೇಸುನಡೆಸಿ ।
ಇಟ್ಟರಯ್ಯಾ ಸೆರೆಯೊಳವರ ಬುದ್ಧಿವರ್ಯರು ॥೧೧॥

ತಿಮ್ಮಾರೆಡ್ಡಿಯವರು ಮುದದಿ ನಿಮ್ಮತಪ್ಪತಿದ್ದಿಕೊಳ್ಳಿ ।
ನಮ್ಮನೃಪರಕೀರ್ತಿ ಬೆಳಗಲೆಂಬುತಲೇ ॥

ನಮ್ಮತಪ್ಪತಿದ್ದಲಿಕ್ಕೆ ನಿಮ್ಮನ್ಯಾರುಕರೆದರೆಂದು ।
ಸುಮ್ಮನೆ ಹಿಡಿದುಯಿಟ್ಟರಯ್ಯೋಜೈಲಿನಲೇ ॥೧೨॥

ಕೊಟ್ರೆಸಂಜಪ್ಪವರ ಕ್ರಾಂತಿಗುಟ್ರೆಕೇಳಿಜನದ ಶಾಂತಿ ॥
ಕೆಟ್ರೆಯೇನುಗತಿಯುಯೆಂದು ಸೆರೆಯಹಿಡಿದರು ॥
ಕಟ್ರೆಯಾಗುವದಿನ್ನುಮುಂದೆ ಬಿಟ್ರೆಹೀಗೆಗೈದರು ।
ಉಟ್ರೆಬೈಟ್ರೆಯೆಂದುಹೇಳಿ ಸಜವಗೈದರು ॥೧೩॥

ಹಿರಿಯಮಠದ ಮರಿಗಳನ್ನು ಕಿರಿಯರೆಂಬುದೆಂತು ಮತ್ತು ।
ಸರಳಮನಸಿನ ಮದೇವಶಾಸ್ತ್ರಿ ದುರುಳರೆ ॥
ನಿರುತದೇಶಸೇವೆಗೈವ ಸಿರಿನಿವಾಸಸುಬ್ರಹ್ಮಣ್ಯ ।
ರಿರುವರಲ್ಲಿ ದೋಷಮುಂಟೆ ತಿರುಳನರಿತರೆ ॥ ೧೪ ॥

ರಂಗಸ್ವಾಮಿಅಯ್ಯನವರ ಹಂಗರಾಣೆಹೆಚ್ಚಿತೆಂದು ।
ದಂಗುಬಡೆದುಹೋದ ನಮ್ಮಾಸಚಿವರು ॥
ಹಿಂಗೆಬಿಟ್ಟರಿನ್ನುಮುಂದೆ ದಂಗೆನಡೆಸಿಬಿಡುವರೆಂದು ।
ಮಂಗಮಾಯಮಾಡಿತಂದು ಸೆರೆಯೊಳಿಟ್ಟರು ॥ ೧೫ ॥

ಎಮ್.ಎಸ್. ಜೋಯಿಸ್ಸೆಂಬುವವರು ಗುಮ್ಮನ್ಬಿಟ್ಟುಬೆದರಿಸುತ ।
ನಮ್ಮನ್ಜರಿದರೆಂದುಹೇಳಿ ಸೆರೆಯಹಿಡಿದರು ॥
ಸುಮ್ಮನ್‌ಹಿಡಿದುತಂದುಯಿಟ್ಟು ನಮ್ಮನ್‌ಅಯ್ಯೋಯೆನಿಸಿಯಾಗ ।
ದಮ್ಮನ್‌ಯೆತ್ತಬೇಡಿಯೆಂದು ದರ್ಪಗೈದರು ॥ ೧೬ ॥

ಸೂರ್ಯನಾರಾಯಣಾಖ್ಯ ಪಂಡಿತ್ ಕ್ರೌರ್ಯಹೆಚ್ಚಿತೆಂದು ಹೇಳಿ ।
ಧೈರ್ಯಗೆಟ್ಟು ಅವರ ಮುದದಿ ಸೆರೆಯಹಿಡಿದರು ॥
ಆರ್ಯಕೀರ್ತಿನಮ್ಮಲಿಹುದು ಕಾರ್ಯದೊಳಗೆ ತೋರ್ಪೆವೆಂದು ।
ಶೌರ್ಯದಿಂದಹೇಳಿ ಕೊನೆಗೆ ಬಿಟ್ಟುಬಿಟ್ಟರು ॥ ೧೭ ॥

ಹೆಚ್.ಸಿ. ದಾಸಪ್ಪಾಖ್ಯನುಡಿದ ಬಿಚ್ಚುಕತ್ತಿಯಂಥಮಾತು ।
ಚುಚ್ಚಿತೆಂದು ಪೆಚ್ಚುತೀದಾಸಚಿವರು ॥

ಕಿಚ್ಚುತಡಿಯಲಾರದವರ ಕಿಚ್ಚು ಮುರಿಯಲೆಂದು ಆಗ ।
ಮುಚ್ಚಿಸಿದ್ದರವರಸೆರೆಲಿ ಬುದ್ಧಿವರ್ಯರು ॥೧೮॥

ಈ ಪರೀಯಚಳುವಳೀಯ ತಾಪತ್ರಯುದ ಸುದ್ದಿ ನಮ್ಮ ।
ಭೂಪಕೃಷ್ಣ ರಾಜರರಿತು ಕರುಣದಿಂದಲಿ ॥
ತಪ್ಪಿತಸ್ಥರನ್ನು ಒಂದು ಒಪ್ಪಂದಕ್ಕೆ ನಿಲಿಸದಂತೆ ।
ಒಪ್ಪಿಬಿಡಿರಿಯೆಂದು ಆಜ್ಞೆಗೈದರರ್ತಿಲಿ ॥೧೯॥

ಇಂತನೇಕಮಹಿಮರನ್ನು ಕ್ರಾಂತಿಕಾರರೆಂದು ನುಡಿದ ।
ಮಂತ್ರಿಯವರು ಅಸಹಕಾರದಿಂದ ನೊಂದರು ॥
ಅಂತುಯಿಂತು ಕೊನೆಗೆ ಮಂತ್ರಿಪಂಥವೇನೂ ಸಾಗಲಿಲ್ಲ ।
ಯೆಂತುಬಿಡುವುದೆಂದು ತಪಿಸಿ ಕೊನೆಗೆ ಬಿಟ್ಟರು ॥೨೦॥

ಶಾಲೆ ಹುಡುಗರಂದು ತಮ್ಮ ಮೇಲೆಬರುವಗೋಲಿಮಳೆಯ ।
ಲೀಲೆಯಿಂದಮನಕೆತರದೆ ಭಯವಬಿಟ್ಟರು॥
ಕಾಲನನ್ನು ಗೆಲಿಯೆಶಿವನ ಲೀಲೆಯಿಂದ ಒಲಿಸಿಕೊಂಡ ।
ಬಾಲಮುನಿಯತೆರದಿ ನಾಡಸೇವೆಗೈದರು ॥೨೧॥

ಭಾರತೀಯಸ್ತ್ರೀಯರೆಲ್ಲ ವೀರನಾರಿಮಣಿಗಳೆಂದು ।
ತೋರಿಸಿಹರು ಕಾರ್ಯದಲ್ಲಿ ಧೀರತನವನು॥
ಕ್ರೂರಹಿಂಸೆಗಂಜದಂತೆ ಧಾರೆಯೆರೆದು ಪ್ರಾಣವನ್ನು ।
ದೂರಗೈದರವರು ಜನರಭೀರುತನವನು ॥೨೨॥

ಹಿಂದೂಮುಸಲ್ಮಾನರೆಲ್ಲ ಒಂದೇಧ್ಯೇಯತಮ್ಮದೆಂದು ।
ನಿಂದುಭುಜಕೆ ಭುಜವನಿತ್ತು ರಾಷ್ಟ್ರಕಾರ್ಯಕೆ ॥
ಅಂದುಹೋರಿತಮ್ಮ ಸಹಜ ಬಂಧುಪ್ರೇಮುವನ್ನು ತೋರು ।
ತ್ತಂದುತಮ್ಮ ಐಕ್ಯಮತ್ಯವನ್ನು ವಿಶ್ವಕೆ ॥೨೩॥

ಮೋಹಜಾಲದಲ್ಲಿ ಸಿಲುಕಿ ಬಾಹುಬಲವಮರೆತು ನಿಮ್ಮ ।
ದೇಹಗಳನುಮಾರಿಕೊಂಡು ಬದುಕಬೇಡಿರಿ ।
ಸಾಹಸಾವನೆಸಗಿನಿಮ್ಮ ದೇಹದಿಂದ ರಕ್ತದಪ್ರ ।
ವಾಹವನ್ನು ಹರಿಯುವಂತೆಮಾಡಿ ಬದುಕಿರಿ ॥೨೪॥

ಹೆತ್ತದೂತೆದಾಸ್ಯವನ್ನು ಕಿತ್ತುಒಗೆದುನಾವುಯಿಾಗ ।
ಸತ್ವಶಾಲಿಗಳೆಂಬ ಮಾತು ಜಗಕೆತೋರುವ ॥
ಮುತ್ತಿನಂಥಸಂಧಿಯಲ್ಲಿ ಕೃತಿವಾಸಧೈರ್ಯಸ್ಥೈರ್ಯ ।
ಯಿತ್ತುಕಾಯೊಯೆಂದು ಶಿವನಮುದದಿಬೇಡುವ ॥೨೫॥

ಲೇಖಕರು : ಎನ್. ವಿಷಕಂಠರಾವ್

('ಕಾಂಗ್ರೆಸ್ ವಿಶೇಷ ಲಾವಣಿ', ಮೈಸೂರು 1939)

೨೯. ವಂದೇ ಮಾತರಂ

ಪದಹಕ ಹೊಂದಿಸಿ ಹಾಡುವೆನು
"ವಂದೇ ಮಾತರಂ" ಎಂದು ನಾ ||ಪ||

ಭಾರತ ದೇಶದ ವೀರ ತರುಣರ
ಧೀರ ಮಹಾತ್ಮಾ ಗಾಂಧಿಯನು ಸ್ಮರಿಸುತ || ಅನು ಪಲ್ಲವಿ ||

ಯಾರ ಬಂದು ಯಾರ ಆಳಿ ಯಾರ ಹಾಳ ಮಾಡ್ಯಾರ
ಮುಸಡಿ ಕೆಂಪು ಮನಸು ಹೊಲಸು ಅವ್ರು ಬ್ರಿಟಿಷರ || ೧ ||

ಉಪ್ಪತಿಂದು ನಮಗ ತಿರುಗಿ ಬಿದ್ದಾರ
ಉಪ್ಪು ಮಾಡಿದರ ಗಪ್ಪನ ಹಿಡಿದಾರ || ೨ ||

ಉಪ್ಪು ಮಾಡಿ ಸ್ವಾತಂತ್ರ್ಯ ಪಡೆಯಿರಿ
ಉಪ್ಪಿನ ಕಾಯ್ದೆ ಮುರಿದು ಹಾಕಿರಿ || ೩ ||

ಹಪ್ತೆ ಎಂದು ಹಣವನ್ನು ಜಗ್ಗುವರು
ಜಪ್ತ ಮಾಡುವರು ಭೂಮಿ-ಸೀಮಿಯನು || ೪ ||

ಬಿಳಿಯ ಕಾಗದದ ನೋಟು ಮಾಡಿದರು
ಬಳಿದರೆಲ್ಲ ನಮ್ಮ ವಸ್ತು ಒಡವೆಗಳ || ೫ ||

ನಮ್ಮ ದೇಶ ಸ್ವಾತಂತ್ರ್ಯ ಬೇಡಿದರ
ನಮ್ಮ ಮೇಲೆ ಗುಂಡುಹಾರಿಸಿ ಬಿಡುವರು || ೬ ||

ಸಿಂಧಿ–ಸೆರೆದಂಗಡಿಗೆ ಸುಂಕ ಹಾಕುವರು
ತಿಂದು ತಿಂದು ತಿರುಗಿ ಸುಂಕ ಬೇಡುವರು || ೭ ||

ಕೊಡಲಿಯಿಂದ ಈಚಲ ಗಿಡಗಳನು
ಕಡೆಯಿರೀಗ ಅದು ತಡೆಯದೊಂದಿನ || ೮ ||

ರಾಟಿಯಿಂದ ಕೈನೂಲ ತೆಗೆಯಿರಿ
ಪ್ರಿಟಿನಿಂದ ಬಟ್ಟೆಯನು ನೇಯಿರಿ ॥ ೯ ॥

ಪರರ ಆಳಿಕೆ ಅಳಿಸಿ ಹಾಕಿ ಬಿಡರಿ
ಭಾರತ ಸ್ವಾತಂತ್ರ್ಯ ಎಂದು ಸಾರಿರಿ ॥ ೧೦ ॥

ಲೇಖಕರು : ನಲವಡಿಶ್ರೀಕಂಠಶಾಸ್ತ್ರಿಗಳು

(ಸಂಗ್ರಾಹಕ : ಡಾ॥ ಮೃತ್ಯುಂಜಯ ಹೊರಕೇರಿ)

೩೦. ಕರ್ನಾಟಕ ವೀರರೇಳಿ;

ಕರ್ನಾಟ ವೀರರೇಳಿ । ರಣಭೇರಿ ಕೊಂಬ ಕೇಳಿ ।
ಸ್ವಾತಂತ್ರ್ಯ ಮಂತ್ರವನು ಹೇಳಿ । ಪರದಾಸ್ಯ ದೇಹ ಸೀಳಿ ॥ಪಲ್ಲವಿ॥

ಪರತಂತ್ರ ಕತ್ತಲೆಯು ಹಾರಿ । ಸ್ವಾತಂತ್ರ್ಯ ಸೂರ್ಯ ತೋರಿ ॥
ಭಾರತೀಯ ಜೀವ ಕಳೆಯೇರಿ । ಪರವೈರಿಗಾಯ್ತು ಮಹಾಮಾರಿ ॥೧॥

ಧುರಧೀರ ಬುಕ್ಕ ಮಾಧವರು । ಪುಲಕೇಶಿ ವೀರ ವಿಕ್ರಮರು ॥
ಸ್ವಾತಂತ್ರ್ಯ ಮಂತ್ರ ಸಾರಿದರು । ಪರರಾಜರನ್ನು ಮೆಟ್ಟಿದರು ॥೨॥

ಲಾಲಾಜಿ ಲಾಠಿ ಹೊಡೆತದಲ್ಲಿ । ಕಲಿ ಜತಿನದಾಸ ಬಹುಬಳಲಿ॥
ನಿಮಗಾಗಿ ಕೊಟ್ಟರಾತ್ಮಬಲಿ । ಕುಳಿತಿಹರು ನಗುತ ಸ್ವರ್ಗದಲಿ ॥೩॥

ಭಾರತದ ರಕ್ತವನು ಹೀರಿ । ವೀರತೆಯ ಕುಕ್ಕಿ ನೆಲಕೂರಿ ।
ಭಾರತೀಯ ಮಾನವನು ಮಾರಿ । ಮಾಡಿದರು ನಾಡ ಸೆರೆಸೂರಿ ॥೪॥

ಹಿಂದೀಯ ಸಾರ್ವಭೌಮಾ । ಆ ಗಾಂಧಿಯೇ ಮಹಾತ್ಮಾ ॥
ಸ್ವಾತಂತ್ರ್ಯಕಾಗಿಕಲಿಭೀಮ। ಸೇನಾನಿ ನಿಂತ ನಿಸ್ಸೀಮ ॥೫॥

ಸ್ವಾತಂತ್ರ್ಯ ಸ್ವಾಭಿಮಾನ । ಹೊಮ್ಮಿಕ್ಕಿ ಕಾದಿರಣ್ಣ ॥
ಧುಮ್ಮಿಕ್ಕಿರಣದೊಳಿನ್ನಾ । ಹಗೆಯನ್ನು ಮೆಟ್ಟಿರಣ್ಣಾ ॥೬॥

891.043
RAM

ಲೇಖಕರು : **ಜಿ. ರಾಮರಾವ ಹೆಜೀಬ**

('ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ)

೩೧. ಸ್ವಾತಂತ್ರ್ಯ ಎಂದು ದೊರಕುವದು?

ಸ್ವಾತಂತ್ರ್ಯ ಎಂದು ದೊರಕುವದು ನಮ್ಮದೇಶಕಾದಿನ ||ಪಲ್ಲವಿ||

ಇಬ್ಬರ ಜಗಳಾಟದಿಂದ ಮೂರನೆಯವನು ।
ಕೊಬ್ಬುವನೆಂಬುದು ತಿಳಿದು ಕಾರ್ಯಗೈದೊಡೆ ||೧||

ಹೊಲಮನೆ ಬಂಧುಗಳ ಸೌಖ್ಯ ತೊರೆವುದಲ್ಲದೆ ।
ನಲುಮೆಯ ಪ್ರಾಣವನು ಚಲ್ಲಲಂಜದಿರ್ದೊಡೆ ||೨||

ನನ್ನ ದೇಶ ನನ್ನ ಜನರು ನನ್ನೊಡವೆಗಳು।
ಎನ್ನುವುದಭಿಮಾನ ನಮ್ಮೊಳಿರುವುದಾದೊಡೆ ||೩||

ಸತಿ ಸುತಹಿತ ಮಿತ್ರ ಪರಸ್ಪರರು ನಾಡಿನ ।
ಹಿತಕಾಗಿಯೇ ಮೋದದಿಂದ ಕಾರ್ಯಗೈದೊಡೆ ||೪||

ಎದ್ದರೆ ಸ್ವಾತಂತ್ರ್ಯ ಸ್ವಾತಂತ್ರ್ಯ ಕುಳಿತರೆ ।
ಬಿದ್ದರೆ ಕನಸಿನೊಳು ಸ್ವಾತಂತ್ರ್ಯ ನೆನದೊಡೆ ||೫||

ಲೇಖಕರು : **ರಾ. ನೆ. ಕರಿಗುದರಿ** (ಗ್ರಾತ್ರಿ)

('ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ 1932)

೩೨. ಧನ್ಯ ಭಾರತ ವೀರ

ಧನ್ಯ ಭಾರತವೀರಕೇಸರಿಗಳೇ ಭಾಪು । ॥ ಪಲ್ಲವಿ ॥
ನಿಮ್ಮ ಪಡೆದಿಹ ತಾಯಿತಂದೆಗಳು ಧನ್ಯರೋ ।

ನಿಮ್ಮಪೆತ್ತಿಹ ಭೂಮಾತೆ ಅತಿಮಾನ್ಯಳೋ ॥ ಅನುಪಲ್ಲವಿ ॥
ಧನ್ಯ ಭಾರತ ವೀರಕೇಸರಿಗಳೇ ಭಾಪು ।
ದೇಶದೇಳಿಗೆಗಾಗಿ ಸೋಸುತಿರಿ ಕಷ್ಟವನು ।
ಮಾಸದಿರುವದು ನಿಮ್ಮ ಕೀರ್ತಿ ಎಂದೆಂದಿಗೂ

ಮಿಗಿಲಾದ ಬೆಂಬಲವು ಇಹುದು ನಿಮಗಲ್ಲದೆ ।
ಜಗದೀಶ ಪೊರೆಯುವನು ಬೇಡ ಸಂಶಯುವಿದಕೆ

ಜಯಹೊಂದಿ ನೀವು ಕ್ಷೇಮದಿ ತಿರುಗಿ ಬರಲೆಂದು ।
ನಯದಿಂದ ಬೇಡುವೆವು ಪರಮಾತ್ಮನನು ಸತತ

ಲೇಖಕರು : **ರಾ. ವೆ. ಕರಗುದರಿ** (೧೯೩೦)

('ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಭಾಗ 1 ರಿಂದ)

೩೩. ಸುಮ್ಮನೆ ದೊರಕುವದೆ ಸ್ವರಾಜ್ಯ ?

ಸುಮ್ಮನೆ ದೊರಕುವದೇ ಸ್ವರಾಜ್ಯವು । ಸುಮ್ಮನೆ ದೊರಕುವದೇ ।
ಕಮ್ಮಗೆ ಕುಳಿತುಂಡು ಒಣ ಮಾತಾಡಿದರೇ ॥ ಪಲ್ಲವಿ ॥

ಮನದಲ್ಲಿ ಧೃಢವಿರಬೇಕು । ಹೆಣ್ಣು । ಹಣ ಮಣ್ಣು
ಸುಖದಾಶೆಯು ಬಿಡಬೇಕು ॥ ಜನುಮನ ತೃಣಮಾಡಬೇಕು ।
ತನ್ನ । ತನುವ ದೇಶಕಾರ್ಯಕೀಡಾಡಬೇಕು ॥ ೧ ॥

ಭೇದಬುದ್ಧಿಯನಳಿಯಬೇಕು । ನಿಜ ॥
ಸೋದರ ಭಾವವೆಲ್ಲರೊಳಿರಬೇಕಂ ॥
ಕ್ರೋಧಾದಿಗಳನೀಗಬೇಕು । । ಕಾರ್ಯ ।
ಸಾಧಿಸಿಕೊಳ್ಳುವ ಧೀರತೆ ಮುಂಚೆ ಬೇಕು । ॥ ೨ ॥

ಕಾಯಕಷ್ಟವ ಪಡಬೇಕು । ಎಲ್ಲಾ ।
ಮಾಯು ಪಾಶವ ಕತ್ತರಿಸಿ ಚಲ್ಲಬೇಕು ।
ಸಾಯುಲಂಜಿಕೆ ಬಿಡಬೇಕು । ಯದು । ರಾಯ
ಕೃಷ್ಣನ ಗೀತೆಯನು ನಂಬ ಬೇಕು ॥ ೩ ॥

(ಲೇಖಕರು : ತಿಪ್ಪಯ್ಯ ಮಾಸ್ತರ್ ಅಥವಾ ಮುದವೀಡು ಕೃಷ್ಣರಾವ್. ತಿಪ್ಪಯ್ಯ ಮಾಸ್ತರರ ಹಾಡುಗಳ ಸಂಗ್ರಹ 'ರಾಷ್ಟ್ರೀಯ ಪದ್ಯಗಳು' 1930ರಲ್ಲಿ ಈ ಹಾಡು ಬಂದಿದೆ, ಆದರೆ 'ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಪುಟ 2ರಲ್ಲಿ ಮುದವೀಡರ ಹೆಸರು ಸೂಚಿಸಿದೆ. ಕೊನೆಗೆ ಬಂದಿರುವ 'ಯದುರಾಯ ಕೃಷ್ಣನ ಗೀತೆಯನು ನಂಬಬೇಕು' ಎಂಬಲ್ಲಿ 'ಕೃಷ್ಣ' ಎಂಬುದು ಮುದವೀಡರ ಮುದ್ರಿಕೆಯೋ ? ಅಥವಾ ಭಗವದ್ಗೀತೆಯ ಉಲ್ಲೇಖವೆ ? ಮುದವೀಡರು ತಮ್ಮ ಬೇರೆ ಹಾಡುಗಳಲ್ಲಿ ಮುದ್ರಿಕೆ ಬಳಸಿಲ್ಲ).

೩೪. ನಾ ನೋಡಿದ ಮಂಗ

ಮಂಗನ್ನ ನೋಡಿದೆನೋ ನಾನೊಂದು । ಮಂಗನ್ನ ನೋಡಿದೆನೋ
ಕೆಂಪುಮಾರೀ ॥

ಮಂಗನ್ನ ನೋಡಿದೇ ಹಂಗಿಲ್ಲ ಯಾರದು । ಹಿಂದೂಸ್ತಾನ
ವನ್ನಾತಿನ್ನೊ ಹಂದಿ ಕುಲದ ಮಂಗ ॥ ೧ ॥

ಕಾಲು ಕುಬಸದ ಮಂಗ । ಮ್ಯಾಲೆ ಟೊಪಿಗುಳ್ಳ ಮಂಗ। ಹಾಲುಂಡ
ದೇಶದ

ಮ್ಯಾಲ ಹಲ್ಲಾ ಮಾಡಿತೋ ಮಂಗ ॥ ೨ ॥

ಮೀಸೀ ಯಿಲ್ಲದ ಮಂಗ। ವಿಶ್ವಾಸಗೇಡಿ ಮಂಗ।
ಲೇಸೆಂದ ಹಿಂದುಸ್ತಾನ್ದ ಹೇಸಿಕೆ ತಿಂದ ಮಂಗ ॥ ೩ ॥

ಒಂದಾದಾಗ್ಲೆ (ಒಂದಾದರೇ) ನಾವಿಂದ್ಯಬಂದ ಸಿಕ್ಕೀತ
ಮಂಗ। ಬಿಷ್ಟಂಣ ಕವ್ನಾ ಅನುವಾಗ ಹಲ್ಲಕಿಸಿತಿತ್ತು ಮಂಗಾ ॥ ೪ ॥

ಲೇಖಕರು : **ಬಿಷ್ಟಪ್ಪ ಮುಂಡೇದ**

(ಅವರೇ ಒದಗಿಸಿದ್ದ ಹಸ್ತಪ್ರತಿ)

೩೫. ಕಳ್ಳಿ

ಮುಳಗಳ್ಳೋ ಈದೂ। ರಾಜ್ಯದ। ಮುಳಗಳ್ಳೋ ಈದೂ ॥ ಪಲ್ಲವಿ ॥
ಹಾಳು ಮಾಡಲು ಬಿಳಿಯ ಹುಳಗಳನು ಆಟ್ಟಿಹನು ॥ ಅನುಪಲ್ಲವಿ ॥

ಮುನ್ನೂರು ವರ್ಷದೀ। ಚನ್ನಾಗಿ ಬೆಳೆದ ಕಳ್ಳೀ।
ಸನ್ನುತ ಪ್ರಜರಿಗೇ। ಬನ್ನ ಬಿಡಿಸಿದ ಕಳ್ಳೀ ॥ ೧ ॥

ಊರಕೇರಿಗಳಲ್ಲೀ। ನೀರಿನ ನೆರೆಯಲ್ಲೀ।
ಬೇರೂರಿ ನೆಲೆಸಿತೂ। ನಮ್ಮ ಭಾರತದಲ್ಲೀ ॥ ೨ ॥

ಕೆಂಪು ಕಾಯದ ಕಳ್ಳಿ। ತಂಪುಮಾಡಿದ ಕಳ್ಳೀ।
ಪೆಂಪಿನ ಭಾರತದ। ಸೊಂಪನ್ನಡಗಿಸಿದ ಕಳ್ಳೀ ॥ ೩ ॥

ಮುಳ್ಳಾ ಸುಂಕಗಳಿಂದ। ಚೇಳು ಹಾವುಗಳಿಂದ ಒಳ್ಳೊಳ್ಳೇ
ಜನರನ್ನೂ ಮಂಣಾ ಮುಕ್ಕಿಸಿದ ಕಳ್ಳೀ ॥ ೪ ॥

ದುಷ್ಟ ಪಾಣಿಗಳಿಂದ। ಆರ್ಭಟಿಸೋ ಕಳ್ಳೀ।
ನಷ್ಟಮಾಡಿತೋ ನಂಮ। ಶ್ರೇಷ್ಠ ಭಾರತವನ್ನು ॥ ೫ ॥

ರೊಕ್ಕ ಹೀರಿದ ಕಳ್ಳೀ। ಬಿಕ್ಕೆ ಹಚ್ಚಿದ ಕಳ್ಳೀ
ಒಕ್ಕಲಿಗನಿಗೇ ಮಂಣೂ। ಮುಕ್ಕಿಸಿದ ಕಳ್ಳೀ ॥ ೬ ॥

ಕಡಿಯಲು ಪೋದರೇ। ಬಿಡದಲೇ ಬೆಳೆಯುವದು।
ಪೆಡವಿರಾಮನ। ಕಾಡಿದ ರಕ್ಕಸನಂತೇ ॥ ೭ ॥

ಕಳ್ಳೀಯ ನಾಶಕ್ಕೇ ।   ಒಳ್ಳೇ ಮಹಾತ್ಮಾಜೀಯು ।
ಬಿಳಿಯ ವರ್ಣದ ಟೋಪಿಗೀ ಹಂಳಗಳನಟ್ಟಿಹನು ॥ ೮ ॥

ಶಾಂತೀ ತತ್ವವ ತಿಳಿದೂ ।   ನಿಂತ ಹಾಡೋ ಬಿಷ್ಟಂಣಂದೂ ।
ಕ್ರಾಂತಿಯು ಮಾಡಿದ್ದು ।   ಸ್ವಾತಂತ್ರ್ಯದ ತಿಗಡೊಳ್ಳೀ ॥ ೯ ॥

ಲೇಖಕರು :   ಭಿಷ್ಟಪ್ಪ ಮಂಡೇದ

(ಅವರೇ ಒದಗಿಸಿದ್ದ ಹಸ್ತಪ್ರತಿ)

೩೬. ವಿಜಯಿಸಲೈ ಭಾರತ

ಬನ್ನಿ ಬನ್ನಿ ಕಲಿಗಳೇ, ರಾಷ್ಟ್ರಕಿಂದು ಹೊಸಕಳೆ ।
ವಿಜಯ ಸಿರಿಯು ಸೆರೆಗೊಳೆ, ತನ್ನಿ ನಿಮ್ಮ ತೋಳಲೆ ॥ ॥ ೧ ॥

ಹರಿಯಿತೀಗ ಸುತ್ತಲು, ದಾಸ್ಯದ ಕಗ್ಗತ್ತಲು ।
ಖೇದವನೂಕುತ್ತಲು, ಹರುಷವು ಗುಡಿಕಟ್ಟಲು ॥ ॥ ೨ ॥

ಹಾಕು ಶೋಷಣೆಗೆ ತಡೆ, ಮಾಡು ದಲಿತರಿಂಗೆಡೆ ।
ನಾಡಿಗಿಂದು ಬಿಡುಗಡೆ, ಬೆಳಕು ಮುಂದೆ ಕಲಿನಡೆ॥ ॥ ೩ ॥

ಫಡಫಡಿಸಲಿ ಧ್ವಜಪಟ, ಬರೆ ಗೆಲುವಿನ ಹೊಸಪುಟ।
ಛಲವಿರೆ ಎದೆಯುಲಿ ದಿಟ, ನಾಡ ಬಾಗ್ಯ ನಿಚ್ಚಟ॥ ॥ ೪ ॥

ಮತ ಮತಗಳ ಮತ್ಸರ, ತೊಡೆ ನಸು ಉಳಿಯದ ತೆರ ।
ನಾಡಿಗೆ ಬಿಡು ಬೇಸರ । ತೊಡಿಸು ಜಸದ ಪೂಸರ॥ ॥ ೫ ॥

ಗಣಿಸಲೇಕೆ ಅಡೆತಡೆ, ರೂಢಿಯ ಹುಸಿ ಬೇಗಡೆ ।
ಸಾಕು ಬೇಡ ಕೋಟಲೆ, ಇನ್ನು ಜಯದ ಮುನ್ನಡೆ॥ ॥ ೬ ॥

ನೆಡಲು ನಾಡಕೇತನ, ಸಹಿಸುತೆ ಯಮಯಾತನ ।
ತೆತ್ತರೆನಿತೊ ಬುಧಜನ, ಜ್ಞಾನ ತಪದ ವೇತನ ॥ ॥ ೭ ॥

ಬಸಿದರೆಷ್ಟೊ ನೆತ್ತರ, ಕಲಿಗಳಿದಕೆ ಎಚ್ಚರ ।
ಧ್ವಜವ ಬಾನಿನೆತ್ತರ, ಹಾರಿಸಲಿದೆ ಅವಸರ॥ ॥ ೮ ॥

ಸೊಲ್ಲಡಗಿಸೆ ಸೋಲಿನ–ಗೆಳೆಯುರೆಲ್ಲ ಈ ದಿನ ।
ಮಾಡಿ ಪಣವ ಧೀರನ ಕ್ಷಾತ್ರಬಲವೆ ಸಾಧನ॥ ॥ ೯ ॥

ಸ್ಥಿರವ ಗೊಳಿಸಿ ನೀವ್ ಮನ, ನೆರವ ಬೇಡಿ ದೇವನ ।
ಭಾರತವಿದು ಪಾವನ, ಆಗಲಿ ನಂದನವನ॥ ॥ ೧೦ ॥

ಇನ್ನು ಪರರ ಕೈವಶ, ಆಗಳೊ ತಾಯುಸ್ಸಬ್ಬಸ ॥
ಹೇಡಿತನದ ತೊಳೆಕಸ, ಉಡುಗಿ ತರಲು ಸಂತಸ॥ ॥ ೧೧ ॥

ಮಾಡಿಭಯುವ ಭೂಗತ ಕ್ಷಾತ್ರಕೆ ಸುಸ್ವಾಗತ ।
ತೇಜ ಬಲವಿರಾಜಿತ, ವಿಜಯಿಸಲ್ಕೈ ಭಾರತ ॥

ಲೇಖಕರು : ತಿಳಿಯದು

("ಜೈ ಭಾರತ ರಾಷ್ಟ್ರಗೀತೆಗಳು" ಸಂಗ್ರಹದಿಂದ)

೩೭. ॥ ಏಳು ಏಳೈ ಜವದಿ ॥

ಏಳು ಏಳೈ ಜವದಿ ಭಾರತೀಯ ಸುಕುಮಾರಾ ।
ಕಾಲವಲ್ಲವಿದು ನಿಗ್ರೆಯ ಮಾಡುವದಕೆ ॥ ಪಲ್ಲವಿ ॥

ಪರಮ ಸುಜ್ಞಾನಾರುಣನ ಉದಯದಿಂದೀಗ ।
ಹರಿದುದು ಜ್ಞಾನಾಂಧಃಕಾರವೆಲ್ಲವು ತಾ ।
ನೆರೆಯೊಳಿಹ ಜನರೆಲ್ಲರೆಚ್ಚತ್ತು ಕರ್ತವ್ಯ ।
ನಿರತರಾಗಿರಲು ನಿದ್ರಿಪುದು ಸರಿ ಎನು ? ॥ ೧ ॥

ನೆರೆವಿಬುಧಗಣವು ನಿಜದೇಹ ಶೋಣಿತ ಜಲವ ।
ಕರದೊಳಾಂತು ಅರ್ಘ್ಯವ ನೀಡುವದಕೆ ।
ತ್ವರದಿಂ ಸ್ವರಾಜ್ಯ ಭಾಸ್ಕರನ ಬರುವಿಕೆಯನ್ನು ।
ನಿರುಕಿಸುತಲಿರುತಿಹರು ಬೇಗನೇಳಯ್ಯಾ ॥ ೨ ॥

ನಿನ್ನ ಬಾಂಧವರೆಲ್ಲರೊಂದಾಗಿ ಸುಮತಿಯಂ ।
ಚನ್ನಾಗಿ ಗಳಿಸಲ್ಕೆ ಮಠಕೆ ಪೋಗಿಹರು ।
ಇನ್ನು ನೀನೆದ್ದು ಮುಖ ತೊಳೆದು ಶಾಲೆಗೆ ಪೋಗಿ ।
ಸನ್ನುತ ಸ್ವಾತಂತ್ರ್ಯ ಪಾಠವನ್ನೋದೈ ॥ ೩ ॥

ಹರಿಯ ದಯದಿಂ ಪರಮ ಗುರು ದೊರಕಿಹನೀಗ ।
ಕರುಣಾಳುವಾದ ಗಿರಿಪುರವಾಸ ಕೃಷ್ಣನಂ ।
ಸ್ಮರಿಸುತ ನಿರುತ ಸಂತಸದಿಂದ ಬಾಳೈ ।
ಏಳು ಏಳೈ ಜವದಿ ಭಾರತೀಯ ಸುಕುಮಾರಾ ॥ ೪ ॥

ಲೇಖಕರು : ಬೆಟಗೇರಿ **ಕೃಷ್ಣ ಶರ್ಮಾ : 1920**

('ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಸಂಗ್ರಹದಿಂದ)

೩೮. ದೇಶ ಭಕ್ತರ ಉದ್ಗಾರಗಳು

ರಾಗ – ಮುಖಾರಿ, ತಾಳ – ಝಂಪೆ.

(ಧಾಟಿ – ಏನಬೇಡಲಿ ನಿನ್ನ ಬಳಿಗೆ ಬಂದು – ಎಂಬಂತೆ)

ಸೂರೆಯಾದುದು ನಮ್ಮ ಭರತಭೂಮಿ ॥ ಸೈರಿಸುವವೆಂತಿದನು ।
ಮಾರಿ ಹೋಗಿಹೆವು ॥ ಪಲ್ಲವಿ ॥

ಹೆತ್ತ ಮಕ್ಕಳ ತೆರದಿ ಪ್ರಜೆಗಳಂ ಪಾಲಿಪುದು । ಮತ್ತೆ ತಿಳಿಯಲು
ರಾಜಧರ್ಮವೈಸೆ ॥ ಇತ್ತ ನೋಡಿರಿ ! ಸಪತಿ ಪುತ್ರರಂದದೊಳೆಮ್ಮ ।
ನತ್ಯಧಿಕವಾಗಿ ಪೀಡಿಪರಾಂಗ್ಲ ಜನರು ॥

ಕೋಪು ಕಲಮುಗಳಿಂದು ಮಾಡುವುರು ಕಲಪಗಳ । ದೂಡುವರು
ಸೆರೆಗೆ ಭಾರತಪುತ್ರರ ॥ ಬೋಡಿಗ್ಸೈನರು ನ್ಯಾಯದೇವತೆಯ ಸಂಪದವ ।
ಬೇಡವವರೊಡನೆ ಸಹಕಾರ ನಮಗಿನ್ನು ॥

ನಮ್ಮ ನಮ್ಮೊಳಗೆ ಕಡು ವೈರವಂ ಹುಟ್ಟಿಸುತ । ಹಮ್ಮಿನಿಂ ಸುಳ್ಳು
ಸಾಕ್ಷಿಯ ನುಡಿಸುತ ॥ ದುರ್ಮಾರ್ಗದಿಂ ಸುಜನರನ್ನು ಸೆರೆಮನೆಗಟ್ಟಿ ।
ತಮ್ಮ ತಮ್ಮೊಳು ನಗುತಲಿರುವರವರು ॥

ಹಿಂದೂ ಮುಸಲ್ಮಾನರೊಳಗೆ ವೈರವ ಬೆಳಸಿ । ಹಿಂದೊಮ್ಮೆ ಸಫಲ
ರಾಗಿಯ ನಲಿದರು ॥ ಇಂದಿಲ್ಲಿ ಬ್ರಾಹ್ಮಣೇತರರು ಬ್ರಾಹ್ಮಣರೆಂಬು ।
ದೊಂದು ಭೇದವ ಹೂಡಿ । ನಲಿಯುತ್ತಲಿಹರು ॥

ಪ್ರೋಸಿರುಖರು ಪಿಸಲುಗಳು । ವಾಸಿಸಿರೆ ಭಾರತಧಿ । ಶಾಸನಗಳಿನ್ಯಾತ
ರತ್ಯುಗ್ರವ ॥ ಘಾಸಿಗೈದವು ನಮ್ಮ ಜನರ ಬಹು ವಿಧದಿಂದ ।
ಆಸುರೀತನದ ಕಾಯ್ದೆಯ ಕೋಡ್ಗಳು ॥

ದೂರತೀರಾಳೊಡೆಯರಿವರೆ ಕೆಟ್ಟವರೆಂದು । ದೂರುವುದು ನಮ್ಮ
ಷಂಡರ ನಡತೆಯು ॥ ಸೇರಿಹರು ಪರಸೇವೆಯೊಳಗೆ ದುಃಸ್ವಾರ್ಥದಿಂ ।
ಸಾರುವರು ಪಾಶ್ಚಿಮಾತ್ಯರು ದೇವರೆಂದು ॥

ಕುಲಕೆ ಕೇಡನು ಬಗೆದು ಕೊಡಲಿಯಳು ತಾ ಸೇರಿ । ನಲಿಯುತ್ತಲಾ
ಮಾನವರ ಕರದೊಳು ॥ ಛಲದಿಂ ಸ್ವಕೀಯಾ ವೃಕ್ಷಗಳ ತಲೆಗಳ ಕಡಿವ ।
ಬಲುಗೊಡಲಿ ಕಾವಿನಂತಿಹರು ಜನರು ॥

ಹುಟ್ಟಿದುದು ಭಾರತದಿ ಬೆಳೆದುದೂ ಭಾರತದಿ । ಹೊಟ್ಟೆ ತುಂಬುವುದು
ಭಾರತದಲ್ಲಿಯೇ ॥ ದುಷ್ಟರೊಳು ಬೆರೆತು ಒಡ । ಹುಟ್ಟಾದ ಭಾರತದ
ಶ್ರೇಷ್ಠರೊಳು ಕ್ರೂರತನವಂ ತೋರುತಿಹರು ॥

ದೇಶ ಘಾತಕರಾಗಿ ಮಾತ್ರ ಘಾತಕರಾಗಿ । ಲೇಸೇನ ಪಡೆವಿರೈ !
ಮರುಳುಗಳಿರ ! ॥ ಆ ಸಕಲ ಸ್ವಾತಂತ್ರ್ಯ ಪೂರಿತರು ನಿಮ್ಮನ್ನು ।
ದಾಸರೆನ್ನುತ ತಿಳಿದು ನಗದಿಹರೆ ಮನದೀ ॥

ಶಾಪವೀಯಳೆ ಭರತಮಾತೆ ತಾಂ ಕೋಪಿಸುತ । ಲೀಪರಿಯ ವರ್ತನ
ವನ್ನು ಬಿಟ್ಟು ॥ ರೂಪುಗೊಂಡಿರುವ ಸ್ವಾತಂತ್ರ್ಯ ಯುದ್ಧಾಂಗಣಕೆ ।
ಕಾಪುರುಷತನವ ತೋರದೆ ನಡೆಯಿರಯ್ಯ ।

ಭರತ ಖಂಡದ ಜನರೆ । ಪರಮ ಬಾಂಧವರೆ । ನೀ । ವರಿಯಿರೈ ।
ಸ್ವಾತಂತ್ರ್ಯದ ಮಲಕಲೆಯು ॥ ಚಿರಕಾಲ ರೂಢವಾಗಿರುವ ದೈನ್ಯವನು
ಮುಖ । ಪುರದರಸನತಿ ಕರುಣದಿಂ ತೊಲಗಿಸುವನು ॥

ಲೇಖಕಿ : **ನೊಗೇರಿ ಚಂದ್ರಮ್ಮ**

(ಸಂಗ್ರಹ : ಉಳ್ಳೂರು ರಾಮಕೃಷ್ಣ ಐತಾಳ, ಕಂಬದ ಕೋಣೆ)

೩೯. ಉಪ್ಪಿನ ಕದನ

ಧಾಟಿ – (ಭಾರತೀಯರೆ ನಮ್ಮ)

'ಉಪ್ಪಿನ ಕದನ ' ಕೆ ಹೊರಡಿರಿ ಜನರೇ ।
'ಉಪ್ಪಿ ' ಗೆ ಬೇಕಾಗಿ ಹೊರಾಡಿ ಭಟರೇ ॥ ॥ ಪಲ್ಲವಿ ॥
ಉಪ್ಪಿಗೂ ಗತಿಯಿಲ್ಲವೆಂದರೇನರ್ಥ ? ।
ಉಪ್ಪನು ಗಳಿಸಲಾರದ ಬಾಳು ವ್ಯರ್ಥ ॥ ॥ ಅನು ಪಲ್ಲವಿ ॥

ಕ್ಷಾರವಾರಿಧಿಯಲ್ಲಿ ಕಾಲ್ಗಳ ತೊಳೆವ ।
ಭಾರತೀಸುತರಿಗುಪ್ಪಿಲ್ಲವೆ ದೇವ ?' ॥
ಕ್ರೂರಶಾಸನವ ಧಿಕ್ಕರಿಸಿ ಮುಂದರಿವ ।
ವಾರಧಿಯಿಂದುಪ್ಪನ್ನಾಯ್ದು ತಂದಿಡುವ ॥ ॥ ೧ ॥

'ದಂಡಿಯಾತ್ರೆ ' ಗೆ ಹೊರಟಿಹನು ' ಮಹಾತ್ಮ ' ।
ಖಂಡಿಸಿ ಸರಕಾರದಾಜ್ಞೆಯನಮಧು ! ॥
ಉಂಡುಮಲಗಿ ನಿದ್ದೆಯಲ್ಲಿ ಬಿದ್ದಿರದೆ ।
ತಂಡತಂಡಗಳಾಗಿ ಬನ್ನಿರಿ ಭರದೆ ॥ ॥ ೨ ॥

ಸೇತುಬಂಧನ ಕಾರ್ಯದಲಿ ರಾಮನಲ್ಲಿ ।
ಧಾತ್ರಿಯೆ ಸಹಕರಿಸಿದ ರೀತಿಯಲ್ಲಿ ॥
ಖ್ಯಾತ ಮಹಾತ್ಮನ ಕರೆಗನುಸರಿಸಿ ।
ಪ್ರೀತಿಯಿಂ 'ದಳಿಲ ಭಕ್ತಿಯ ' ನಲವಿರಿಸಿ ॥ ॥ ೩ ॥

'ಪರ ' ದಶಕಂಠನ ಬಂಧವ ಕಡಿದು ।
ಧರಣಿಜೆಯನು ತರಲಿಲ್ಲವೇನಂದು ? ॥
ಧರೆಯಭಿರಾಮನಾಗಿರುವ ಗಾಂಧಿಜಿಯು ।
ಹೊರಟರೆ ಸಿಗಳೆ 'ಸ್ವರಾಜ್ಯ' ಭೂಮಿಜೆಯು ॥ ॥ ೪ ॥

ವೀರವೀರೆಯರೆಲ್ಲ ಸಮರಕೆ ಬನ್ನಿ ।
ಧೀರ ‘‘ಮಹಾತ್ಮಗಾಂಧೀಕಿ – ಜೈ’’ – ಯೆನ್ನಿ ॥
ಆ ‘ರತ್ನಾಕರ’ ದಿಂ ಬೇಕಾದುದ ತನ್ನಿ ।
‘‘ಭಾರತಮಾತಾಕೀ – ಜೈ’’ – ‘‘ಜೈ’’ ಯೆಂದನ್ನಿ ॥ ॥ ೫ ॥

(ಪದ್ಯದ ಕೊನೆಯಲ್ಲಿ ‘ಜೋ ಜೋ’ ಎಂದು ಸೇರಿಸಿ
‘ಜೋಗುಳ ಧಾಟಿ’ ಯಲ್ಲಿಯೂ ಹಾಡಬಹುದು)

ಲೇಖಕರು : **ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ.**

(‘ಸ್ವರಾಜ್ಯ ಗೀತಾಮೃತ’ ಕಾಸರಗೋಡು 1947)

೪೦. ಸೇವಾದಲದ ಸೈನಿಕರು

ಭಾರತ ಮಾತೆಯ ಮಕ್ಕಳು ನಾವು । ಸೇವಾದಲದ ಸೈನಿಕರು

ಭೇದ ಭಾವವು ನಮ್ಮಲ್ಲಿಲ್ಲ ।
ಜಾತಿ ಭೇದವು ಸನಿಹದೊಳಿಲ್ಲ
ಎರಡು ತನವು ಕನಸಿನೊಳಿಲ್ಲ
ವೈರಿತನವು ನೆನಪಿನೊಳಿಲ್ಲ

ದೇಶೋದ್ಧಾರವೆ ನಮ್ಮಯ ಆಟ,
ತ್ರಿವರ್ಣ ಧ್ವಜವೇ ನಮ್ಮಯ ಬಾವುಟ,
ಧ್ವಜದಡಿಯೇ ನಮ್ಮಯ ರಾಹುಟಿ
ಜೀವನ ಮಂತ್ರವು ನಮ್ಮಯ ರಾಟಿ

ಆತ್ಮ ತೇಜವೆ ನಮ್ಮಯ ಶಕ್ತಿ
ಸ್ವಾರ್ಥತ್ಯಾಗವೇ ನಮ್ಮಯ ಯುಕ್ತಿ
ಮೇಲಪ್ಪಣೆಯೇ ನಮ್ಮಯ ಕತ್ತಿ
ಇದರಿಂ ನಿಶ್ಚಯ ಭಾರತ ಮುಕ್ತಿ

ಲೇಖಕರು : ತಿಳಿಯದು

('ಸೇವಾದಲ ಗೀತೆಗಳು' ಧಾರವಾಡ, 1946)

೪೧. ರಣಗೀತ

ಬರುವುದು ಬರಲೆಂದೆನ್ನುವೆವು ।
ಪರದಾಸ್ಯವನಿಂದಳಿಸುವೆವು ॥

ಬಿಸಿಲನು ಚಳಿಯನು ಲೆಕ್ಕಿಸೆವು ।
ಹಸಿವಿನ ಕಿಚ್ಚನು ಸಹಿಸುವೆವು ॥

ಬೆತ್ತದ ಬಡಿತವ ತಿನ್ನುವೆವು ।
ಕತ್ತಿಯ ಕಡಿತವ ಸಹಿಸುವೆವು ॥

ಕುಣಿಕುಣಿಯುತ ಹೋರಾಡುವೆವು ।
ರಣದೊಳು ಶೌರ‍್ಯವ ತೋರುವೆವು ॥

ನಗುತಲೆ ಶೂಲವನೇರುವೆವು ।
ಜಗದೊಳು ಕೀರ್ತಿಯನುಳಿಸುಳಿವೆವು ॥

ಹಾಡುತ ರಣದೊಳು ಸಾಯುವೆವು ।
ನಾಡಿನ ಮಾನವ ಕಾಯುವೆವು ॥

ಲೇಖಕರು : ತಿಳಿಯದು

('ಸೇವಾದಲ ಗೀತೆಗಳು,' ಧಾರವಾಡ, 1946)

೪೨. ಉಪದೇಶ

ಪದ – ಧಾಟಿ : ಕಡುಧೀರನೇ ಶೂರನೇ

ಮನಃಪೂರ್ವಕ ಸಾಧಿಸು ಮನುಜ ಸ್ವರಾಜ್ಯಕೆ । ಕುಗ್ಗಬೇಡ
ಭಯದಿಂ, ತಗ್ಗಬೇಡ, ಇಷ್ಟಕೆ ಹಿಗ್ಗಬೇಡ ॥ ಪಲ್ಲ ॥

ನಿನಗಿದನಾದಿಯು ಮನುವಿಂ ಮುನ್ನವೆ । ಜನುಮ ಭೂಮಿಯೊಳಗಿದೆ
ಸ್ವಾತಂತ್ರ್ಯವು । ನೀನಿತಜ್ಞಾನದಿ ಮರೆತು ಕಳೆದುದನೀ, ಯೋಚಿಸಯ್ಯಾ
ಮನದೊಳು ಯೋಚಿಸಯ್ಯಾ ॥ ಕಳೆದುದ ಸಾಧಿಸಯ್ಯಾ ॥ ೧ ॥

ಅಹಿಂಸಾತ್ಮಕಾಸಹಕಾರಿತೆಯಿಂ ಸ್ವರಾಜ್ಯ ಸಾಧಿಸೆ ಭಯವೇನೈ ।
ಆಳರಸರಪೆಗಲಿಂದಿಳಿಯುತ । ನಡೆ, ನಿನ್ನಕಾಲಿಂ ॥ ನೀ ನಡೆ
ನಿನ್ನಕಾಲಿಂ । ಮಾನವ ನಿನ್ನಕಾಲಿಂ ॥ ೨ ॥

ಭಾರತಭೂಮಿಯ ದ್ರವ್ಯಲ್ಲಮೆವಿಚಾರದಿ ಪೋದುದು ।
ಪರದೇಶಕೆ ನೀ । ಸಾರಾಸಾರ ವಿಚಾರಿಸಿ ನಿಲಿಸಿದ ಪೋಗದಂತೆ ॥
ಇನ್ನಾದರೂ ಪೋಗದಂತೆ । ನಿಲಿಸಿದ ಪೋಗದಂತೆ ॥ ೩ ॥

ಆಸ್ಟ್ರೇಲಿಯಾ ಮೊದಲಾದ ಬ್ರಿಟಿಷರ । ರಾಷ್ಟ್ರಂಗಳಿಗಿಹುದೀ ಸ್ವಾತಂತ್ರ್ಯ
ವೀ ರಾಷ್ಟ್ರಕ್ಕೆ ಸಿಗದಿಹ ಕಾರಣ । ನಿನ್ನದಸಡ್ಡೆಯಯ್ಯಾ ॥
ನಿಜವಿದಸಡ್ಡೆಯಯ್ಯಾ । ನಿಜವಿದಸಡ್ಡೆಯಯ್ಯಾ ॥ ೪ ॥

ಬದ್ಧಪ್ರತಿಜ್ಞೆಯೊಳಿದ್ದು ನಿಲುತನೀ । ಶುದ್ಧಮನದಿಸತ್ಯಾಗ್ರಹಪಿಡಿಯಲ್
ಸಿದ್ಧ ದೊರಕುವುದು । ನಿನಗೀ ಸ್ವಾತಂತ್ರ್ಯವು । ಶಂಕೆಬೇಡಾ ।
ಮನದಲಿ ಶಂಕೆಬೇಡಾ ॥ ಮನದಲಿ ಶಂಕೆಬೇಡಾ ॥ ೫ ॥

ಲೇಖಕರು : ತಿಳಿಯದು

(ಮುದ್ರಿತ)

೪೩. ಭಾರತ ಪುತ್ರರ ತಪಶ್ಚರಣೆ

ತಾಳ–ಅಷ್ಟ–ರಾಗ–ಕಾಂಭೋಧಿ
('ಮಂತ್ರಿಗಳಿರ ಕೇಳಿರೀಗ' ಎಂಬಂತೆ)

ಗಾಂಧೀ ಮಹಾತ್ಮರ ನುಡಿಯ । ಕೇಳಿ । ಮುಂದೆ ಮುಂದಕೆ ಮಾಡಿ ರಡಿಯ
ಕುಂದದೆ ಮನದೊಳು । ಗಂಭೀರಭಾವದೊ । ಳಿಂದೆಮಗೆ ಸನ್ನಿಹಿತ ವಾದುದು ಸ್ವರಾಜ್ಯವದು ದಿಟ ॥ ೧ ॥

ಒಲಿಸೆ ಸ್ವರಾಜ್ಯದೇವತೆಯ ॥ ನಿಂದು । ಹಲವರು ಸ್ವಾರ್ಥದ ।
ಮತಿಯ । ಅಳಿದು ಸ್ವದೇಶಾಭಿಮಾನ ಸಂಸ್ಫೂರ್ತಿಯಿಂ ।
ದಿಳಿದಿಹರು ಬಹುವಿಧ ತಪಃಕೃತಿ । ಗಳ ಚರಿಸಿದೇಹದ ಸಮರ್ಪಸೆ ॥ ೨ ॥

ಮೌನಿಗಳಾದರು ಕೆಲರು । ದ್ರವ್ಯ । ದಾನಿಗಳಾದರು ಕೆಲರು ॥
ದೀನತೆಯಿಂದ ಕಾಯುಕದ ಕರ್ಮಿಗಳಾಗಿ ।
ಸಾನುರಾಗದಿ ಕೆಲರು ಕೆಲವರು । ಪ್ರಾಣಗಳನರ್ಪಿಸುತಲಿರುವರು ॥ ೩ ॥

ಧುರಧೀರರಾಲಿಬಂಧುಗಳು । ಗಂಗಾ । ಧರರಾಯ ದೇಶಪಾಂಡೆಗಳು ॥
ವರಸತ್ಯ ಪಾಲಕಿಚಲುಯಾತೋ ಬಾದ್ಯರು । ನೆರೆ ಪುನಶ್ಚರಣೆ
ಯನು ಮಾಡಲು । ವರ ಸ್ವರಾಜ್ಯಶ್ರಮವ ಸಾರ್ದರು ॥ ೪ ॥

ಲಾಲಾಜಿ ಧೈರ್ಯಶಾಲಿಗಳು । ಮೋತೀ । ಲಾಲನೆಹರು
ಮೇಧಾವಿಯರು ॥ ಶೀಲವಂತರು ಚಿತ್ತರಂಜನದಾಸರು । ಲೀಲೆ
ಯಿಂದಲಿ । ಬಾಲಕರು ಸಹಿ । ತೋಲಯಿಸುತಿಹರುಗ್ರತಪದಲಿ ॥ ೫ ॥

ಶ್ಯಾಮ ಸುಂದರ ಚಕ್ರವರ್ತಿ । ಗುಣ । ಧಾಮ ದಿವಾಕರ ಮೂರ್ತಿ ।
ಆ ಮಹಾಗುಣ ವಿಶ್ವನಾಥ ಜೊಯಿಸಿಯು ಮ।ತ್ತಾಮಹಾಮತಿ
ಮಜಲಿ ಮುಖ್ಯರು । ಪ್ರೇಮದಿಂದಾಶ್ರಮವ ಸೇರ್ದರು ॥ ೬ ॥

ನ್ಯಾಯಶೀಲಸು ಧೈರ್ಯಸಿಂಧು । ದತ್ತಾ । ತ್ರೇಯ ಭಾರದ್ವಾಜ
ನಿಂದೂ । ಶ್ರೀಯುತ ಕೇಶವ । ರಾಯ ಗೋಖಲೆಯರು ।
ಮಾಯಕದ ತಂತ್ರವನು ಭೇದಿಸಿ । ಧ್ಯೇಯವನು ಸಾಧಿಸುತಲಿರು
ವರು ॥ ೭ ॥

ಸ್ತ್ರೀರತ್ನಳಾಬಾದಿ ಭಾನು । ವೀರ । ನಾರಿ ವಸಂತಿಯು ತಾನು ॥
ಧೀರೆ ಸರೋಜಿನಿಯೂರ್ಮಿಳೆ ಸಾವಿತ್ರಿ । ಧೀರೆಯಂಬಾಬಾಯಿ
ರಮೆಯರು । ಧೈರ್ಯದಿಂ ಪೊರಟಿಹರು ಸೇವೆಗೆ ॥ ೮ ॥

ಸುಳ್ಳು ಕಪಟ ಮೋಸವಲ್ಲ । ಭಂಡು । ಕೊಳ್ಳೆ ಸುಲಿಗೆ ಹಿಂಸೆಯಲ್ಲ ॥
ಸಲ್ಲುವ ರಾಷ್ಟ್ರಸೇವೆಯ ಮಾಡುತಿರುವಾಗ । ವಳ್ಳಿತೆ । ಸಂಬಂಧ
ಬಂಧನ । ಫುಲ್ಲಲೋಚನನೊಲುಮೆಯಿದು ದಿಟ ॥ ೯ ॥

ಭರತ ಖಂಡದ ಪುಣ್ಯ ವನದಿ । ನೆಲ । ಸಿರುವ ತುರಂಗ ಗಹ್ವರದಿ ॥
ಪರಮ ಪುರುಷನ ಮೆಚ್ಚಿಸುವ ಸುಯೋಗವು ।
ಭರತಪುತ್ರರಿಗದು ಪುರಾರ್ಜಿತ । ವರಸುಕೃತಗಳ ಫಲ ವಿಶೇಷವು ॥೧೦॥

ಇಂತು ತೋರ್ಪುದು ಮನಸಿಕ್ಕೀಗ । ಭಗ । ವಂತನ ದಯದಿಂದ ಬೇಗ ॥
ಬಂತು ಸ್ವರಾಜ್ಯದ ಯೋಗವು ನಾವು ನಿ । ರಂತರದಿ ಕಷ್ಟವನು ತಾಳುತ।
ಶಾಂತಿಯಿಂದೈದುವದೆ ಕಾರ್ಯವು ॥ ೧೧ ॥

ಸಕಲ ಸಜ್ಜನರಿದರಂತೆ । ಮಾತೃ । ಭಕುತಿಪೂರಿತ ಪುತ್ರರಂತೆ ॥ ಯುಕು
ತಿಯ ಹಿಡಿದು ರಾಷ್ಟ್ರದ ಸೇವೆಯನು ಮಾಡೆ । ಸುಖಕರದ ಸಾತಂತ್ರ್ಯ
ಫಲವನು । ಮುಖ ಪುರೇಶ್ವರನೊಲಿದು ಕೊಡುವನು

ಲೇಖಕರು : **ನೊಗೇರಿ ರಾಮಪ್ಪ ಅಡಿಗರು**

(ಸಂಗ್ರಹ : ಉಳ್ಳೂರು ರಾಮಕೃಷ್ಣ ಐತಾಳ, ಕಂಬದ ಕೋಣೆ.)

೪೪. ದೇಶಸೇವೆಗೆ ಎಚ್ಚರಾಗಿರಿ

(ಮದಲಾಸಿ ಮಟ್ಟು)

ರಾಷ್ಟ್ರೀಯದೇಳಿಗೆಗೆ ಮನವ ನೀನಿರಿಸು ।
ರಾಷ್ಟ್ರಸೇವೆಗೆ ತನುವನು ನೀನು ಸವಿಸು ॥ಪಲ್ಲ॥

ರಾಷ್ಟ್ರೀಯ ಮಾತೆಯ ಬಂಧನವ ಬಿಡಿಸು ।
ರಾಷ್ಟ್ರದಿ ಭಾರತ ನಿಜ ಪುತ್ರನೆನಿಸೂ ॥ ೧ ॥

ಕಷ್ಟ ಬಂದಿಹುದೆಮಗೆ ಚಿಂತೆಯು ಸಾಕೋ ।
ದೃಷ್ಟಿಯಿಂದಲಿ ನೋಡಿ ನಿನ್ನೊಳೆತಿಳಕೊ ॥
ಶ್ರೇಷ್ಠ ತರದ ವಿದ್ಯೆ ನಮಗೀಗ ಬೇಕೂ ।
ರಾಷ್ಟ್ರೀಯ ಶಿಕ್ಷಣ ಮಾರ್ಗವುಂಟದಕೊ ॥ ೨ ॥

ವಿದ್ಯೆಯು ನಮಗಧಿಕ ಗುಣವೀವ ಸಿಂಧು ॥
ವಿದ್ಯೆಯೇ ಸಿರಿರೂಪು ಪರವೂರ ಬಂಧು ॥
ವಿದ್ಯೆಯೆ ದುಂದು ವೆಚ್ಚವನಿಲಿಪ ಬಂಧು ।
ವಿದ್ಯೆಯಿಂದಲೆ ಪಡುವ ಸುಖವಿನ್ನು ಮುಂದು ॥ ೩ ॥

ಇಂಗ್ಲಿಷು ವಿದ್ಯೆಯು ನಮಗೊಂದು ಗಿಲಿಟು ।
ಇಂಗ್ಲಿಷರಿಗ್ಯಾತಲ್ಲ ಬಂಗ್ಲೆಯ ಸ್ಯಾಟು ॥
ಜಂಗ್ಲಿಗಳು ನಾವೀಗ ತಿಳಿದರೆ ರೈಟು ।
ಇಂಗ್ಲಿಷು ಸಾಕಷ್ಟ ನಿನಗೆ ಗುಡ್‌ನ್ಯಾಟು ॥ ೪ ॥

ಸಾಕ್ಯಾತು ಕಲಿತೆಮಗೆ ಆಂಗ್ಲೇಯ ವಿದ್ಯೆ ।
ಬೇಕ್ಯಾತೇಕೆಮಗೆ ಈ ಮೋಜು ವಿದ್ಯೆ ॥
ಸಾಕಾಯಿತಯ್ಯೋ ಪರದಾಸ್ಯದ ದಂಧೆ ।
ನೀ ಕಾಯೊ ಕಂಭೇಶ ಕೈಮುಗಿದೆಂದೆ ॥ ೫ ॥

ಶ್ರೇಷ್ಠವಿರುವ್ರಸಹಕಾರ ಕತ್ತಿಯು ಹಿಡಿದು ।
ದುಷ್ಟ ವೈರಿಯು ಸೈನ್ಯವೆನ್ನೆಲ್ಲ ಕಡಿದು ॥
ನಿಷ್ಠೆಯಿಂ ಸ್ವರಾಜ್ಯ ಮಂತ್ರವ ಜಿಡಿದು ।
ಭ್ರಷ್ಟರಾದೆಮ್ಮನೆ ಶುಚಿಯನ್ನೆ ಗೈದು ॥ ೬ ॥

ಪರದಾಸ್ಯವನು ನೀನು ಬಿಟ್ಟುಬಿಡಿಂದೆ ।
ಕರುಣದಿ ಕೂಡಿಸು ನಮ್ಮವರೆಲ್ಲರೊಂದೆ ॥
ಗುರುತರ ಪ್ರೇಮದಿ ನಡೆಯುಲು ಮುಂದೆ ।
ನಿರುತದಿ ಪಡೆಯುವ ಸ್ವತಂತ್ರವೆಂದೆಂದೆ ॥ ೭ ॥

ಸಾಕಪ್ಪ ಹ್ಯಾಕೋರ್ಟು ಠಸೆ ಬೇಟೆ ಮಾಟ ।
ಸಾಕಪ್ಪ ಕೋರ್ಟಿಗೆ ಓಡ್ಯೋಡಿ ಓಟ ॥
ಯಾಕಪ್ಪ ವಕೀಲರ ಫೀ ಕೇಳ್ವ ಕಾಟ ।
ಸಾಕಪ್ಪ ಖಟ್ಲೆಯು ಸಿಕ್ಕದೆ ಊಟ ॥ ೮ ॥

ಹಿಂದೆ ನೀ ನೋಡಿಕೊ ಅಪ್ಪ ಅಜ್ಜನನು ।
ಹಿಂದಿನ ವೇದಪುರಾಣಾದಿಗಳನು ॥
ಚಂದದ ಮನೆತನದ ಒಕ್ಕಟ್ಟುಗಳನು ।
ಅಂದವಾಗಿದ್ದ ಕೈಗಾರಿಕೆಗಳನು ॥ ೯ ॥

ನಮಗ್ಯಾಕೆ ನೆಕ್ಟಾಯಿ ಕೊಲ್ಲಾರು ಕೋಟು ।
ನಮಗ್ಯಾಕೆ ಕೌನ್ಸಿಲ ಮೆಂಬರಿಕೆ ಓಟು ॥
ನಮಗ್ಯಾಕೆ ಮಾರುದ್ದ ಬಿರುದಿನ ಗೀಟು ।
ನಮಗ್ಯಾಕೆ ಡೌಲಿನ ಕುರ್ಚಿಯು ಸೀಟು ॥ ೧೦ ॥

ಪರರೊಡವೆಗೆ ನೀನು ಮನಮೆಚ್ಚಬೇಡ ।
ಪರದೇಶಕೆ ನಿನ್ನ ಹಣ ಸುರಿಸಬೇಡ ॥
ಪರಸೇವೆಗೆ ನಿನ್ನ ತನು ಸವಿಸಬೇಡ ।
ಪರದೇಶಿಯರ ಕೂಡಿ ಹಾಳಾಗಬೇಡ ॥ ೧೧ ॥

ದೇಶೀಯ ಕೆಲಸಕ್ಕೆ ಮರ್ಯಾದೆ ಕೊಡಿಸು ।
ದೇಶೀಯ ಸಂಪತ್ತು ಆದರಿಂದ ಮಿಗಿಸು ॥
ದೇಶೀಯ ಭಾಷೆಯ ಮಗುವಿಗೆ ಕಲಿಸು ।
ವೇಷ ಹೇಟ್ ಬೂಟೆಲ್ಲ ಮೂಲೆಯಲ್ಲಿರಿಸು ॥ ೧೨ ॥

ಮಾಡಿರಿ ಪಂಚ್ಯಾತಿ ಕೋರ್ಟನ್ನೆ ಬೇಗ ।
ಹಿಡಿಯಿರಿ ನೂಲಿನ ರಾಟೆ ಸರಾಗ ॥
ಹೂಡಿರಿ ರಾಷ್ಟ್ರೀಯ ಶಾಲೆಯನ್ನೀಗ ।
ನೋಡ್ವಿರಿ ದೇಶದುನ್ನತಿಯನ್ನೆ ಬೇಗ ॥ ೧೩ ॥

ಮುಸಲ್ಮಾನ ಬಂಧುವು ಸರಿಯೆಂದು ತಿಳಿಯೈ ।
ಇಸಲಾಮು ಮತವದು ಬೇರಲ್ಲ ತಿಳಿಯೈ
ಜಸವುಂಟು ನಮಗಿಂದು ಕೂಡಿ ನಾವ್ ನಡಿಯೆ।
ಬೆಸಗೊಳುವೆನು ಕೇಳು ಸುಳ್ಳಲ್ಲ ಸರಿಯೈ ॥ ೧೪ ॥

ಬಾಯೊಳಗೆ ಸಿಗರೇಟು ಆಡಲಿಸ್ಬೀಟು ।
ಕೈಯೊಳಗ ರಿಸ್ಟವಾಚು ಕಾಲಲ್ಲಿ ಬೂಟು॥
ಮೈಯೊಳಗೆ ದಪ್ಪಾದ ಇಂಗ್ಲೀಷು ಕೋಟು ।
ಸೈಯೆನಿಸೆ ದೊರೆಯಾಗೆ ತಲೊಗೆಂದು ಹೇಟು ॥ ೧೫ ॥

ಈ ತೆರದಿ ನಮ್ಮಲ್ಲಿ ಬರಿಯ ಮೇಲಾಟ ।
ಆತುರದಿ ದೊರೆಯಾಗಿ ಕಡೆಗೆ ಭಿಕ್ಷಾಟ ॥
ತಾತ ಬಾಂಧವರಲ್ಲಿ ಹಾಕರೆಮಗೂಟ ।
ಸೋತು ಪರಜಾತಿಗೆ ಮನಮೆಚ್ಚಿ ಕೂಟ ॥ ೧೬ ॥

ಹಿಂದುಗಳು ನಾವು ಹಿಂದಲ್ಲರೆನಿಸೆ ।
ಒಂದುಗೂಡಲೆ ಬೇಕು ಬೇಗನೆ ಜೈಸೆ ॥
ಸಂಧಿಯು ಬಂದಿಹುದು ಗಡುತರ ಸೈಸಿ ।
ಮುಂದೆದ್ದು ಬನ್ನಿರಿ ಕೇಳಿ ಬಿನ್ನೈಸಿ ॥ ೧೭ ॥

ಬೀಜವ ಬಿತ್ತಿದ ವರ ತಿಲಕ ದೇವ ।
ರಾಜಾಧಿರಾಜ ಸುತೇಜ ವೈಭವ ॥
ಮೂಜಗ ಹಬ್ಬಿತು ಶಕ್ತಿಸ್ವಭಾವ ।
ಮಾಜದೆ ಭಜಿಸಿರಿ ಮಂತ್ರ ಪ್ರಭಾವ ॥ ೧೮ ॥

ಗಾಂಧಿರಾಜನು ಸಾರ್ವ ಅಸಹಕಾರತತ್ವ ।
ಅಂದದಿ ತಿಳಿಕೊ ನೀನದರ ಮಹತ್ವ ॥
ಸಂದೇಹವಿನಿತಿಲ್ಲ ಒಕ್ಕಟ್ಟ ಸತ್ವ ।
ದಿಂದೆಲ್ಲ ಪಡೆವ ಸ್ವರಾಜ್ಯ ಸರ್ವಸ್ವ ॥ ೧೯ ॥

ಜಯ ಜಯ ತಿಲಕ ಮಹಮೂರುತಿಗೆ ।
ಜಯ ಜಯ ಗಾಂಧಿ ಮಹಾರಾಜನಿಗೆ ॥
ಜಯ ಜಯ ದಾಸಲಾಲಾ ನೆಹರುಗಳಿಗೆ ।
ಜಯ ಗುರು ಕುಂಭೇಶ ಶಿವ ಶಂಕರಗೆ ॥ ೨೦ ॥

ಲೇಖಕರು : ತಿಳಿಯದು

(ಮುದ್ರಿತ)

೪೫. ಹಿಂದೂ ಮುಸಲ್ಮಾನೈಕ್ಯ

ಪದ–ಧಾಟಿ : ಕರುಣಾಕರ ನೀನೆಂಬುವದ್ಯಾಕೋ

ಒಂದಾಗದೆ ಸಾಧನೆಗಳು ಫಲಿಸವು ।
ಒಂದಾಗುವ ನಾ ವದರಿಂದ ॥
ಹಿಂದು ಮುಸಲ್ಮಾನರು ಒಂದಾಗಲು।
ಮಂದಿರವೆಲ್ಲವು ಬಂಧುರವಂತೆ ॥ ೧ ॥

ಮಿಂದಾಗದೆ ಕಣ್ಣೀರಿನ ತೀರ್ಥದಿ ।
ಬೆಂದ ಪ್ರಾಣ ತಣಿಯುದರಿಂದೆ ॥
ಜೆಂದಾಗದೆ ಹಲವೆರಡು ತುಂಡುಗಳು ।
ಸಂದುಗೂಡಿಸಲು ಬಾರದರಿಂದೇ ॥ ೨ ॥

ನೊಂದಾಗದೆ ದೃಢತೆಯು ಪುಟವೇರದು ।
ಮಂದತೆ ತೊಲಗದು ಆತ್ಮದಿಂದೇ॥
ಹೊಂದಾಗದೆ ಸತ್ಯದ ಮಿತ ತೇಜವ ।
ಅಂಧತೆ ಮಾಣದು ಪ್ರಾಣದಿಂದೇ ॥ ೩ ॥
ತುಕರಾಮು?

ಲೇಖಕರು : **ಎಂ. ಎಸ್. ಕಾಮತ್**

(ಮುದ್ರಿತ)

೪೬. ಭಾರತೀಯರ ಕರ್ತವ್ಯ

ರಾಗ–ತಾಳ–ಅಪ್ಪ (‘ಅಬ್ಬಬ್ಬ ಕಾಡಿನೊ । ಆಬ್ಬರಗೊಡುತಿದೆ’ ಎಂಬಂತೆ)

ಸುಮ್ಮನೆ ಕುಳಿತರೆ । ಸಿಗದು ಸ್ವರಾಜ್ಯವು ।
ಬ್ರಹ್ಮಕಲ್ಪದವರೆಗು ಒಮ್ಮೆಲೆ ನಾವೆಲ್ಲ ।
ನಿರ್ಮಲ ಮತಿಯಿಂದ । ಕರ್ಮವೆಸಗಬೇಕು ॥

ಸಕ್ಕರೆ ಮುಖ್ಯ ವಿದೇಶಿ ವಸ್ತುಗಳನ್ನು । ಥಕ್ಕನೆ ತ್ಯಜಿಸಬೇಕು ॥
ಚೊಕ್ಕಟವಾಗಿನಾವದನೆಲ್ಲವನು ಮಾಡ।ಲಿಕ್ಕಿನ್ನು ಕಲಿಯಬೇಕು ॥ ೧ ॥

ಪಾಮರರಿಟ್ಟಿಹ ಕೋರ್ಟು ಕಚೇರಿಯ । ನೇಮದಿ ತ್ಯಜಿಸಬೇಕು
ಗ್ರಾಮ ಗ್ರಾಮದಲ್ಲಿ ಪಂಚಾಯತ ಕೊರ್ಟನ್ನು ।ಪ್ರೇಮದಿ ರಚಿಸಬೇಕು
॥ ೨ ॥

ನೌಕರಿ ಜನರೆಲ್ಲ। ರೇಕಾಲದಲಿ ತಮ್ಮ । ಚಾಕರಿ ತ್ಯಜಿಸಬೇಕು
ಬೇಕು ಬೇಕಾದ ಸ್ವತಂತ್ರಕಾರ್ಯಗಳನ್ನು । ಠೀಕಾಗಿ ಮಾಡಬೇಕು
॥ ೩ ॥

ಶಾಲೆ ಕಾಲೇಜುಗಳನ್ನು ಬಿಟ್ಟು "ರಾಷ್ಟ್ರೀಯ"। ಶಾಲೆಯ ರಚಿಸಬೇಕು
ಆಲಾಪಗೊಳದೆ ವ। ಕೀಲರಾದವರು ವ। ಕಾಲತ್ತು ತ್ಯಜಿಸಬೇಕು
॥ ೪ ॥

ಸರ್ ಖಾನ್‌ಸಾಹೇಬ್ ರಾವ್ ಸಾಹೇಬ್ ಮತ್ತೆ ರಾವ್ ಬಹದ್ದೂರ್
ಎಂದು ಮೊದಲಾಗಿಹ ॥
ಭಾರಿಯ ಬಿರುದಿನ ಪವರುಗಳೆಲ್ಲವ। ಭೋರನೆ ತ್ಯಜಿಸಬೇಕು ॥ ೫ ॥

ಮನೆ ಮನೆ ತಪ್ಪದೆ "ನೂಲುವ ರಾಟೆಯು" ವಿಸಯುದೊಳಿಡಿಸಬೇಕು
ಇನಿತಲ್ಲದಲ್ಲಲ್ಲಿ ನೈಗೆಯು "ಮಗ್ಗವ" । ನನುಪಿಂದಲಿಡಿಸಬೇಕು ॥ ೬ ॥

"ಖಾದಿ"ಯೆಂಬುದೆ ಸರ್ವ । ಸಾಧನವಹಿತರ । ಖಾದಿಯೆ ಗೆಲುವುದಿನ್ನು।
ಖಾದಿ "ಸ್ವರಾಜ್ಯ"ದ । ಹಾದಿಯೆಂದೆಲ್ಲರು । ಖಾದಿಯ ಧರಿಸಬೇಕು
॥ ೭ ॥

ಲೇಖಕರು : **ಬವಲಾಡಿ ಸೀತಾರಾಮ ಹೆಬ್ಬಾರ**

(ಸಂಗ್ರಹ : ಉಳ್ಳೂರು ರಾಮಕೃಷ್ಣ ಐತಾಳ)

೪೭. ದಬ್ಬಾಳಿಕೆ

ಸರ್ಕಾರದ ದಬ್ಬಾಳಿಕೆಯುಬ್ಬರ ಜಗತ್ತಿನೆಲ್ಲೆಯವ್ಯಾಪಿಸಿದೆ ।
ತರ್ಕವಮಾಡದೆ ಸ್ವತಂತ್ರಗಳಿಸಿರಿ ಯೆನ್ನುತಕಾಂಗ್ರೆಸ್‌ಸಾರುತ್ತಿದೆ ॥ ಪ ॥

ಪೌರಜನಾಂಗರೆ ಅಡಿಯಿಡಿಯಿಕ್ಷಣ ಜನಜಾಗೃತಿಯೆಂಬಾಲಯದಿ ।
ಜಡಮತಿಗಳನಡೆ ತಡೆಯಿರಿಕಾನೂನ್ ಪುಡಿಪುಡಿಮಾಡಿರಿ ಸತ್ವರದಿ ॥
ಖಿಡುಗದತೃಷ್ಣೆಯ ರಕ್ತದಿಸಲಿಸಲು ಸರ್ಕಾರದ ದಳವೊಮ್ಮನದಿ ।
ಎರಬಿಸವೆಮ್ಮಸು ಕಾದುಕೊಂಡಿರ್ಪುದು ಕೊಡುತಲಿತೊಂದರೆಮತ್ಸರದಿ ॥
ನೋಡಿರಿನಾ ಗ್ಗಳು ಕೊಡುತಿಹಧನದಿಂದಾಡುವದೀತೆರಅತಿಮುದದಿ ।
ಬಡಿಗೋಲ್ಭಜಿಸಗ್ಹಿಡಿಯುದೆಸುಗ್ಗಿರಿ ಅತಗಲಿಕಾನೂನ್ ಭೂತಳದಿ ॥

ಉಡಾನ್

ತೊರೆಯಿರಿಜೀವದಭಾನವನು । ಮೇಣ್ । ತೊರೆಯಿರಿಮನೆ ಮಾರಾಸೆಯನು ॥
ತೊರೆಯಿರಿಸೇವಾವೃತ್ತಿಯನು ॥ ಸಂ ॥ ಹರಿಸಿರಿಸೆರ್ಕ್ಷರಾಶಿಯನು ।

ಚಾಲ್

ಮೂರ್ಖರಮೇಲ್ಮೆಯ ನರ್ಕಿಸುತೀಗಲೆ ಸ್ವಾರ್ಥವನೀಗಿರಿಯೆನ್ನುತಿದೆ ॥
ತರ್ಕವಮಾಡದೆ ಸ್ವತಂತ್ರಗಳಿಸಿರಿ ಯೆನ್ನುತಕಾಂಗ್ರೆಸ್ ಸಾರುತಿದೆ ॥ ೧ ।
ಸತ್ತೆಯಹಂಬಲ ವೇತಕೆಪ್ರಜೆಗಳೆ ಚಿತ್ತವುಶಾಂತಿಯೊಳಿರದಿರಲು ।
ಸುತ್ತಣದೇಶದೊಳೆತ್ತಲುಯಿಲ್ಲದ ಗುಂಡಿನಜಾಡ್ಯವು ಹರಡಿರಲು ॥ ॥೨॥
ಎತ್ತಣಸೌಖ್ಯವಿದೆತ್ತಣಬಾಳ್ವೆಯು ರೈತರು ಕಷ್ಟವಪಡುತಿರಲು ।
ಮತ್ತೆಲೆಪೋಲೀಸ್ ಬಿತ್ತರಭಿರ್ಕಟ್ ಲಾಠಿಪ್ರಯೋಗದಿ ನಿಂತಿರಲು ॥೩॥
ಎತ್ತಣಶಾಂತಿಯ ರಾಜ್ಯವಿದೆಂಬುದು ಕಾನೂನ್ ಬೇಗೆಯು ಹತ್ತಿರಲು ।
ಕತ್ತನುಬಗ್ಗಿಸಿ ಕೇಳುತಲಿರುವರೆ ಕತ್ತೆಕಿರುಬಗಳುಮುತ್ತಿರಲು ॥ ೪ ॥

ಉಡಾನ್

ಶಾಂತಿಯ ಬಾಂಬನು ಹೊರಡಿಸಿರಿ । ಕಡು । ಕ್ರಾಂತಿಯಗುಂಡನು ಅಡಗಿಸಿರಿ ॥
ಧಾಂತಿಯ ಧ್ವಜವನು ಯೇರಿಸಿರಿ । ಬಹು । ಭ್ರಾಂತಿಯಬೆಳೆಯನು ಬೀಳಿಸಿರಿ ॥

ಚಾಲ್

ಅರ್ಕನರಾಜ್ಯದ ಸುಖವನುಹೊಂದಿರಿ ಯೆನ್ನುತಕಾಂಗ್ರೆಸ್ ಸಾರುತಿದೆ ।
ತರ್ಕವಮಾಡದೆ ಸ್ವಾತಂತ್ರ್ಯಗಳಿಸಿರಿ ಯೆನ್ನುತ ಕಾಂಗ್ರೆಸ್ ಪೇಳುತಿದೆ ॥
ಬಡವರಸೇವೆಯು ಮೃಡವರಸೇವೆಯು ಬಡವರಿಂದ ನಮಗಮರಗತಿ ।
ಬಡವರ ಬಾಳ್ವೆಯೆ ರೂಢಿಯಬಾಳ್ವೆಯು ಬಡವರು ಅಳಿದರೆ ಏನುಗತಿ ॥
ಬಡವರಹಿತಕೆಂದಡವಿಡಿಆತ್ಮವ ಬಡವರೊಳಿರಿಸಿ ಉದಾರಮತಿ ।
ಬಡವರಮಕ್ಕಳು ಒಡಲಿಗೆಯಿಲ್ಲದೆ ಕಡಲೊಳು ಮುಳುಗಿದರೇನುಗತಿ ॥
ಬಡವರಬಾಯನು ಬಡಿಯುವನರರಿಗೆ ಪೊಡವಿಯೊಳಿರುವುದು ಕರ್ಮಗತಿ।
ಬಡವರು ಕುಡಿತದ ದುಡುವಿನೊಳಿರುವುದ ನೋಡುವುದಲ್ಲವೆ ಪಾಪಗತಿ ॥

ಉಡಾನ್

'ಏಳಿರಿ ಶಾಂತಿಲಿ ಕಾದಾಡಿ । ಬಹ । ದಾಳಿಯದೂಡಿರಿ ಹೆಣಗಾಡಿ ॥
ಆಳುವರಾಜರ ಕೃಪೆಬೇಡಿ । ಜಗ । ದೇಳಿಗೆಗೋಸುಗ ಹೋರಾಡಿ ॥

ಚಾಲ್

ಚರ್ಕದಜೀವನ ಸ್ವರ್ಗದಸೌಖ್ಯವು ಚರ್ಕದಿ ಜೀವಿಸಿಯೆನ್ನುತಿದೆ ।
ತರ್ಕವಮಾಡದೆ ಸ್ವಾತಂತ್ರ್ಯಗಳಿಸಿರಿ ಯೆನ್ನುತ ಕಾಂಗ್ರೆಸ್ ಪೇಳುತಿದೆ ॥
ರೈತರಿಂದ ಸರಕಾರದಜೀವನ ರೈತರದುಸ್ಥಿತಿ ಹೆಚ್ಚುತಿದೆ ।
ರೈತರಿಂದ ನಮ್ಮ ಜೀವನವೆಂಬುದ ಘನಸರಕಾರವು ಮರೆಯುತಿದೆ ॥
ರೈತರಹಕ್ಕು ನಿಜಭಾಧ್ಯತೆಯೆಂಬುದು ಅರಣ್ಯಮಾರ್ಗವ ಹಿಡಿಯುತ್ತಿದೆ ।
ರೈತರಸತ್ವವ ಅನೇಕವಿಧದಲಿ ಘನಸರಕಾರವು ಸೆಳೆಯುತ್ತಿದೆ ॥

ರೈತಜನಾಂಗವು ಕೇಳುವರಿಲ್ಲದೆ ಪಶುಗಳಪಂಗ್ತಿಗೆ ಸೇರುತ್ತಿದೆ ।
ರೈತರುಕೆಟ್ಟರೆ ಘನ ಸರಕಾರಕ್ಕೆ ಶ್ರೀನೇತ್ರ ಕರಟವು ಗೊತ್ತೇಯಿದೆ ॥

ಉಡಾನ್

ಹೆಚ್ಚಿಗೆ ಹೇಳಲು ಮನವಿಲ್ಲ । ನೀವ್ । ಬೆಚ್ಚಿಬಾಳಲೇನ್ಫಲವಿಲ್ಲ ॥
ಕೆಚ್ಚಿಸಿದೆಯು ತಾಳಿರಿಯೆಲ್ಲಾ । ಮೇಣ್ । ಬಿಚ್ಚಿಹೇಳಿದೆನು ಯಿದನೆಲ್ಲ ॥

ಚಾಲ್

ಮರ್ಕಟನಾತ್ಮದ ಮರ್ಮವು ಗೊತ್ತೇ ಮೂರ್ಖತೆತೊಲಗಿಸಿ ಯೆನ್ನುತಿದೆ
ತರ್ಕವಮಾಡದೆ ಸ್ವಾತಂತ್ರ್ಯಗಳಿಸಿರಿ ಯೆನ್ನುತ ಕಾಂಗ್ರೆಸ್ ಸಾರುತಿದೆ ।
ಕಾಂಗ್ರೆಸ್ ತತ್ವದ ಮಹಿಮೆಯಿಂದಲ್ಲವೆ ಸ್ವತಂತ್ರವೆಂಬುದು ಜನಿಸುವುದು ।
ಕಾಂಗ್ರೆಸ್ ತತ್ವದ ಮೊಲೆವಾಲಲ್ಲವೆ ಸ್ವತಂತ್ರವೆಂಬುದ ಕೊಡಿ।
ಸುವುದು ॥
ಕಾಂಗ್ರೆಸ್ ತತ್ವದ ಧೃತಿಯಿಂದಲ್ಲವೆ ಧೈರ್ಯವುನಮ್ಮೊಳಗುದಿಸುವುದು
ಕಾಂಗ್ರೆಸ್ ತತ್ವದ ಪ್ರಭೆಯಿಂದಲ್ಲವೆ ಖಾದಿಬಟ್ಟೆಯು ಧರಿಸಿಹುದು ॥
ಕಾಂಗ್ರೆಸ್ ತತ್ವಪ್ರಚಾರದೊಳಲ್ಲವೆ ಜವಾಬ್ದಾರಿಯನು ಕೇಳುವುದು ॥
ಕಾಗ್ರೆಸ್ ತತ್ವದ ಬಲದಿಂದಲ್ಲವೆ ಕಾನೂನ್ಭಂಗಕೆಹೊರಟಿಹುದು ॥

ಉಡಾನ್

ಕಾಂಗ್ರೆಸ್ ಋಣವನು ತೀರಿಸಿರಿ । ನಮ್ಮ । ಕಾಂಗ್ರೆಸ್ಸಿಗೆ ಜನಸೇರಿಸಿರಿ ॥
ಕಾಂಗ್ರೆಸ್ ಧ್ಯೇಯುವ ಹೆಚ್ಚಿಸಿರಿ । ನಮ್ಮ । ಕಾಂಗ್ರೆಸ್‌ಹಿತವನೆ ಸಾಧಿಸಿರಿ ॥

ಚಾಲ್

ಬುರ್ಕಿಯುತೆಗೆದಿಡಿ ಕಾಂಗ್ರೆಸ್ ಕಮಲವ ಶಿರದೊಳು ಧರಿಸಿರಿ ಯೆನ್ನುತಿದೆ ॥
ತರ್ಕವಮಾಡದೆ ಸ್ವಾತಂತ್ರ್ಯಗಳಿಸಿರಿ ಯೆನ್ನುತ ಕಾಂಗ್ರೆಸ್ ಸಾರುತಿದೆ ॥

ಲೇಖಕರು : **ಎನ್. ವಿಷಕಂಠ ರಾವ್**
('ಕಾಂಗ್ರೆಸ್ ವಿಶೇಷ ಚಾವಣಿ' ಮೈಸೂರು, 1939

೪೮. ಮೋದವ ಪಡೆಯಿರಿ

ಮೊಹರಂದ ಹಬ್ಬವ ಮಾಡಿ ಮೋದವ ಪಡೆಯುರಿ ಸರ್ವರಾ ।
ಭಾರತ ದೇಶವ ಪಾರತಂತ್ರದ ಕುಡಿಯುವ ವಿಚಾರ ।

ಮಾರ್ಗದಿ ನಡೆಯಿರಿ ಸರ್ವರಾ ।
ಕೇಳಿರಿ ಮೊಹರಂದ ಶಾಸ್ತ್ರವ ॥ ೧ ॥

ಉಡಬ್ಯಾಡ್ರಿ ಪರದೇಶದಿಂದ ಬಂದ ಜಿನಗಾದ ಧೋತರಾ ।
ಸುಟ್ಟುಹಾಕ್ರಿ ಸರ್ವರ ಬೂಟು–ಹ್ಯಾಟು–ನೆಕ್‌ಟಾಯ್‌–ಕಾಲರಾ ॥

ಮೇಲಾದಂಥ ಬಡಿವಾರಾ ।
ಬಿಟ್ಟು ಬಿಡಿರಿ ಎಲ್ಲಾರಾ ॥೨॥

ಕೈರಾಟಿಯಿಂದ ನೂಲ ತೆಗೆಯಿರಿ ಖಾದಿಯ ಭಂಡಾರಾ ।
ಹಿಂದುಸ್ತಾನದ ಅರಬಿಯ ಧರಿಸಿ ಮೆರೆಯಿರಿ ಬಾಂಧವರಾ ॥

ಹಿಂಗ ನಡದಿದ್ರೊ ಹಿರಿಯರಾ ।
ನಮ್ಮ ಅಜ್ಜ–ಮುತ್ತಜ್ಜಂದಿರಾ ॥೩॥

ಕುಡಿಬ್ಯಾಡ್ರಿ ಚಹಾ ಅಂಗಡಿಗೆ ಹಾಕ್ರಿ ಬೇಗ ಬಹಿಷ್ಕಾರಾ ।
ಒಡೆದು ಹಾಕ್ರಿ ಕಪ್ಪು–ಬಿಸಿ ಮೊದಲಾದ ಅದ್ದರ ಸಾಮಾನಾ ॥

ಫಳಾರ ಬ್ರೇಡು–ಬಿಸ್ಕೀಟು ।
ಅದರಿಂದ ಸುಖವಿಲ್ಲ ಎಳ್ಳಷ್ಟು ॥೪॥

ಚಹಾದ ಪುಡಿಯೊಳ್ಗ ಕೂಡಿಸಿ ರಕ್ತವ ಬಿಸಿಲಿಗೆ ಹಾಕುವರಾ ।
ಇಂಥ ಹೀನ ಚಟವ ಹಿಂದೂ ಜನರಿಗೆ ತಂದ ಕಲಸಿದರಾ ॥

ಇಂಥ ಕೆಟ್ಟ ವ್ಯಾಪಾರಾ ।
ಮಾಡಿ ದುಡ್ಡು ಸೆಳೆಯುವರಾ ॥೫॥

ಸೋಡಾ ಲಿಂಬು ತಯ್ಯಾರು ಮಾಡಿ ಹಾಳು ಮಾಡು ಯಂತರಾ ।
ಹೀಗೆ ವಿಸ್ತಾರಾ ಮಾಡಿ ನಮ್ಮ ದೇಶದ ದುಡ್ಡು ಸೆಳಿಯುವರಾ ॥
ಇಂಥ ಕೆಟ್ಟ ವಿಚಾರ ।
ಬಿಟ್ಟು ಬಿಡಿರಿ ಎಲ್ಲಾರಾ ॥ ೬ ॥

ವಿಡಾಸಿಗೆ ಪ್ರೆಂಚಕಟ್ಟ ಮಾಡಿಸಿ ಸಿಗ್ರೇಟ್ ಸಿಗಿಸಿ ಸೇದವರಾ ।
ಷಂಡರಾಂಗ ಕಾಣಿಸ್ತೀರಿ ಗಂಡಸ್ತಾನಾ ಇಲ್ಲದವರಾ ॥
ಇಂಥ ಪರದೇಶದ ಬಡಿವಾರಾ ।
ಅದರಾಗ ಏನೈತಿ ಮಜಕೂರಾ ॥ ೭ ॥

ಸರಕಾರದೊಡನೆ ಅಸಹಕಾರ ಮಾಡಿ ದೇಶೋದ್ಧಾರಾ ।
ಸರ್ವರೂ ತಯ್ಯಾರಾಗಿ ನಿಲ್ಲಿರಿ ಗಾಂಧಿ ಮಹಾತ್ಮಾರಾ ॥
ಹೇಳಿದ ತತ್ವ ವಿಚಾರ ।
ಕೇಳಿರಿ ಶ್ರೀಕಂಠ ಕವಿಸಾರ ॥ ೮ ॥

ಲೇಖಕರು : ನಲವಡಿ : **ಶ್ರೀಕಂಠಶಾಸ್ತ್ರಿಗಳು**

(ಸಂಗ್ರಹಕಾರರು : ಡಾ॥ ಮೃತ್ಯುಂಜಯ ಹೊರಕೇರಿ.)

೪೯. ಹೆಣ್ಣು ಮಕ್ಕಳಿಗೆ ಉಪದೇಶ

ಅಕ್ಕ ತಂಗಿ ತಾಯಿಗಳಿರಾ ಚೊಕ್ಕ ಚಿನ್ನದಂತ ಮಾತು ಅಕ್ಕರಿತಿಲೆ ನಿಮ್ಮ ಮುಂದೆ ಹೇಳುವೆನಾ ॥ ಖೋಡಿ ಗಂಡಸರ ಕೆನ್ನಿ ಮ್ಯಾಲ ಮೂಡು ಹಂಗ ಕೈ ಬೆರಳು ಪಾಡತಂಗ ಹೊಡವ ಕಲಸರಿ ಬುದ್ದಿಯುನಾ ॥ಪಲ್ಲವಿ॥

ಶ್ವಜ್ಞ್ಯಾನಂಗ ಸೋಗ ಮಾಡುವ ಲಜ್ಜಿಗೇಡಿ ಗಂಡಸೂರ ಹದ್ದಿಸಂಗ ಹೆಚ್ಚಾದರವ್ವಾ ಭೂಮಿಮ್ಯಾಗ । ಕೋಟಬೂಟ ಹ್ಯಾಟ ಐಟ ಕಾಣಬೇಕೆಂತ ಸೋಗ ಮಾಡತಾರ ನೋಡ್ರಿ ಸಾಹೇಬರಂಗ ॥

ಬೇಕಾದಂತೆ ಅರಿವೆ ತೊಟ್ಟ ಸಾಕಾಗುವಷ್ಟು ಡೌಲ ಆದರು ಕಾಣಸತಾರ ನೋಡ್ರಿ ತಾಯೀ ಬಂಗ್ಯಾವರಂಗ । ಕಿಮ್ಮತ್ತಿನ ಅರಿವಿ ತೊಟ್ರು ಮಾತ್ರ ಬಹಳ ಚೆಂದ ಕಾಣತಾರ ಮುಸರಿ ತಗದ ಬಾಂಡೆ ಬೆಳಗುವ ಗಂಡಿಗ್ಯಾನಂಗ ॥

ಹೆಂಗಸರ ಫ್ಯಾನ್ಸಿ ಪೋಲಕಾದ ಮ್ಯಾಲ ಪದ ಕಟ್ಟಿ ಹಾಡಿದರ ಪ್ರೇಮದಿಂದ ನಗತಾರವ್ವಾ ಬಲ್ಲವರಂಗ । ನಿಮ್ಮ ಹಂಗ ಕಾಣುಸಂತ ಕಮ್ಮನ ಮೀಸಿ ಬೋಳಿಸಿ ಲಾಲ್ಯಾನಂಗ ಕಾಣಾತಾರ ಮ್ಯಾಲಿಂದ ಮ್ಯಾಗ ॥

ತಾಯಿತಂದಿ ಸತ್ತಾಗ ಮಾತ್ರ ಕರ್ಮ ಮಾಡುವ ಕಾಲಕ್ಕ ಮೀಸಿ ಬೋಳುಸುದ ಅತಿ ಹಿಂದು ಧರ್ಮದೊಳಗ । ಜೀವಯಿರತ ತಾಯಿತಂದಿ ಸತ್ತ ಚಿನ್ನ ತೋರಿಸುವಂಥ ಹುಚ್ಚು ಮಂದಿ ಹೆಚ್ಚಾದರವ್ವಾ ಧರಣಿ-ಮ್ಯಾಲ ॥

ಚೋಟ ಉದ್ದ ಕೂದಲಾ ಬಿಟ್ಟ ನೇಟ ಆಗಿ ಬೈತಲಿ ತಗದ ಮೀಸಿ ಬೋಳಿಸಿ ಬರತಾರ ಕೆಂಪ ಮಾರೆವರಂಗ ಪಾವಡರ ಹಚ್ಚಿ ಅವರಂಗ ಡೌಲ ಕಾಣಬೇಕಂದರ ಮಾರಿ ಕಾಣತತಿ ಕತ್ತಿ ಬಾಲದಂಗ ॥

ತಮ್ಮ ಧರ್ಮ ಬಿಟಕೊಟ್ಟ ಪರಧರ್ಮಕ ಮನಸಕೊಟ್ಟ ಸಿಕ್ಕಬಿಟ್ರಿ ಇಂಗ್ಲೀಷರ ಕೈಯೊಳಗ। ವ್ಯಸನಗಳ ಕಲಿಸಿ ಹಣಾ ಹಸನ ಮಾಡಿ ಓದ್ಯವ್ವಾ ಪಟ್ಟನಾಡುದಾತ ಯಿವರು ಸತ್ತ್ಯಾಗ ॥ ಚಾಲ ॥

ದುರ್ವ್ಯಸನ ಬಿಟ್ಟಬಿಡರಂತ। ಖಾದಿತೊಡರಂತ। ತಿಳಿಸಿ ಹೇಳಿರವ್ವಾ ನಿಮ್ಮ ಮನಿಯ್ಯಾಗ। ಕೇಳದಿದ್ರ ಕಿವಿ ಗಡ್ಡಿ ಹಿಂಡಿ ಹೇಳಿರಿ ರಾತರ‍್ಯಾಗ॥

ಛತ್ರಪತಿ ಶಿವಾಜಿಯ ತಾಯಿ। ಶೂರ ಜೀಜಾಬಾಯಿ। ಭೋದಾ ಮಾಡಿದಳ ತನ್ನ ಕುವರಗ।ಮಗನಿಂದ ಮೊಗಲರನ್ನ ಹೊಡಿಸಿ ತನ್ನ ರಾಜ್ಯ ತಕ್ಕೊಂಡಾಳ ಕೈಯಾಗ॥

ಕಿತ್ತೂರ ಚನ್ನಮ್ಮನ ಶೌರ್ಯ। ಥ್ಯಾಕ್ರೆನ್ ಹೊಡದ ಧೈರ್ಯ। ಉಪದೇಶ ಮಾಡಿದಳು ಸಂಗೊಳ್ಳಿ ರಾಯಣ್ಣಗ। ಪ್ರಾಣ ಹೋದರ ಸುದ್ದಾ ನಮ್ಮ ರಾಜ್ಯ ಕೊಡಬ್ಯಾಡ ಬ್ರಿಟಿಷರ ಕೈಯಾಗ ॥ ಏರ ॥

ವೀರ ಚನ್ನಮ್ಮ ಸಂಗ ನೀವು ಘೋರಬಿಟ್ಟ ರಾಯಣ್ಣನಂಗ ಮಾಡಬೇಕ್ರಿ ತಾಯಿ ನಿಮ್ಮ ರಾಯರನ್ನಾ ॥ ೧ ॥

ನಾವು ಹೇಳುವ ಮಾತ ನಮ್ಮ ಗಂಡಸರು ಕೇಳುವದಿಲ್ಲಂತ ಚಿಂತಿ ಮಾಡಬ್ಯಾಡ್ರಿ ತಾಯಿ ನಿಮ್ಮ ಮನದಾಗ। ನೀವು ಹೇಳಿದ ಮಾತ ಅವರು ಮೀರಿ ಹೋಗದಂಗ ಮಾಡುವ ಮಹಾಶಕ್ತಿ ಮಂತ್ರ ಐತಿ ನಿಮ್ಮ ಕೈಯಾಗ ॥

ಮಹಾಶಕ್ತಿ ಮಂತ್ರ ಅಂದರ ಮೂರು ಸಂಜಿಲೆ ಬಾಗಲು ಹಾಕಿ ಮಲಗಿ ಕೊಂಡ ಬಿಡಬೇಕವ್ವಾ ದೇವರ ಮನಿಯಾಗ। ನಿಮ್ಮ ಮಾತ ಕೇಳಿದವ ರನ ನಿಮ್ಮ ಮನಿಯಾಗ ಬರಗೊಡಬ್ಯಾಡ್ರಿ ಮಲಗಿಕೊಳ್ಳಾಕ ಹೋಗ ಅನ್ರಿ ಧರ್ಮ ಚ್ಯಾವಡ್ಯಾಗ ॥

ಧರ್ಮ ಚಾವಡಿಯೊಳಗ ದಣಿದ ಬಂದ ಬಾವಾಸಂಗ ಒಚ್ಚಿಸ ಮಲಗಿ ಕೊಂಡ ಬರಲಿ ರಾತ್ರಿ ಕಾಲದೊಳಗ । ಪರದೇಶಿ ಕೂಲಿಸಂಗ ಮಲಗಿ ಪರಿಪರಿಯಿಂದ ವಿಚಾರ ಮಾಡಿ ಬುದ್ಧಿ ಕಲಿತ ಬರತಾಸವ್ವಾ ಒಂದು ದಿನದೊಳಗ ॥

ಬುದ್ಧಿ ಕಲಿತ ಬಂದ ಗಂಡನ ಸಿದ್ಧಮಾಡಿ ಸ್ವರಾಜ್ಯಕ್ಕ ಶುದ್ಧ ಖಾದಿ ತೊಡಸರವನ ಮೈಯಾಗ । ಹಾಲುಬಾನಾ ಊಟ ಮಾಡಿಸಿ ಕಾಲಬಿದ್ದ ದಿನಂಪ್ರತಿ ಸೇವಾಮಾಡಿ ಕೀರ್ತಿ ಹೊಂದರಿ ಭರತಖಂಡದಾಗ ॥

ಹುಚ್ಚ ಭರಮರಡ್ಡಿಗೆ ಮಲ್ಲಮ್ಮ ಸ್ವಚ್ಛಜ್ಞಾನ ಕೊಡರೆಂತ ನಿತ್ಯ ಪೂಜಿ ಮಾಡತಿದ್ದಳು ಸಂಬಶಿವಗ । ಕಂತೌ ಕೌಪೀನಾದಿಗಳಿಗೆ ಜಂತ್ರಾಯಿಟ್ಟ ದಿನಂಪ್ರತಿ ನೂಲ ನೂತ ಕೊಡತದ್ದಲವ್ವಾ ಪರಮೇಶ್ವರಗ ॥

ಮಲ್ಲಮ್ಮನ ನೂಲಿಗಾಗಿ ಮಹದೇವ ಬೆರತ ಬಂದ ಲೀಲಾ ಮಾಡಿ ತೋರಿಸಿದಾನ ಕಲಿಯುಗದೊಳಗ । ಭಂಗಾರ ಬೆಳ್ಳಿ ಕೊಡುದಲ್ಲದೆ ಭರಮರಡ್ಡಿಗೆ ಜ್ಞಾನಕೊಟ್ಟ ಹೇಮರಡ್ಡಿಗೆ ಮುಕ್ತಿಕೊಟ್ಟ ಅಂತ್ಯಕಾಲ ದೊಳಗ ॥ ಚಾಲ ॥

ಪಾಪ ಹೆಚ್ಚಾದಾಗ ಪರಮಾತ್ಮ ಬರತಾನಂತ ಅತಿಸಿದ್ಧಾಂತ । ನೋಡ್ರಿ ಗೀತಾದೊಳಗ । ದುಷ್ಟ ಇಂಗ್ಲೀಷರನ ಹೊಡಿಲಾಕ ಹುಟ್ಟಿ ಬಂದಾನ ಹಿಂದುಸ್ತಾನದೊಳಗ ॥

ಸತ್ಯಶಾಂತಿ ತತ್ವ ಹಿಡಿರಂತ । ಹೇಳತಾನ ಸ್ವಂತ। ಗಾಂಧಿ ಮಹಾತ್ಮನಂತ ನಾಮ ಜಗದೊಳಗ । ಚರಕಾ ನಿತ್ಯ ನೂಲುವವರಿಗೆ ಪ್ರಸನ್ನಾಗತಾನ ಒಂದುಘಳಿಗ್ಯಾಗ ॥ ಖಾದಿತೊಟ್ಟ ನೂಲ ತಗಿಬೇಕ । ಸತ್ಯ ನುಡಿಬೇಕ ನಿತ್ಯಜನದಾಗ। ಶಾಂತಿಗೆ ಮೆಚ್ಚಿ ಸ್ವರಾಜ್ಯ ತಂದ ಕೊಡತಾನ ಕ್ಷಣದಾಗ ॥ ಏರ ॥

ಪತಿವ್ರತಾ ಧರ್ಮದಿಂದ ಪ್ರತಿನಿತ್ಯ ಸೂಲ ಸೂಲ ಸೂತ ಕ್ಷಿತಿಯೊಳು
ಪಡಿರೆಂದು ಕೀರ್ತಿಯನಾ ಭೀಮಕೀರ್ತಿಯಳಾ || ೨ ||

ಲೇಖಕರು : **ಹುಲಕುಂದ ಭೀಮಕವಿ**

('ರಾಷ್ಟ್ರೀಯ ಗೀಗೀ ಪದಗಳು ', ಬಾಗಲಕೋಟೆ)

೫೦. ಅಸಹಕಾರ ಲಾವಣಿ

ಕರವ ಮುಗಿದು ಪೇಳುವೆನು, ಭರತ ವಾಸಿಗಳೇ : । ನಿಮ್ಮ ಮರುಳತನ ಬಿಟ್ಟು ಮುಂದೆ ನಡಿರಿನ್ನು ॥ ಕೇಳಿ ಅರಿಯಿರೋ ನಮ್ಮ ಹಿರಿಯರ । ಖ್ಯಾತಿಯನು । ತುಸು । ಹೊರಳಿ ನೋಡಿರೀಗ । ಒಂದು ಮಾತೆಯನು ॥ ಪರತಂತ್ರವೆಂಬಾ ದೊಡ್ಡ ಶರಧಿಯಂ ದಾಟಲು । ಶ್ರೇಷ್ಠ । ತರದ ಹಂಚಿಕಿಯು ಪೇಳುವೆ ನಾನು । ಮನದೊಳಿರುವ ಚಿಂತೆಗಳನಳಿಯಿರಿನ್ನೂ ॥

ನಿದ್ದೆಯನ್ನು ಬಿಟ್ಟು ನೀವು ಎದ್ದು ಕಣ್ಣು ತೆರೆದು ನೋಡ್ರಿ । ಶುದ್ಧವಾದ ನಮ್ಮ ಇತಿಹಾಸವನ್ನು । ಇಲ್ಲಿ । ಇದ್ದಂಥ ಪೂರ್ವದ ವೈಭವವನ್ನು । ಪ್ರಸಿದ್ಧರಾದ ರಾಜರ ಕಥೆಗಳನ್ನು ಬುದ್ಧಿವಂತರಿದ್ದರೆ ನೀವೀಗಿದ್ದ ಸ್ಥಿತಿಯನ್ನೆಲ್ಲ ನಿಮ್ಮ ಬುದ್ಧಿಯಿಂದ ತೂಕಮಾಡಿ ನೋಡಿರದನು । ಮಹಾ । ಮುಗ್ಧರಂತೆ ಇರುವದು ನಿಮಗೆ ಸರಿಯೇನು ?॥ ೧ ॥

ಧೀರ ರಾಜಪೂತ ರಣಧೀರ ಮಹಾರಾಷ್ಟ್ರ ಮಹಾಶೂರ ಕನ್ನಡಿಗರಾಳಿದರಿಲ್ಲಿ ! ವೈರಿ ಚೂರು ಚೂರು ಮಾಡಿ ಬಿಟ್ರೊ ಯುದ್ಧದಲ್ಲಿ! । ಈ ಭಾರತಿಗೆ ಕೊಟ್ರೊ ತಮ್ಮ ಆತ್ಮಬಲಿ । ಸಾರಿ ಹೇಳುವೆನು ನಿಮ್ಮ ವೈರಿಯಂತೆ ಯಿರುವ ಬಡಿ । ವಾರ ಬಿಟ್ಟು ಶೂರರಾಗಿರಿ ಭೂಮಿಯಲ್ಲಿ । ಹೊಂದಿರಿ ಪಾರತಂತ್ರ್ಯದಿಂದ ಮುಕ್ತಿ ತೀವ್ರದಲ್ಲಿ ॥ ೨ ॥

ಕ್ರೂರ ಅಧಿಕಾರಿಗಳ್ಗೆ ಯಾರು ಸಹಾಯ ಮಾಡಬ್ಯಾಡ್ರೋ ತೀರಿಸುವುದಿಲ್ಲ ನಿಮ್ಮ ಉಪಕಾರ ॥ ಬರೆ । ಮಾರಿ ಮುಂದೆ ಸವಿ ಮಾತಾಡುವರು । ಬಹಳ ದೂರವ್ಯಾಕೆಯಿಲ್ಲವೇನ್ರಿ । ನಿಮಗೆ ಖಬರಾ । ಕ್ರೂರತನದಿಂದ ಪೇಶಾವರದಲ್ಲಿ ಮಾಡಿದ ಸಂಹಾರ । ಆ ಮೇಲೆ ಸೋಲಾಪುರದಲ್ಲಾದ ಸಂಹಾರ । ಮತ್ತು ಎಲ್ಲೆಲ್ಲಿಯೂ ಲಾಠಿಪ್ರಹಾರ ॥ ಮಾಡಿದಾರು ಕುರಿಯಂತೆ ಕಡಿ ಕಡಿದು ಶಿರಾ ॥ ೩ ॥

ಭರತ ಬಾಂಧವರೆ! ನೀವು ಮರುಳರಂತೆ ನಂಬಬ್ಯಾಡ್ರೋ । ದುರುಳ ರಾದ ಈ ಆಳರಸರನು ॥ ಈ ಸರಕಾರದ ಚಾಕ್ರಿ ಬಿಡ್ರೊ ನೀವಿನ್ನೂ । ಮತ್ತೆ ಧರಿಸಬ್ಯಾಡ್ರಿ ಪರದೇಶಿ ಬಟ್ಟೆಯನ್ನು ॥ ೪ ॥

ಬಟ್ಟೆಗಳನ್ನು ನೇಯುವುದನ್ನು ಬಿಟ್ಟ ಕಾರಣದಿಂದ ನಿಮಗೆ । ಎಷ್ಟು ಪರಿ ಆಗೋದು ಲುಕ್ಸಾನು ತಿಳಿಯದೆ ಸುಟ್ಟು ಕೊಳ್ಳುವಿರಿ ನಿಮ್ಮ ದ್ರುವ್ಯವನ್ನು ॥ ಕೈ ಬಿಟ್ಟು ಹೋಗುವಳು ಧನಲಕ್ಷ್ಮಿ ನಿಮ್ಮನ್ನು ॥ ಕೊಟ್ಟು ಕಳುಹಿಸುವಿರೋ । ಒಂದೇ ಬಟ್ಟೆಗಾಗಿ ಇಂಗ್ಲೆಂಡಕ್ಕೆ. ಅರವತ್ತೆಂಟು ಕೋಟಿರೂಪಾಯಿಗಳನ್ನು ನಿಮ್ಮನು । ಕುಟ್ಟಿ ಕೊಲ್ಲಲಿಕ್ಕೆ, ಮಾಡುವ ಶಸ್ತ್ರಗಳನು ॥ ೫ ॥

ನಿಮ್ಮ ಅನ್ನವನ್ನು ತಿಂದು ನಿಮ್ಮ ಮೇಲೆ । ತಿರುಗಿಬಿದ್ದು ಗುಮ್ಮಿ ಕೊಲ್ಲುವರು ಅಧಿಕಾರಿಗಳು ॥ ಎಲ್ಲ ತಮ್ಮದನ್ನೆ ಮಾಡಿಕೊಳ್ಳುವರಿನ್ನು ॥ ಗೊಡ್ಡು ಎಮ್ಮೆಗಳ ಪರಿ ಬಿದ್ದಿಹಿರಿ ಇನ್ನೂ । ಸುಮ್ಮನೆ ಕೂಡದೆ ನೀವು ಒಮ್ಮನದಿಂದಲಿ ನಡೆದು ಗಮ್ಮನೆ ಘಳಿಸಿರಿ ಸ್ವರಾಜ್ಯವನ್ನು । ಮುಂಚೆ ನಮ್ಮ ದೇಶದಿ ಹೆಚ್ಚಿಸಿರಿ ವಿದ್ಯೆಯನು ॥ ೬ ॥

ಮತ್ತೆ ಹೇಳುವೆನು ನಿಮಗೆ ಮುತ್ತಿನಂಥ ಮಾತುಗಳನು ಚಿತ್ತ ಗೊಟ್ಟು ಕೇಳಿರಿ ನೀವಿದನು । ಈ ಹೊತ್ತಿನಿಂದ ಸಾರಾಯಿ ಕುಡಿಯು ವದನ್ನು । ಬಿಟ್ಟು ಉತ್ತಮದ ಮಾರ್ಗ ಹಿಡಿಯಿರಿನ್ನು । ಸತ್ಯವಾಗಿ ನಿಮ್ಮ ಸತ್ವ ಹತ್ಯ ಮಾಡಿ ಬಿಡುವುದು । ಎಷ್ಟೆಂದು ಹೇಳಲಿಮದ್ಯದ ಮಹಿಮಾ । ನಿಮಗೆ ಗೊತ್ತು ಇದ್ದು ಮಾಡುವಂಥ ದುಷ್ಕರ್ಮಾ ॥ ೭ ॥

॥ ಚಾಲ್ ॥ ಸಾರಾಯಿ ವ್ಯಸನವೆಂಬೊ ಉರಿಯ ಒಳಗೆ ಬಿದ್ದು ಮರುಗಿ ಸಾಯ ಬ್ಯಾಡಿರಿ । ನೀತಿ ಶಾಸ್ತ್ರವನ್ನು ನೋಡಿರಿ । ಸಾರಾಯಿ ಬೆನ್ನು ಹತ್ತಿ ಸಿರಿಯನು ಕಳಕೊಂಡು ತಿರುಕರಾಗ ಬ್ಯಾಡಿರಿ । ದುರ್ವ್ಯಸ ನಗಳನು ಮಾಡಿದಿರಿ । ಸಾರಾಯಿ ಮುಟ್ಟ ಬೇಡಿರಿ । ಇದರಂತೆ ಶಪಥ ಮಾಡಿರಿ । ನಾ ಹೇಳತೀನಿ ಪರಿ ಪರಿ । ಇದರಂತೆ ನೀವು ನಡಿಯಿರಿ ।। ೮ ।।

ಘೋರ ವಿಷಸಂಘ ಸಾರಾಯಿಯನ್ನು ಮಾರಿ ಒಯ್ಯುವರು। ವರುಷಾ ಆರುಕೋಟಿ ಮೇಲ್ ರೂಪಾಯಿಗಳನು ।। ಹಡಗ ಹೇರಿ ಇಂಗ್ಲಂಡಕ್ಕೆ ಒಯ್ಯುವರದನು । ನಂಬಬಾರದೋ ಈ ಕ್ರೂರ ಅಧಿಕಾರಿ ಗಳನು ।। ೯ ।।

ಮತ್ತೆ ಹೇಳುವೆನು ಕೇಳ್ರೊ । ಮಂದಮತಿ ಹಿಂದುಗಳೇ । ಸಂದೇಹ ನ ಮಾಡಬೇಡ್ರಿ ಇನ್ನುಮ್ಯಾಗ । ನಿಮ್ಮ ಕಂದರನ್ನ ಶಾಲೆ ಬಿಡಿಸಿರಿನ್ನು ಮ್ಯಾಗ ।। ನಿಮ್ಮ ಬಂಧುಗಳಿಗೆ । ತಿಳಿಸಿ ಹೇಳಿರಿ ಹೀಂಗೆ ।। ಒಂದಾಗಿ ನೀವೆಲ್ಲರೂ ಬಂದು ಮಾಡಿ ಈ ಶಾಲೆಗಳನು । ಅಂದದಿ ಮಾಡಿರಿ ರಾಷ್ಟ್ರೀಯ ಶಾಲೆಯನ್ನು । ಅಲ್ಲಿ । ಹೊಂದಿರಿ ಸ್ವರಾಜ್ಯದ ವಿದ್ಯೆಯನು ।। ೧೦ ।।

ಸರಕಾರಿ ಕೋರ್ಟುಗಳೆಂಬೊ ಹಿರಿಯ ದೈವಗಳನು । ನೀವು ತ್ವರಿತದಿಂದ ಓಡಿಸಿ ಬಿಡಿರಿಂದೆ । ಅಪಹರಿಸುವುದು ನಿಮ್ಮ ಸಂಪತ್ತನ್ನು ಬರಿದೆ । ಬಹುಪರಿಯಿಂದಲಿ ಕಷ್ಟವಾದುದರಿಂದಲೇ ಸಿರಿಯನ್ನೆಲ್ಲ ದೈದು ನಿಮ್ಮ ಕರದೊಳು । ಮೂರು ತೂತಿನ ಪರಡಿ ಕೊಡುವರು । ನಿದ್ದೆಯ ಭರದಿಂದ ಎಚ್ಚರಾಗಿರೋ ಇಂದೆ ।। ೧೧ ।।

ಮರುಳು ಮಾಡಿ ದ್ರವ್ಯವನ್ನು ಹರಣ ಮಾಡುವಂಥ । ಈ ತರುಣ ವಕೀಲರುದೇಶ ಕೆಡಿಸುವರು । ಅವರು ಸರಕಾರದ ಮಧ್ಯಸ್ಥಿಕೆ ಮಾಡುವರು । ಅವರನ್ನೇ ನಂಬಿ ಕೆಡುತಿರೋ ನೀವು ಖೋಡಿಗಳು । ಮರುಳುಜನರೆ ಮರೆಯಬ್ಯಾಡ್ರಿ ಹಿರಿಯ ಉಣ್ಣೆ ಹತ್ತಿದ ದನಕರುಗಳಂತೆ ಆಗುವುದು ನಿಮ್ಮ ಬಾಳು । ಈಗ ಅರಿತುಕೊಳ್ಳಿರಿ ಮುಂದೆ ಒದಗುವ ಗೋಳು ।। ೧೨ ।।

ತರುಣ ಹಿಂದೀ ಜನರೆ : ನೀವೂ ಇರುವ ಪಾಠಶಾಲೆ ಕಾಲೆಜಕ್ಕೆ ಶರಣು ಹೊಡಿದು ಬಿಟ್ಟು ಬಿಡ್ರಿ ಅವುಗಳನು । ಈಗ ಸ್ಮರಿಸಿರಿ ಹಿಂದಿನ ವೀರ ತರುಣರನು । ಸವಿಸಿರಿ ಭರತ ಭೂಮಿಯ ಸೇವೆಯೊಳು ದೇಹವನು ।। ೧೩ ।।

ಇಷ್ಟರಿಂದ ತೀರಲಿಲ್ಲ। ಇನ್ನೆಷ್ಟು ಹೇಳುವೆನು ಕೇಳ್ರಿ। ಸಿಟ್ಟು ಮಾತ್ರ ಮಾಡಬ್ಯಾಡ್ರಿ ನನ್ನ ಮ್ಯಾಗೆ। ನಾನು ಹುಟ್ಟಿಸಿ ಹೇಳುವುದಿಲ್ಲ। ನಿಮ್ಮ ಮುಂದೀಗ। ನಿಮ್ಮದೆಷ್ಟು ದುಡ್ಡು ಹೋಗುವುದು ಪರದೇಶಗಳಿಗೆ। ಕಷ್ಟದಿಂದ ಘಳಿಸಿದ್ದನ್ನು। ಕೊಟ್ಟು ನೀವು ಬರಿಗೈಯಾಗೆ ಬಿಟ್ಟಿಯೊಳ್ಗಳಂತೆ ಆಗುವಿರಾಗೆ। ಆದರಿಂದ ಕಟ್ಟಿ ಗಂಟು ಮೊದಲೆ ಹೇಳುವೆ ನಿಮಗೆ ॥ ೧೪ ॥

ಚೀಟು ಬೂಟು ಮಂಜರಪಾಟ ಥಾಟಿನಿಂದ ಮೆರೆಯುವಂಥ। ಕೋಟಿಗಟ್ಲೆ ಪರದೇಶಿ ವಸ್ತ್ರಾಲುಗಳು। ಕಣ್ಣಿಗೆ ಮಾಟತೋರುವಂಥ ಗಾಜಿಸೊಡವೆಗಳು। ಸಿಗರೇಟ್ ವೀಸ್ಕಿರೋಟ ಬಿಸ್ಕೀಟುಗಳ। ಸೇವೆಯಲ್ಲಿ ತುಂಬಿ ನಿಮಗೆ ಮಾಟಮಾಡಿ ಸಂಪತ್ತನ್ನು। ಈಟೂವುಳಿಯದಂತೆ ಎಳೆದೊಯ್ಯುವರು। ಓತಿಕಾಟದಂತೆ ನಿಮ್ಮನ್ನು ಬಾಯಿ ಬಡಿಸುವರು ॥ ೧೫ ॥

ಮುಂದಿನದ್ದೆಲ್ಲ ಅರಿತು ಮಹಾತ್ಮಾ ಗಾಂಧಿಯವರಿಂತು ಹೇಳುವರು। ಹಿಂದೆ ಬಿದ್ದ ನಿಮ್ಮ ಶಿಲ್ಪ ವಿದ್ಯೆಯನು। ಮುಂದೆ ತಂದು ಬೆಳೆಸಿರಿ ನಿಮ್ಮ ಉದ್ಯೋಗವನು। ನೀವು ಮಂದಿ ಕೈಯ ನೋಡುವುದು ಸರಿಯೇನು। ಎಂದು ಭೋಧಿಸುತ ನಮ್ಮ ಮಂದ ಬುದ್ಧಿಯನ್ನು ಓಡಿಸುತಿಹರು। ಅವರು ಅಂದಂತೆ ವರ್ತಿಸ ಬೇಕು ನೀವೆಲ್ಲರೂ ॥ ೧೬ ॥

ಹಿಂದುಗಳೆಲ್ಲರು ಬಂಧುಭಾವದಿಂದ ಒಂದುಗೂಡಿ ನಡಿಯಿರಿ। ಮತಭೇಧವನ್ನು ಮರೆಯಿರಿ। ನೌಕರಿಯೆಂಬುವ ಬೆಂಕಿಯೊಳಗೆ ಬಿದ್ದು ಯಾಕೆ ಸಾಯುತಿರುವಿರಿ ? ಅದನ್ನೆಲ್ಲಾ ಬಿಟ್ಟು ಬನ್ನಿರಿ। ನಿರಭಿಮಾನಿಯಾಗಿರುವದಕ್ಕಿಂತಲು ಮರಣ ಲೇಸು ಅನ್ನಿರಿ। ಸ್ವರಾಜ್ಯ ಮಂತ್ರ

ಜಪಿಸಿರಿ | ಪರತಂತ್ರದಿಂದ ದಾಟಿರಿ | ಸ್ವಾತಂತ್ರ್ಯದಿಂದ ಬಾಳಿರಿ | ಮನ ಮುಟ್ಟಿ ಯತ್ನಮಾಡಿರಿ | ಜಯ ಹಿಂದುಮಾತೆ ಎನ್ನಿರಿ ॥ ೧೭ ॥

ಸೃಷ್ಟಿಯಲ್ಲಿ ಶ್ರೇಷ್ಠವಾದ ಕೃಷ್ಣದಾಸನೆಂಬೊ ಕವಿ ದಿಟ ತನದಿ ತಾನಿಷ್ಟು ಪೇಳಿದನು | ನೀವಿಟ್ಟರೆ ಇದರಂತೆ ವ್ಯವಹಾರವನು ಗಿರಿಪುರ ಕೃಷ್ಣದೇವ ನಿಮ್ಮ ಕಷ್ಟ ಬಿಡಿಸುವನು ॥ ೧೮ ॥

ಲೇಖಕರು : **ಕೃಷ್ಣದಾಸ ?**

(ಮುದ್ರಿತ)

೫೧. ಕಹಳೆ ಮೊಳಗುತಿದೆ.

ದಿಗಂತದಾಚೆಗೆ ಸದಿವಸದಾಕಡೆ | ಆ ಬೆಟ್ಟದ ಮರೆಗಿದೆ–ತಾಯ್ನಾಡು ॥
ಆವಳ ಪುಣ್ಯ ಪದ ರಜದಿ ಜನಿಸಿದೆವು । ಸೇರುವೆವಾ ಸತ್ಯದ ನೆಲೆ ವೀಡು ॥

ಕೇಳಿರಿ, ಕೇಳಿರಿ. ಕಹಳೆ ಮೊಳಗುತಿದೆ । ಭಾರತ ಬಾರೆಂದೆಮ್ಮ ಕರಯು, ತಿದೆ| ಕೋಟಿ ಡಿಲ್ಲಿಗಳು, ಕೋಟಿ ಬಾಂಧವರು । ಸ್ವಾಗತ ನಿಮಗೆಂದೆಮ್ಮ ಕರೆಯುವರು ||

"ಡಿಲ್ಲಿಯ ಮಾರ್ಗವು ಸ್ವತಂತ್ರ ಮಾರ್ಗವು । ಮರಣಗೊಂಡರೂ ಸಾವುಂಟೆ । ಸ್ವಾತಂತ್ರ ಮಾರ್ಗದ ಪಾವನಧೂಳಿಯ । ಚುಂಬಿಸಿ ಸತ್ತರೆ ನೋವುಂಟೆ?"

"ತೊಲಗಿ ಭಾರತವ ಬಿಟ್ಟು ಬ್ರಿಟಿಷರು | ಒಳಗೆ ವೀರರದೊ ಭೇರಿ ಹೊಡೆದರು । ಹೊರಗೆ ಹೀಗೆ ನಾವ್ ಕಾದುಪಡೆವೆವು । ರಕ್ತದುರ್ಗವನು, ಡಿಲ್ಲಿ ಹಿಡಿವೆವು ॥

"ರಕ್ತ ಬೇಕು, ಬಿಸಿರಕ್ತ ಬೇಕೆಮಗೆ | ರಕ್ತ ಕೊಡುವ ಯುವಶಕ್ತಿ ಬೇಕೆಮಗೆ । ರಕ್ತ ರಾಷ್ಟ್ರ ಸ್ವಾತಂತ್ರ್ಯ ಸಾಧನೆಗೆ । ರಕ್ತ ರಕ್ತ ಬೆನ್ನಟ್ಟಿರಿದಗೆ ಹಗೆ ॥

"ನಮ್ಮಯ ನೇತಾ ಭಾಗ್ಯವಿಧಾತಾ । ಜಗ್ಗದೆ ಕುಗ್ಗದೆ ನಡೆಯಿರಿ ನಿರುತ | ಬಾಂಧವರಿರಲಿ, ಸೈಂಧವರಿರಲಿ । ಸ್ವಾತಂತ್ರ್ಯದ ಹಗೆಯನ್ನು ಕೊಡಿಬಲಿ ||

"ಮಾತೃ ಭೂಮಿ ಸ್ವಾತಂತ್ರ್ಯದಿಮೆರೆದಿರೆ, | ಹೆಣ್ಣಿಗು ಗಂಡಿಗು ಸಮ ಪಾಲು | ಮಾತೃ ಭೂಮಿ ಪರತಂತ್ರದಿ ಕೊಳೆತರೆ| ಹೆಣ್ಣಿಗು ಗಂಡಿಗು ಸಮ ಗೋಳು ||

ಮುಸಲ್ಮಾನ ಸಿಖ್ ಕ್ರಿಶ್ಚನ್ ಹಿಂದು ಬ್ರಾಹ್ಮಣ ಶೂದ್ರರು ಹರಿಜನರೊಂದು | ಒಂದೆರಕ್ತ, ಸ್ವಾತಂತ್ರ್ಯದ ಬಿಂದು ಮಾಡುವೆ ಅಥವಾ ಮಡಿಯುವೆವಿಂದು ॥

ಧರ್ಮವೊಂದೆ ದಾಸ್ಯದ ನೊಗ ಮುರಿವುದೆ । ಮತವೊಂದೇ ಕ್ರಾಂತಿಯು ಕೆರಳಿಸುವುದೆ । ಪಥವೊಂದೇ ತೊಲಗಿರಿ ಸಾಕೆನುವುದೆ । ಕುಲವೊಂದೇ ಕೃತಿಮಾಡಿ ಮಡಿಯುವುದೆ ॥

"ನಿರ್ಬಂಧದ ಶತ ಶೃಂಖಲೆ ಕಡಿಯಿರಿ । ನಿರ್ಬಂಧಿಸುವರ ನೆಚ್ಚಿ ಕೆಡಹಿರಿ । ಕ್ರಾಂತಿಯ ಜಂಝಾವಾತ ವೆಬ್ಬಿಸಿರಿ । ಸ್ವಾತಂತ್ರ್ಯಕೆ ಬಲಿದಾನ ವೊಪ್ಪಿಸಿರಿ ।"

ಸ್ವಾತಂತ್ರ್ಯವೆ ಸಿರಿ, ಸ್ವಾತಂತ್ರ್ಯವೆ ಹರಿ । ಸ್ವಾತಂತ್ರ್ಯವು ಸಿಗದುಂಟೆ ಶಾಂತಿಯು? ಸ್ವಾತಂತ್ರ್ಯವೆ ವರ, ಸ್ವಾತಂತ್ರ್ಯವೆ ಹರ । ಸ್ವಾತಂತ್ರ್ಯವೆ ವೀರಗೆ ವಿಶ್ರಾಂತಿಯು"

ಇಂತು ವೀರರನು ಕೂಗಿ ಕರೆದನದೊ । ಸ್ವಾತಂತ್ರ್ಯಕೆ ಬಲಿದಾನ ಕೊಡಿ, । ಕಹಳೆ ಮೊಳಗುತಿದೆ, ಸೈನ್ಯಸಾಗುತಿದೆ । ನೇತಾಜಿಗೆ ನೀವ್ ಕೈನೀಡಿ.

ಲೇಖಕರು **ಕಯ್ಯಾರ ಕಿಞ್ಞಣ್ಣ ರೈ**

(ಲೇಖಕರೇ ನೀಡಿದ ಹಸ್ತಪ್ರತಿ)

ಸುಭಾಷರ 'ದಿಲ್ಲಿ ಚಲೋ' ಘೋಷಣೆಯ ಹಿನ್ನೆಲೆ ಇಲ್ಲಿ ಒಡಮೂಡಿದೆ.

೫೨. ನಾವು ಮತ್ತು ನಮ್ಮವರ ಹಾಡು

ದೇಶಸೇವೆ ಮಾಡ್ವರಾರ್ । ಈಶಸೇವೆ ಗೈಯ್ವರಾರ್ । ದೇಶಕಾಗಿ ಸಾಯ್ವರಾರ್ ॥ ನಾವಲ್ಲವೆ ನಮ್ಮ ಜನರಲ್ಲವೆ ॥ ಆಶೆಯನ್ನು ತೊರೆದ ವರಾರ್ ದೇಶಕ್ಕಾಗಿ ದುಡಿದವರಾರ್ । ಆ ಸ್ವರಾಜ್ಯ ಪಡೆದವರಾರ್ । ನಾವಲ್ಲವೆ ॥ ಪಲ್ಲವಿ ॥

ಹಿಂದು ಮುಸಲಿಂ ಎಂಬುವರಾರ್ । ಬಂಧು ಭಾವ ಬೆಳೆಸಿದವರಾರ್ । ಒಂದೆ ತಾಯಿ ಮಕ್ಕಳಿಲ್ಲ ॥ ನಾವಲ್ಲವೆ ನಮ್ಮ ಜನರಲ್ಲವೆ ॥ ಪಂಡಿತ್ ನೆಹ್ರೂ ಎಂಬುವರಾರ್ । ಖಂಡಿತವಾದಿ ಜಿನ್ನಾರಾರ್ । ಹಿಂದೂಸ್ಥಾನ ದವರು ಯಾರು । ನಾವಲ್ಲವೆ ॥ ೧ ॥

ಜೋಕಿನಿಂದ ಹೇಳ್ವರಾರ್ । ಪಾಕಿಸ್ಥಾನ ಕೇಳ್ವರಾರ್ । ಸಾಕುಮಾಡ್ರಿ ಎಂಬುವರಾರ್ ॥ ನಾವಲ್ಲವೆ ನಮ್ಮ ಜನರಲ್ಲವೆ ॥ ಜೋಕೆ ಜೋಕೆ ಎನ್ನ್ವರಾರ್ । ಬೇಕೆ ಬೇಕು ಎನ್ನುವರಾರ್ । ಪಾಕಿಸ್ಥಾನ ಕೋರುವವರಾರ್ । ನಾದಲ್ಲವೆ ॥ ೨ ॥

ಯೋಗಿ ರೈತರೆಂಬುವರಾರ್ । ತ್ಯಾಗಮೂರ್ತಿ ಎಂಬುವರ್ಯಾರ್ । ಬಾಗಿ ತಲೆಯು ನಡೆವರಾರ್ ॥ ನಾವಲ್ಲವೆ ನಮ್ಮ ಜನರಲ್ಲವೆ ॥ ಆಗು ಹೋಗು ಬೇಡ್ವರಾರ್ । ಭೋಗ ದಿನವು ಪಡುವವರಾರ್ । ರಾಗದಿಂದ ಮೆರೆ ವರಾರ್ । ನಾವಲ್ಲವೆ ॥ ೩ ॥

ಕಷ್ಟಪಟ್ಟು ಬೆಳೆವರಾರ್ । ಹೊಟ್ಟೆಗಿಲ್ದೆ ಕೊರಗುವರಾರ್ । ಬಟ್ಟೆ ಇಲ್ದೆ ನಡುಗುವರಾರ್ ॥ ನಾವಲ್ಲವೆ ನಮ್ಮ ಜನರಲ್ಲವೆ ॥ ಶ್ರೇಷ್ಠ ರೈತರೆಂಬುವ ರಾರ್ । ನಿಷ್ಠೆಯಿಂದ ದುಡಿವರಾರ್ । ರಾಗದಿಂದ ಮೆರೆವರಾರ್ । ನಾವಲ್ಲವೆ ॥ ೪ ॥

ಸಕ್ಕರೆಯ ತಯಾರ್ಮಾಡುವರಾರ್ । ಸಕ್ಕರೆ ಕಬ್ಬ ಬೆಳೆವರಾರ್ । ಸಕ್ಕರೆಗೆ ಹಲ್ಲ ಕಿರಿವರಾರ್ । ನಾವಲ್ಲವೆ ನಮ್ಮ ಜನರಲ್ಲವೆ ॥ ಅಕ್ಕಿ ರಾಗಿ ಬೆಳೆವ ರಾರ್ । ಹೊಕ್ಕು ಡಿಪೋಲ್ ಕೊಳ್ಳುವರಾರ್ । ಮೆಕ್ಕೆ ಜೋಳ ತಿನ್ವ ರಾರ್ ನಾವಲ್ಲವೆ ॥ ೫ ॥

ತೋಟ ತಳವಾರ್ ಎಂಬುವವರಾರ್ । ಪಟೇಲ ಶ್ಯಾನುಬೋಗ್ ಎನ್ವ ರಾರ್ । ಹ್ಯಾಟಿನ್ಹಮಲ್ದಾರರಾರ್ ನಾವಲ್ಲವೆ ನಮ್ಮ ಜನರಲ್ಲವೆ ॥ ಹ್ಯಾಟ ಹಿಡಿದು ಮೆರೆವರಾರ್ । ಬೂಟ ಹಾಕಿ ನಡೆವರಾರ್ । ಮೋಟಾರ್ ಹತ್ತಿ ಓಡುವರಾರ್ । ನಾವಲ್ಲವೆ ॥ ೬ ॥

ಲಂಚ ಲಂಚವೆನ್ನುವರಾರ್ । ಲಂಚಕ್ಕೈಯ್ಯ ಒಡ್ಡುವರಾರ್ । ಲಂಚಕೊಟ್ಟು ತೋರ್ದ್ವರಾರ್ ॥ ನಾವಲ್ಲವೆ ನಮ್ಮ ಜನರಲ್ಲವೆ ॥ ಹೊಂಚು ಹಾಕಿ ಕಾಯ್ದುವರಾರ್ । ಸಂಚು ನೋಡಿ ನೀಡ್ವರಾರ್ । ಲಂಚಕಾಗೆ ದುಡಿದವ ರಾರ್ ನಾವಲ್ಲವೆ ॥ ೭ ॥

ಲೇಖಕರು : **ಜಿ. ನಾರಾಯಣ**

('ರಾಷ್ಟ್ರೀಯ ಪದಗಳು' 1946)

೫೩. ಶರಣು ಮೋಹನದಾಸಗೆ

ಶರಣು ಮೋಹನದಾಸಗೆ । ಶರಣು ।
ಶರಣು ಮೋಹನದಾಸಗೆ ॥ ಪ ॥

ಶರಣು ಕರುಣವ ಸುರಿವ ತರಣಿಗೆ ।
ಶರಣು ಭಾರತ ತನಯುಗೇ । ॥ ಅ.ಪ ॥

ಕಾಮವನು ಕಡಿಕಡಿದು ಕ್ರೋಧದ
ಧಾಮವನು ಸದೆಬಡಿದು ತಪದಿಂ
ಸೋಮರಸವನು ಕುಡಿದು ನಿಂತಿಹ
ರಾಮರಾಜ್ಯದ ವೀರಗೇ ॥ ಶರಣು ॥ ॥ ೧ ॥

ಧರ್ಮವೇ ತಳಹದಿಯು ಕರ್ಮಕೆ
ಕರ್ಮವೇ ತಳಹದಿಯು ಧರ್ಮಕೆ
ಧರ್ಮದಿಂದಲೆ ಪಾರತಂತ್ರ್ಯದ
ಮರ್ಮಹಿಂಗುವುದೆಂಬ ವೀರಗೆ ॥ ಶರಣು ॥ ॥ ೨ ॥

ಲೇಖಕರು : ದಿ. ಶ್ರೀಧರ ಖಾನೋಲಕರ.

(ಸಂಗ್ರಹ ; ಸಿಂಪಿಲಿಂಗಣ್ಣ)

೫೪. ಬಹುರೂಪಿ

ಇವರುಯಾರು – ಎಂದು ಗಾಂಧಿಯವರ ಕುರಿತು ಬಗೆವರೆ ।
ಅವರು ಒಬ್ಬರಲ್ಲ ಹಲವು ರೂಪಿನವರು ಕಾಣರೆ ? ॥

ರಾಟಿ ಕಾಮಧೇನುವಿರುವ ತಪಸಿವರವಸಿಷ್ಠನು
ಕೋಟಿ ವಿಘ್ನಗಳಲಿ ಸತ್ಯಬಿಡದಹರಿಶ್ಚಂದ್ರನು ॥

ವೀರತಪಸಿನಿಂದ ದಿವ್ಯ ಸೃಷ್ಟಿಗೈದ ವಿಶ್ವಾಮಿತ್ರನು ।
ಘೋರಹಿಂಸೆ ಕರುಣೆಯಿಂದ ಮುರಿಯನಿಂತ ಬುದ್ಧನು ॥

ದನುಜಬಲವ ದೈವಶಕ್ತಿಯಿಂದ ಗೆಲುವ ಕೃಷ್ಣನು ।
ಮನುಜಕುಲವ ಪ್ರೇಮದಿಂದ ನಿಲಿಸಿನಿಂತ ಕ್ರಿಸ್ತನು ॥

ತಂದೆಯಾಜ್ಞೆಯಂತೆ ಮನಸಿನೊಲವ ತೊರೆದ ರಾಮನು ।
ಒಂದೆ ಹೊಣ್ಕೆಯಿಟ್ಟುಕೊಂಡು ನಡೆದು ತೋರ್ದಭೀಷ್ಮನು ॥

ದಿವ್ಯನೆರವಿನಿಂದ ಗುರಿಯಹೊಡೆದ ಇಂದ್ರತನುಜನು ।
ಭವ್ಯಕರ್ಮಯೋಗನಿರತ ದಿವ್ಯತೇಜ ಸೂರ್ಯನು ।
ಮರಣಹಿಂಸೆಯಲ್ಲು ಭಕ್ತಿಬಿಡದ ಪ್ರಹ್ಲಾದನು ॥

ಪರಮಸೇವೆಗಸ್ಥಿಬಿಡುವ ಆದಧೀಚಿವರ್ಯನು ।
ಬಳಗದಲ್ಲಿ ದೈವರೂಪ ಕಂಡ ವರಗೃಹಸ್ಥನು ।
ಹೊಲೆಯರನ್ನು ಹರಿಯಜನರಗೈದ ಪುಣ್ಯದಂಶನು ॥

ಬಗೆದರಷ್ಟು ಭಾವ ಬೆಳಗುವಾ ಮಹಾತ್ಮನು ।
ಜಗದಜನ್ಮ ಸುಟ್ಟು ಜೀವನಾದ್ವಿಜಾತ್ಮನು ॥

ಲೇಖಕರು : **ಸಿಂಪಿ ಲಿಂಗಣ್ಣ** (1–8–42)

೫೫. ಶಾಣ್ಯಾ ಗಾಂಧಿ

ಎಂಥಾ ಶಾಣ್ಯಾ ಮಹಾತ್ಮಾಗಾಂಧಿ ।
ಹಿಂದುಸ್ತಾನಕವನೆ ತಂದಿ ॥

ಮಾಡಂತೇಹೇಳ್ಯಾನ ಕರಬಂಧಿ ।
ಖಾದಿ ತೋಡೆಂದ ಕಾಯ್ದೆ ಭಂಗ ಮಾಡೆಂದ ॥

ಹಿಂದುಸ್ತಾನ ಸ್ವಾತಂತ್ರ್ಯಕ್ಕೆ ಗಾಂಧಿ ಹೇಳ್ಯಾನ ।
ಒಂದೇ ಮಂತ್ರ 1 ನೂಲಂತ ಹೇಳ್ಯಾನ ನಮ್ಮಜಂತ್ರ ॥

ರಾಟಿಯು ನೂಲಿಂದ ರಾಷ್ಟ್ರವ ಉಳಿಸಂದಾ ।
ಸೋದರಕಾಟವ ಸಾಕೆಂದಾ ।
ಕೂಡಿಸ್ಯಾನ ವಾನರದಂಡ । ಹಿಡಿಸ್ಯಾನ ಕೈಲೆರ್ಝುಂಡಾ ।
ಗದಗಮಿಸಿ ಬಿಟ್ವಾನ ಇಂಗ್ಲಂಡಾ ॥

ಸಿಂದಿಸೆರಿ ಕುಡಿಬೇಡಿ, ಗಾಂಜಿ ಅಪು ಸೇದಬೇಡಿ
ಕುಡಿಬೇಡೆಂದು ಹೇಳ್ಯಾನ ಚಹಕಾಫಿ ॥

ಎಲುವು ರಕ್ತ ಕೂಡಿದಂಥ ಕುಲಗೇಡಿ ಸಕ್ಕರಿ
ತಿನಬ್ಯಾಡಂದಾನಮಹಾತ್ಮ ಗಾಂಧಿ ॥

ಸರ್ಕಾರ ಚಾಕರ ನೌಕರಿ ಬೇಡ ।
ತಿರಕೊಂಡು ತಿನ್ನೂದು ಬೇಕೆಂದ ॥

ಹಿಂದು ಮುಸಲ್ಮಾನರು ಕೂಡಿ ವಂದೇಮಾತರಂ ಎಂದು ।
ಮಹಾತ್ಮಗಾಂಧಿ ಮಹಾರಾಜಕಿ ಜಯ ಜಯ ಎಂದು ।

ಎಂಥಾ ಶಾಣ್ಯಾ ಮಹಾತ್ಮಾಗಾಂಧಿ
ಹಿಂದುಸ್ತಾನಕ ಆಗ್ಯಾನ ತಂದಿ ।

ಲೇಖಕರು : **ಸಿಂಪಿ ಲಿಂಗಣ್ಣ**

೫೬. ನಾಡಿನಜ್ಜ

ನೋಡಿರಿವನು ನಾಡಿನಜ್ಜನು । ನೀವೆಲ್ಲರಿಲ್ಲಿ ।
ನೋಡಿರಿವನು ನಾಡಿನಜ್ಜನು ॥ ಪ ॥

ಹಣ್ಣು ಹಣ್ಣು ಮುದುಕನಿವನು
ಹಣ್ಣಿನಂತೆ ಸವಿನುಡಿವನು
ಹೊನ್ನಿನಂತೆ ಹೊಳೆಯುತಿಹನು
ಚಿಣ್ಣರನ್ನು ನಲಿಸುತಿಹನು ॥ ನೋಡಿರಿವನು ॥ ॥ ೧ ॥

ಕೋಲು ಕೈಯಲೊಂದು ಹಿಡಿವನು । ಈ ನಾಡಿಗಾಗಿ
ಬಾಲವೀರನಂತೆ ನಿಲುವನು ।
ಕನ್ನಡಕವ ಕಣ್ಣಿಗಿರಿಸಿ
ತನ್ನಜನರು ಯಾರು–ಅರಸಿ
ಮುನ್ನ ಅವರ ಬಳಿಗೆ ಕರೆಸಿ
ಧನ್ಯರಾಗಿ ಮಾಡುವವನು ।ನೋಡಿರಿವನು ॥ ॥ ೨ ॥

ಕೊರಳಲಿ ಗಡಿಯಾರ ಧರಿಸುತ । ಆಯುಷ್ಯವನ್ನು ।
ಮರಳಿ ನೂರು ವರುಷ ಪಡೆಯುತ ।
ತಲೆಯು ನುಣುಪು ಹೊಳೆಯುತಿಹುದು
ಬೆಳಕುತಂದು ಸುರಿಯುತಿಹುದು
ಎಳೆಯ ಕೂಸಿನಂತೆ ಬಾಯಿ
ಸುಳುಹು ನಗೆಯ ಸೂಸುತಿರುವದು । ನೋಡಿರಿವನು॥ ॥ ೩ ॥

ಲೇಖಕರು : **ಸಿಂಪಿ ಲಿಂಗಣ್ಣ** (18–11–1941)

೫೭. ದೇವರೌ ನನಗಾಂಧಿ

ಮೂಲ ಗಾಂಧಿಯ ಮಂತ್ರ ಮೇಲೆ ನೂಲುವ ಯಂತ್ರ
ಬಂದ ಆಗ್ಯಾವ ಅವರೆಂತ್ರ ।
ಅವರೆಂತ್ರಽ ಚಳುವಳಿ । ದೇವರೌ ನನಗಾಂಧಿ ॥ ೧ ॥

ಖಾದಿಯ ಉಡುವಂದ । ಖಾದಿಯ ತೊಡುವಂದ
ಕಾಯ್ದೆಗೆ ಸರಿಯಾಗಿ ನಡಿಯುಂದ
ನಡಿಯುಂದಽ ಚಳುವಳಿ । ದೇವರೌ ನನಗಾಂಧಿ ॥ ೨ ॥

ಉಪ್ಪಿನಾಗರ ಗಾಂಧಿ । ತಪ್ಪದೆ ಲೂಟಿಯ ಮಾಡೆ
ತಪ್ಪುವಾದೀತ ಸರಕಾರ ।
ಸರಕಾರಽ ಚಳವಳಿ । ದೇವರೌ ನನಗಾಂಧಿ ॥ ೩ ॥

ಹೊಂಟಾನ ಇಂಗ್ಲಂಡಕ । ಬಂಟ
ಸ್ವರಾಜ್ಯ ತರುವುದಕ
ತಂಟೆ ತಗದಾರ । ಅಲ್ಲೆವರ
ಅಲ್ಲೆವರಽ ಚಳವಳಿ । ದೇವರೌ ನನಗಾಂಧಿ ॥ ೪ ॥

ದುಂಡ ಮೇಜಿನ ಸಭಾ । ಬಂಡೆಬ್ಬಿಸಿ ಬಂಟನಲ್ಲಿ
ಪುಂಡ ನನಗಾಂಧಿ ಹೌದೇನು ?
ಹೌದೇನುಽ ಚಳುವಳಿ ? ದೇವರೌ ನನಗಾಂಧಿ ॥ ೫ ॥

ಪಾರ್ವತಿ ಪರಶಿವನ । ಬಾಗೋಡಿ ಬಸವೇಶ
ಪಾರಮಾಡೋ ನನ ಗಾಂಧೀನ
ಗಾಂಧೀನ ಚಳವಳಿ ದೇವರೌನನಗಾಂಧಿ

ಲೇಖಕರು : ತಿಳಿಯದು

(ಸಂಗ್ರಹ : ಕಂಚ್ಯಾಣಿ ಶರಣಪ್ಪ, ಮಲಘಾಣ)

೫೮. ನಿಷ್ಕಾಮ ಕರ್ಮಯೋಗಿ

ಜೈ ದೇಶಹಿತಾರ್ಪಿತ ಗಾಂಧಿ । ಮಹಾತ್ಮಾ ಭಾರತಮಾತೆಯ
ಜೀವಾತ್ಮಾ ॥ ಪಲ್ಲವಿ ॥

ಪರಮ ಧರ್ಮವು ಅಹಿಂಸೆಯೆಂದು । ಭರತಖಂಡಕದೆ ಜೀವನವೆಂದು ॥
ಸರಳತೆಸಮತೆಯ ಉಸುರಿದೆ ಬಂದು ॥ ೧ ॥

ಆರ್ಯಹಿತಾರ್ಪಿತ ಪ್ರಾಣಪ್ರದೀಪ । ಕಾರ್ಯಕ್ಷಮತೆಯೊಳರ್ಕಪ್ರತಾಪ ॥
ಧೈರ್ಯಮೇರು ಬೀರುದಾಂಕಿತಭೂಪ ॥ ೨ ॥

ಜಗದತ್ಯಾಸೆಯ ಸಾರಥಿಯಿಂದ । ರಾಗ ದ್ವೇಷದಾ ವಾಜಿಗಳಿಂದ ।
ಸಾಗಿದ ಆಂಗ್ಲರ ಸಲಹಿದೆಚಂದ ಭಾರತ ॥ ೩ ॥

ಭೀಕರ ಮರಣದಶಯ್ಯೆಯೊಳಿದ್ದ । ಲೋಕಸಮಸ್ಯೆಯ ಬಿಡಿಸಲು
ಯೆದ್ದ ॥ ಶ್ರೀಕರ ಮೂರ್ತಿಯೆ ನೂತನ ಬುದ್ಧ ॥ ೪ ॥

ತಾಳಗೆಟ್ಟ ಬೇತಾಳಗಳಿಂದ । ಬಾಳುವ ಭಾರತಕೊದಗಿದಕುಂದ ॥
ಧೂಳಿಗೈದೆ ಸೌಹಾರ್ದತೆಯಿಂದ ॥ ೫ ॥

ತಿಲಕರನಂತರ ಭಾರತವನ್ನು । ಅಲಘುಮತೀಧೃತಿಸೌಧದೊಳಿನ್ನು ।
ವಿಲಸಿತರೂಪದೊಳಿರಿಸಿಹೆ ನೀನು ॥ ೬ ॥

ಮಾನವಜಾತಿಯ ಮೋಕ್ಷಕೆ ಸಲುವ । ಮಾನವ ಪ್ರೇಮದ
ದಿವ್ಯಾಮೃತವ ॥ ಸ್ವಾನುಭವದಿ ಜಗಕೆರೆದಿಹ ದೇವ ॥ ೭ ॥

ದೇವ ಶಿಲ್ಪಿ ದೇವಾಂಶಪುನೀತ । ಜೀವನದಾಳವ ನರಿತವಿಧಾತ ।
ಪಾವನಭಾರತ ಪುತ್ರರತಾತಾ ॥ ೮ ॥

ದೇಹರಾಶಿಗಳ ಗೊಬ್ಬರದಿಂದೆ । ಮಹಿಮರ ರಕ್ತದ ಸೇಚನೆಯಿಂದೆ ॥
ಸೋಹಂಭಾವದತೋಟವಪೊರೆದೆ ॥ ೯ ॥

ಅಪರೋಕ್ಷತೆ ಸುಖಸಮ್ಮುಖ ಗೃಹದಿ । ಜಪತಪ ಸಾಧನ
ಸತ್ಯಾಶ್ರಯದಿ ॥ ಉಪವಾಸಾದ್ರಿಯ ನೇರಿದೆ ಮುದದಿ ॥ ೧೦ ॥

ಹರಿಜನ ಕುಲಸಂಜಾತರನೊರೆಯೆ । ಪರಮ ಸ್ವರಾಜ್ಯ
ಸಮೀಪವ ಬೆರೆಯೆ । ನರನವತಾರದೊಳುದಿಸಿದೆ ಹರಿಯೆ ॥ ೧೧ ॥

ಧಾರ್ಮಿಕ ಭಾವನೆ ಗಾಳಿಯ ಬೀಸಿ । ಮಾರ್ಮಿಕರಾತ್ಮಕಗ್ಲಾನಿಯ
ನಳಿಸಿ ॥ ಕರ್ಮಯೋಗಿಯೆಂದೆನಿಸಿದೆ ಶ್ರಮಿಸಿ ॥ ೧೨ ॥

ಗಾಂಧಿಯೆಂಬ ಅಭಿಧಾನದಿ ಬಂದು । ಹಿಂದೂಮುಸ್ಲಿಂ
ಸಖ್ಯಕೆನಿಂದು ॥ ಹಿಂದುಸ್ಥಾನವಸಲಹಿದೆ ಯಿಂದು ॥ ೧೩ ॥

ಶೇಷಾದ್ರೀಶನ ಪ್ರೇಮಾದರದಿ । ಭಾಷಾಭಿಜ್ಞರ ದಿವ್ಯಾಶ್ರಯದಿ ॥
ವಿಷಧರರಜಿಸಿದ ಲಾವಣಿಮುದದಿ ॥

ಲೇಖಕರು : **ಎನ್. ವಿಷಕಂಠರಾವ್, ಮೈಸೂರು.**

("ಜಯಂತಿ ಲಾವಣಿ ಕಾಣಿಕೆ" ಮೈಸೂರು, 1949.)

೫೯. ಚಿತ್ತವಿಟ್ಟು ಕೇಳಿರಿ

ಚಿತ್ತವಿಟ್ಟು ಕೇಳಿರಿ ಶಿಸ್ತಿನ ಮೊಹರಂದ ಕಥನಾ ।
ಮರ್ತ್ಯಲೋಕದೊಳಗವತರಿಸಿದ ಗಾಂಧಿ – ಪೈಗಂಬರರು ॥

ನಡೆಸಿದ ಶಾಂತಿ ಯುದ್ಧವನು ।
ಇಂಗ್ಲೀಷರ ಕಪಟ ತಂತ್ರವನು ॥

ಬರದಾರೊ ಮೊದಲಿಗೆ ಮುಂಬೈ ವೈಸರಾಯಗ ಪತ್ರ ।
ಮುದದಿಂದ ಗಾಂಧಿ ಮಹಾತ್ಮರು ಬೇಡಿದ ಸ್ವರಾಜ್ಯವನು ॥

ವಿನಯದಿ ಬೇಡಿದ ತಾ ಮುನ್ನ ।
ವೈಸರಾಯಾ ಧಿಃಕ್ಕರಿಸಿದ ತಾನಾ ॥

ಹಿಡಿದಾರೊ ಮೊದಲಿಗೆ ವಲ್ಲಭಾಯಿ ಪಟೇಲರನ ।
ಮುದದಿಂದ ಅವರನು ಸೆರೆಯೊಳು ಇಟ್ಟರು ಅವಸರಾ ॥

ಇಂಗ್ಲೀಷರದೇ ದರ್ಬಾರಾ ।
ಎಮ್ಮಿ ತಮ್ಮ ವಿಚಾರಾ ॥

ಇಂಗ್ಲೀಷ್ ಜನರು ಬಂದು ನಮ್ಮ ಹಿಂದುಸ್ತಾನಾ ।
ಮಂಗನಂತೆ ರಾಜ್ಯವಾಳಿ ಹಾಳು ಮಾಡಿದವರೆಲ್ಲಾ ॥

ಬೆಳ್ಳಿ – ಬಂಗಾರಗಳನೆಲ್ಲಾ ।
ಬಳಿದರು ಉಳಿಲಿಲ್ಲ ಏನೇನಾ ॥

ಸ್ವರಾಜ್ಯ ಸಂಪಾದನ ವ್ರತಧಾರಿಯಾಗ ಬೇಕಾ ।
ಹಿಂದುಸ್ತಾನದ ತರುಣ ವೀರರು ಟೊಂಕಕಟ್ಟಬೇಕಾ ॥

ಕಾಂಗ್ರೆಸ್ಸಿಗೆ ಮತವ ಮಾಡಬೇಕಾ ।
ಶ್ರೀಕಂಠ ಕವಿ ಮತ ಕೇಳಬೇಕಾ ॥

ಕವಿ : **ನಲವಡಿ ಶ್ರೀಕಂಠಶಾಸ್ತ್ರಿಗಳು**

(ಸಂಗ್ರಾಹಕ : ಡಾ॥ ಮೃತ್ಯುಂಜಯ ಹೊರಕೇರಿ.)

೬೦. ಗಾಂಧಿ ಕೋಗಿಲೆ

೫೯. ಕೂಗಿತೈ ಮಹಾಗಾಂಧಿ ಕೋಗಿಲೇ ॥ ಕೈಮೀರಿತೆನುತಲೇ ॥ ಪಲ್ಲವಿ ॥
ಕೂಗಿ ಕತ್ತಲೆಯು ಸಾಗುವ ಸಮಯದಿ । ತೂಗಿ ಬೇಗ
ನೆಂದಾಗಸದಿಂದಲೆ ॥ ಅ.ಪ. ॥

ಸಾಗಿತಾ ಸರಿರಾತ್ರಿ ಸಂಪತ್ತು । ಕೈಮೀರುತಬಂತು ।
ದಾರಿತಪ್ಪಿ ದಾರಿದ್ರದಪವಿಯನು । ಸೇರಿ ಬಳಲುವದು ।
ಸಾಕೆಂದೆನುತಲೆ ॥ ೧ ॥

ಯೆತ್ತಲಾ ನಮ್ಮ ಬೆಳ್ಳಿ ಬಂಗಾರಾ । ಕತ್ತಲೆಯ ವಿಕಾರಾ ॥
ಮುತ್ತುರತ್ನ ಬಿದ್ದೆತ್ತಲಡಗಿದವೋ । ಚಿತ್ತಶುದ್ಧಿಯಲಿ ಯೋಚಿಸಿ
ರೆನುತಲೆ ॥ ೨ ॥

ದೇಶದೊಳಗಿನ ಧ್ಯಾನ ಸಂಪತ್ತು । ಬಲು ಬೇಷಾಗಿತ್ತು ॥ ದೊಸೆ
ಚಟ್ನಿಪುಡಿ ವಾಸಿಯನುತ ಪರ । ದೇಶಿಗರೊಯ್ದರು ರಾಶಿ
ಯುಂದೆನುತಲೇ ॥ ೩ ॥

ಬ್ರಾಂಡಿಸೆರೆ ಸಿಗರೇಟು ಬಿಸ್ಕೇಟು । ಕತ್ತಲೆಯಲಿ ಬಂತೂ ॥
ತಿಂಡಿ ಚಹಾ ಮೈಯುಂಡು ಕೂತಿತೂ । ಬಂಡಾರವು ಭಂಡಾರಿ
ತೆನುತಲೆ ॥ ೪ ॥

ದೇಶಿ ವಸ್ತ್ರ ವಿಶೇಷ ನಮಗೀಗಾ । ಕೈನೂಲಿನ ಮಗ್ಗಾ ।
ವಾಸಿಯಿಂದ ದೇಶಿಗರನು ಮೆಚ್ಚಿಸಿ । ಬೀಸುವ ಬರಿಗೈಯಾದಿ
ರೆನುತಲೇ ॥ ೫ ॥

ಮುಚ್ಚಿರುವ ಮುಸುಕನ್ನು ತೆಗೆದೊಗೆದು ! ಕತ್ತಲೆಯನು ಕಳೆದು ॥
ಸ್ವಚ್ಛವಾದ ಸತ್ಯಾಗ್ರಹ ತತ್ವವ । ಬಿಚ್ಚಿನೋಡಿರಚ್ಚರ
ವೆಂದೆನುತಲೇ ॥ ೬ ॥

೬೧. ಸರ್ವತ್ರ ಗಾಂಧಿ

ಝಂಪಾ

ಗಾಂಧಿಯೇ ಗಾಂಧಿ ಸರ್ವತ್ರ ಗಾಂಧಿ ॥ಪಲ್ಲ॥
ಸಂದೇಹಕಾರರನು ನಿಂದಿಸನು ಗಾಂಧಿ ॥ಅನುಪಲ್ಲವಿ॥
ಮುಟ್ಟಿದವ ತಾ ಗಾಂಧಿ । ಭೆಟ್ಟಿಯಾದವ ಗಾಂಧಿ ।
ನಿಟ್ಟಿಸಿದವರೆಲ್ಲ ಗಾಂಧಿಯ ರೂಪವೋ ॥
ಕಟ್ಟಕಡೆಯಲಿ ಅವರ ಸಂದೇಶವನು ತಂದು ।
ಮುಟ್ಟಿಸಲು ಕೇಳಿದವರಾಗುವರು ಗಾಂಧಿ ॥೧॥

ಹಿಂದೂ ದುುಸಲ್ಮಾನ ಹಿಂದಿ ಕ್ರೈಸ್ತರು ಸಹಿತ ।
ಒಂದಾಗಿ ಫಾರ್ಶಿಯಹುದಿಗಳೆಲ್ಲರೂ ॥
ಮುಂದೊರೆಯುತಿರುವಲ್ಲಿ ಸಂಧಿಯಾಗಿಹ ಗಾಂಧಿ ।
ಕಂದಕನ್ಯರ ಮುಖದಿ ಬೆಳಗುತಿಹ ಗಾಂಧಿ ॥೨॥

ಸತ್ಯವಾಡುವ ಗಾಂಧಿ । ನಿತ್ಯಮೆರೆಯುವ ಗಾಂಧಿ
ಕತ್ತಲೆಯೊಳಲ್ಲಲ್ಲಿ ಕಾಣುತಿಹ ಗಾಂಧಿ ॥
ಸುತ್ತಲಿನ ದೇಶ ಪರರಾಷ್ಟ್ರದಲಿ ತಾ ಗಾಂಧಿ ।
ಚಿತ್ರವೆಂದೆನಿಸಿದನು ಚಿದ್ರೂಪ ಗಾಂಧಿ ॥೩॥

ದೇಶ ದೇಶಗಳಲ್ಲಿ । ದೇವರೆನಿಸುವ ಗಾಂಧಿ ।
ಕೋಶ ಕೋಶಗಳಲ್ಲಿ ಕರ್ಮ ಗಾಂಧಿ ।
ದಾಸರಿಗೆ ನಿತ್ಯದಲಿ ಭಾಸವಾಗುವ ಗಾಂಧಿ ।
ವಾಸವಾಗಿಹ ಹೃದಯಪಟದಲ್ಲಿ ಗಾಂಧಿ ॥೪॥

ಕಣ್ಣು ಮುಚ್ಚಲು ಗಾಂಧಿ । ಕನಸಿನೊಳು ತಾ ಗಾಂಧಿ
ಮುನ್ನೆರಡು ಮೂರು ಮನೆ ಹಳ್ಳಿಯೊಳು ಗಾಂಧಿ ॥

ಉನ್ನತಾದ್ರಿಯ ಶಿಖರದೊಳಗು ಪಾತಾಳದಾ ।
ಕೊನ್ನಾರಕಂದರರದಿ ಕಾಣಸುವ ಗಾಂಧಿ ॥೫॥

ಉಣ್ಣುವಾಗಲು ಗಾಂಧಿ । ತಿನ್ನುವಾಗಲು ಗಾಂಧಿ ।
ಸನ್ನುತದಿ ಕುಡಿಯುವಾ ಚಹದೊಳಗು ಗಾಂಧಿ । ಧನ್ಯ ಧನ್ಯರು
ತೆವ್ಮೊಳನ್ಯೋನ್ಯ ಭಾಷಣದಿ । ತನ್ನಿಂದ ತಾನೆ ಹೊರಬೀಳುತಿಹ ಗಾಂಧಿ
॥ ೬ ॥

ಬುದ್ಧಿಯಲಿ ತಾ ಗಾಂಧಿ । ನಿದ್ದೆಯಲಿ ತಾ ಗಾಂಧಿ ।
ಸಿದ್ಧನಾಗಿರುದ ಪ್ರಸಿದ್ಧ ಗಾಂಧಿ ॥
ಮುದ್ದು ಮೋಹನದಾಸ ಭದ್ರನಾಗಿಹ ಗಾಂಧಿ ।
ತಿದ್ದಿ ತೋರುವ ತಾನೇ ಶುದ್ಧ ಗಾಂಧಿ ॥೭॥

ಲೇಖಕರು : ತಿಪ್ಪಯ್ಯ ಮಾಸ್ತರರು

('ರಾಷ್ಟ್ರೀಯ ಪದ್ಯಗಳು' : 1930)

೬೨. ಖಾದೀ

(ವೀರಚೌಪದಿ–ಝಂಪೆ)

ಖಾದಿಯೆ ಸುಖಜೀವನಕೆ ಸಮೀಪದಹಾದಿ
ಬಾಧಿಸುವ ದಾರಿದ್ರ್ಯವ್ಯಾದಿಗೌಷಧಿಯೂ ॥

ಸೋದರಗೆ ಸಾಧಿಸುವ ಪ್ರಜಲೈಕ್ಯತಾವಾದಿ
ಖಾದಿಯೇ ಸ್ವಾತಂತ್ರ್ಯ ಸಾಮ್ರಾಜ್ಯಸಿದ್ಧಿ ॥

ಖಾದಿಯೇ ಮುರುಕುಮನೆ ತಿರುಕರಿಗೆ ಒಡನಾಡಿ,
ಖಾದಿಯೇ ಹಿಡಿದ ಫಲ ಬಿಡದ ಹಟವಾದಿ ॥
ಖಾದಿಯೇ ಸೋಮಾರಿತನಕ ಹೆಮ್ಮಾರಿ ತಿಳಿ -
ಖಾದಿಯೇ ಪುರುಷತ್ವ ಸಂಪದಭಿವೃದ್ಧಿ

ಸೀತೆಗೆ ಅಶೋಕದಲಿ ಶೋಕಹಾರಿಯೆ ಖಾದಿ
ಭೀತೆ ದ್ರೌಪದಿಯ ಮಾನವ ಕಾಯ್ದ ಖಾದಿ
ಪೀತವಸನವು ಹರಿಗೆ, ಪ್ರೀತಿವಸನವು ಧರೆಗೆ
ನೀತಿವಸನವಿದೊಂದೆ ಭಾರತಿಗೆ ಖಾದೀ ॥

ತೋರನೂಲಿನ ದೊರಗು ಭಾರದಾ ಖಾದಿಯನು
ಊರಹೊರಗಿರಿಸಿ, – ಟಿಕ್ಕ್ಯಾಥ ಪರದೇಶಿ ॥
ಭೂರಿ ತಳುಕಿನ ಹಗುರ ಚೀರವನು ಮೋಹಿಸಲು
ತೋರನೇ ಲೋಕಕ್ಕೆ ಹಗುರ, – ಭಿಕನಾಸೀ ?' ॥

ಬಾರವೆಂದಾ ಖಾದಿಯನು ದೂರವಿಡೆ, ತಿರ–
ಸ್ಕಾರ ಹೊರದಾ 'ಚರ್ಕ' ನಿಟ್ಟುಸಿರ

ಭಾರದುಡುಗೆಯು ಜೊರದ ದೇಹ,–ದೇಶದ ಕಷ್ಟ
ಭಾರ ಹೊರಬಲ್ಲುದೇ ? ಕರ್ತವ್ಯ ಕೆಡದೇ ? ॥

ಖಾದಿಯೆ ಮರಾತರಿಗೆ ವಿಜಯುಬಾವುಟವಾಯ್ತು
ಖಾದಿ ಹೆಣವಾ ನೂಲ ರಾಟೆ ಭಾರತಕೆ ॥
ಖಾದಿಯೇ ಶಾಂತಿಮಂದಿರಕೆ ಮೇಲ್ಕಟ್ಟಾಯ್ತು
ಖಾದಿಯುಡುವಳು ಮಾತೆ ವಿಜಯದಾರತಿಗೇ ॥

ಲೇಖಕರು : ತಿಳಿಯದು

(ಮುದ್ರಿತ)

೬೩. ಚರಕ ಮಹಿಮೆ

ಪದ-ಧಾಟಿ : ಬೇಡುವೆನು ಬ್ರಹ್ಮದೇವ

ಭಾರತೀಯರೆಲ್ಲ ಕೇಳಿ । ಭೂರಿ ಚರಕ ಮಹಿಮೆಯನ್ನು ॥ಪಲ್ಲ॥
ಭಾರತೀಯರಿಂಗೆ ಸೂತ್ರ ! ಧಾರಿ ಗಾಂಧಿಯಾಜ್ಞೆಯನ್ನು ॥ಅನು ಪಲ್ಲ॥

ಹಂಗು ಇಲ್ಲದ ನೇಯ್ಗೆ ವೃತ್ತಿಯ । ಆಂಗಲೆಯರು ಹಾಳುಗೈದು ।
ತುಂಗ ಭಾಗ್ಯ ಸೂತ್ರವನ್ನು । ಭಂಗಪಡಿಸಿ ಕೊಂದರಯ್ಯೋ ॥೧॥

ಸಮಯವಿರುವ ವೇಳೆಯಲ್ಲಿ । ಕ್ರಮದೆ ನೂಲಗೈವದಿವ್ಯ ।
ಭ್ರಮೆಯ ನಾಂತ ಗೃಹದೆ ಭಾಗ್ಯ । ರಮೆಯು ನಿತ್ಯ ನಿಲ್ಲುವಳು ॥೨॥

ಮನೆಗೆ ಲಕ್ಷಣ ಗಾಂಧಿಚಕ್ರವು । ಧನವನೀವುದು ನಿತ್ಯಸತ್ಯವು
ಜನರೆ ಚರಕವನ್ನು ತಂದು । ಮನೆಯೊಳ್ನೂತು ಧನ್ಯರಾಗಿ ॥೩॥

ಅನ್ಯ ಜನರ ದಾಸರಾಗಿ । ಖಿನ್ನರಾಗಿ ಪದಕೆ ಬಾಗಿ ।
ಕುನ್ನಿಯಂತೆ ಬಾಳ್ಪುದಿನ್ನು । ಧನ್ಯರಾಗಿ ಚರಕದಿಂದ ॥೪॥

ಪರಮ ಸಿದ್ದಪುರುಷ ಗಾಂಧಿ । ಯೊರೆದುದನ್ನು ಕೇಳಿದಯದಿ ।
ವರ ಸ್ವರಾಜ್ಯ ಸಿದ್ಧಿಗಾಗಿ । ಚರಕವನ್ನು ತರಿಸಿರಿಂದೇ

ಲೇಖಕರು : ತಿಳಿಯದು

(ಮುದ್ರಿತ)

೬೪. ರಾಷ್ಟ್ರ ಕಾರ್ಯ

ಮಹಾತ್ಮಾ ಗಾಂಧಿಯವರ ಉಪದೇಶವು ನಮಗಿದು ರಾಷ್ಟ್ರಕಾರ್ಯಾ||
ವಿಜಯಾ ||ಪಲ್ಲವಿ||

ನಿತ್ಯವು ನೂಲಿನ ಚಕ್ರವ ತಿರುಗಿಸು ।
ಚಿತ್ತವ ನೂಲುವನದರೊಳಗಿರಿಸು
ಸತ್ಯವೆ ಜಯವೆಂದೆಸ್ನುತ ಮಂತ್ರ ಪಾಠ ನೀ ಪಠಿಸು ||೧||

ಬಟ್ಟೆಯ ನೇಯುವ ಕೆಲಸವ ಮಾಡು ।
ಮೊಟ್ಟಮೊದಲು ಜಯದೇವನ ಬೇಡು ।
ಹೊಟ್ಟೆಯ ಹೊರೆಯುವದಿಷ್ಟಸಿದ್ಧಿಯನು ಮಾಡಿ ನೋಡು ||೨||

ಗುಂಡಿಗೆ ಹೆದರದೆ ಗುಂಡಿಗೆಯಾಗು ।
ಪಾಂಡವರಂದದಿ ಶಾಂತತೆಯೆಸಗೂ।
ಖಂಡಿತದಿಯಸಕಾರಿವಸ್ತ್ರವ ಬಾಗಿ ತೂಗೂ ॥
ಬೇಗನೆ ಬಾಗಿ ತೂಗು ||೩||

ಪರರನು ಎಂದಿಗು ನಿಂದಿಸಬೇಡ ।
ನಿರುತವು ಸತ್ಯವ ಮರೆದಿರಬೇಡ ॥
ಉರುತರ ಆತ್ಮದ ವಿಶ್ವಾಸವ ನೀ ಕಾಯ್ದು ನೋಡೂ ||೪||

ಸ್ವದೇಶಮಾತೆಯ ಸೇವೆಯ ಮಾಡು ।

ದೇಶಿ ವಸ್ತ್ರವ ಧಾರಣೆ ಮಾಡು ।
ಸಾಧಕ ಭಾದಕ ಜನ್ಮ ಸಿದ್ಧಿಯನು ತೂಗಿನೋಡು । ॥೫॥

ಲೇಖಕರು : ತಿಪ್ಪಯ್ಯ ಮಾಸ್ತರರು

('ರಾಷ್ಟ್ರೀಯ ಪದ್ಯಗಳು', 1930)

೬೫. ನೀ ಧರಿಸೈ ಖಾದಿ

ಅನಗಗಡೇ ದರಬಾರ–ಎಂಬಂತೆ

ನೀ ಧರಿಸೈ ನಮ್ಮ ದೇಶಿ ಖಾದಿ ॥ಪಲ್ಲವಿ॥

ನರ ನಾರಿಯರೆಲ್ಲ ಚರಖವ ಹಿಡಿದು ।
ತರ ತರ ಬಟ್ಟೆಯು ಬೇಗನೆ ನೇದು ।
ಸರಸವ ಗೈಯ್ಯುವದಿಂತು ಖಾದಿ ॥೧

ಊರೂರಿಗೆ ನಮ್ಮ ದೇಶದೊಳೆಲ್ಲ ।
ಸಾರಿತೊಡಿಸಿರೈ ಜನರಿಗೆ ಸಕಲಾ।
ಭಾರಿ ನಮಗೆ ಸುಖಕಾರಿ ಖಾದಿ ॥೨॥

ಕಡುತರ ವ್ರತವನು ಪಾಲಿಸು ನೀನು ।
ಬಡತನ ತಾ ಬೈಲಾಗುವದಿನ್ನು ।
ನಡೆಸೈ ಕೈರಾಟಿಯ ಖಾದಿ ॥೩॥

ನಮ್ಮವರೆಲ್ಲರು ತಮ್ಮ ಗೃಹದಲಿ ।
ಗುಮ್ಮನೆ ಈ ಪರಿಯಾಗಿ ನಡಿಸಲಿ ।
ಸುಮ್ಮನವೋ ನಮಗೆಲ್ಲ ಖಾದಿ ॥೪॥

ಸಿದ್ಧವಾಗಿರುವದು ಸಿದ್ಧನಗರದಲಿ ।
ಮುದ್ದಿಸಿ ಗಾಂಧಿಯ್ಯುರುಪದೇಶದಲಿ ।
ತಿದ್ದಿಕೊಂಬುದೇ ಬಲು ಜೋಕೆ ಖಾದಿ ॥॥೫

ಲೇಖಕರು : ತಿಪ್ಪಯ್ಯ ಮಾಸ್ತರರು

('ರಾಷ್ಟ್ರೀಯ ಪದ್ಯಗಳು', 1930)

೬೬. ಪವಿತ್ರ ಖಾದಿ

ಮೂಲ ಮಾತ ನಿಮಗ ಕಾಲಬಿದ್ದ ಹೇಳತೀನಿ ಕೇಳಿಕೊಂಡ ನಡಿಬೇಕ್ರಿ ಸರ್ವಜನಾ ॥ ದೇಶದಭಿಮಾನಕ್ಕಾಗಿ ತ್ರಾಸ ಆದರು ಚಿಂತಿಯಿಲ್ಲ ಮೀಸಲಿದ್ದ ಖಾದಿಯು ವಸ್ತ್ರವನಾ। ಧರಿಸಿರಿ ಯಿನ್ನಾ ॥ಪಲ್ಲವಿ॥

ಮೂವತ್ತೇಳು ಕೋಟಿ ಮಂದಿ ಇಂದ ಖಾದಿ ಧರಿಸಿದರ ಭರತಖಂಡ ಆಗತತಿ ಸ್ವಾಧೀನಾ। ಗೋಳಾಡಿ ಇಂಗ್ಲಿಷರು ಹಾಳಾಗಿ ಹೋಗತಾರ ಕೂಳಯಿಲ್ಲದ ಸಾಯತಾರ ಗಿರಣಿ ಜನಾ। ಇಲ್ಲ ಅನುಮಾನಾ॥

ಗಿರಣಿ ಸಹಾಯದಿಂದ ನಿಮಗ ವರ್ಣಿಸಲಿಕ್ಕೆ ಬಾರದಂತ ಅರವಿ ನೆಯ್ಯ ತಾರ ಇಂಗ್ಲಿಷ ಜನಾ। ಅಗ್ಗದಿಂದ ಅರವಿ ಮಾರಿ ಜಗ್ಗಿ ಹಣ ಒಯ್ಯತಾರ ನುಗ್ಗಮಾಡಿ ಬಿಟ್ಟಾರಲ್ಲೊ ಹಿಂದೂಸ್ತಾನ। ಉಳಿಯು ಲಿಲ್ಲಯೇನಾ ॥

ಅರಿವಿ ಮಾರಿ ನಿಮ್ಮಿಂದ ಅರವತ್ತು ಕೋಟಿ ಒಯ್ಯುತಾರ ಅರುಗೆಟ್ಟಿ ಕೂತಿರೆಪ್ಪ ಯಲ್ಲಾ ಜನಾ। ಜಂತ್ರಾ ತಿರಿವಿ ನೀವೆಲ್ಲಾರು ಸ್ವಂತ ನೂಲನೂತರ ನಿಂತ ಹೊಯ್ಯಕೋತಾರ ಪರದೇಶಿ ಜನಾ। ಸಿಗುದಿಲ್ಲ ಅನ್ನಾ॥

ನಾಚಿಕಿಲ್ಲದವರು ನೀವು ನಾಡಿಗೆ ದೊಡ್ಡವರಪ್ಪ ಹೇಸವಲ್ಲದ್ಯಾಕ ಹೇಳ್ರೋ ನಿಮ್ಮ ಮನಾ। ದೇಶಭಿಮಾನ ಬಿಟ್ಟಿ ಖಾಸದ್ರೋಹಿಗಳ ಅರವಿ ಬ್ಯಾಸರಿಲ್ಲದ ತೊಡತೀರೆಲ್ಲೊ ಎಲ್ಲಾ ಜನಾ। ಇಲ್ಲ ಸುಜ್ಞಾನಾ ॥

ಜ್ಞಾನದಿಂದ ನಿಮ್ಮಲ್ಲಿಯ ಹೀನ ಗುಣಾ ತೆಗೆದು ಹಾಕಿ ಮಾನವಂತ ರಾಗಿ ಖಾದಿ ವಸ್ತ್ರವನಾ। ಶ್ರೇಷ್ಠ ಅಂತ ಧರಿಸಿದರ ಸಾಷ್ಟಾಂಗ ಹಾಕತಿನ ಕೋಟ್ಯಾವಧಿ ರೈತರ ಉಪಜೀವನಾ। ಆಗತತಿರಂಣಾ ॥

ರೈತರ ಹಿತವಗೋಸ್ಕರ ಖಾದಿ ಪ್ರಚಾರ । ಚಳವಳಿ ಮಾಡೂರ ಕ್ರಾಂಗ್ರೇಸ ಜನಾ । ಅವರು ಹೇಳಿದಂಗ ನೀವು ಕೇಳಿಕೊಂಡ ನಡಿರಿನ್ನಾ ॥ ಬಡತನ ದಿಂದ ಬಳಲೂರರೈತಜನರಕಷ್ಟಸೋಸೂರ ಹೊಟ್ಟೆಗಿಲ್ಲ ಅನ್ನಾ । ಸರ ಕಾರದ ಜನರು ತೆರೆದ ನೋಡವಲ್ಲರ ಕಣ್ಣಾ ॥

ಸತ್ಯಶಾಂತಿ ತತ್ವಭೋಧಸವರ । ಹುಟ್ಟಿಬಂದರ । ತೊಟ್ಟಿ ಅವತಾರ । ಗಾಂಧಿ ಭಗವಾನಾ । ಅನ್ನಾ ಹಾಕಿ ರೈತರನ್ನ ಸಾಕಿಸಲವುತಾನ ಪೂರ್ಣಾ ॥

ಅಜ್ಜಗಾಂಧಿ ಮಾತಿನಂತೆ ಸಜ್ಜಾಗಿ ನಡದರ ಲಗ್ಗ ಬಗ್ಗ ಬಡುತಾನ ದುಷ್ಟ ರನಾ ॥೧॥

ವಂದೇ ಮನಸ್ಸಿನಿಂದ ಕೂತ ವಂದೇ ಮಾತರಂ ಅನ್ನುತ ಚಂದದಿಂದ ತಿರುವಿ ರೆವ್ವಾ ಜಂತ್ರವನಾ । ಜಂತ್ರದ ಅರವಿ ಉಟ್ಟ ತೊಟ್ಟ ದೇಶಿ ಹಸರ ಬಳಿ ಯಿಟ್ಟ ಸ್ವಂತ ಹಿಂದು ದೇಶವ ಅಭಿಮಾನಾ । ಹಿಡಿರೆವ್ವಾಯಿನ್ನಾ ॥

ಒಂದುವರಿ ತಿಂಗಳ ನೀವು ವಂದೇ ಮನಸ್ಸಿನಿಂದ ಕೂತು ಚೆಂದದಿಂದ ಅರಿ ರೆವ್ವಾ ಹತ್ತಿಯನಾ । ಬೆಸಿಕಟ್ಟಿ ನೀವೆಲ್ಲರು ಕುಸಿಲಿಂದ ಕುತಕೊಂಡ ಕಸ ರಿಲ್ಲಂದ ಹೊಡದ ಅರಳಿಯನಾ । ಹಾಕರಿ ಹಂಜಿಯನಾ ॥

ಇಷ್ಟೆಲ್ಲ ಕೆಲಸಾ ನೀವು ಕಷ್ಟಪಟ್ಟ ಮಾಡಿದರ ಶ್ರೇಷ್ಠ ಆಗತತಿ ನಿಮ್ಮ ಮನಿ ತಾನಾ । ಸಾಲಾ ಹರದ ನೀವೆಲ್ಲಾರು ಹಾಲುಬಾನ ಉಣತೀರಿ ಕಾಲಿ ಕುಂಡ್ರಬ್ಯಾಡಿರವ್ವಾ ಎಲ್ಲಾ ಜನಾ । ಸಿಗತತಿ ಹಣಾ ॥

ಹಣಯಿಲ್ಲದಕ್ಕ ನೀವು ಹೆಣದಂಗ ಕಾಣತೀರಿ ಕೊರಳಾನ ಭಂಗಾರ ಸಾಮಾನಾ । ಒತ್ತಿ ಇಟ್ಟ ನಿವೇಲ್ಲರು ಕಟ್ಟತೀರಿ ಕರಮಣಿ । ನಷ್ಟಮಾಡಿ ಬಿಟ್ಟಿರವ್ವಾ ಮನಿತಾನಾ । ಎಂತ ದಡ್ಡತನ ॥

ಶ್ಯಾಂತಿಯಿಂದ ಶ್ಯಾಣ್ಯಾರಾಗಿ ಭ್ರಾಂತಿಬಿಟ್ಟ ಕೇಳಬೇಕ ಸತ್ಯವಂತ ಮಹಾ

ತ್ಮರ ಪಚನಪನಾ । ಭಂಗಾರೇನು ಕಡಿಮಿಯಿಲ್ಲ ಬಾಳ ದಿವಸ ಹೋಗುದಿಲ್ಲ ಹೇಳಿಪಂಗ ಕೇಳಿವರ ಎಲ್ಲಾ ಜನಾ । ಸಿಗತತಿ ಪುನಃ ॥

ಭಂಗಾರದಿಂದ ಶ್ರಿಂಗಾರ । ಮೊದಲಿನವರ ಜಂತ್ರ ತಿರುವಿ ದಿನಾ । ಭಂಗಾರಗಳಿಸಿ ಮಾಡಿಸಿಕೊಂಡಿದ್ದರ ಸಾಮಾನಾ ॥ ಕೊಡಿ ಆರವಿಅಂತ ತೊಡತಿದ್ರು । ನೂಲ ತಗುತಿದ್ರು । ರೂಪಾಯಿ ಗಳಸತಿದ್ರು । ಮೊದ ಲಿನ ಜನಾ । ಹಿಡಿರೆಂತ ಬಿರಾಡಕ್ಕ ತೆಗೆದು ಕೊಡತಿದ್ರು ಹಣಾ ।

ಈಗಿನವರು ಜೈಸಿಮಾಡತಾರ । ಬೈತಲಿ ತೆಗಿತಾರ । ಯಂಣಿ ಹಚ್ಚಿ ದಿನಾ: ಅಳಗಾಲ ಒಡದರೊ ಉಳಿಯಲಿಲ್ಲ ಉತ್ಪನ್ನಾ ॥

ಚರಖಾ ತಿರುವಿ ನೀವೆಲ್ಲಾರು ದೊರಕಿಸಬೇಕ ಉತ್ಪನ್ನ । ತರಕ ಮಾಡಿ ಬಿಡರೆವ್ವಾ ಜೈನಿ ಗುಣಾ ॥೨॥

ಇಷ್ಟೆಲ್ಲ ಕೇಳಿ ನೀವು ನಿಷ್ಠಾದಿಂದ ನಡವರ ಶ್ರೇಷ್ಠವಾಗತತಿ ನಮ್ಮ ಹಿಂದು ಸ್ಥಾನ । ಯಾವದೇನು ಕಡಮಿಯಿಲ್ಲ ಎರಡನೇಯವರು ಬೇಕಾಗಿಲ್ಲ । ಸಾವಲಂಬಿಯಾಗಿ ನಮ್ಮ ಯಲ್ಲ ಜನಾ । ದುಡಿಯಬೇಕ ದಿನಾ ।

ರಾಟಿ ಮೋಟಿ ಉದ್ಯೋಗ ನೀವು ರಾತ್ರಿ ಹಗಲಿ ನಡಿಸಿದರ ಖಾತ್ರಿಯಿಂದ ಹೋಗತತಿ ಒಡತನಾ । ಕಂಬಾರ ಬಡಿಗೇರ ಪಿಂಜಾರ ನೇಕಾರ ತಟಗಾರ ಬಣಗಾರ ಉಪಜೀವನಾ । ಸಾಗತತಿ ದಿನಾ ॥

ಖಾದಿಕೇಂದ್ರ ಗ್ರಾಮೋದ್ಯೋಗ ಚರಖಾಸಂಘ ಮೊದಲ ಮಾಡಿ ಎಷ್ಟೋ ಸಂಘ ಮಾಡಿದಾರ ಸ್ಥಾಪನಾ । ಪೊಡವಿಯೊಳಗಿನ ಕೂಲಿಕಾರ ದೃಢದಿಂದ ಇದರೊಳಗ ದುಡದರ ಪ್ರತಿದಿನಾ । ಸಿಗತತಿ ಹಣಾ ॥

ಹನ್ನೊಂದು ಸಾವಿರದಾ ಐದನೂರಾ ಎಂಭತ್ತೊಂದ ಮಂದಿ ನೇಕಾರಜನಾ । ಒಂದು ಲಕ್ಷ ನಾಲ್ವತ್ತೊಂಬತ್ತ ಸಾವಿರದಾ ಒಂದನೂರಾ ಇಪ್ಪತ್ತೊಂಭತ್ತ

ಜನಾ। ನೂಲತಾರ ದಿನಾ। ಹತ್ತು ಲಕ್ಷ ಹತ್ತು ಸಾವಿರದಾ ವಂಬಯ್ಯನೂರಾ ತೊಂಬತ್ತೇಳ। ವರ್ಷ ಉಳಸತಾರ ಇಷ್ಟು ಹಣಾ। ಕೋಟಿ ಮಂದಿ ನೂಲವರು ತೊಂಬತ್ತ ಲಕ್ಷ ನೆಯ್ಯುವರು ಬಿಟ್ಟು ಬಿಡದೆ ದುಡದರ ಎಷ್ಟೋ ಹಣ। ಉಳುತತಿ ದಿನಾ ॥

ಕಷ್ಟಪಟ್ಟ ನಿತ್ಯ ದುಡಿಬೇಕ। ಕೈಕೆಲಸ ಬೆಳಸುದಕ। ನೂಲ ತೆಗಿಬೇಕ ಖಾದಿ। ನೇದ ದಿನಾ ಚರಖಾ ಸಂಘಕ್ಕೆ ಓದಕೊಡಬೇಕ ನೇಕಾರ ಜನಾ॥

ಮೆಂಬರಾಗಬೇಕ। ಖಾದಿ ತೊಡಬೇಕ। ಬೆಂಬಲ ಕೊಡಬೇಕ।
ಕಾಂಗ್ರೆಸಕ ಪೂರ್ಣ। ಅಂದರ ಸ್ವರಾಜ್ಯ ಅಗತತಿ ಸ್ವಾಧೀನಾ।

ಹಿಂಸಾ ಬಿಡಬೇಕ। ಸತ್ಯ ನುಡಿಬೇಕ। ಕೊಳ್ಳುದಿ ಬಿಡಬೇಕ ಪರದೇಶಿ ಸಾಮಾನಾ। ಇದರಂತೆ ವಡೆದು ನೀವು ಗಳಿಸಬೇಕ ಉತ್ಪನ್ನಾ ॥

ಅಂ। ದೋಷರಹಿತ ಗಾಂಧಿಯವರ ದಾಸನಾದ ಹುಲಕುಂದ ದೇಶ ಭಕ್ತ **ಭೀಮರಾಯರ** ಕವನಾ ॥೩॥

ಲೇಖಕರು : **ಹುಲಕುಂದ ಭೀಮಕವಿ**

('ರಾಷ್ಟ್ರೀಯ ಪದಗಳು' ಸಂಗ್ರಹದಿಂದ)

೬೭. ಖಾದಿಯ ಅಂಗಿ

ಛಪ್ಪರೆ ನನ್ನ ಖಾದಿ ಅಂಗಿ ।
ಆಂಗ್ಲರಿಗೆ ಅಳಗಾಲ ನೀತಂದಿ ॥

ಎಷ್ಟೋ ದಿವಸ ಮೂಲಿಗೆ ಬಿದ್ದಿದ್ದೀ ।
ಮಾಹಾತ್ಮರಿಂದ ಬೈಲಿಗೆ ನೀಬಂದೀ ॥ ೧ ॥

ಸಕಲರಿಗೆ ಸಿಖರ ನೀನು ಆದೀ ।
ಸತ್ಯಾಗ್ರಹದಲ್ಲಿ ನೀನು ಮುಡದೀ ॥ ೨ ॥

ಸಂಚರಿಸುತ್ತ ಹುಲಕುಂದಕ್ಕೆ ಬಂದೀ ।
ದೇಶಭಕ್ತ ಭೀಮರಾಯಗ ವಲದೀ ॥ ೩ ॥

ಲೇಖಕರು : **ಹುಲಕುಂದ ಭೀಮಕವಿ**

೬೮. ಖಾದಿ ಅರಿವಿ

ಖರೇ ಖರೇ ಹೇಳತೀನಿ ಬರಬರತ ದಿನಮಾನ ಭರತಾವ ಬಾಳಚಂದ ।
ಗಲದೇಶಿ ಗಿರಣ ಅರಿವಿ ಧರಸವರಿಗೆ ಅಬರು ಇಲ್ಲರಿ ಮುಂದ ॥
ಅರು ದುಡ್ಡಿನ ಖಾದಿ ಟೊಪ್ಪಿಗಿಗೊಂದ ಆರ್ಭಾಟ ಹೆಚ್ಚೆಂದ ।
ಆರವತ್ತು ರೂಪಾಯಿಯ ಜರದ ರುಮಾಲದಾವ ಕೊರವರಕ್ಕಿಂತ ಮುಂದ ।
ಇರುವಂಥಾ ಅರಿವಿ ಹರದ ಮ್ಯಾಲ ಇನ್ನ ತರುದ ಮಾಡಿರಿ ಬಂದ ।
ತರುವಂಥ ಜನರಿಗೆ ಅರುವಿಯಿರಲೆಂತ ಹೇಳುವ ಕರ ಮುಗದ ।
ಕಿರತಂತ್ರ ಎಂಬುದು ಪಾಪ ಅಗುದು ಗುರು ಗಾಂಧಿ ನಯದಿಂದ ।
ಪರಮ ಭೀಮರಾಯ ಇರುವ ಠಿಕಾಣಾ ಮೆರೆಯುವಹು ಮಂದ ॥

ಲೇಖಕರು : **ಹುಲಕುಂದ ಭೀಮಕವಿ**

೬೯. ಖಾದಿಯ ಹಾಡು

ಧಾಟಿ ; (ಕಡು-ಧೀರನೆ ಶೂರನೆ)

ಪರ–ದೇಶದ ಬಟ್ಟೆಯ ಬಿಡು ಬಿಡು ।
ಸುಡು ಸುಡು ॥ ದೇಶಬಂಧೊ ॥ ಪ ॥

ಸ್ವರ್ಣಧರಣಿಯಾ ಸ್ವರ್ಣವನೆಲ್ಲವ ।
ಪೂರ್ಣ ವಿದೇಶಿ ವಸ್ತ್ರಕೆ ಕೊಡುವ ।
ಕರ್ಣಕಠೋರವಿಚಾರವ ಸುಡು ಸುಡು ॥೧॥

ಪರದೇಶಿಗಳಾವಸಕ್ಕೀಯಯುವ ।
ಭರತಖಂಡದಾ ಜೀವನಧನವ ।
ಪರಮಸ್ವದೇಶೀ ಖಾದಿಗೆ ಕೊಡು ಕೊಡು ॥೨॥

ಸಾವಿರಗಟ್ಟಲೆಯಲಿ ಭಾರತದಲಿ ।
ಸಾವರು ಕೂಳಿಲ್ಲದೆ ಹಸಿವಿಂದಲಿ ।
ಜೀವನಮಾರ್ಗದ ಬಟ್ಟೆಯ ಕೊಡು ಕೊಡು ॥೩॥

ಮಾನಿನಿಯರು ಹಲವರು ಬತ್ತಲೆಯಲಿ ।
ಕಾನನದೊಳಗಿರುವರು ಹಲವೆಡೆಯಲಿ ।
ಮಾನದ ಹಾದಿಯ ಖಾದಿಯ ಕೊಡು ಕೊಡು ॥೪॥

ಚರಕವ ತಿರುಗಿಸಿ, ಬಟ್ಟೆಯನೊದಗಿಸಿ ।
ಪರದೇಶೀವ್ಯಾಪಾರವ ನಿಲ್ಲಿಸಿ ।
ಧರೆಗೆ ಸ್ವರಾಜ್ಯದ ಬಟ್ಟೆಯ ಕೊಡು ಕೊಡು ॥೫॥

ಭಾರತ ಸ್ವಾತಂತ್ರ್ಯಾಂಬರ ಮಿತ್ರನು ।
ಧೀರ ಮಹಾತ್ಮನು ಸಾರುವ ನುಡಿಯನು ।
ದೂರದೆ ಮನ್ನಿಸಿ ಖಾದಿಯ ತೊಡು ತೊಡು ॥೬॥

(ರಾಷ್ಟ್ರಬಂಧು 13-4-31: ನವಯುಗ 16-4-1931:
ತಾಯಿನಾಡು 20-4-31)

ಲೇಖಕರು : ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯಿ

('ಸ್ವರಾಜ್ಯಗೀತಾಮೃತ,' ಕಾಸರಗೋಡು, 1947)

೭೦. ಏಕೆಧರಿಸುವೆ ಸಾಕುಬಿಡು ಪರದೇಶಿ ಜನರಾ ವಸ್ತ್ರವಾ

("ಮೇರಾ ಮೌಲಾ ಬುಲಾ ...." ಎಂಬಂತೆ)

ಮಾತೆ ಭಾರತಿಯು ಸ್ವತಂತ್ರ ಮಂತ್ರವಂದೇ ಮಾತರಂ
ಘಾತುಕೀ ವಿದೇಶಿ ಜನರಿಗೆ ದಾಸರಾಗಿರೆ ಸಂತತಂ ।

ಏಕೆಧರಿಸುವೆ ಸಾಕುಬಿಡು ಪರದೇಶಿ ಜನರಾ ವಸ್ತ್ರವಾ
ಹಾಕುಬೆಂಕಿಲಿ ಉರಿಲಿ ಧಗಧಗ ಧರಿಸು ಖಾದಿ ಪವಿತ್ರವಾ ॥

ಮಾತಾ ದೇಶಹಿತಾ ಘನಸೇವನವು
ಸಖನೆ ತಕಲಿ ತಿರುವೊ ಪಡೆಯೊ ನೀ ಸುಖವಾ
ಭಗಿಸಿ ಚರಕವಿದು ಪರಮಪಾವನವು ॥

ಹೂಡಿಕೂಡಿ ಸ್ವತಂತ್ರ ಸ್ವರಾಜ್ಯವನು
ಬಿಡದೆ ದೇಶದಸೇವೆ ನಡೆಯಿಸಿ ಪಡೆಯಿರಿ
ಒಡೆಯು ಶೇಷಾದ್ರೀಕ ಪೊರೆವನುಕಡೆಗೂ ॥

ಲೇಖಕರು : **ತಿಳಿಯದು**

(ಅತ್ಯಂತ ಜನಪ್ರಿಯವಾದ ಈ ಹಾಡಿನ ಮುದ್ರಿತ ಪಾಠ ದೊರೆಯಲಿಲ್ಲ. ಭಾಗಭಾಗವಾಗಿ ಸಂಗ್ರಹಕ್ಕೆ ನೆರವಾದವರು : 1. ಕೆ. ರಮೇಶ್ ಕಾಮತ್, ಮಲ್ಪೆ. 2. ಪಿ. ದಾಮೋದರಯ್ಯ 3. ಬಿ. ಸುಬ್ರಾಯ ಮಲ್ಯ)

೭೧. ಭಾರತ ಬೋಧೆ

ರಾಗ, ತಾಳ, ಮಟ್ಟು :– ರಾಷ್ಟ್ರೀಯದೇಳಿಗೆಗೆ ಮನವ ನೀನಿರಿಸು ಎಂಬಂತೆ.

ಭಾರತೀಯರೆ ! ನಮ್ಮ ಭಾಗ್ಯ ಸಂಪತ್ತೂ ।
ಸೂರೆ ಸುಲಿಗೆಯಾಗಿ ಹೋಗುತ್ತ ಬಂತೂ ।
ಘೋರ ನಿದ್ದೆಯ ಕಾಲವದು ಹಿಂದೆ ಸಂತೂ ।
ಜೋರಿನಿಂದೇಳುವ ಹೊತ್ತೀಗ ಬಂತೂ ॥ ೧ ॥

ಬೆಳ್ಳಿಭಂಗಾರವಿದ್ದುದು ಬರಿದಾಯ್ತು ।
ಟೊಳ್ಳು ಕಾಗದ ಎಲುಮಿನಿ ತುಂಬಿಹೋಯ್ತು ॥
ಒಳ್ಳೊಳ್ಳೆ ನವರತ್ನಗಳು ಕಾಣದಾಯ್ತು ।
ಕೊಳ್ಳೆಯಾದೆವು ಪರದೇಶಿಯರ್ಗಿಂತೂ । ॥ ೨ ॥

ಮನೆಯೊಳ್ ಹಿಂದಿದ್ದ ಕಂಚಿನ ಬಟ್ಟಲಿಲ್ಲಾ ।
ಗಣನೆಯಿಲ್ಲದ ತಾಂಬ್ರ ಪಾತ್ರೆ ಈಗಿಲ್ಲಾ ॥
ಮಿನುಗುವ ಗಾಜು ಪಿಂಗಾಣಿಯೇ ಎಲ್ಲಾ ।
ಜನರಿಗೂ ಚಿಮಿಣಿ ಬುರ್ಡೆಯೆ ಬೇಕಾಯ್ತಲ್ಲಾ । ॥ ೩ ॥

ವೀರಭಾರತ ಭಾಗ್ಯನಿಧಿ ರಾಷ್ಟ್ರವೆನಿಸೀ ।
ದಾರಿಕಾಯಲು ಬೇಕಾಯ್ತೀಗ ಪರದೇಶೀ ॥
ದೂರದಿಂದಲ್ಲಿ ವಸ್ತ್ರದ ರಾಶಿ–ರಾಶೀ ।
ಹೇರುಗಳ್ ಬಂದು ಗೈದವು ನಮ್ಮ ಘಾಸೀ ॥ ೪ ॥

ಕೈಗಾರಿಕೆಯು ದೇಶದೊಳು ನಾಶವಾಯ್ತೂ ।
ಮೈಗಾವಲಿಗು ಪರಜನರೇ ಬೇಕಾಯ್ತೂ ।
ಸೈಗುಟ್ಟಲಿಕೆ ನಾವು ಚೆನ್ನಾಗಿ ಕಲಿತೂ ।
ಐಗಳಿಲ್ಲದ ಮಠದಂತಾಗಿ ಹೊಯ್ತೂ ॥ ೫ ॥

ಬೀಡಿ ಸಿಗ್ರೇಟ್ ಚುಟ್ಟಾ ನಮಗೀಗ ಬೇಕೂ ।
ಓಡ್ಯಾಡಲಿಕ್ಕಾಗಿ ಬಾಯ್ಸಿಕಲ್ಲಾಗ ಬೇಕೂ ॥
ಲೇಡಿ ರಿಸ್ಟ್ವಾಚ್ ಕೈಗೆಕಟ್ಟಿ ದರ್ಸಾಕೂ ।
ಬ್ರಾಂದಿ ಶರಾಬ್ ಸೇಂದಿ ಕುಡಿವ ಫಡಾಕೂ ॥ ೬ ॥

ತಲೆಗಿಡಲಿಕೆ ಬೇಕೇಬೇಕೊಂದು ಹ್ಯಾಟೂ ।
ಚಲುವಾಗಿ ಮೈಗಿರಬೇಕು ಲೋಂ–ಕೋಟು ॥
ಬಲವಾಗಿ ಕಾಲಿಗೆ ಕಟ್ಟಲು ಬೂಟೂ ।
ಗೆಲವಾಗಿ ನಡೆ ನುಡಿ, ದರ್ಬಾರು ಥಾಟೂ ॥ ೭ ॥

ಥೊರೆಯಾಗಿ ಮೆರೆಯುವಾತುರದ ತವಾಸೇ ।
ಸರಿಯಾಗಿ ಫ್ರೆಂಚ್ ಕಟ್ಟು ಮಾಡಿದ ಮೀಸೆ ।
ಬರೆಹುಲಿ ಮೈಬಣ್ಣಕ್ಕಾಕಿಶೆಯ ನಿರಿಸೇ ।
ಸರಿಯಣ್ಣ ಮೈಸುಟ್ಟು ಕೊಂಬುದು ಲೇಸೇ ॥ ೮ ॥

ಶರಧಿರಾಜನಿಗೂ ನಮಗೂ ನಂಟತನವೂ ।
ಸ್ಥಿರವೆನೆ “ ಉಪ್ಪಿಗೇ ”ಕಿಲ್ಲಿ ಬಡತನವೂ ? ॥
ಪುರಕ್ಷೀರ ನಿಧಿವಾಸ ಸ್ಥಾನವೇ ಘನವೂ ॥
ಇರಲು ಮಜ್ಜಿಗೆಗೇಕೆ ನಾಸ್ತಿ ವಚನವೂ ? ॥ ೯ ॥

ಧರೆಯೊಳ್ ನಮ್ಮವರ ಪೂರ್ವಾಭಿಮಾನವೆಲ್ಲಿ ? ।
ತರಗತಿ ನಿರ್ಣೈಸಿಹರು ನೋಡಿರಲ್ಲಿ ॥
ಕರಿಜನ ನಾವೆಂದು ಬಿಳಿವರ್ಗದಲ್ಲಿ ।
ಬೆರೆಶಿರ ಬಿಡರು ಪೂರ್ವಾಫ್ರೀಕದಲ್ಲಿ ॥ ೧೦ ॥

ಹಿಂದೂ ಮುಸಲ್ಮಾನ್ ಬಂಧುಗಳಿನ್ನೂ ।
ಒಂದೇ ಮನದಿ ಫಾರ್ಶಿ ಕ್ರಿಸ್ತ್ಯಾದಿಯರನ್ನೂ ॥
ಪೊಂದಿಸುತ್ತೈಕ್ಯ ಮತ್ಯದೊಳ್ ಮುಂದಿನ್ನು ।
ಚಂದದೊಳಿರೆ ನಮಗಿದಿರಿಹರೇನು ? ॥ ೧೧ ॥

“ ಕುಡಿತ್ತತನ ” ವೆ ಸರ್ವ ಕೇಡಿನ ಮೂಲ ।
“ ಕುಡಿತನ ” ವೆ ದ್ರವ್ಯ ನಿಧಿಯು ನಿರ್ಮೂಲ ॥
“ ಕುಡಿಕತನ ” ವೆ ಪಿಶ್ಯಾಚನ ಮೋಹಜಾಲಾ ।
ಕುಡಿದು ಬಿಡಲು ನಮಗಿದುವೇ ಸುಕಾಲಾ ॥ ೧೨ ॥

ಗುತ್ತೆ ಯೇಲಮ್ಮಿಗೆ ನಾವು ನಿಲ್ಲಬೇಕೆ ? ।
ನಿತ್ಯ ಬಡವರ ಗೋಳದು ನಮಗೇಕೆ ? ॥
ತೆತ್ತ ದುಡ್ಡಿನಗಂಟು ಹೋಯ್ತುತ್ತ ಜೋಕೇ ।
ಮತ್ತಿದ ತಿಳಿದರೂ ಬುದ್ದಿಲ್ಲವೇಕೆ ? ॥ ೧೩ ॥

ಸ್ವದೇಹ ಘೋಷಣೆಯಾಯ್ತೆಮಗೆಲ್ಲ ? ।
ಸ್ವದೇಶಿ-ಯಾಹಾರ: ಹವೆ, ಬಿಸಿಲಲ್ಲಿ ॥
ಸ್ವದೇಶಮಾತೆ ” ಭಾರತಿ ” ಯುದರದಲೀ ।
ಸ್ವದೇಶಕ್ಕಾಗಿ ಹುಟ್ಟಿಹೆವು ನಾವಿಲ್ಲಿ ॥ ೧೪ ॥

ತಿಳಿದಿದ ದೇಶಸೇವೆಗೆ ಮನ ನೀಡೀ !
ತಿಳಿದು ದೇಶೋದ್ಧಾರಕ್ಕಾಗಿ ಒಡಗೂಡೀ ॥
ಅಳಿದರೀ ದೇಹ ದೇಶದ ಮಣ್ಣೀ ನೋಡೀ ।
ತಿಳಿಸಿ ನೀವಿದ ದೇಶದ್ರೋಹಿಯೊಳ್ ಬೇಡೀ ॥ ೧೫ ॥

ದೇಶೀಯುವಾದ “ ವಸ್ತ್ರಗಳನ್ನೆ ”ಧರಿಸೀ ।
ದೇಶೀಯು “ ಮಗ್ಗ ” ಕುತ್ತೇಜನ ಕೊಡಿಸೀ ॥
ದೇಶಿಯು ರಾಟೆಮೂಲಕ “ ನೂಲು ” ತೆಗಿಸೀ ।
ವಾಸಿಪ ಮನೆಯೊಳೆಲ್ಲಗಿದ ಕಲಿಸೀ ! ॥ ೧೬ ॥

ಪರದೇಶದೊಡವೆಯುಗೊಡವೆಯುಂ ಬಿಡಿಸೀ ।
ಪರದೇಶಿಯುರ ವೇಷ ಭಾಷೆ ಸಾಕೆನಿಸಿ ! ॥
ಪರರೋಳ್ ಮತ್ಸರ ಬೇಡಾ ನಂಬಿಕೆ ತ್ಯಜಿಸೀ ! ।
ಸ್ಥಿರದಿಂ “ ಸ್ವದೇಶೀ ” ಯುವ್ರತವಿಂದೆ, ದರಿಸೀ ! ॥ ೧೭ ॥

" ಗಾಂಧಿ " ಮಹಾತ್ಮನು " ನೆಹರು" ಮುಂತಾದಾ ।
ಮುಂದಾಳುಗಳು ತಿಳಿಸಿದ ಬುದ್ಧಿವಾದಾ ॥
ಎಂದಿಗು ಮರೆಯದೆ ವರ್ತಿಸಿ ಸುಖದಾ ।
ಮುಂದಿನ ಹಾದಿ ಸ್ವೀಕರಿಸಿರಾನಂದಾ ॥ ೧೮ ॥

ಇನ್ನಾದರು ಮನದೊಳ್ ಧೈರ್ಯತಾಳೀ ।
ಬನ್ನಿ ಬ್ಯಾ ಬಡಿಕ ತನವ ಹಿಂದೆತಳ್ಳೀ ॥
ಭಿನ್ನ ಭೇಧವ ಕಲಿಸುವ ಬೆಂಕಿ ಕೊಳ್ಳಿ ।
ಯನ್ನೀಗ ಉರಿಪರಿಕೋ–ನೋಡಿಕೊಳ್ಳಿ ॥ ೧೯ ॥

ಎಳಿರೆದ್ದೇಳಿರಿನ್ನಾದರ್ಕಣ್ತೆರೆದೂ ॥
ಹಾಳಾದ " ಜಾತಿ ವೈಷಮ್ಯ " ಗಳ್ತೊರೆದೂ ॥
ಪೇಳಿದ ರಘುರಾಮದಾಸ ತಾ ಕರೆದೂ ಬಾಳಿರ್ನೀಕ್ಯವೈಕ್ಯಮತ್ಯದೊಳಿನ್ನು
ಮೆರದೂ ॥ ೨೦ ॥

ಲೇಖಕರು : **ಪೆ. ರ. ನು. (?)**

೭೨. ನವರೀತಿ ಲಾವಣಿ

ಧಾಟಿ—ಖಡೀಚಾಲ್

ನವಯುಗ ಪದ್ಧತಿ ನವಸ್ತ್ರೀ ಪುರುಷರ ನವರಂಗಾಟಗಳೆಚ್ಚಾಯ್ತು । ನವ ।
ನವೀನಕೌತುಕ ಜಗವಾಯ್ತು । ನವ । ಲಾವಣಿಯೊಂದಿದು ಬಯಲಾಯ್ತು ।
ಕಾವಿಯು ಧರಿಸಿದ ಕಪಟ ಸನ್ಯಾಸಿಗಳವಿಚಾರತ್ವಗಳತಿಯಾಯ್ತು ॥ ಪ ॥

ಕನ್ನಡ ನಾಡಿನ ಕನ್ನಡ ಜನರಿಗೆ ಕನ್ನಡ ಭಾಷೆಯೆ ಮರತೋಯ್ತು । ವರ ।
ಕನ್ನಡ ಇಂಗ್ಲೀಷ್ ಬೆರದೋಯ್ತು । ಘನ । ಹೊನ್ನಿನ ದೇಶವು ಮಣ್ಣಾಯ್ತು ।
ತಿನ್ನಲುಮನೆಯೊಳು ಸೊನ್ನೆಗಳಾದರು ಉನ್ನತಶೋಕಿಯು ಬಲವಾಯ್ತು ॥ ೨ ॥

ಜಂಟಲ್‌ಮೆನ್‌ಗಳ ಗಂಟಲ ಗಾಣಾ ಕಂಠಕೆ ಕಾಲರ್ ಬಿಗಿದಾಯ್ತು । ನಿಜ ।
ಒಂಟೆಯು ಕತ್ತಿನ ತೆರವಾಯ್ತು । ಕೈಲ್ । ಹಂಟಿಂಗೊಂದ್ಬಲ್ ಭೇಷಾಯ್ತು ।
ಕಂಟಕಳಿವ ಶ್ರೀಕಂಠನಧ್ಯಾನವು ಜಂಟಲ್‌ಮೆನ್‌ಗಳಗಿರದೋಯ್ತು ॥ ೩ ॥

ಹೋಟಲ್ತಿಂಡಿಯು ನಾಟಕ ಸಿನಿಮಾ ಕಾಟವು ಪೇಟೆಯೊಳೆಚ್ಚಾಯ್ತು ।
ದಿಟಹ್ಯಾಟು ಬೂಟು ಕಾಫ್ ತಲೆಯಾಯ್ತು । ಮೋಟು ।
ಮೋಟುದ್ದ ಮೀಸೆಯು ಮುಖವಾಯ್ತು । ಕೋಟು ರುಮಾಲು
ಪೇಟಪಂಚೆಗಳು ಸೇಟ್ಮಲ್ತಾನರಿಗಡವಾಯ್ತು ॥ ೪ ॥

ಮುದ್ದಿನ ಮಗನಿಗೆ ವಿದ್ಯವ ಕಲಿಸಲು ಇದ್ದಂತ ಹಣವೆಲ್ಲ ಕಳೆದೋಯ್ತು ।
ಹೋಲ । ಗದ್ದೆಮನೇಮಠ ಮಾರಾಯ್ತು । ಚಲೋ । ಬುದ್ಧಿಯು ಕಂದನು
ಕಲಿತಾಯ್ತು । ಮುದ್ದುಮಗನ ಕೈಗುದ್ದಿಗೆಶಿಲ್ಕಿ ಮೆದ್ದಲುಸತಿಪತಿಗಿರ
ದೋಯ್ತು ॥ ೫ ॥

ವಾಸನೆ ಎಣ್ಣೆಯು ಫೇಸ್ ಪೌಡರ್ ಎಳೆಕೂಸುವೃದ್ಧರಿಗು ಬೇಕಾಯ್ತು । ಬಿಳಿ । ಮೀಶೆಗೆ ಕರೆಮಸಿ ಬಳೆದಾಯ್ತು । ಪರ । ದೇಶದಿ ಪೈಸಾ ಜರಗೋಯ್ತು । ಕಾಸಿಗೆ ಚಕ್ಕರ್ ಭಾಷೆಗೆ ಮಕ್ಕರ್ ವೇಷಭೂಷಣದ ಜಗವಾಯ್ತು ॥ ೭ ॥

ಊಟಕ್ಕೆ ಟೇಬಲ್ ಪಾಠಕ್ಕೆ ಬೈಬಲ್ ಆಟಕ್ಕೆ ಇಸ್ಪೀಟಾಗೋಯ್ತು ॥ ಪರ ॥ ಮೋಟಾರ್ ವಾಕಿಂಗ್ ಪೋಕಾಯ್ತು । ಪರ । ಸೋಟಾಸಿಗರೇಟ್‌ಸೇದಾಯ್ತು ಬಾಟಲ್ ಬ್ರಾಂದಿಯು ಕೋಟಲೆಯಿಂದಲಿ ಲಾಟರಿ ಇನ್‌ಸ್ಟಾಲ್ಮೆಂಟಾಯ್ತು ॥ ೭ ॥

ಶ್ರೇಷ್ಠಭಾರತದ ಶ್ರೇಷ್ಠ ಜನಾಂಗದಿ ಕೋಷ್ಟದಭಾಷೆಯು ಬೆರೆದೋಯ್ತು ವಾಟ್ । ಮಿಷ್ಟರ್ ಮಿಸ್ಸೆಸ್ ಮೊದಲಾಯ್ತು । ಗುಡ್ । ಮಾಸ್ಟ್ರ್ ಎಸ್ಸೆಸ್ ಕಲಿತಾಯ್ತು । ಅಷ್ಟಿಷ್ಟಲ್ಲದ । ಶಿಷ್ಟರ ಬಾಯೊಳು ಬಟ್ಲರ್ ಇಂಗ್ಲೀಷ್ ಬಲ ವಾಯ್ತು ॥ ೮ ॥

ಸೇಂದಿ ಷರಾಬು ಬ್ರಾಂದಿಯು ವಿಸ್ಕಿ ಒಂದರ ಮೇಲೊಂದೆಚ್ಚಾಯ್ತು । ಇದು ಮಂದರು ಸೇವಿಪದತಿಯಾಯ್ತು । ಘನ । ಗಾಂಧೀಜಿ ಮಾತೇ ಮರತೋಯ್ತು । ಸೇಂದಿಯು ಸೇವನೆ ಪೊಂದುತ ಭಾರತ ಬಂಧುಜನಾಂಗವು ಕುಂದೋಯ್ತು ॥ ೯ ॥

ಅಂಗನಮಣಿಯರ ತೊಂಗುಬಿಂಗುನವಶೃಂಗಾರ ಚೇಷ್ಟೆಗಳತಿಯಾಯ್ತು । ಇವ । ರಂಗಡಿ ಬೀದಿಗಳಲೆದಾಯ್ತು । ಪರ । ಸಂಗದಿ ಸ್ತ್ರೀ ನಡೆ ಕೆಟ್ಟೋಯ್ತು । ಅಂಗೈ ಕರಿಬಳೆ ಮುಂಗೈ ರವಿಕೆಯು ಮಂಗನವಾಯುವೆ ಆಗೋಯ್ತು ॥ ೧೦ ॥

ಪಂಕಜಾಕ್ಷಿಯರ ಬಿಂಕದ ಮುಖದೊಳು ಕುಂಕುಮ ಅರಶಿನ ಹಾರೋಯ್ತು । ಇವ । ರಂಕೆನಿಶ್ಯಂಕೆಯೆ ಆಗೋಯ್ತು । ಬಲು । ಸಂಕಟ ಸುದ್ದಿಯುಮಾತಾಯ್ತು । ಚಂಕಿಯು ಲೇಸಿನ ಡೊಂಕದ ಬೈತಲೆ ಮಂಕಿನ ಸ್ತ್ರೀಯರ ನಡೆಯಾಯ್ತು ॥ ೧೧ ॥

ಈ ಭಾರತ ಕೆಲ ಸ್ತ್ರೀಬಲ ಸಮಿತಿಯು ಎ.ಬಿ.ಸಿ.ಡಿ. ಯ ಕಲಿತಾಯ್ತು। ಚಿಕ್ಕ। ಬೇಬೀ ಕಾರನು ನಡೆಸಾಯ್ತು। ವಿಸ್ಕಿ। ಲೇಬಲ್ ಬಾಟಲ್ ಹೊಡೆದಾಯ್ತು ಏ.ಬಿ.ಸಿ.ಡಿ.ಯ ಶೋಭೆಯ ರೋಗದಿ ಬೇಬೀ ಲೇಡಿಯ ರೂಪಾಯ್ತು ॥ ೧೨ ॥

ಕಂಡ ಕಂಡ ಕಡೆ ಗಂಡರ ಬಿಟ್ಟಿಹ ರಂಡೆರ ಪುಂಡಾಟಗಳಾಯ್ತು। ಇವ। ರೆಂಡ ಸಾರಾಯ್ಕುಡಿಕಲಿತಾಯ್ತು। ಹೊಸಮಿಂಡರ ಪುಡುಕುವುದತಿಯಾಯ್ತು। ಮಿಂಡರ ಮೋಟಾರ್ ಬಂಡಿಲಿ ಕುಳಿತು ಗಂಡರ ಅಣಕಿಪ ತೆರವಾಯ್ತು ॥ ೧೩ ॥

ಸೂಳೆಯರಾವಳಿ ಸುಲಿಗೆಯ ಮಾಡಿತು ಬಾಲರಭಾಗ್ಯವು ಬರಿದಾಯ್ತು। ಕಲಿ। ಕಾಲದ ಮಹಿಮೆ ಹೀಗಾಯ್ತು। ಇದ। ನೇಳಲು ಕನಿಕರವೆನಗಾಯ್ತು। ಕಾಳಿ ಕರಾಳಿರ ಕೇಳಿಯು ಮಕ್ಕಳು ಹೊಳೇ, ಭಾವಿ, ಕೆರೆ ಪಾಲಾಯ್ತು ॥ ೧೪ ॥

ವಿಶೇಷ ಹಿಂದೂ ಮುಸಲ್ಮಾನರಿಗೆ ನಾ ತುಸು ಕರವನು ಮುಗಿದಾಯ್ತು। ಹರಿ। ದಾಸ ನೀಲ್ಕಂಠನ ಪೆಸರಾಯ್ತು। ವರ। ದೇಶೀಯ ಲಾವಣಿ ಪದ ವಾಯ್ತು। ದಾಸನು ಶ್ರೀಹರಿ ದಾಸ ಪುಟ್ಟಣ್ಣನ ದಾಸ ನಂಜಣ್ಣನ ಪರ ವಾಯ್ತು ॥ ೧೫ ॥

ಲೇಖಕರು : **ಬಿ. ನೀಲಕಂಠಯ್ಯ**

(ಮುದ್ರಿತ ಪುಸ್ತಿಕೆಯಿಂದ)

೭೩. ಕರ್ನಾಟಕ ವಿಜಯ

ಭಾಗ–೧

ವಿರಾಟಪುರುಷನ ಭರತ ಪ್ರಪಂಚದಿ ಜಯಕರ್ನಾಟಕ ಶೃಂಗಾರ ।
ಪರಮಸನಾತನ ಧರ್ಮಾಚರಣೆಗೆ ಮಾತೃಸ್ಥಾನವಾಗಿದೆ ಪೂರ ॥ಪ॥

ಧಾರಿಣಿಮಧ್ಯ ಸುಮೇರುಗೆದಕ್ಷಿಣ ತರುಣಾರುಣಪ್ರಭೆಮಯದಿಂದ
ನಿರುತಾಕಾಶಕೆ ಸರಿಸಮವೆನಿಸಿದ ಪರ್ವತ ಶ್ರೇಣಿಗಳೊಗ್ಗಿಂದ ॥
ಪರಮಸರೋವರ ಪರಿತೋಷಿಪನದಿ ಗಿರಿ ದುರ್ಗಂಗಳ ಬೀಡಿಂದ ॥
ಸ್ಥಿರಮನದಿಂದಲಿ ಜಪತಪಗೈಯುವ ಪುಣ್ಯಕ್ಷೇತ್ರಗಳ ಪೆಂಪಿಂದ ।
ಧರೆಕರ್ನಾಟವು ಹರಿ, ಶಿವ, ಓಂ ಯೆಂಬರುಪಿನ ಮಂತ್ರವಬಲದಿಂದ ॥
ಪುರುಷ ಸ್ತ್ರೀಯರೆಂಬೆರಡು ಭೇದದಿಂದಿರುವ ಚರಾಚರದಮಲಿಂದ
ಸುರಚಿರಸೃಷ್ಟೀ ಸ್ಥಿತಿ ಲಯಕರ್ತರ ತ್ರೀಮೂರ್ತಿಗಳವರದಯದಿಂದ ।
ನಿರುಪಮಋಗ್ಯಜು ಸಾಮಅಥರ್ವಣ ಚತುರವೇದಗಳನಿಯಮಿಂದ ॥
ಸ್ಫುರಿಪ ಪೃಥ್ವಿ, ಅಪ್ ತೇಜೋವಾಯ್ವಾಕಾಶ ಪಂಚಭೂತಗಳಿಂದ ।
ಧರ, ತರ್ಕವ್ಯಾಕರಣ ಮಿಮಾಂಸ ಜ್ಯೋತಿಷಾಯುರ್ವೇದಗಳಿಂದ ॥

ದೊಡ್ಡದಾನ್

ಪ್ರಥಿತಮಹಾಘನ ಗೌತಮಾದಿವರ ಸಪ್ತ ಋಷಿಯತಪೊಬಲುಮೆಗಳಿಂ ।
ಹಿತದೊಳಗಿಂದ್ರನು ಅಗ್ನಿಯ ಮೊದಲಾದಷ್ಟ ದಿಕ್ಪಾಲರ ಪಹರೆಗಳಿಂ ॥
ಖ್ಯಾತಿಯಾಂತ ಚಂದ್ರಾರ್ಕ ನವಗ್ರಹ ರಾಹು ಕೇತು ಅಧಿಕಾರಗಳಿಂ ।
ಸತತಕಾಮ ಧರ್ಮಾರ್ಥ ಮೋಕ್ಷಮಹ ಚತುರವಿಧದ ಪುರುಷಾರ್ಥಗಳಿಂ॥

ಚಿಕ್ಕದಾನ್

ಸಾಮ ದಾನ ಭೇದ ದಂಡಾದಿ ಚತುರುಪಾಯಗಳಿಂ ।
ಕ್ರಮಂವಾದ ಮತ್ಸ್ಯಕೂರ್ಮಾದಿ ದಶಾವ್ತಾರಗಳಿಂ ॥

ವಿಮಲೀಕ ವಿಂಶದ್ಯವತಾರದ ಮಹ ಮಹಿಮೆಗಳಿಂ ।
ರಮಣೀಯವಾದ ಕರ್ಣಾಟ ವಮಿತ ಸ್ತೋಮಗಳಿಂ ॥

ಗುಲ್ಲುಡಾನ್

ಸ್ತುತ್ಯಮಾಗಿಹುದು ಧಾತ್ರಿ ಯೊಳಗೆ ।
ಸತ್ಯ ಗುಣ ಕೀರ್ತಿಯ ಜೊತೆಯೊಳಗೆ ।
ನಿತ್ಯ ಧನ ಧಾನ್ಯ ಸಂಪತ್ತೊಳಗೆ ॥
ಪ್ರತ್ಯಗಾತ್ಮ ಜಗನ್ನುತ್ಯ ಪ್ರಸಕ್ತರ ನಾಡಿದೆಂದು ಬೆಳಗೆ ॥

ಶ್ಲೋಕ

ಸಕಲ ವರ್ಣಾಶ್ರಮಕಿದಾಶ್ರಯ ಸುರ ಮಹೀರುಹ ತೋಟವು ।
ನಿಖಿಲ ಭೂತ ದಯಾ ಪರತ್ವದ ನಿಧಿಯು ಈ ಕರ್ಣಾಟವು

ಚಾಲ್

ತರಣಿಕೋಟಿ ಸುರುಚಿರ ಕರ್ಣಾಟಕ ಕಮಲಪತ್ರದಂತಾಕಾರ ।
ಪರಮಸನಾತನ ಧರ್ಮಾಚರಣೆಗೆ ಮಾತೃಸ್ಥಾನವಾಗಿದೆಪೂರ ।

ಭಾಗ–೨

ಧರಣಿಮಂಡಲದಿ ಕರ್ಣಾಟವು ಯೆನೆ ಪರಮ ಋಷಿಗಳುತ್ಪತ್ತಿಸ್ಥಾನ
ಸಾರತರಾ ಸನ್ಮಾರ್ಗ ದುರಂಧರ ಆರ್ಯರ ವಸತಿಗಳಮರವನ ॥
ಪರುಮದ್ರಾವಿಡರ ಆರ್ಯರಸಂಸ್ಕೃತಿ ಲಹರಿಯ ಸಂಗಮದಾಸ್ಥಾನ
ಅರಿಗಳ ಶಿರಗಳ ತರಿದೀಡಾಡಿದ ಕೀರ್ತಿವಂತರಿಗೆ ಕಮಲವನ ॥
ಅರುಮತದಗುರು ಅದ್ವೈತಾಗ್ರಣಿ ಶಂಕರಾರ್ಯ ರಾನಂದವನ ।
ಸುರಚಿರವೆಗ್ಗಳ ವೇದವೇದಾಂತದ ರಾಮಾನುಜಾರ್ಯರ ಪುಣ್ಯವನ ॥
ನಿರುತದ್ವೈತಮತ ಸ್ಥಾಪಕರೆನಿಸಿದ ಮಧ್ವರಾಯರುದ್ಯಾನವನ ।

ವೀರಶೈವಮತ ಪಾವನಗೊಳಿಸಿದ ಬಸವೇಶ್ವರರಾನಂದವನ ।
ಪಾರಮಾರ್ಥ ಪರತತ್ವಪ್ರದೀಪರ ಕನಕ ಪುರಂದರರಾಸ್ಥಾನ ।
ಚಾರುವೇದತತಿ ಭಾಷ್ಯವರಚಿಸಿದ ವಿದ್ಯಾರಣ್ಯರ ಮಧುರವನ ॥

ದೊಡ್ಡುಡಾನ್

ಪ್ರಾಕೃತಿಕಾಮಲ ಭೇದಪ್ರಭೇದದಿ ಪ್ರಾಕೃತಮಾತೆಯ ಮಲೆನಾಡು
ಪ್ರಕೃತಿ ಭಾಗ್ಯದ ಚಿತ್ರವಿಚಿತ್ರದಿ ವೃದ್ಧಿವಿಕಾಸದ ಪೊನ್ನಾಡು ॥
ಸುಕೃತ ಸಾಂಘಿಕ ರಾಜಕೀಯ ಧಾರ್ಮಿಕ ರಣಾಂಗಣದೀಬೀಡು ॥
ಈ ಕೃತಿ ಸಂಸ್ಕೃತ ಕರ್ಣಾಟಕ ಸಾಹಿತ್ಯ ಸಂಪತ್ತಿಯ ನೆಲವೀಡು ।

ಚಿಕ್ಕುಡಾನ್

ಆರ್ಥಿಕದ ದೃಷ್ಟಿಯಿಂದರ್ಥ ವೃದ್ಧಿ ಪೊಂದಿಹುದು ।
ಆರ್ತರಿಗೆ ಆತ್ಮವ ತ್ಸರ್ವಭೂತ ವೆನಿಸಿಹುದು ॥
ಸ್ವಾರ್ಥರಿಗೆ ಮೃತ್ಯು, ಯಮ, ದುಷ್ಟ ಅಶ್ವದಂತಿಹುದು ।
ಧೂರ್ತರಿಗೆ, ವ್ಯರ್ಥರಿಗೆ ಪಾರ್ಥನಸ್ತ್ರಮಾಗಿಹುದು ॥

ಗುಲ್ಲುಡಾನ್

ಶೀಲ ಸೌಜನ್ಯದ ಮಣಿ ಯೆನಿಸಿ ।
ಸುಲಭ ಸಂಗೀತದ ಗಣಿ ಯೆನಿಸಿ ।
ಲಲಿತ ಕಲೆ ಗಳಿಗಿದು ಖನಿ ಯೆನಿಸಿ ॥
ಕಲುಷ ನಾಶಮಾ ದೊಲುಮೆ ಕೀರ್ತಿಯಲಿ ಒಲುಮೆ ನಾಡೆಂದೆನಿಸಿ ॥

ಶ್ಲೋಕ

ಕನ್ನಡಾಂಬೆ ಸಂಕ್ಷಿಪ್ತ ಭಾರತ ಖಂಡ ದಂತಿಹುದಿಳೆಯಲಿ ।
ಸನ್ನುತಾಂಗಿ ಪ್ರಸನ್ನ ಪ್ರವರ ಅಭೇದ್ಯ ಮಾಗಿಹುದರ್ತಿಲಿ ॥

ಚಾಲ್

ಚಿರದಿನ ಸಂಚಿತ ಭಾಗ್ಯದ ಮಾತೆಗೆ ಕಲ್ಪವೃಕ್ಷದಂತಾಕಾರ ।
ಪರಮಸನಾತನ ಧರ್ಮಾಚರಣೆಗೆ ಮಾತೃಸ್ಥಾನವಾಗಿದೆಪೂರ ॥

ಭಾಗ–೩

ಭರತ ಪ್ರಪಂಚದ ಜಯಕರ್ಣಾಟಕ ವೀರರತ್ನಗಳ ತುಹಿನಾದ್ರಿ ।
ಪರಮಪ್ರಭಾಕರ ಚಂದ್ರಗುಪ್ತಮೇಣ್ ಅಶೋಕಚಕ್ರಿಯ ಅರುಣಾದ್ರಿ ॥
ವೀರೋಚಿತ ರಣ ವೀರ ಕದಂಬರ ಶಾತವಾಹನರ ಪೂರ್ವಾದ್ರಿ ।
ಪರಮೋಜ್ವಲ ಅವತಾರ ಪುರುಷರಾ ಚೋಳ ಚಾಲುಕ್ಯರ ವಿಂಧ್ಯಾದ್ರಿ ॥
ಪರಮೇಶ್ವರ ಸತ್ಯಾಶ್ರಯ ಇಮ್ಮಡಿ ಶ್ರೀ ಪುಲಿಕೇಶಿಯ ಧವಳಾದ್ರಿ ।
ಸಾರಗುಣಜ್ಞರ ಗಂಗರಸರ ಮೇಣ್ ವೀರಬಲ್ಲಾಳರ ಮಲೆಯಾದ್ರಿ ॥
ಧೀರೋದಾತ್ತರ ವಿಕ್ರಮಾರ್ಕನೃಪ ರಾಷ್ಟ್ರಕೂಟರಿಗೆ ಸಹ್ಯಾದ್ರಿ ॥
ದೂರದರ್ಶಿದಾತಾರ ದೇವಗಿರಿ ಯಾದವ ಹೊಯ್ಸಳರುದಯಾದ್ರಿ ॥
ಸ್ವರಾಜ್ಯಜ್ಯೋತಿಯ ಪ್ರಜ್ವಲಗೊಳಿಸಿದ ಬುಕ್ಕ ಮಾಧವರ ಹೇಮಾದ್ರಿ ।
ಪರಸತಿ ಸೋದರರೆಂಬುರೆ ಬಿರುದಿನ ಮೈಸೂರೊಡೆಯರ ಲಲಿತಾದ್ರಿ ॥

ದೊಡ್ಡಡಾನ್

ಕನ್ನಡ ಕವಿಕುಲ ಸಾರ್ವಭೌಮರಿಗೆ ಕರ್ಣಾಟಕ ಕರದರ್ಪಣವು ।
ಪೊನ್ನ ಪಂಪ ಮಹ ಬಿಲ್‌ಹಣ ಹರಿಹರ ರಾಘವಾಂಕರಿಗೆ ಸುರತರುವು ॥
ರನ್ನ, ಜನ್ನ, ವಿರುಪಾಕ್ಷ ಭೋಜ, ಲಕ್ಷ್ಮೀಶರಿಗಿದು ಹಾಲೋಗರವು ।
ಬಾಣ, ಶುಕನು, ಕವಿ ಕಾಳಿದಾಸಮೇಣ್ ರುದ್ರಭಟ್ಟರಿಗೆ ಸುರಪುರವು ॥

ಚಿಕ್ಕಡಾನ್

ಒಂದೋಲೆ ಗರಿಲಿ ಗೋ ಗ್ರಹಣ ಬರೆದ ಲಿಪಿಬೀಡು ।
ಸೌಂದರ್ಯ ಸೌಧಗಳ ವಾಸ್ತು ಶಿಲ್ಪ ಗಿರಿನಾಡು ।

ಗಾಂಧರ್ವ ವಿದ್ಯೆ ಲಾವಣ್ಯಗಳಿಗೆ ಸಿರಿನಾಡು ।
ವಂದನೀಯ ಡಂಕಣಾ ಜಕಣಾಚಾರಿ ನೆಲೆವೀಡು ॥

ಗುಲ್ಲುಡಾನ್

ಪ್ರಜಾಪ್ರತಿನಿಧಿಯ ಸಭೆಯನಾಡು ।
ರಾಜ್ಯ ಸಪ್ತಾಂಗದ ಕರುಮಾಡು ।
ಪ್ರಜೆಗಳನ್ನಾಳುವ ನದಿ ಭೀಡೂ ॥
ದ್ವಿಜರ. ಕ್ಷತ್ರಿಯರ ವೈಶ್ಯರ, ಶೂದ್ರರ, ಧರ್ಮದ ನೆಲೆವೀಡೂ ॥

ಶ್ಲೋಕ

ರಾಜಕೀಯ ಸಮಾಜದೃಷ್ಟಿಲಿ ನಮ್ಮ ಕನ್ನಡ ರಾಷ್ಟ್ರವೂ ।
ನೈಜದಿಂದ ವಿರಾಜಿಸುತ್ತಲಿ ಪೊಂದಿತಗ್ರಸ್ಥಾನವೂ ॥

ಚಾಲ್

ಭಾರತವರ್ಷದ ಸೌಭಾಗ್ಯರವಿಯು ಕನ್ನಡಮಾತೆಯು ಉಪಕಾರ ।
ಪರಮಸನಾತನ ಧರ್ಮಾಚರಣೆಗೆ ಮಾತೃಸ್ಥಾನವಾಗಿದೆ ಪೂರ ॥

ಭಾಗ–೪

ಭಾರತಭೂಮಿಯ ಜಯಕರ್ಣಾಟಕ ಸ್ವರಾಜ್ಯವಾದಕೆ ಸುಲೋಚನ ।
ಧೀರ ಜನರ ಶ್ರುತಿ ವಿಚಾರಪರರತಿ ಉದಾರ ಗುಣಿಗಳ ಸುರಭವನ ॥
ಚರಕವೆ ಚಕ್ರವೆಂದುಸುರಿದ ಶ್ರೀಮಾನ್ ದೇಶಪಾಂಡೆಯಾ ಸುಲೋಚನ ।
ಇಲ್ಲಿ ಉಲ್ಲೇಖಿತರಾದವರು ಗಂಗಾಧರರಾವ್ ದೇಶಪಾಂಡೆ,
ಶ್ರೀನಿವಾಸರಾವ್ ಕೌಜಲಗಿ, ಹರ್ಡೀಕರ್ ಮಂಜಪ್ಪ, ಕಾರ್ನಾಡ್
ಸದಾಶಿವರಾವ್, ದತ್ತೋಪಂತ ಮಜಲಿ ('ಮಂಜಲಿಗೇ' ಎಂದಾಗಿದೆ),
ವಿಶ್ವನಾಥರಾವ್ ಜೋಷಿ, ಡಾ॥ ಹರ್ಡಿಕರ್ ಮತ್ತು ರಂ. ರಾ. ದಿವಾಕರ
ದುರಿತ ದೂರಘನ ಬ್ರಹ್ಮಚಾರಿ ಶಿವಭಕ್ತ ಮಂಜಪ್ಪನ ಸುರಭವನ ॥

ಹರಿಯೆ ಮಹಾತ್ಮನ ರೂಪೆಂದುಸುರಿದ ಕೌಜಲಗೀಯರ ಸುಲೋಚನ ।
ನಿರುತ ಖಾದಿ ಪರಿಶುದ್ಧವೆಂದುಸುರಿದ ಸದಾಶಿವ್ರಾಯರ ಸುರಭವನ ॥
ಸರಸ ವರ್ಚಸ್ಸುವಿಲಾಸಾಗ್ರಣಿಗಳು ಮಂಜಲಿಗೀಯರ ಸುಲೋಚನ ।
ಪರಮ ಸ್ವಯಂವಳ ಸಂಘ ಸ್ಥಾಪಕರ ಹಾರ್ಡೀಕರರಾ ಸುರಭವನ ॥
ಸರಸಕಲಾತತಿ ಮಹಾನಿಷ್ಣಾತರ ಪರಮ ಜೋಷಿಯರ ಸುಲೋಚನ ।
ಕರ್ಮವೀರ ನವಶಕ್ತಿ ಸಂಪಾದಕ ದಿವಾಕರ್‌ರವರಿಗೆ ಸುರಭವನ ॥

ದೊಡ್ಡಡಾನ್

ಕನ್ನಡ ಬಾಲರೆ ಕಗ್ನಡ ತರುಣರೆ ಕನ್ನಡ ವೀರರೆ ಲಾಲಿಪುದು ।
ಕನ್ನಡ ಜನನಿಯು ಕೃಪೆಯಿಂದಲ್ಲವೆ ಇವರುಗಳೆಲ್ಲರು ಜನಿಸಿದುದು ॥
ಕನ್ನಡ ದಮ್ಮನ ಮೊಲೆವಾಲಲ್ಲವೆ ನಮ್ಮನು ಪೋಷಿಸಿ ಬೆಳೆಸಿದುದು ।
ಕನ್ನಡ ತಾಯಿಯ ಬಲದಿಂದಲ್ಲವೆ ಭುಜಬಲ ಶೌರ್ಯವು ಹೆಚ್ಚಿದುದು ॥

ಚಿಕ್ಕಡಾನ್

ಇಂತಧಿಕ ಸತ್ವದಾಟೋಪವುಳ್ಳ ಮಾತೆಯನು ।
ಭ್ರಾಂತಿಯುಳ್ಳವರಾಗೀ ಮರೆಯಬಹುದೆ ನಾವಿದನು ॥
ಸಂತಸದಿ ಯೋಚಿಸಿರಿ ಬುದ್ಧಿವಂತರೆಲ್ಲವನು ।
ಹೊಂತಕಾರಿ ಗಳನುಭವವನ್ನೆ ಇದರೊಳುಸುರಿದೆನು ॥

ಗುಲ್ಲುಡಾನ್

ಲಲಿತಗುಣ ಪ್ರಾಜ್ಞರ ನವಮಣಿಯು ।
ಮೂಲ ವೇದಜ್ಞರ ದಿನಮಣಿಯು ।
ಶೀಲ ಶಾಸ್ತ್ರಜ್ಞರ ಅರಗಿಣಿಯೂ ॥
ಮೇಲೆನಿಸಿದ ಧರ್ಮಜ್ಞ ಬ್ರಹ್ಮಜ್ಞರ ನೀಲವಜ್ರಮಣಿಯು

ಶ್ಲೋಕ

ಪರರ ನೋವನು ತನ್ನ ನೋವೆಂದೆಣಿಪ ಕನ್ನಡ ಕೀರ್ತಿಯು ।
ಪರಮ ಭಾರತಿ ವಕ್ಷಸ್ಥಲದೊಳು ನಟ್ಟಿತಾರ್ಯ ಪತಾಕೆಯು ॥

ಚಾಲ್

ವೀರಪ್ರತಾಪದ ಲೀಲಾಭೂಮಿಯು ವಿಶ್ವಕರ್ಣಾಟಕ ಶೃಂಗಾರ ।
ಪರಮಸನಾತನ ಧರ್ಮಾಚರಣೆಗೆ ಮಾತೃಸ್ಥಾನವಾಗಿದೆಪೂರ ॥

ಭಾಗ–೫

ಕನ್ನಡ ಮಾತೆಯು ಘನತೆಯ ಪ್ರಕಟಿಸೆ ನಾರದರೊಂದಿನ ಪೂರ್ವದಲಿ ।
ಕನ್ನಡ ಜನನಿಯು ತೂಗಿ ಪರೀಕ್ಷಿಸಲಿರಿಸಿದ ರೊಂದೆಡೆ ತ್ರಾಸಿನಲಿ ॥
ಕನ್ನಡದಮ್ಮನ ಸರಿಸಮ ತೂಗುವ ಬಟ್ಟು ಯಾವುದೆಂದುಡುಕುತಲಿ ॥
ಮನ್ನಣೆ ವೊಂದಿದ ಧವಳ ಗಿರಿಯ ತಂದಿರಿಸಿದರಾಗಿನ್ನೊಂದೆಡೆಲಿ ॥
ಕನ್ನಡ ತಾಯಿಯು ತೂಕವು ಹೆಚ್ಚಲು ರಜತ ಗಿರಿಯು ಮೇಲ್ಭಾಗದಲಿ ।
ಉನ್ನತವಾಗಿಹ ಧವಳ ವೃಷಭನನು ಇರಿಸಿ ನೋಡಿದರು ಆರ್ತಿಯಲಿ ॥
ಅನುಪಮದಿಂದಲಿ ಅಲ್ಲಿಗು ಹೆಚ್ಚಲು ಉನ್ನತ ವೃಷಭನ ಬೆನ್ನಿನಲಿ ।
ಫಣಿವಿಭೂಷಣನ ಕುಳ್ಳಿರಿಸಿದರೂ ಮತ್ತು ಹೆಚ್ಚಾಲಾಗ್ಭ್ರಾಂತಿಯಲಿ ।
ತ್ರಿಣಯನ ಶಿರದಲ್ಲಿಟ್ಟರು ಗಂಗೆಯು ಅಲ್ಲಿಗು ತೂಕವು ಯೇರುತಲಿ ।
ಕೊನೆಯೊಳಗಿಟ್ಟರು ಮಿನುಗುವಚಂದ್ರನ ಆಲ್ಲಿಗಾಯ್ತು ಸವಂಭಾವದಲಿ ॥

ದೊಡ್ಡಣ್ಣಡಾನ್

ಇಂತನೆ ವಂದ್ಯಳೆ ಕರ್ಣಾಟಾಂಬೆಯು ಮರೆತರೆ ನಾವ್ ಕರ್ಣಾಟಕರೆ ।
ಚಿಂತಿತಾರ್ಥ ಫಲದಾಯಕ ಧಾತ್ರಿಯು ಕನ್ನಡಜನನಿಯು ತೊರೆಯುವರೆ ॥
ಭ್ರಾಂತಿಯಿಂದ ಪರಕಾಂತೆಗೆಮೋಹಿಸಿ ಜಯಕರ್ಣಾಟಮರೆಯುವರೆ ।
ಪಂತೆ ಮಾತಿನವರೆಂಬುವ ನಿಂದೆಯು ಬಾರದೆ ಯೋಚಿಸಿ ನೋಡಿದರೆ ॥

ಚಿಕ್ಕುಡಾನ್

ಓ ಮಾನ್ಯ ಬಾಂಧವರೆ ನಮ್ಮ ದೇಶ ಸೇವೆಯನು ।
ಪ್ರೆಮಾದರ ಪೂರ್ವಕವಾಗಿ ಗೈದವರಿಗಿನ್ನು ॥
ಆ ಮಹಾತ್ಮ ಚಿತ್ಪ್ರಭು ಪರಮ ಕರುಣದೊಳು ಮುನ್ನು ।
ಕಾಮಿತಾರ್ಥ ಫಲವ ತಾಂ ಪ್ರೇಮದಿಂದ ಕೊಡುತಿಹನು ॥

ಗುಲ್ಲುಡಾನ್

ಶಶಿಯು ರವಿ ತಾರಾ ಸಗ್ಗಲೋಕ ।
ವಸುಧೆ ವಾರಿದಿಯು ಮೇರುನಾಕ ।
ಜಸದೊಳೆಸೆಯುತ್ತಲಿರುವತನಕ ॥
ದಶ ದಿಶೆಯೊಳು ಈ ಕರ್ಣಾಟಾಂಬೆಯ ಕೃತಿಯು ಕನಕಪದಕ ॥

ಶ್ಲೋಕ

ಜಯತು ಜಯಜಯ ಜಯಮುದಾಗಲಿ ಜಯತು ಕರ್ಣಾಟಾಂಬೆಗೆ ।
ಜಯದ ಉತ್ಸುಖ ಜಯವು ಒಪಗಲಿ ಜಯತು ಶ್ರೀಕಂಠೇಶಗೆ ॥

ಚಾಲ್

ದೊರೆಶೇಷನ್‌ಗಿರಿ ಹರಿಪುಟ್ಟಣ್ಣನ ತುರಾಬ್ರಹ್ಮವಿದೆ ನಿರಾಧಾರ ।
ಗುರು ಮರಿಯಣ್ಣನವರ ನೀಲ್ಕಂಠನ ತರತರ ಕೃತಿಗಳು ಶೃಂಗಾರ ॥

ಲೇಖಕರು : **ನೀಲಕಂಠಯ್ಯ**

ಟಿಪ್ಪಣಿ :

ಈ ಹಾಡನ್ನು ಮುದ್ರಿತ ರೂಪದಲ್ಲಿ ದಿ॥ ಶ್ರೀ ನೀಲಕಂಠರಾಯರ ಪುತ್ರರು ನನಗೆ ಒದಗಿಸಿದರು. ಇದಲ್ಲದೆ "ಕರ್ಣಾಟಕ ವಿಜಯ" ಎಂಬ

ಹೆಸರಿನಲ್ಲಿ ಇದರ ಒಂದು ಪುಸ್ತಿಕೆ 1937 ರಲ್ಲಿ ಪ್ರಕಟವಾಗಿದೆ. ಅಲ್ಲದೆ ಟ್ವಿನ್ ರಿಕಾರ್ಡ್ ಕಂಪನಿಯವರೂ ಇದನ್ನು ಕಟ್ಟಿ (ಗ್ರಾಮೊಫೋನ್ ಪ್ಲೇಟ್) ರೂಪದಲ್ಲಿ ಹಾಡಿಸಿ ಪ್ರಕಟಿಸಿದ್ದರು. ಈ1937ರ ಪ್ರಕಟಣೆಯಲ್ಲಿ "ತುರುಬಿದಾರ್ ಬಿ. ನೀಲಕಂಠಯ್ಯನವರ ಶಿಷ್ಯ ಎನ್, ವಿಷಕಂಠರಾವ್ ಮೈಸೂರು" ಇದರ ಲೇಖಕರೆಂದು ಹೇಳಿದೆ. ಶ್ರೀ ವಿಷಕಂಠರಾಯರು ಪ್ರಕಟಿಸಿದ "ಜಯಂತಿ ಲಾವಣಿ ಕಾಣಿಕೆ" ಎಂಬ 1949ರ ಪ್ರಕಟಣೆ ಯಲ್ಲಿಯೂ ಇದು ಬಂದಿದೆ, ಕೊನೆಗೆ ದೊರೆ ಶೇಷನ್‌ಗಿರಿ ಹರಿ ಪುಟ್ಟಣ್ಣನ ತುರಾಬ್ರಹ್ಮವಿದೆ ನಿರಧಾರ। ಗುರುಮರಿಯಣ್ಣನ ನೀಲಕಂಠ ಕವಿ ವಿಷಕಂಠನ ಕೃತಿ ಶೃಂಗಾರ' ಎಂದು ಹಾಡು ಮುಗಿಯು ತ್ತದೆ. ಇದರಲ್ಲಿನ ಭಾಗ ನಾಲ್ಕರಲ್ಲಿನ ಹೆಸರುಗಳಲ್ಲಿ ಕೆಲವು ಬದಲಾವಣೆ ಗಳಾಗಿವೆ.

(–ಭಾರತ ಭೂಮಿಯ ಜಯಕರ್ಣಾಟಕ ಸ್ವರಾಜ್ಯ ವಾದಕ್ಕೆ ಸುಲೋಚನ)
"ಚರಕವೇ ಚಕ್ರವೆಂದುಸುರಿದ ಮುದವೀಡ್ ಕೃಷ್ಣ ಆಲೂರದ ಸುಲೋಚನ ಅದೇ ರೀತಿ

"ಹರಿಯೆ ಗಾಂಧೀಜಿಯ ರೂಪೆಂದುಸುರಿದ ಟಿ, ಸುಬ್ರಹ್ಮಣ್ಯಂ ಮತ್ತು ಸುಲೋಚನ"

"ನಿರಂತ ಖಾದಿ ಪರಿಶುದ್ಧವೆಂದುಸುರಿದ ನಿಜಲಿಂಗಪ್ಪನ ಸುರಭವನ" ಮುಂದಿನ ಸಾಲುಗಳು,

"ಸರಳ ಸಮಾನತೆ ಬೆಟ್ಟಗೇರಿ ಶರ್ಮರ ಬುರ್ಲಿಮಾಧವರ ಸುಲೋಚನ ವರಕವಿ ಸಾಮ್ರಾಟ್ ಬೇಂದ್ರೆ ಕಮಲಾಪುರ್ ಶಂಭಾಜೋಶಿಯವರ ಸುರಭವನ"

ಈ ತಿದ್ದುಪಡಿಗಳು ಸ್ವಾತಂತ್ರ್ಯನಂತರ ಬಂದಂತೆ ಇದೆ. ಏಕೆಂದರೆ ಮೇಲೆ ನೋಡಿದ ಪಾಠದಲ್ಲಿ ಇರುವ ಆರ್. ಆರ್. ದಿವಾಕರರ ಬಗೆಗಿನ ಉಲ್ಲೇಖ ಇಲ್ಲಿ ಹೀಗೆ ಬದಲಾಗಿದೆ: "ಭಾರತ ವಾರ್ತಾಶಾಖೆ ಅಮಾತ್ಯರು ದಿವಾಕರ್‌ರವರಿಗೆ ಸುರಭವನ."

೭೪. ಭಾರತ ಉದಯ ರಾಗ

ಕೋಳಿ ಕೂಗಿತು! ಕನ್ನಡದ ರಣಕಾಳೆ ಮೊಳೂಗಿತು! ಜನರೆ ಕೇಳಿರಿನ್ನೇಳಿರೇಳಿರಿ ॥ ಇಲ್ಲದೇಇದ್ರೆ ಕಡೆತನಕ ಬೀಳಿರೆಲಾ ॥ ಶ್ರೀಶನನು ನಿರುತದಲಿ ಭಜಿಸಿರಿ । ಸಾಸುಗುಣವಿಲ್ಲದೆಲೆ ಮಾಡಿದ । ದೋಷದೊಳು ಮುಳುಗದಿರಿ । ಮಲಗದಿರಿ ಏಳ್ವುದದರಿಂದ ॥ ೧ ॥

ದೇಶದಭಿಮಾನವನು ಪಿಡಿವುದೆ ಲೇಸು । ನಿಮ್ಮನು ಪಾರತಂತ್ರ್ಯ ವಿಶೇಷದಿಂ ಬಂಧಿಸಿದ ಪಾಶವ । ಹರಿದು ಬಿಡಿರೆಂದೂ ॥ ೨ ॥

ಧರ್ಮ ಹೋಯಿತು, ಕರ್ಮ ಹೋಯಿತು । ಮರ್ಮವನು ತಿಳಿಯದಲೆ ಸುಡಿಯುವ । ಧರ್ಮಹೀನರ ಮಾತು ತುಂಬಲು ಕೆಟ್ಟಿತೇ ನಾಡೂ ॥ ೩ ॥

ಧರ್ಮವೇ ಗಡ; ಜನರೊಳೈಕ್ಯವ । ನಿರ್ಮಿಸುವ ಕಾರಣವು ನಿಮ್ಮಯ । ಧರ್ಮವನ್ನನು ಸರಿಸಿ ಬೇಗೇಳುವುದು ಲೇಸೆಂದೂ ॥ ೪ ॥

ಥಾಟಿನರಿವೆಯು ತೊಟ್ಟೊಡೆ ನಗದಾಟ ಪರರೊಳು ಪೋಗುವರವತ್ತು ಕೋಟಿ ರೂಪಾಯಿಗಳನು ಉಳಿಸುವ ಬಗೆಗೆ ॥ ಮೂವತ್ತು ಕೋಟಿ ಮನುಜರು ಕೂಡುತಲೆ । ಕೈರಾಟಿಯಿಂದಲೆ ನೂತು ಬಟ್ಟೆಯ ಪೇಟೆಯನು ಗಡುಗ್ಗೈವ ಸಮಯವು ಬಂದಿತೆಂತೆಂದೂ ॥ ೫ ॥

ಪೊಳ್ಳು ವಸ್ತ್ರವನಿತ್ತು ಸಿರಿಯನು । ಕಳ್ಳತನದಿಂದೊಯ್ದು ದೇಶವ । ಜೊಳ್ಳುಗೊಳಿಸಿದರಕಟ । ಪೂರ್ವದ ವೈಭವಕೆ ಮತ್ತೆ ॥ ಕೊಳ್ಳೆ ನಮ್ಮಯ ದೈವಬಲದಿಂ । ದೊಳ್ಳೆ ಸಮಯವು ಬಂದಿರಲು ಮೈಗಳ್ಳನಂದದಿ ಮಲಗುವುದು ಲೇಸಲ್ಲವೆಂತೆಂದೂ ॥ ೬ ॥

ಮೇಲು ಬಟ್ಟೆಗಳೆಂಬ ಹುಚ್ಚಿನ ಜೋಲೆಯಲಿ । ಪರದೇಶದುಡುಪೆಯು ಡೌಲಿನಲಿ ಧರಿಸಿದಿರಿ ॥ ದೇಶದುದ್ಯೋಗವನು ಕಳಿದಿರಲೆ ॥ ಹೇಸು ಬುದ್ಧಿಯು ಬಿಟ್ಟು ನಿಮ್ಮಯ ದೇಶವನ್ನುದ್ಧರಿಸಲು ಸಾಸುಮಾಡುವ ಸಮಯವಿದು ತಾನೀಗ ಬಂತೆಂದೂ ॥ ೭ ॥

ಚವಲಿ ಯಾಶೆಗೆ ಹಣವ ಕಳೆದಿರಿ! । ನವಿಲಿನಂದದಿ ಹೊಳೆವ ವಸ್ತ್ರದ ಡವಲಿನಲಿ! ಮೆರೆಯುತ್ತ ದೇಶದ ಅರಿವು ನಮಗಿಲ್ಲಾ । ಧನವು ಇದ್ದರೂ ತಿರುಕರಾದಿರಿ । ಹೊರುತವರಾಗಿ, ದೇಶಕೆ ಕವಲಿ ನಂತಾಧಾರನೀಡುವ ಸಮಯವು ಬಂದಿತೆಂ ತೆಂದೂ ॥ ೮ ॥

ದೇಶದುದ್ಯೋಗಗಳು ಸಕಲವು ನಾಶವಾದವು । ಪರರ ಕೊಡುವುದಕಾಶೆ ಮಾಡುತ । ಜೋತು ಕುಳಿತಿರಿ! ಎಂಥ ಮರುಳರೆಲೆ! ॥ ತೇಲಿ ವೋದುದು ನಮ್ಮ ಧನಮದದಾಲಿ ಬತ್ತಿತು ।ಮತ್ತೆ ಮನೆಯೋಳ್, ಸೂಲುವುದು, ನೇಯು ವುಮ, ದುಡಿಯುವ ಸಮಯವು ಬಂದಿತೆಂತೆಂದೂ ॥ ೯ ॥

ಹಿಂದುಗಳಿಗೆ ಮುಸಲ್ಮಾನರು ಬಂಧುಗಳು । ತಾವೆಂದು ಪೇಳುತೆ ಬಂದರೈ ನಾವೊಂದೆ ಯೆಂದೀಜಗಕೆ ತಿಳಿಸುತ್ತ ॥ ಮುಂದೆ ಬ್ರಾಹ್ಮಣ ಬ್ರಾಹ್ಮಣೇ ತರ ರೆಂಬೊ ಯಾದವ ಕಲಹವನ್ನಿಂದಿಸುತ ಲೊಕ್ಕಟ್ಟು ತೋರುವ ಸಮಯವು ಬಂದಿತೆಂತೆಂದೂ ॥ ೧೦ ॥

ಮೂಢರೆಮ್ಮನ್ನಾಳ್ವ ಪರದೇಶಿಗಳ ಪರಭಾಷೆಯಲಿ ಒಡನಾಡಿ ಗೌರವವೆಂದು ತಿಳಿಯುತಲದನೆ ನುಡಿಯುವಿರಿ ॥ ನಾಡಿನಭಿಮಾನವನು ಷರ್ಚಿಪ, ನಾಡ ಭಾಷೆಯು ಮರೆವ ಸಮಯವು ಓಡಿಬರುತಿದೆ! ಇನ್ನು ಮಲಗುವುದುಚಿತಲ್ಲ ವೆಂತೆಂದೂ ॥ ೧೧ ॥

ಮೂಢರೆಲೆ! ನೀವಿಂತು ಮಲಗಿದ ಪಾಡನೋಡಿರಿ । ದೇಶನಾಶಕ್ಕೀಡು ತಾನಾ ಗುತ್ತಲಿಹುದಿನ್ನಾದರೂ ಬೇಗ ॥ ಬೇಡ ನಿಮಗೀ ತರದ ಬಾಳುವೆಗೇಡು; ದೇಶ ಹೆಚ್ಚಳದ ನಿಜ ಗೂಢವನು ತಿಳಿದಿದ್ದು ಕಾರ್ಯವ ಮಾಳ್ಪುದೆಂತೆಂದೊ ॥ ೧೨ ॥

ಷಂಡರೆ೦! ಕೈಸಾಗದವರೆಲೆ! ಕಂಡು ಕಂಗಳಸಂತೆ । ಹೆರವರ ಸುಂಡಿಲಿಂ ನೀರ್ಕುಡಿ
ಯುವದಿನ್ನೆಷ್ಟು ದಿನಗಳೆಲೆ : । ಗಂಡಸಿನ ತೆರ ನಂಬಿ ನಿಮ್ಮನೆ ಹಿಂಡಿ ಒಯ್ದಾ
ಧನವು ತಿರುಗಿಸಿಕೊಂಡು ತರುವುದಕೀಗ ಸಮಯವು ಬಂದಿತೆಂತೆಂದೂ ॥ ೧೩ ॥

ನಾವು , ನಮ್ಮದು ನಮ್ಮ ನಾಡೆಂಬ ವಿಚಾರವು ನಿಮ್ಮೊಳಿಲ್ಲೆಲೆ? । ದೇವ : ಹೇಡಿ
ಗಳಿನ್ನು ಕಾಣರು ಜಗದಿ ನಿಮ್ಮಂಥಾ ॥ ಜೀವಕ್ಕಂಜದೆ ಸ್ವಾರ್ಥ ಬಯಸದೆ
ಸ್ವಾವಲಂಬನದಿಂದ ದುಡಿಯಿರಿ । ಕಾವ ಗದುಗಿನ ವೀರ ನಾರಾಯಣನು ಬೆಂಬಿ
ಡದೇ ॥ ಕೋಳಿ ಕೂಗಿತು ॥ ೧೪ ॥

ಲೇಖಕರು : ತಿಳಿಯದು

(ಮುದ್ರಿತ)

(ಹುಯಿಲಗೋಳ ನಾರಾಯಣ ರಾಯರಿರಬಹುದೆ?)

೭೫. ಅಭಿನವಾಭಿಮನ್ಯು ಭಗತ್ಸಿಂಗ

(ಗಲ್ಲಿಗೇರಿಸಿದ್ದು–23–3-1931)
(ಲಾವಣಿ)

ಧಗಿಧಗಿಸುತ್ತಿದೆ ಭಾರತ ಹೃದಯದಿದೆ । ದುಃಖಾನಲ ಪ್ರಜ್ವಲಿಸುತಿದೆ ॥
ಭಗತಸಿಂಗ, ಶುಕದೇವ, ರಾಜಗುರು । ಯೋಧರವರ ನಿಧನಗಳಿಂದೆ ॥ ೧ ॥

ಭರಣಕೃತ್ತಿಕಾಕಾಲ ಸಂಧಿಯಲಿ । ಪರಜನರಿವರನು ವಧಿಸಿದರು ॥
ಧರಣಿಯ ತಳಮಳಗೊಳಿಸುವ ಕಾರ್ಯವ । ನಧಿಕಾರಗಳಿಂದೆಸಗಿದರು ॥ ೨ ॥

ಪರಹೃದಯಂಗಳ ತಲ್ಲಣಗೊಳಿಸಿದ । ಸ್ವಜನ ಮನಂಗಳ ಬೆಳಗಿಸಿದ ॥
ನರಕೇಸರಿಗಳನರಿಗಳು ಕೊಂದರು । ಪ್ರಾಣವ ತೆಗೆದರು ಛಲದಿಂದ ॥ ೩ ॥

ಅಖಂಡ ಬ್ರಹ್ಮಾಂಡವೆ ಖಂಡಿಸುತಿದೆ । ಭರತಖಂಡವಿದಿರಾಡುತಿದೆ
ಅಕಟಾ ! ಕೇಳುವರಿಲ್ಲೆಂದೆನುತಿದೆ । ಪರಜನರಾಟವ ದೂರುತಿದೆ ॥ ೪ ॥

ರಾಷ್ಟ್ರೋದ್ಧಾರದ ಯಜ್ಞಕುಂಡಲಿ ರುಂಡಂಗಳನರ್ಪಿಸಿದವರು ॥
ರಾಷ್ಟ್ರಮುಖಂಡರು ನರಮಾರ್ತಾಂಡರು । ಪ್ರಚಂಡ ಭಾರತಹಿತಸುತರು ॥ ೫ ॥

ಭೂಗರ್ಭವ ಭೇದಿಸಿ ಜ್ವಾಲಾಮುಖಿ । ನಭೋಮಂಡಲಕೆ ಸಿಡಿವಂತೆ ॥
ತ್ಯಾಗವೀರ ಧುರಧೀರರರು ಪೋದರು ಸಂದರು ವಡಬಾನಲನಂತೆ ॥ ೬ ॥

ಉಜ್ವಲ ರಾಷ್ಟ್ರ ಪ್ರೇಮದೆ ಸ್ವರಾಜ್ಯ । ರಣಕಣದೊಳು ಮಡಿದವರಿವರು ॥
ನಿರ್ಜರ ದೇಹವ ಪಡೆದರು ನಡೆದರು । ವೀರಸ್ವರ್ಗದಲಿ ನಲಿಯುವರು ॥ ೭ ॥

ಜಗದೊಳಿವರು ಜಡದೇಹವನುಳಿದರು । ಕೀರ್ತಿಕಾಯವನು ತಾಳಿದರು ॥
ಜಗತ್ಪ್ರಸಿದ್ಧರು ಭಗತ್‌ಸಿಂಗ, ಶುಕ 1ದೇವ, ರಾಜಗುರು ಬಾಂಧವರು ॥ ೮ ॥

ಯೋಧರಿವರ ವಿಮಲಾತ್ಮಶಕ್ತಿಯದು । ಭಾರತಭೂಮಿಯಲಿ ಬೆಳಗಿರಲಿ ॥
ಶ್ರೀಧವನೊಲಿದೀ ಬಂಧುಗಳಾತ್ಮಕೆ । ಪರಮಶಾಂತಿಯನು ಕರುಣಿಸಲಿ ! ॥ ೯ ॥

(' ನವಯುಗ ' 26-3-1931)

ಲೇಖಕರು : ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯಿ

(ಸ್ವರಾಜ್ಯ ಗೀತಾಮೃತ ; ಕಾಸರಗೋಡು, 1947)

೭೬. ದೇಶಭಕ್ತ ಭಗತ್‌ಸಿಂಹ ಸುಖಾಧಿಯ್ಯಾ, ರಾಜಗುರು ಅತಿದತ್ತರ ಕವನ

ಕೊತ್‌ಗೊಂಡ ಕೇಳರಿನ್ನ ಪ್ರೀತಿಯಿಂದ ಕೇಳರಿನ್ನಾ ಖ್ಯಾತಿ ಂತರ್, ಪಂಜಾಬ ದಲ್ಲಿ ತರುಣರಾ । ಭಾರತದ ಸ್ವಾತಂತ್ರ್ಯಕ್ಕ ಭಾರಿಮಡಿದು ಮಡಿದಾರಿವರು, ಭಗತಸಿಂಗ ಸುಖಾಧಿಯ್ಯಾ, ಸುಖದೇವ್, ರಾಜಗುರು, ಬಟುಕೇಶ್ವರ ದತ್ತ ರಾಜಗುರು ಅತಿದತ್ತರಾ ॥ ಪಲ್ಲವಿ ॥

ಭಯೋತ್ಪಾಧಕ ಪಕ್ಷದ ನಾಯಕರು, ಈಕ್ಷಿಸೀ ಕ್ರಾಂತಿಯ ಚಳುವಳೀ ಮಾಡಿ ಮಾಡಿ ಮಡಿದವರಾ । ಲಾಹೊರ್ದಿಂದ ಕಲಕತಾವರ್ಗೆ ಭಯಭೀತೀ ಭಯೋತ್ಪಾದಕ ಕ್ರಾಂತಿಯ ಚಳುವಳೀ ಹಂಮಿದವರಾ ॥ ೧ ॥

ಹತ್ತೊಂಬತ್ನುರಾ ಇಪ್ಪತ್ತೆಂಟರ ಅಕ್ಟೋಬರ್, ಲಾಹೋರದಲ್ಲಿ ಕ್ರಾಂತಿಯ ಚಳುವಳಿ ಬಾಳ ಜೋರಾ । ಸಂಘದ ವ್ಯವಸ್ಥಾಪಕರು, ಸಂಣ ಸಂಣ ಬಾಲಕರೆಂದು ಬ್ರಿಟಿಸರ್ಗೆ ತಿಳಿದಿದ್ದಿಲ್ಲs ಅವರ ಹೆಸರಾ ॥ ೨ ॥

ಬಿಹಾರ, ಪಂಜಾಬ ಪ್ರಾಂತ ಸಂಯುಕ್ತ ಪ್ರಾಂತದ್ದ ಕ್ರಾಂತಿಕಾರೀ ಸಂಘದ್ವೆವ ಸ್ಥಾಪಕ ಲಜಪತರಾ ॥ ಮೂಲಮಾತ ಕೇಳರೀ ತಾಲೀಮ ಕೊಡತಿದ್ದ ತರುಣರಿಗೇ ಲಾಲಾಜೀ ಪಂಜಾಬದ್ದ ಮೂಲ ಸಿಂಹರಾ ॥ ೩ ॥

ಪೋಲಿಸ ಸಾರ್ಜಂಟ ಆಂಗ್ಲರವ, ಲಾಲಾಲಜಪತ್‌ರನ್ನೂ ಲಾಠಿಯಿಂದ ಹೊಡೆದು ಕೊಂದು ಹಾಕ್ಯಾರಾ । ಹತ್ತೊಂಬತ್ನೂರಾ ಇಪ್ಪತ್ತೆಂಟರ ನವೆಂಬರ್ಕ ಕಾಲ ಆದ್ರ, ಮದ್ಯಾಹ್ನದ ಘಂಟೀ ಕೇಳ್ರೀ ಸಾಹೇಬಾರಾ ॥ ೪ ॥

ಸಾರ್ಜಂಟವರ ಸಾಹಸದ್ದು ಅರ್ಜಂಟ ರಿಪೋರ್ಟ ಸರ್ಜಾಂಟಗ ಮರ್ಜಿ ಪ್ರಕಾರ ಕೊಟ್ಟುಬಿಟ್ರೋ ಭಗತ್‌ಸಿಂಗರದ, । ಅಗಣಿತ ಸಾಸ ಭಗತ್ ಸಿಂಗಂದ ಮಿಗಿಲಾದ ಕೃತಿನೋಡೀ ತಗೆ ಬಗೇ ಮಾಡಿಕೊಂಡ್ರ ಬ್ರಿಟಿಸರಾ ॥ ೫ ॥

ಕಾಲನಡಿಗಿಲೇ ಬಾರವೇ ಕೀಲಗಾಡ್ಯಾಗ ಬರ್‍ರ್ತಾನಂತ ಕಾವಲಿಟ್ಟ ಕಾಂಕುತಿದ್ರು ಕೆಂಪ ಮರೆವರಾ । ಕಾಲ ಯುವಳಗೀ ಮತ್ತು ಮತ್ತೊಮ್ಮೆ ಒಂಭತ್ತುಮಂದೀ ಅಂಗ್ಲರ್‍ನ ನೆಲಕ್ಕುರುಳಿಸಿ ಬಿಟ್ಟದಾರ ಭಗತ್‌ಸಿಂಹರಾ ॥ ೬ ॥

ಚ್ಯಾಲ

ಪೋಲಿಸ್ ಹೆಡ್ ಕ್ವಾಟರಕ್ಕ ಭಗತ್‌ಸಿಂಗ್ ಪೋಲಿಸ್ ಡ್ರೆಸ್‌ದಿಂದಾ । ಳಾಲಾಜಿಯ ಸೇಡ ತೀರ್‍ಸಾಕ ಬಂದಾ ॥ ೧ ॥

ಸಾಯಕಲ್ ಮೊಟಾರ್‍ಮೆಲಿಂದ ಸಾರ್ಜಂಟ ಹೊರ್‍ಗ ಬಂದಾ । ಕರೀಮಾರೀ ಕಾನಸ್ಟೇಬಲ್ ಕೂತಿದ್ದ ಮೋಟಾರದಹಿಂದಾ ॥ ೨ ॥

ನೀಮಾಡಿದ್ದ ಉಪಕಾರ ನಿನಗಿಂದಾ । ಸೆನಪಾಗ್ಲೆಂತ ಗುಂಡಹಾಕಿದಾ । ಬಗದ ಅವ್ನ ಕೊಂದಾ ॥ ೩ ॥

ಕಾನಸ್ಟೇಬಲ್ ಘಾತಾಂತ ಕಂಡ ಕಿಸಿದಾ । ಘಾತ ಮಾಡುವಂತ ಅವನನ್ನು ಬಗೆದಾ ॥ ೪ ॥

ಏರು

ಸಾರ್ಜಂಟವ್‌ರಗತಿ ನಮ್ಮ ಕರೀಮಾರೀ ಕಾನಸ್ಟೇಬಲ್ಲ ಸಾಧಿಸಿಬಿಟ್ಟ ಏ ಕೇಳಿರಿ ಭಗತ್‌ಸಿಂಗರಾ ಭಾರತದ್ದ ಸ್ವಾತಂತ್ರ್ಯಕ್ಕ ಭಾರಿ ದುಡಿದ ಮಡಿದಾರಿವರು, ಭಗತ್‌ಸಿಂಗ್, ರಾಜಗುರು, ಅಲೆದತ್ತಾರಾ ॥ ೧ ॥

ಲಾಲಾಲಜಪತರನ್ನು ಲಾಠಿಯಿಂದ ಕೊಂದೇವಂತ ಆನಂದದಿಂದ ಮೋಟಾರ್‍ಮೇಲೆ ಬಂದಿದ್ರಾ । ಲಾಲಾಜಿಗೆ ಮಾಡಿದುಪಕಾರ ಮೂಲ ಉಪಕಾರ ಕಾಣರೀ ಆಮಂತ್ರಣ ತಕ್ಕೊಂಡಹೋಗೂೕ ಹರಾಮ ಖೋರಾ ॥ ೨ ॥

ಸಾರ್ಜಂಟರ ಮರಣಕಾರಣ, ಹಿಂದುಸ್ತಾನ್ದ ಸೋಸಿಯಾಲಿಸ್ಟ ರಿಪಬ್ಲೀಕ ಅಸೋಸಿಯೇಶನ್ ಎಂಬೋಹೆಸರಾ । ಭಂಗ ಬಾರದಂತಾ ಮಾತಾ ಸಂಘ ದೊಡೆಯ ಭಗತಸಿಂಗರ್, ಸಂಘದ್ಮೆಂಬರ್ ರಾಜಗುರು ಅಲೆದತ್ತರಾ ॥ ೩ ॥

ಮತ್ತೊಂದ್ಮಾತ ಮರ್‍ತಿಂನೀ ತುರ್ತನಿಮ್ಗೆ ಹೇಳ್ತೆನೆ ಒಡಿಬರ್‍ವ ರೇಲ ಗಾಡ್ಯಗ್ವಾಯಿಸ್ರಾಯರಾ । ವಾಯಿಸ್ರಾಯ ಡಬ್ಬಿಗೇ ಅಬ್ಬರ್‍ಯಾಂಬ ಬಗೆದಿದ್ದ ಜಿಬ್ಬ ಆಗಲಿಲ್ಲ ವಾಯಿಸ್ರಾಯ ಪುಣ್ಯವಂತರಾ ॥ ೪ ॥

ಮತ್ಕೇಳ್ರೀ ಹತ್ತೊಂಬತ್ನೂರಾ ಇಪ್ಪತ್ತೊಂಬತ್ತ ಎಪ್ರೇಲ್ದಾಗ ಕೇಂದ್ರ ಅಸೆಂಬ್ಲ್ಯಾಗ ಬಾಂಬ ಒಗೆದ್ರು ಭಾಗತಸಿಂಗರಾ। ಭಯ ಭೀತಿ ಕೆಲ್ಸನೋಡೀ ಬ್ರಿಟಿಸರು ಭಾಗತಸಿಂಗನ್ ಹಿಡಿಲಾಕ ಹೊಂಚಹಾಕ್ಯಾರಾ। ಬಾಳಜೋರ ಹುಡುಕ್ಯಾರಾ ॥ ೫ ॥

ಜಟ್ಟೀಯಂಥಾ ಜವಾನರು ಯಿಷ್ಟುದಿನ ಮಟ್ಟಿಗಚ್ಚೀ ಅವ್ನ ಬಿಟ್ಟು ಬಿದ್ದ ಹಿಡ್ದಹಟಾ ಸಾವಿಸವರಾ। ಕೊಟ್ಟೀ ಅಫಘಾನ ಡ್ರೆಸ್ಸಿನಿಂದ ಅಪಾಯ ಮಾಡಾಂವ ನಿವನಂತ ಉಪಾಯ್ದಿಂದ ಹಿಡ್ದ್ ರ್ಝೋಲೀಗೇ ಎಳದಾರವರಾ ॥ ೬ ॥

ಭಯೋತ್ಪಾದಕ ಚಳುವಳಿ ಮಾಡಾಕ ಖರ್ಚಿಗೆಹೆಂಗ್ಮಾಡ್ತಿ ಅಂತ ಪದೇ ಪದೇ ಭಗತ್‌ಸಿಂಗ್ನ ಕೇಳತಿದ್ದರಾ। ಮೂಲನನ್ನ ಗೆಳೆಯಂತ ಕೊಲೆಯ ವಿಚಾರ ನಡ್ದಾಗ ಕೊರ್ಟಿಗೆ ಹೆಸರ್ ತಿಳೀತ್ ಆಗ ಅಂವ್ರೆ ಭಗತಸೆಂದರಾ ॥ ೭ ॥

ಚ್ಯಾಲ

ಐದು ತಿಂಗಳು ಖಟ್ಲೇ ನಡಿಶ್ಯಾರು । ಜೀವಾವಧೀ (ಫಾಸೇ) ಶಿಕ್ಷಾ ಕೊಟ್ವಾರು ॥ ೧ ॥

ಮುವತ್ತೊಂದರ ಮಾರ್ಚಿ ಇಪ್ಪತ್ಮೂರಾ। ಸಂಜಿ ಆರು ಘಂಟೇ ಅಂದು ಶುಕ್ರವಾರಾ ॥ ೨ ॥

ನಾಲ್ವರನ್ನೂ ಗಲ್ಲಿಗೇರ್ಶಾರ । ಯಲ್ಲಾಕೂಡಿದ್ರು ದೇಶದ್ದ ಮುಖಂಡರಾ ॥ ೩ ॥

ಉಲ್ಲಸುಳಲಿಲ್ಲ ಕವ್ನಾ ಬರ್ದೆ ಸ್ವಾತಂತ್ರ್ಯ ಯೋಧರಾ। ಭಾರತ ಸ್ವಾತಂತ್ರ್ಯಕ್ಕ ಮಡಿದವ್ರಾ ॥ ೪ ॥

ಏರು

ಭಗತಸಿಂಗ್ ಸುಖಾಧಿಯ್ಯಾ ರಾಜಗುರು ಅತಿದತ್ತರ ಬಿಷ್ವಂಣ ಕವ್ವಾ ಬರದದ್ದು ತಿಗಡೊಳ್ಳ್ಯಾರಾ । ಭಾರತದ್ದ ಸ್ವಾತಂತ್ರ್ಯಕ್ಕ ಭಾರೀದುಡಿದ ಮಡಿದಾರೋ । ಭಾಗತಸಿಂಗ್ ರಾಜಗುರು ಅತಿದತ್ತರಾ ।

ಲೇಖಕರು : **ಭಿಷ್ಟಪ್ಪ ಮುಂಡೇದ**

(ಅವರೇ ಒದಗಿಸಿದ್ದ ಹಸ್ತಪ್ರತಿಯಿಂದ)

೭೭. ಕನ್ನಡ ಕೇಸರಿ

ಬಾಬಾ ನೋಡೋಣ ಕನ್ನಡ ಕೇಸರಿಯಾ ।
ಮಾಡುವಾ ಸಿಂಹದ ಗರ್ಜನೆಯಾ । ಕೂಡಿದ ಘನತರದೀ
ಸಭೆಯಾ ॥ ಪಲ್ಲವಿ ॥

ಭಾರತ ಮಾತೆಯು ಮಕ್ಕಳು ಹ್ಯಾಗಿರುವರು ಎಂದು ।
ಕ್ಷೇಮವ ಕೇಳುತಲಿರಲಿಂದು ನೆರೆವಿಗೆ ಮಜಲಿಯುರೊಡಗೊಂಡು ॥ ೧ ॥

ದೇಶದಭಿಮಾನಕ್ಕಾಗಿ । ಬಂಧನೆಯುನು ಸೋಸಿ ।
ದೇಶಬಂಧುರತೆಯ ನೆಲಸಿ । ವಾಸಿಯು ತೇಜವನೆಲೆಸಿಳಿಸಿ ॥ ೨ ॥

ಹಿಂದುಮಾತೆಯು ಮಕ್ಕಳು । ತೋರುವರಲ್ಲಲ್ಲಿ ।
ಕನ್ನಡ ನಾನಾ ದೇಶದಲಿ । ಕಂಡರೆ ಸಾರ್ಥಕವೆಮಗಿಲ್ಲಿ ॥ ೩ ॥

ಗಂಗಾಧರ ದೇಶಪಾಂಡೆ । ಎಂಬ ಸುರತ್ನವಶಾ ।
ಮಜಲಿಯ ದತ್ತಾತ್ರಯರನ್ನು । ಪಡೆದಿಹ ಕರ್ನಾಟಕಿಯುನ್ನು ।
ಪೊಗಳದೆ ಬಿಡುವುದು ತರವೇನು ॥ ೪ ॥

ಗಂಗಾಧರ ದತ್ತಾತ್ರಯಸಲಿ ಕೂಡಿದ ಮಹಿಮೆಯುನು ।
ಹಿಂಗದೆ ಪಡೆದಿಹ ಮಾತೆಯುನು । ಕರ್ನಾಟಕ ಭೂದೇವಿಯುನು ।
ಕಾಯಲಿ ಸಿದ್ಧನಗರವರನು ॥ ೫ ॥

(ಲೇಖಕರು : ತಿಪ್ಪಯ್ಯ ಮಾಸ್ತರರು)

೭೮. ಸಂಗೊಳ್ಳಿಯರಾಯಣ್ಣ

ಶೂರನಾದ ಸಂಗೊಳ್ಳಿಯ ರಾಯನಾಯ್ಕ ಪುಂಡಾ ।
ಗೋರಾದಂಡಿಂದೆಲ್ಲಾ ಹಾರಿಸಿದನು ಚಂಡಾ ॥ ಪಲ್ಲವಿ ॥

ಕುಲಕರ್ಣಿ ಬಾಳಣ್ಣಂವಗ ಧ್ರೋತ್ರಾ ಶಳತಾ ಅಂದಾ ।
ಅಲ್ಲಿಗೆ ರಾಯಣ್ಣಗ ಬಂದಿತ ಕ್ರೋಧಾ ।
ಸೊಲ್ಲ್ಯಾಶಂತ ತಿಳಿದಿಯೆಸೋ ನೋಡಿ ಬಿಡತೀನಂದಾ ॥
ಬಲ್ಲಾಂಗ ನಡದೀತ ಇಬ್ಬರಿಗೆ ವಾದಾ ॥ ೧ ॥

ಫಾಳೇ ಎತ್ತುವಾಳ್ಯೆದಾಗ ಬಾಳಣ್ಣ ಸಂಧಿಸಿದಾ ।
ನಾಳೇ ಅಂದ್ರುಕೇಳಲಿಲ್ಲ ಅವರವ್ವನ ತರಿಸಿದಾ ॥
ಹೇಳಿ ಕೇಳಿ ಡುಬ್ಬದ ಮೇಲೆ ಕಲ್ಲಹೇರಿ ಸಿಂದ್ರಿಸಿದಾ ।
ಹಳಬರಾಯಂಣ ಹೋರಿ ಮಾರಿ ಹತ್ತೆ ತುಂಬಿದಾ ॥ ೨ ॥

ಸುರತುರ ಅರಸಂದು ಸಹಾಯು ತಕ್ಕೊಂಡಾ ।
ಮೂರನೂರ ಬೇಡರದೊಂದ ಹಿಂಡ ಕುಡಿಸಿದಾ ॥
ಧೀರಗಜವೀರನ್ನನ ಸಂಗಡಕರಕೊಂಡಾ ।
ಮೀರಸಂತಿ ಬಿಚ್ಚಗತ್ತಿ ಚನ್ನಬಸಣ್ಣ ಮುಖಂದಾ ॥ ೩ ॥

ಬೀಡಿ ಸಂಪಗಾಂವ ಕಚೇರಿ ಸುಟ್ಟುಬೂದಿ ಮಾಡಿದಾ ।
ನೋಡಿ ಸುಭೇದಾರ ಧಾರವಾಡಕ ತಿಳಿಸಿದಾ ॥
ದೊಡ್ಡ ಸಾಹೇಬ ವಿಕ್ಟೋರಿಯಾ ರಾಣಿಯುವರಿಗೆ ಬರದಾ ।
ದೌಡ ಮಾಡಿಕಳಿಸಿದರುದಂಡ ಆಳತಿಲ್ಲದಾ ॥ ೪ ॥

ಹಳ್ಳ ಹಳ್ಳ ಹುಡುಕುತ ಬಂತ ಫೌಜಖಬರಿಲ್ಲದಾ ।
ಹಳ್ಯಾಳಗುಡದಾಗ ಸರ್ಜ ಫರಾಳ ನಡಿಸಿದ್ದಾ ॥

ಸುಳವ ಹಿಡದಗಸ್ತಿಗಾರಿಕಿ ಯುದ್ದ ನಡಸಿದಾ।
ಎಲ್ಲಾ ಕಂಟಿಗಿ ಅರವಿ ಹತ್ತಿ ಬೆಂಕಿ ಹಚ್ಚಿಸಿದಾ ॥ ೫ ॥

ಮಂದಿ ಇಲ್ಲಿ ಐತಿ ಅಂತ ಸಿಪಾಯಿಗಳು ತಿಳದಾ।
ಮದ್ದುಗುಂಡ ತೀರುವತನಕ ಹೊಡದರು ಪಸಂದಾ ॥
ಆದದ್ದು ನೋಡಿ ರಾಯಣ್ಣ ಅವರ ಮೇಲೆ ಬಿದ್ದಾ ॥
ಗರ್ನಿ ಹೊಡದ ಕತ್ತಿ ಹಿಡದ ರುಂಡಗಳ ತರದಾ ॥ ೬ ॥

ಚಕ್ರ ಟೊಪಿಗಿ ಫಿರಂಗೇರನ ಲೆಕ್ಕವಿಲ್ಲದೆ ಕಡದಾ।
ಬಕ್ಕಬರ್ಲೆ ಬಿದ್ದರನ್ನ ಬೆನ್ನ ಮೇಲೆ ತುಳದಾ।
ಸಿಕ್ಕ ಅಳಿಮು ರಂಗ ಆಯ್ತು ರಕ್ತದ್ಹೊಳಿ ಹರದಾ।
ಸೊಕ್ಕ ಮುರದಹೋಯಿತು ಆಗಿನ ರಾಣಿ ಸರಕಾರದ್ದಾ ॥ ೭ ॥

ಸಂಪಗಾಂವ ತಾಲೂಕಿನ ಸುತ್ತಿನ ಹಳ್ಳಿ ಸುಲದಾ।
ಸಂಪತ್ತಿ ಇದ್ದವರದು ಮನಿಯಲ್ಲ ಬಳದಾ ॥
ಗುಂಪಿನೊಳಗಿನವರ ಹೊಟ್ಟಿ ದಶಿಂದಾ।
ಸಂಪೂರ್ಣ ಜವಾಬದಾರಿ ತನ್ನ ಕೊಡ ಇದ್ದವರದಾ ॥ ೮ ॥

ಉಪಟಳಕ್ಕ ಸರಕಾರದವರು ಕೋಪ ಆಗಿ ಮುಂದಾ।
ತಪಾಸಮಾಡಿ ಹಿಡಿದವರಿಗೆ ಇನಾಂ ಕೊಡತೀವಂದಾ ॥
ಉಪಾಯದಿಂದ ಡಂಗುರ ಹೊಡಿಸಿ ಮಾಡ್ಯಾರ ಪ್ರಸಿದ್ಧಾ ॥
ಕಪಟಿಗಳ ವಚನಕೊಟ್ಟ ಮೂವರು ಕೂಡಿಬಂದಾ ॥ ೯ ॥

ಸಿಂಗನಗೌಡ ವೆಂಕನಗೌಡ ಬಾಳನಾಯ್ಕ ಕೊಡಿಕೊಂಡಾ।
ಹೆಂಗಮಾಡಬೇಕಂತ ಲೆಕ್ಕ ಹಾಕಿ ಮನಗಂಡಾ ॥
ಸಂಗೊಳ್ಳಿ ರಾಯನಾಯ್ಕ ಹೋಗಿ ಹೇಳತಾರ ಬಂದಾ।
ಕಂಗಾಲಾಗಿ ಚೆನ್ನಾಗಿ ಬಿದ್ದ ಇರತೇವ ನಿಮ್ಮ ಕೂಡಾ ॥ ೧೦ ॥

ಒಳ್ಳೆ ಮನುಷ್ಯ ರಾಯನಾಯ್ಕ ವಿಶ್ವಾಸಹಿಡದಾ ।
ಹಳ್ಳ ಕ್ಹೋಗಿ ಜಳಕಕ್ಹೊಕ್ತ ಕತ್ತಿತಗರಿಟ್ಟಿದ್ದಾ ॥
ಕಳ್ಳರಿವರು ಮೂವರು ಕೂಡಿ ಆಗಮೇಲೆ ಬಿದ್ದಾ ।
ತಳ್ಳಿ ಮಾಡಿ ಕೈಕಾಲ ಕಟ್ಟಿ ಹೊರಸಿನ ಮೇಲೆ ಒಗದಾ ॥ ೧೧ ॥

ಸರದಾರನ ಮುಂದ ಇಟ್ರ ಕಚೇರಿಗೆ ಒಯ್ದಾ ।
ಸರದಾರ ಸರ್ಜನ್ನ ನೋಡಿ ಮರಮರಗಿದಾ ॥
ಶಿರ ಹೊಡೆಯು ಪರವಾನಿಗಿ ಸರಕಾರನ್ನ ಕೇಳಿದಾ ।
ಮರಳಿ ಹುಕುಮ ಆಗುದರೊಳಗ ಗಲ್ಲಿಗ ಹಾಕಿಸಿದ್ದಾ ॥ ೧೨ ॥

ನಂದಗಡದೂರಲ್ಲಿ ದಫನ ಮಾಡಿಸಿದಾ ।
ಮಂದೆಲ್ಲಾ ಮರಗಿದರು ಕೊಲಬಾರದಿತ್ತಂದಾ ॥
ಚೆಂದ ಆಲದ ಮರ ಬಂದ ಗುರ್ತಿಗೈತಿ ಇಂದಾ
ಖುದ್ದ ನೋಡಿದ ಬಂದವರೆಲ್ಲಾ ಹೇಳತಾರ ಪಸಂದಾ ॥ ೧೩ ॥

ಮಕ್ಕಳಾಗದವರು ಎಲ್ಲಾ ಇದೇ ಕಟ್ಟಿಗೆ ಬಂದಾ ।
ಏಕುಭಾವದಿಂದಬೇಡಿ ಕೊಂಡ ಬರುವವರಾ ।
ಮಕ್ಕಳಾದ ಮೇಲೆ ಆಲದಗಿಡಕ್ಕೆ ತೊಟ್ಟಿಲಕಟ್ತ್ಯಾರಿದಾ ।
ಚೆಂದ ಹುಲಕುಂಡ ಭೀಮ ಪರದೊಡಿ ಹೇಳಿದಾ ॥ ೧೪ ॥

ಲೇಖಕರು: **ಹುಲಕುಂದ ಭೀಮಕವಿ**

(ಶ್ರೀ ಚನ್ನಪ್ಪಾ ವಾಲಿ ಅವರು ಕಳುಹಿಸಿ ಕೊಟ್ಟದ್ದು).

೭೯. ಶ್ರೀ. ಚೆನ್ನಪ್ಪ ವಾಲಿಯುವರ ಪದ

ಕ್ರಾಂತಿವೀರ ವಾಲಿ ಚೆನ್ನಪ್ಪನವರ ಕಥಿ ಪ್ರೀತಿಲಿಂದ ಕೇಳರಿ ಕುತ ಜನರಾ। ಸ್ವಾತಂತ್ರ್ಯ ಸಲುವಾಗಿ ಆತ್ಮದ ಪರಿವಿಲ್ದದುಡದ ಕೀರ್ತಿ ಪಡೆದ ಭಾರತಾಂಬೆ ಕುವರಾ ॥ಪಲ್ಲವಿ॥

ಸಂಪಗಾಂವಿ ಊರಲ್ಲಿ ಜನ್ಮ ತಾಳಿದರು ಸಂಣಂದಿರತ ಶೌರ್ಯಧೈರ್ಯ ವಂತರಿವರು।ಸೊಪ್ಪ ಹಾಕಲಿಲ್ಲ ಗಂಡಗಲಿ ನಾಡಿನವರು ಕೆಂಪ ಮೋತಿ ಜನರನ್ನು ಗಾಬ ಮಾಡಿದರಾ ॥ ಮಾಡಬೇಕು ಇಲ್ಲವೆ ಮಡಿಬೇಕು ಅಂದ ಗಾಂಧಿ ಯುವರ ಮಾತ ದೃಢವಾಗಿ ನಡಿಸಿದರಾ । ಬಂಡ ಇಂಗ್ಲಿಷ ಕೂತ ತರತರದ ವೇಷ ಹಾಕಿ ಮೋಸಮಾಡಿ ಚಳವಳಿ ಹೂಡಿದರಾ ॥ ಬೆಳಗಾವಿ ಜಿಲ್ಲೆ ಬಾಗೇವಾಡಿ ಊರಲ್ಲಿ ಗೆಳೆಯುರ ಕೂಡಿಕೊಡ ಮೊದಲಕಾರ್ಯ ನಡಿಸಿರಾ । ಬೆಳಗಾಗುದರೊಳಗ ಹನ್ನೊಂದು ಮೈಲ ತಾರತಂತಿ ಕಂಬಕಿತ್ತಾ ತಂತಿ ವ್ಹಾ ಕತ್ತರಿಸಿದರಾ ॥

ಮುಂದೆ ಒಂದ ತಿಂಗಳ ತನಕ । ಒಂದೊಂದ ವಾರದ ತನಕ । ಇಬ್ಬಿಬ್ರ ಸತ್ಯಾಗ್ರಹ ಮಾಡುತಾ । ಪೋಷ್ಟ ಡಬ್ಬಿ ಭಾವ್ಯಾಗ ಒಗೆಯುತಾ । ಐದಸಾವಿರಕಿಮುತ್ತಿನ ಸಾಲಿ । ಸುಟಬಿಟ್ರುಕ್ಷಣದಲ್ಲಿ । ಎನು ಉಳಿಯುದಂತಾ । ತಾರ ತಂತಿ ಕಂಬಿ ಕಡಿಯುದ ನಡದೇ ಇತ್ತಾ ॥

ಗುರ್ತಹತ್ತಾದಹಾಂಗ ಫೌಜದಾರ ಡ್ರೇಸ್‌ಹಾಕಿ ॥ ಬೆತ್ತಾಹಿಡಕೊಂಡ ತಿರಗ್ಯಾಡವರಾ ॥ ಸ್ವಾತಂತ್ರ್ಯ ಸಲುವಾಗಿ ॥ ಆಕ್ಟೋಬರ್22 ಆದಿನ ಸಂಪಂಗಾವಿಯಲ್ಲಿ ಪೋಲಿಸರ ಬಂದುಕ ಕಸಿದು ಕೊಂಡರಾ ।ಕಣಿಗೆ ಖಾರಾಪುಡಿ ಎಸೆದ ಗುಂಡಹಾರಿಸಿದರು ಕೇಳದೆ ತಮ್ಮ ಕೆಲಸವನು ಸಾಧಿಸಿದರಾ ॥

ಸಂಣ ಕೆಲಸಗಳಿಗೆ ಅಣ್ಣ ಮನಸಹಾಕಲಿಲ್ಲ ತಾಲ್ಲೂಕು ಕಚೇರಿ ವ್ಯಾಲ ದಾಳಿ ಮಾಡಿದರಾ । ಎನ ಹೇಳದ್ಹೇನ ಅದನ ಪೂರ್ವ ತಯ್ಯಾರಮಾಡಿ ಪೋಲಿಸರಿಗ ತಿಳಿದಂತೆ ನಡಿಸಿದರಾ ॥ ಧಾರವಾಡದಿಂದಾ ಅರ ಲಾರಿ ಪೋಲಿಸರು ಬಂದಿದ್ದರು ಕಚೇರಿ ಕಾವಲಕ್ಕೆ ತಯ್ಯಾರಾ । ಪೂರಾ ತಿಳಿಕೊಂಡು ಹೊಂಗಲಕ್ಕೆ ಬಂದು ಅಲ್ಲಿ ಪೋಷ ಆಫೀಸ ಶುಭ್ರ ನಷ್ಟಪಡಿಸಿದರಾ । ಹೇಳಿದರ ತೀರುದಿಲ್ಲಿ ಇವರ ಕೆಲಸ । ಕೇಳಿದವರಿಗೆ ಸಂತೋಷ । ಮನಕ್ಕೆ ವೀರಾವೇಷಾ । ಇಂಥವರದ್ದಾಗ ಆಗುವ ಮಹಾ ಕೆಲಸಾ ॥ ಸೇನಾಪತಿ ಎನಿಸಿಕೊಂತಾರ । ಕನ್ನಡನಾಡಿನ ವೀರ ಚಿನ್ನದುಂಗರಾ । ಚೆನ್ನಪ್ಪಣ್ಣ ವಾಲಿ ಅಂತ ಇವರ ಹೆಸರಾ ॥ ಕ್ರಾಂತಿಕಾರರ ಪದಾ ಸ್ವತಾ ರಚಿಸಿ ಹೇಳಿದ ಹುಲಿಕುಂದ ಭೀಮ ನಾಡೋಳು ಜಾಹೀರಾ ॥ ೨ ॥

ಲೇಖಕರು : **ಹುಲಕುಂದ ಭೀಮಕವಿ**

(ಶ್ರೀ ಚನ್ನಪ್ಪ ವಾಲಿಯವರು ಕಳುಹಿಸಿದ್ದು)

೮೦. ಮೈಲಾರ ಮಹಾದೇವರ ಲಾವಣಿ

ಕಾಂತನ ಕಳಕೊಂಡು ಕಾಮಿನಿಯಂತೆ ಭಾರತ ಹಾಕ್ವದು ಕಣ್ಣೀರ ।
ಶಾಂತಿ ಸಮರದೊಳು ಗುಂಡಿನೇಟಿನೋಳೂ ಮಡಿದ ಮಹಾದೇವಪ್ಪ ಮೈಲಾರ ॥
ಸಣ್ಣವನಿರುತಲೆ ಶಾಲೆಗೆ ಹೋಗಲು ಸ್ವತಂತ್ರವೀರರ ಚರಿತ್ರೆಯನು ।
ಬಣ್ಣದ ಮಾತಿಗೆ ಕಣ್ಣನೆ ಎತ್ತದೆ ಓದುವ ಆಶೆ ಇಟ್ಟಿದ್ದನು ॥
ಕರುನಾಡಿನ ಕಡು ವೀರ ಕೇಸರಿ ನೆನಪಿರಲೆಸ್ನುತ ।
ನಿರಂತರ ಬರೆದನು ಲಾವಣಿ ಲಾವಣಿಕಾರ ಹರಡಿದ ಹಾಡನು ನಾನಾತರ ॥
ಹುಟ್ಟಿದ ಮಕ್ಕಳನ್ನು ಜಟ್ಟಿಗಳಾಗಿ ಮಾಡಿರಿ ಹೊಟ್ಟೆಗ್ಹಾಕ್ರಿ ಕಮ್ಮ್ರಕಗ
ಗಟ್ಟಿ ತರುಣರು ರಾಷ್ಟ್ರದ ಸಂಪತ್ತು ಶ್ರೇಷ್ಠ ಸೃಷ್ಟಿಯೊಳಗ ॥
ಒಕ್ಕಟ್ಟಾದರೆ ದಿಕ್ಕೆಟ್ಟು ಹೋಗುತಾರಾ ಬಿಕ್ಕಟ್ಟು ಪ್ರಸಂಗದೊಳಗ ।
ಪುಕ್ಕಟ ಬಡಿದಾಡಿ ರೊಕ್ಕ ಕೊಡಬಾಡ್ರಿ ವಂಚರ ಕೈಯಾಗ ॥
ಆಹಾ ಸ್ವಾತಂತ್ರ್ಯ ಮಹಾ ಸ್ವಾತಂತ್ರ್ಯ, ಸ್ವಾತಂತ್ರ್ಯ ಮುಸುಕಿತು ಅವನಲ್ಲಿ ।
ಮಹಾದೇವಣ್ಣನ ನಾಡಿಯು ರಕ್ತವು ಪುಟಿಯಿತು ಅವನ ಎದೆಯಲ್ಲಿ ॥
ಆರ್ಯರ ಕಾಲದ ಭಾರತ ಸಿರಿಯನ್ನು ನೆನೆಯುತ ಮನದೊಳು ಮರುಗಿದನು ।
ಭಾರತ—ಭಾಗ್ಯ ಮಹಾತ್ಮ ಗಾಂಧೀಯ ಸ್ವಾತಂತ್ರ್ಯ ಕೂಗನು ಕೇಳಿದನು ।
[ಚಕ್ರ ಟೊಪಿಗಿ ಫಿರಂಗಿಯರನ ಲೆಕ್ಕವಿಲ್ಲದೆ ಒಡಿದಾಡಿದನು ।
ಇದು ಮತ್ತು ಮುಂದಿನ ಸಾಲು ಬೇರೆಯಾವುದೋ ಲಾವಣಿಯಿಂದ ಇಲ್ಲಿ ನಸುಳಿ
ದಂತೆ ಇದೆ.
ಒಕ್ಕ ಬರ್ಲೆ ಬಿದ್ದವರ ಬೆನ್ನ ಮೇಲೆ ತುಳಿದು ರಕ್ತದ ಕಾಲುವೆ ಹರಿಸಿದನು] ॥
ಭಾರತ ದೇಶದ ಬಂಧ ವಿಮೋಚನೆಗೆ ಭಾರಿ ಕಷ್ಟವ ಸೋಸಿದರು ।
ತಾರುಣ್ಯವೆಲ್ಲವ ತುರಂಗದಲ್ಲಿ ಕಳಿದು ಮಡಿದ ಮಹಾಶೂರು ಮೈಲಾರರು ॥
ಬ್ರಿಟೀಶ ಸರಕಾರದ ಲಾಠಿಯು ಹೊಡೆತಕ್ಕೆ ಎಟು ಮಣಿಯುಲಿಲ್ಲ ಮೈಲಾರರು
ಕಠಿಣ ಪ್ರಸಂಗದಲ್ಲಿ ಕಾಲದೆಗೆಯದೆ ದಿಟ್ಟತನದಿ ಮುಂದೆ ಸಾಗಿದರು ।
ಮೂರು ಮಾತುಗಳನು ಸಾರಿ ಹೇಳಿದರು ಮಡಿದ ಮಹಾದೇವಪ್ಪ ಮೈಲಾರರು ॥

ಲೇಖಕರು: **ಸಮದ್ ಸಾಬ್**

(ಸಂಗ್ರಹ: ಪ್ರೊ॥ ಸಿ.ವೀ ಕೆರಿಮನಿ)

೮೧. ಮಹದೇವ ಮೈಲಾರ : ಇನ್ನೊಂದು ಲಾವಣಿ

ಮಹದೇವಪ್ಪ ಮೈಲಾರರೆಂಬ । ಮಹಾತ್ಮ ನಮ್ಮ ಊರಿಗೆ ಬಂದು ।
ಗಾಂಧಿ ತತ್ವ ಸಾರಿ ಹೇಳತಾನ । ದಿನಾ ದಿನಾ ॥ ಪಲ್ಲವಿ ॥

ಸತ್ಯವಂತರು ಸಾವಿರಗಟ್ಲೆ । ನಿತ್ಯ ಬಂದು ಕೇಳತಾರ ।
ಸುತ್ತ ಮುತ್ತಲ ಜನ ಕಿತ್ತಿ ಬರತಾರಣ್ಣ ॥

ಚಿಕ್ಕ ವಯುವಿದ್ರು ಒಳ್ಳೇ ಚೊಕ್ಕ ಮಾತನಾಡತಾನ ।
ಹಕ್ಕಿ ತನ್ನ ಮರಿಗೆ ಮುದ್ದು ಕೊಟ್ಟಾಂಗ । ನಕ್ಕರೊಂದು ಚಂದ ಅವನು ।
ನುಡಿದರೊಂದು ಚಂದ ನಮಗ ।

ಸಿಕ್ಕಿದಿಲ್ಲೊ ಇಥಾ ಚೊಕ್ಕ ಬಂಗಾರದಂಥಾವಾ ॥

ಲೇಖಕರು : ತಿಳಿಯದು

ಶ್ರೀ. ಕರೆಪ್ಪ ಹುಚ್ಚಣ್ಣವರ ಸಾ: ಹಾವೇರಿ ಅವರಿಂದ ಕೇಳಿ ಬರೆದು ಕೊಂಡದ್ದು ಅವರಿಗೆ ಶ್ರೀ. ಫಕೀರಸಾಹೇಬರೆಂಬುವರು ಲಾವಣಿ ಹೇಳಿದ್ದರಂತೆ)

ಸಂಗ್ರಹ : ಶ್ರೀಮತಿ ಲಲಿತಾ ಕೆರಿಮನಿ)

೮೨. ಲಾವಣಿ

ಜಪಿಸಿರಿ ಸ್ವರಾಜ್ಯ ಮಂತ್ರವನೂ ॥ ಧರಿಸಿರಿ ಸ್ವದೇಶಿವಸ್ತ್ರವನೂ ॥ ಪಲ್ಲವಿ ॥

ಮೂರಪತಾರದ ಮೂರ್ತಿಗಳಾಗಿಹ । ಧೀರರು ದೇಶದೊಳು ।
ಪುಟ್ಟಿದರೂ । ಧೀರರು ದೇಶದೊಳು ॥ ಪಾರತಂತ್ರ್ಯವೀ
ಸೂತ್ರವ ಹರಿಯುವ ನೀತಿಯು ಮಂತ್ರವಿದೂ ॥ ೧ ॥

ಜ್ಯೇಷ್ಠ ಪಿತಾಮಹ ದಾದಾಭಾಯಿಯರು । ಸೃಷ್ಟಿಸಿ ತೋರಿದರೂ ॥
ಕಷ್ಟವ ಕಳೆಯುವ ಗುಟ್ಟು ಇದೆನ್ನುತ । ದೃಷ್ಟಿಗೆ ತೋರಿದರು ॥ ೨ ॥

ಸಫಲವಿದೆನ್ನುತ ಚಿಪುಳುಣಕಾರರು । ಗುಪಿತವ ತೋರಿದರು ॥
ತಪಿಸುವದೀ ಕಾರ್ಯವ ನೀವೆಲ್ಲವ । ರುಗಕೃತ ಗೈಯ್ಯುವದು ॥
ಸ್ವರಾಜ್ಯಕೆ ಉಪಕೃತ ಗೈಯ್ಯುವದೂ ॥ ೩ ॥

ಬಾಲಗಂಗಾಧರ ತಿಲಕರು ಲೋಕಕೆ । ಮಾನ್ಯರು ತಾವೆನಿಸಿ ॥
ಚಾಲನಗೈದರು ಮುಂದರಿಯಲು ಬಲು । ಕವಡುಗಳನು ಸಹಿಸಿ ॥ ೪ ॥

ವೀರರು ನಮ್ಮ ವಿಚಾರಕೆ ತನುಮನ । ಸೂರೆಯುಗೊಟ್ಟಿಹರೂ ॥
ಕಾರಾಗೃಹ ವಾಸವನನುಭವಿಸುತ ತೋರಿದ ಮಾರ್ಗವಿದೂ ॥ ೫ ॥

ಲಾಲಾ ಲಜಪತರಾಯರು ತಿಳಿದರು । ಮೂಲ ಮಂತ್ರವೆನುತಾ ।
ಕಾಲಕೆ ಬಂದಿಹ ಕಷ್ಟವ ಸಹಿಸುತ ಮುಂದಕೆ ನಡೆಯುವರೂ ॥ ೬ ॥

ಪಾಲ ಚಂದ್ರರನುಗಾಲವು ಲೋಕಕೆ । ಮೇಲನು ತಿಳಿಸಿದರು ।
ಸ್ಥೂಲ ಸೂಕ್ಷ್ಮಗಳ ತಿಳಿಯುತ ನೋಡಿರಿ । ಕಾಲವ ಕಳೆಯದಿರಿ ॥ ೭ ॥

ಹಿಂದೆಮುಂದಿನವರಿಂದಕೆ ತಪ್ಪದೆ ಸಂಧಿಯು ನನುಸರಿಸೀ ॥
ಮುಂದೆ ಮಹಾತ್ಮಾ ಗಾಂಧಿಯರೀಪರಿ । ಸಂದೇಶವ ತಿಳಿಸಿ ॥ ೮ ॥

ಪರಿಪರಿ ಕಷ್ಟವ ಸುರಿಸುರಿದನು ದಿನ ತರಹರಿಸದೆ ಮನಕೆ ।
ಕರುಣಿಸಿ ಪೇಳ್ದರು ಸ್ವದೇಶಿ ಮಂತ್ರವ ಪರರಿಗರಿಯದಂತೇ ॥ ೯ ॥

ನಿದ್ರೆಯೊಳಿರುವರ ಮುದ್ರೆಯನೀಕ್ಷಿಸಿ । ಬುದ್ಧಿಯೋಚ್ಚರಿಸಿ ॥
ಸಿದ್ಧನಗರ ಶ್ರೀ ದೇವನ ನೆನೆಯುತ । ಬುದ್ಧಿಯ ನೆರೆ ಕಲಿಸೀ ॥ ೧೦ ॥

ಲೇಖಕರು : **ತಿಪ್ಪಯ್ಯ ಮಾಸ್ತರರು**

(' ರಾಷ್ಟ್ರೀಯ ಪದ್ಯಗಳು ' , 1930)

೮೩. ಕಾಂಗ್ರೆಸ್ಸಿನಚಿತ್ರ.

(ದಿವ್ಯ ಸ್ವಾತಂತ್ರ್ಯರವಿ–ಎಂಬಂತೆ)

ಸ್ಥಿರವಾಗಿ ಬೆಳೆಯುತಿದೆ । ಭಾರತ ಮಹಾ ಸಭೆಯು ॥ ಪ ॥
ಧರಣತಳದೊಳು ಸರ್ವ । ಪರಿ ವಿಜಯುವನು ಪಡೆದು ॥ ಅ. ಪ ॥

ಪಾರತಂತ್ರ್ಯದಿ ಬಿದ್ದ । ಭಾರತೀಯರಿಗಿಂದು ।
ಸ್ವರಾಜ್ಯ ಸುಖಕೊಯ್ವ । ದಾರಿ ತೋರಿದ ಸಭೆಯು ॥ ೧ ॥

ಪಾಶ್ಚಾತ್ಯ ಸಂಸ್ಕೃತಿಯು । ಮೆಚ್ಚುಗೆಗೆ ಮರುಳಾಗಿ ।
ಹುಚ್ಚರಾಗಿಹ ಜನರ । ಎಚ್ಚರಿಸಿರುವ ಸಭೆಯು ॥ ೨ ॥

ಪರ ವೈರಿಗಳು ಕೊಟ್ಟ । ಪರಿ ಪರಿಯ ಪೀಡೆಗಳು ।
ನಿರುತವೂ ಸಹಿಸಿಯೂ । ಮೆರೆಯುತಿರುವಾ ಸಭೆಯು ॥ ೩ ॥

ಜಾತಿ ಮತ ಮತ್ಸರದ । ಭೂತವನು ಕಡಿದೊಗೆದು ।
ನೀತಿ ರೀತಿಯ ಪ್ರಥಪ್ರ । ತೀತಿಗೊಳಿಸಿದ ಸಭೆಯು ॥ ೪ ॥

ಹಿಂದೀಯ ಶಕ್ತಿಯನು । ಮಂದ ಮಾಡುತಲಿರುವ ।
ಅಂಧ ಅಸ್ಪೃಶ್ಯತೆಯ ।ಕೊಂದು ಹಾಕಿದ ಸಭೆಯು ॥ ೫ ॥

ದೇಶದಾ ಧನವು ಪರ । ದೇಶ ಸೇರುವದೆಂದು ।
ದೇಶೀಯ ಚಳವಳಿಯ ।ಪೋಷಿಸಿರುವಾ ಸಭೆಯು ॥ ೬ ॥

ಒಡಲನು ಸುಡುತಿರುವ । ಬಡತನವ ಓಡಿಸಲು ।
ಬೆಡಗು ಖಾದಿಯ ಮಾಡಿ ।ತೊಡಲು ಕಲಿಸಿದ ಸಭೆಯು ॥ ೭ ॥

ಯಂತ್ರವನು ದೂಡುತೆ । ಸ್ವತಂತ್ರ ದಂಥಯ ಬೆಳಿಸೆ ।
ಜಂತ್ರವನು ತಿರುಗಿಸುವ । ಮಂತ್ರ ಪೇಳಿದ ಸಭೆಯು ॥ ೮ ॥

ಸೆರೆ ಸೇಂದಿ ಮೊದಲಾದ । ದುರುಳ ಚಟಗಳ ಬಿಡಸಿ ।
ಸರಳ ದಾರಿಯ ತೋರಿ । ಕರೆದೊಯ್ಯುವಾ ಸಭೆಯು ॥ ೯ ॥

ಹಿಂಸಾಪಥವ ಪಿಡಿದು । ಧ್ವಂಸವಹ ಜಗಕೆ ಪ್ರ – ।
ಶಂಸಾರ್ಹಕೃತಿಯಿಂ ಅ–। ಹಿಂಸೆ ಪೇಳಿದ ಸಭೆಯು ॥ ೧೦ ॥

ಕರ್ಮಚಂದನ ಕುವರ । ಕರ್ಮಯೋಗಿ ಮಹಾತ್ಮ ।
ನಿರ್ಮೋಹದಲಿ ದುಡಿದು । ಧರ್ಮ ಕಲಿಸಿದ ಸಭೆಯು ॥ ೧೧ ॥

ನೆಹರೂ ಜವಾಹಿರನು । ಸಹಿಸಿ ಬಹು ಕಷ್ಟವನು ।
ವಹಿಸಿ ಸರ್ವಸ್ವವನು । ಬಹು ಬೆಳಿಸಿರುವ ಸಭೆಯು ॥ ೧೨ ॥

ಹಣವು ಹೊಲಮನೆಗಳನು । ಗಣಿಸದಲೆ ಬಹು ಜನರು ।
ಪಣಕಿಟ್ಟು ಪ್ರಾಣವನು ಹೆಣಗಾಡಿರುವ ಸಭೆಯು ॥ ೧೩ ॥

ನಂಬುತಲೆ ನೀವ್ ಪ್ರಾಯ । ತುಂಬಿರುವ ಜನರೆಲ್ಲ ।
ಸಂಭ್ರಮದೊಳಗೆ ಬಂದು । ಮೆಂಬರಾಗುವ ಸಭೆಯು ॥ ೧೪ ॥

ಲೇಖಕರು : ತಿಳಿಯೆಂದು

(ಮದ್ಯ ನಿಷೇಧ ಪದ್ಯಾವಲೀ ಶಿರಸಿ, 1939)

೮೪. ಹೆಂಡದ ಲಾವಣಿ

ಹೆಂಡವನ್ನು ಕುಡಿಯಬೇಕಣ್ಣಾ । ಈ ಲೋಕದೊಳಗೆ ।
ಉಂಡು ತಿಂದು ಸುಖದೊಳಿರು ಜಾಣಾ ॥ ಪಲ್ಲವಿ ॥

ಹೆಂಡವನ್ನು ಕುಡಿದು ನೀನು । ಹೆಂಡಕುಡ್ಕುಕನೆನಿಸಿಕೊಂಡು ।
ಕಂಡ ಕಂಡ ಜನರ ಮುಂದೆ । ಸೊಂಡಿಯೊಣಗಿಸಿ ಸೊಟ್ಟನಾಗುವ ॥ ಅ. ಪ ॥

ಹೆಂಡವಿದು ಸರಾಯ ಕಾಣಣ್ಣಾ । ಶರೀರವನ್ನು ।
ಕೆಂಡದಂತೆ ಸುಟ್ಟುಬಿಡುವದಲಾ ॥ ಭಂಡ ಜನರ ಹಿಂಡಿನೊಳಗೆ ।
ಮಂಡೆ ಕೆದರಿಕೊಂಡು ಹೋಗಿ । ಗುಂಡಿಯೊಳಗೆ ಬೀಳುವಂಥ ।
ರಂಡೆಗೆಲಸವ್ಯಾತಕಣ್ಣಾ ॥ ೧ ॥

ಹೆಂಡವಿದು ಬಲು ಕೆಟ್ಟವಿಷವಣ್ಣಾ । ಕಡು ಮೂಢನೆಂದು ।
ಕಂಡ ಜನರು ಜರಿವರೋ ನಿನ್ನಾ ॥ ಅಕ್ಕ ಅಣ್ಣ ತಮ್ಮಂದಿರು ।
ದುಃಖ ಮಾಡಿ ಹೇಳುತಾರೋ । ಮುಕ್ಕುವರೆ ಕಾಳೀಲ್ಲ
ನಮಗೆ । ಕಕ್ಕುಲತೆ ಯಾಕಿಲ್ಲ ನಿನಗೆ ॥ ೨ ॥
ಕೆಟ್ಟದೀ ಸರಾಯಿ ಕಾಣಣ್ಣಾ । ಮಾನವರ ದೇಹಾ । ಸುಟ್ಟು
ಸೂರಾಗುವುದು ನೋಡಣ್ಣಾ ॥ ತಟ್ಟುತಿರುವದು ಪಾಪ ನರಕಾ ।
ಸಿಟ್ಟು ತಾ ಮನೆಮಾಡಿಕೊಂಬುದು । ಹೊಟ್ಟೆಗಿಲ್ಲದೆ ಬಟ್ಟೆಗಿಲ್ಲದೆ ।
ಕೆಟ್ಟು ಸಾಯುವ ಕಾಲದಲ್ಲಿ ॥ ೩ ॥

ತಂಪು ತೋರದು ಸೆಂಪು ಹಾರುವುದು । ಕಿವಿ ಕಣ್ಣುಗಳಿಗೆ ।
ಸೊಂಪು ಇಲ್ಲದೆ ಮಂದವಾಗುವವೂ ॥ ದಂಪತಿಗಳು ಹಡೆದ ಮಕ್ಕಳು ।
ಸಿಂಪಿಯಂತೆ ವಣಗಿ ವಣಗಿ । ಸಂಪಿಗೇಯಾ ಗರಿಯ ಹಾಗೆ ।
ಸೊಂಪು ಮುರಿದು ಬಾಗುವವೂ ॥ ೪ ॥

ಹಿಂದುಗಳಿಗಿದು ಶಾಸ್ತ್ರವಲ್ಲಣ್ಣಾ । ಭೂಭಾರನಾಗಿ ।
ಕುಂದು ಬರುವವರಿಂದ ಕಾಣಣ್ಣಾ । ಅಂದಗೆಟ್ಟು ಹೆಂಡವೆಂಬ ।
ಬಂಧನದಲಿ ಸೇರಿ ನೀನು । ಹಿಂದೆ ಮುಂದೆ ನೋಡದೆ ।
ಬೇಕೆಂದು ಜೀವವ ಕೊಂದುಕೊಳ್ಳುವಿ ॥ ೫ ॥

ಕಾಮಕ್ರೋಧಕೆ ಬಲವು ಹೆಚ್ಚಣ್ಣಾ । ದುರ್ಗುಣಗಳೆಲ್ಲ ।
ನೇಮದಲಿ ಬೆನ್ನುಹತ್ತುವವು ಜಾಣಾ । ಕಾಮಿನಿಯರ ಕಂಡು ಮನಸು ।
ಕಾಮುಕರ ಕೈಸೇರಿ ದಿನ ದಿನ । ತಾಮಸದಿ ಬಳಲುವನು ।
ತನ್ನಭಿಮಾನವೇನು ಕಾಣದಂಥಾ ॥ ೬ ॥

ಬಿದ್ದು ನೆಲದಲ್ಲಿ ಹೊರಳಬೇಡಣ್ಣಾ । ವಿವೇಕವೆಂಬ ।
ಬುದ್ಧಿಯಿಂದಲಿ ತೂಗಿ ನೋಡಣ್ಣಾ । ಹದ್ದು ಹಾವಿನಾಂಗ ಪರರ ।
ಛಿದ್ರವನ್ನು ತೋರುವಾಗ ।ಶುದ್ಧವಾದ ಜನರ ಮುಂದೆ । ಕದ್ದು
ಕಳ್ಳನಂತೆ ಆಗುವ ॥ ೭ ॥

ಲೇಖಕರು : **ತಿಪ್ಪಯ್ಯ ಮಾಸ್ತರ್**

(ರಾಷ್ಟ್ರೀಯ ಪದ್ಯಗಳು)

೮೫. ಮದ್ಯಪಾನ ನಿರೋಧ

ಈ ಸೇಂದಿ ಪರಾಬಿನ ಗೇಂದಿ ಅದೆಂತೋ । ಏನೇಳಲಿ ॥ ನಾ ॥ ॥ ಪ ॥
ಸೇಂದಿಯು ಸೇವಿಪ ಸ್ವಜನರೆ ಕೇಳಿ ।
ಸೇಂದಿಯಿಂದ ನರಜನ್ಮವೆ ಧೂಳಿ ।
ಸೇಂದಿಯು ವರ್ಜಿಸಿ ಸುಖದಿಂ ಬಾಳಿ ।
ಗಾಂಧಿಯು ಕೈಮುಗಿದೊರಲುವುದೆಂತೋ । ಏನೇಳಲಿ ॥ ನಾ ॥ ॥ ೧ ॥

ಮದ್ಯಪಾನವದು ಬಲು ದುರ್ಗಂದ ।
ಗಾರ್ಧಭ ಮೂತ್ರಕೆ ಸರಿಸಮ ಹೆಂಡ ।
ಮಾದರಿ ದೇಶದಿ ತಂಡೋಪತಂಡ ।
ದುರ್ದೆಶೆ ದುರ್ಗತಿ ಒದಗಿಹುದೆಂತೋ । ಏನೇಳಲಿ ॥ ನಾ ॥ ॥ ೨ ॥

ಹೆಂಡ ಸಾರಾಯಿ ಬ್ರಾಂದಿಯು ಕುಡಿದು ।
ಹೆಂಡತಿ ಮಕ್ಕಳ ವಡಲನು ಬಡಿದು ।
ಷಂಡನೆಂಬ ಬಿರುದಾಂಕಿತ ಪಡೆದು ।
ಗಂಡನೆಂದು ತಾ ಬದುಕುವುದೆಂತೋ । ಏನೇಳಲಿ ॥ ನಾ ॥ ॥ ೩ ॥

ಕುಡಿತದಿ ಬರುವುದು ಬಡತನವಣ್ಣ ।
ಕುಡಿತದಿ ಕೆಡುವುದು ದೇಹದ ಬಣ್ಣ ।
ಕಡೆಯೊಳು ಬದುಕಿದ ಹೆಣಸಮನಣ್ಣ ।
ಮಡದಿ ಮಕ್ಕಳನು ತ್ಯಜಿಸುವುದೆಂತೋ । ಏನೇಳಲಿ ॥ ನಾ ॥ ॥ ೪ ॥

ಅನುದಿನ ಕೆಡುತಿಹ ಜನತೆಯು ನೋಡಿ ।
ಘನ ಕಾಂಗ್ರೆಸ್ಸಿನ ಗುರಿಯುನೆ ಹೂಡಿ ।
ಜನಸಾಮಾನ್ಯಕೆ ಬೋಧನೆ ಮಾಡಿ ।
ದಿನ ನೀಲ್ಕಂಠನು ದಣಿಯುವುದೆಂತೋ । ಏನೇಳಲಿ ॥ ನಾ ॥ ॥ ೫ ॥

ಬಿ. ನೀಲಕಂಠಯ್ಯ (ಮುದ್ರಿತ)

('ರಾಷ್ಟ್ರಗೀತಾವಳಿ' ತಾರೀಕಿಲ್ಲ)

೮೬. ದುರ್ವ್ಯಸನಗಳನ್ನು ಬಿಡಿರಿ

(ಎನ್ನದು ಈ ಕನ್ನಡ ನಾಡು ಎಂಬಂತೆ)

ಕುಡಿಯಬೇಡಿ ಸೆರೆಸೇಂದಿಗಳ । ಬಿಡಿರಿ ಬಿಡಿರಿ ದುರ್ವ್ಯಸನಗಳ ॥ ಪ ॥
ಮಾಡುವೆ ನಿಮಗೆ ವಿನತಿಗಳನಾ । ಬೇಡುವೆ ಮುಗಿಯುತೆ ಕರಗಳನಾ ॥ ಅ ॥
ಸರಕಾರಕೆಕರರೂಪದಲಿ । ಪರಿಪರಿ ಲಾಭವ ಮಾಡುತಲಿ ।
ಪರದೇಶಕೆ ಹಣ ಹಾಕುತಲಿ । ದಾರಿದ್ರ್ಯವ ನಮಗೀಯುತಲಿ ।
ಪರಸತ್ತೆಯು ಸ್ಥಿರಗೊಳಿಸುತಲಿ । ಪರದಾಸ್ಯದುರಿಯೊಳೊಗೆಯುತಲಿ ।
ಸಿರಿಸಂಪದಗಳ ಸೆಳೆಯುತಲಿ । ದರವೇಶಿ ಗಳಿವರೆನಿಸುತಲಿ ॥
ಧರೆಯಲಿ ಸುಖ ಸಂಹರಿಸುವದು ।
ಅರಸನ ತಿರುಕನ ಮಾಡುವದು ।
ನರಕದ ಯಾತನೆ ತೋರುವರು ।
ವರಣಿಸಲಾಗದು ಈ ಸೆರೆಯ । ಪರಿಪರಿಯಲಿ ಕೊಡುತಿಹ ವ್ಯಥೆಯ ॥ ೧ ॥

ಜ್ಞಾನಿಯು ಜ್ಞಾನವ ಕೆಡಿಸುವದು । ಬಲವಂತನ ಬಲವಳಿಸುವದು ।
ಮಾನ್ಯ ಮಾನ್ಯತೆ ಕಳೆಯುವದು । ಗುಣವಂತನ ಗುಣ ಹಿಂಗಿಸುವುದು ।
ಮನುಜನ ಮಾನುಷತನವನ್ನೇ । ಕ್ಷಣದಲಿ ಮಾಯವ ಮಾಡುವದು ।
ಮಾನಭಂಗವನು ಪೊಂದಿಸುತೆ ಹೀನ ದೀನತೆಯ ತಂದಿಡುತೆ ।
ಧರ್ಮಾಧರ್ಮ ವಿಚಾರವನು ।
ನೀತಿ—ಅನೀತಿ ವಿವೇಕವನು ।
ನಾಶ ಮಾಡುವದು ಬುದ್ಧಿಯನು ।
ಸಾಕು ಸಾಕು ಸೇಂದಿಯ ಸಂಗ । ಸಾಕು ಸಾಕು ಸಹಿಸಿದ ಭಂಗ ॥ ೨ ॥

ಕುಡಿದಾಕ್ಷಣ ಹುರಿದುಂಬಿಪುದು । ಕಡೆಗತಿ ನಿತ್ರಾಣವು ನಿಜವು ।
ನಾಲಿಗೆಗಿದು ರುಚಿಕರ ರಸವು । ಆರೋಗ್ಯಕೆ ನಾಶಕ ವಿಷವು ।
ಕಣ್ಣಿಗೆ ನುಣ್ಣಗೆ ಕಾಣುವದು । ಗುಣದಲ್ಲಿ ಘಾತಕವಾಗಿಹುದು ।
ಹೊರಗಡೆ ಹೊಂಬಣ್ಣದ ಕೊಡವು । ಒಳಗೆ ನೋಡೆ ವಿಷ ತುಂಬಿಹುದು ।

ಮೊದಲಿಗೆ ಸವಿ ಸವಿ ತೋರುವದು ।
ತರತರದಲಿ ಮನ ಸೆಳೆಯುವದು ।
ಕುಡಿಯಲು ಕರಳನು ಕೊರೆಯುವದು ।
ಹಿತಶತ್ರುಗಳಂದದಿ ಜನರ । ಹತಿಸುವದೈ ತಿಳಿಸದೆ ತಿರುಳ ॥ ೩ ॥

ವಿಷವನು ಕುಡಿದರೆ ಒಮ್ಮೆಲೆಯೇ । ಅಸುವನು ಹೀರುವದಾಕ್ಷಣವೇ ।
ಸೆರೆ ಕುಡಿದರೆ ಉಸುರಿರುವರೆಗೂ । ಬರುವವು ತರತರ ಕಷ್ಟಗಳೂ ।
ವಿಷ ಕುಡಿದರೆ ಪ್ರಾಣವನೊಂದ । ಕಸಕೊಳ್ಳುವದೆಂಬುದು ಸಹಜ ।
ಸೆರೆ ತನುಮನ ಪ್ರಾಣವ ಸಹಿತ । ಆತ್ಮವನು ಹತಗೊಳಿಸುವದು ।
ಸರ್ವನಾಶಕರವೀ ಹೆಂಡ ।
ಕುಡಿದವನಾಗುವನೈ ಭಂಡ ।
ಆತನ ನರ ಜನ್ಮವೆ ದಂಡ ॥
ಈ ಪರಿ ಘಾತಕವಾಗಿಹುದು । ತಾಪತ್ರಯದಾಯಕ ಸೆರೆಯು ॥ ೪ ॥

ಭಾರತ ಮಂಗಲ ಭೂಮಿಯೊಳು । ಇರಬಾರದು ಸೇಂದಿಯ ಮಲವು ।
ಆರ್ಯ ಋಷಿಗಳ ಸ್ಥಾನದೊಳು । ದುರ್ಗುಣ ರಾಶಿಯು ಶೋಭಿಸದು ।
ಮಾರಿಮುಸಣ ರಕ್ಕಸರೆಂದು । ದೂರಕೆ ತೊಲಗಿಸಬೇಕೆಂದು ।
ಹುರುಪಿನಿಂದ ಹೋರಾಡುವುದು । ವರ ನೀತಿಯ ಸಂಗ್ರಾಮವಿದು ॥
ನಿರ್ವ್ಯಸನದ ಸುಖ ಸೇವಿಸಲು ।
ನಿರ್ಮಲ ಜೀವನ ಸಾಗಿಸಲು ।
ನಿರ್ಮಾದಕ ನಾಡೆನಿಸಲು ॥
ಕರ್ಮ ಕುಶಲತೆಯ ತೋರಿಸಿರಿ । ನಿರ್ಮೋಹದಿ ದುಡಿಯುವ ಬನ್ನಿ ॥ ೫ ॥

ಲೇಖಕರು : **ತಿಳಿದಿಲ್ಲ**

(ಮಧ್ಯ ನಿಷೇಧ ಪಧ್ಯಾವಲೀ ಶಿರಸಿ, 1939)

೮೭. ಹಾಡು

(ರಾಗ–ಅಂಬಾಳ ಕಂಪೆನಿ ಮದ್ರಾಸ್ ನಶ್ಯ ಎಂಬಂತೆ.)

ಸೇವಿಸಬೇಡಿ ಸೇವಿಸಬೇಡಿ ॥ ಪ ॥

ಸೇಂದಿ ಸರಾಯಿ ಬ್ರಾಂಡಿಗಳನು ಕುಡಿಯಲುಬೇಡಿ ॥
ಗಾಂಜಾ ಅಫೀಮು ನಿಶಾಪದಾರ್ಥ ಸೇವಿಸಬೇಡಿ ॥ ೧ ॥

ಮಾನಹಾನಿ ಧನವಹಾನಿ ಮಾಡಿಕೊಬ್ಯಾಡಿ ॥
ಮನೆ ಮಠಗಳೆಲ್ಲಾ ಪರರಿಗೆ ಹೋಗಲು ಬಿಡಬ್ಯಾಡಿ ॥ ೨ ॥

ಹೃದಯು ನಾಶ ಮೆದುಳು ನಾಶ ಮಾಡಿಕೊಬ್ಯಾಡಿ ॥
ಮುದದಿ ನಿಮ್ಮ ಬೇಡುತಿಹವು ಕೈಗಳ ಜೋಡಿ ॥ ೩ ॥

ಕದ್ದು ಮುಚ್ಚಿ ಹೆಂಡತರಿಸಿ ಕುಡಿಯಲು ಬೇಡಿ ॥
ಇದ್ದ ಒಡವೆ ವಸ್ತ್ರಗಳನ್ನು ಅಡವಿಡಬ್ಯಾಡಿ ॥ ೪ ॥

ಮಡದಿ ಮಕ್ಕಳಾಸೆ ಇಲ್ಲ ಹೆಂಡ ಕುಡುಕಗೆ ॥
ಗಡಿಯ ಭತ್ತ ಉಳಿಯೋದಿಲ್ಲ ಹೆಂಡ ಕುಡುಕಗೆ ॥ ೫ ॥

ಲೇಖಕರು : ಬಿ.ವಿ. ಕಾಮತ್

(ತೀರ್ಥಹಳ್ಳಿಯ ಇವರು ಕಳುಹಿಸಿದ ಮುದ್ರಿತ 'ಸತ್ಯಪ್ರಕಾಶ' ಕಿರು ಪುಸ್ತಿಕೆಯಿಂದ, 1942)

೮೮. ಶೆರೆ ಸೇಂದಿ ಬ್ರಾಂಡಿಗಳ ಕುಡಿಯದಿರಿ

(ಮರ್ದಬನೋ – ಎಂಬಂತೆ.)

ಕುಡಿಯದಿರಿ ಕುಡಿಯದಿರಿ ಸೆರೆ ಸೇಂದಿ ಬ್ರಾಂಡಿಗಳ ಕುಡಿಯದಿರಿ ॥ ಪ ॥
ರಟ್ಟೆಯ ಮುರಿಯುತೆ ರೊಕ್ಕವ ಗಳಿಸುತೆ ।
ಕೊಟ್ಟು ಸರಾಯಿಯ ಅಂಗಡಿಗಳಿಗೆ ।
ಹೊಟ್ಟೆ ಬಟ್ಟೆಗಳಿಗಿಲ್ಲದಲೇ ಗತಿ ।
ಗೆಟ್ಟು ಹೋಗುವದು ಸರಿಯಿಹುದೇ ? ॥ ೧ ॥

ಪರವೈರಿಗಳುರುತರ ದ್ವೇಷದಿ ಕೊಡು ।
ತಿರಬಹುದಾಗಿಹ ಪೀಡನೆಗಿಂತಲು ।
ಹಿರಿದಾಗಿಹ ಕಷ್ಟವು ಸೆರೆಗುಡುಕಗೆ ।
ಧರೆಯೊಳೊದಗುವದು ಯೋಚಿಸಿರಿ ॥ ೨ ॥

ಸೆರೆಗುಡುಕರು ದೇವರು ಮಾನವನಿಗೆ ।
ವರದಾನದ ರೂಪದಿ ದಯಪಾಲಿಸಿ ।
ಇರಿಸಿದ ಬುದ್ಧಿಯ ಬೆಲೆಯನು ತಿಳಿಯದೆ ।
ನರಿನಾಯ್ಗಳಪರಿ ಬಾಳುವರೈ ॥ ೩ ॥

ಬಿಮ್ಮಗೆ ದುಡಿಯುತೆ ಹಣವನು ಗಳಿಸುತೆ ।
ನಿಮ್ಮಯ ಕೈಯಿಂದಲೆ ಸೆರೆಗೀಯುತೆ ।
ನಿಮ್ಮ ಕಾಯವನೆ ಕೆಡಿಸುವ ರೋಗವ ।
ತಮ್ಮಗಳಿರ, ಕಳಕೊಳ್ಳುವಿರಾ ? ॥ ೪ ॥

ಮಾನವನಿಗೆ ಮಾನವೆ ಭೂಷಣವಿರೆ ।
ಮಾನ ಹಾನಿಯನು ಮಾಡಿಸುತಿಹ ಸೆರೆ ।
ಪಾನವ ಮಾಡುತೆ ದಾರಿಯೊಳುರುಳುತೆ ।
ಮಾನಭಂಗ ಪೊಂದುವದುಚಿತೆ ? ॥ ೫ ॥

ಸೆರೆಯೇ ಮನೆಯನು ಮುರಿಯುವ ಮಾರಿಯು ।
ಸೆರೆಯೇ ಮನವ ಕೆಡಿಸುವ ಪಿಶಾಚಿಯು ।
ಸೆರೆಯೇ ಸಂಕಟಗಳ ತರುವ ಶನಿಯು ।
ಪರನಾಶನ ಗೈಯ್ಯುವ ಅರಿಯು ॥ ೬ ॥

ಯಾವ ಪೇಯ ಹಿತಕರವಾಗಿರುವದು ।
ಯಾವ ಪೇಯ ಹಿತಘಾತಕವು ।
ಯಾವ ಯಾವದರೊಳ್ಯಾವ್ಯಾವ ಗುಣವು ।
ಯಾವ ಪರಿಯೊಳಿಹುದೆಂದರಿದು । ॥ ೭ ॥

ಸೇಂದಿ ಸರಾಯಾದಿಗಳನು ತೊರೆಯುತ ।
ಒಂದಾಗಲು ಹಿಂದೀ ಜನರು ।
ಹಿಂದ ಸ್ವರಾಜ್ಯವ ಇಂದೇ ಪಡೆವೆವು ।
ಸಂದೇಹವ ಬಿಡಿ ನಿಶ್ಚಯವು ॥ ೮ ॥

ಲೇಖಕರು : ತಿಳಿಯದು

('ಮದ್ಯ ನಿಷೇಧ ಪದ್ಯಾವಲೀ, ಶಿರಸಿ 1939)

೮೯. ಕುಡಿಯಬೇಡಿರಣ್ಣ

(ಮೋಸಹೋದೆನಲ್ಲ 1 ಸಕಲವು–ಎಂಬಂತೆ)

ಕುಡಿಯ ಬೇಡಿರಣ್ಣ । ಕಳ್ಳನು । ಕುಡಿಯ ಬೇಡಿರಣ್ಣ ॥ ಪ ॥
ಕುಡಿದು ಕುಡಿದು ಗತಿಗೇಡಿಯಾಗುತಲಿ ॥ ಅ. ಪ ॥

ಸುಡುಗಾಡಿನ ಪಾಲಾಗದಿರಣ್ಣ
ಧನ ಧಾನ್ಯವ ಕಳೆದು । ದುಡಿದಿಹ । ಹಣವನ್ನೆಲ್ಲ ಬಳಿದು ।
ಮನೆಮಾರನು ಆಭರಣ ಆಸ್ತಿಗಳ ।
ದನಕರ ಸಹಿತೆಲ್ಲವ ಮಾರಿಸುವದು ॥ ೧ ॥

ಮಾನವ ಕಳೆಯುವದು । ಮನುಜನ । ಶ್ವಾನನಂತೆಸಗುವದು ।
ಮಾನಹಾನಿಯನು ಮಾಡಿಸಿ ಜನದೊಳು ।
ಹೀನನಿವನು ಎಂದೆಣಿಸುವದಣ್ಣ ॥ ೨ ॥

ಚೋರತನವ ಕಲಿಸಿ । ಪುಂಡಾಟಿಲೆ । ಮಾರಿಮಾರಿ ಗೈಸಿ ।
ಕ್ರೂರತನದಿ ಖೂನಿಯು ಸಹ ಮಾಡಿಸಿ ।
ಸೇರಿಸುವದು ಸೆರೆಮನೆಯ ಬಾಗಿಲನು ॥ ೩ ॥

ಲೇಖಕರು : **ತಿಳಿಯದು**

(ಮದ್ಯ ನಿಷೇಧ ಪದ್ಯಾವಲೀ, ಶಿರಸಿ, 1939)

೯೦. ತನ್ನ ನಾಶಕ್ಕೆ

ಕುಡಿ ಕುಡಿ ಕುಡಿ ಹೆಂಡ । ಜಗದೊಳ । ಗಾಗಲು ನೀ ಭಂಡ ॥ ಪ ॥
ಶ್ರೇಷ್ಠವಾದ ನರ ಜನ್ಮವು ದೊರೆತಿರೆ ।
ವ್ಯರ್ಥಗೊಳಿಸಿ ನರಕವನು ಸೇರುವರೆ ॥ ಅ. ಪ ॥

ಚಿನ್ನಾ ಭರಣವ ಮಾರುವದಕ್ಕೆ ।
ಮನೆ ದನಕರ ಕಳಕೊಳ್ಳುವದಕ್ಕೆ ।
ಸರ್ವನಾಶವನು ಪೊಂದುವದಕ್ಕೆ ।
ಪರದೇಶಿಯು ತಾನಾಗುವದಕ್ಕೆ ॥ ೧ ॥

ಕಂಡ ಕಂಡವರ ಬಯ್ಯುವದಕ್ಕೆ ।
ಪುಂಡತನದಿ ಜಗಳವಾಡುವದಕ್ಕೆ ।
ಹೆಂಡರು ಮಕ್ಕಳ ಗೋಳಿಡಲಿಕ್ಕೆ ।
ಭಂಡನೆಂಬ ಬಿರುದಾರಿಸಲಿಕ್ಕೆ ॥ ೨ ॥

ಬಡತನ ಬೇಗೆಯು ಭೋಗಿಸಲಿಕ್ಕೆ ।
ಒಡಲಸು ಹಸಿದು ಮಿಡುಕಾಡುವದಕ್ಕೆ ।
ಗಡ ಗಡ ಚಳಿಯಿಂ ನಡುಗುವದಕ್ಕೆ ।
ಕಡುತರ ರೋಗದಿ ನರಳುವದಕ್ಕೆ ॥ ೩ ॥

ನೀತಿ ನಡಾವಳಿ ತೊರೆಯುವದಕ್ಕೆ ।
ಭೀತಿ ಲಜ್ಜೆ ಮಾನವ ಬಿಡಲಿಕ್ಕೆ ।
ಕಳ್ಳತನವ ಸಹ ಕಲಿಯುವದಕ್ಕೆ
ಜೈಲುವಾಸವನು ಪಡೆಯುವದಕ್ಕೆ ॥ ೪ ॥

ತನು ಶಕ್ತಿಯು ಕುಂದಿಸಿಕೊಳಲಿಕ್ಕೆ ।
ಕಣ್ಣಿನ ಕಳೆ ಕಳಕೊಳ್ಳುವದಕ್ಕೆ ।
ಮಾನಹಾನಿಯುನು ಪೊಂಡುವದಕ್ಕೆ ।
ಜ್ಞಾನಶೂನ್ಯ ಪಶುವಾಗುವದಕ್ಕೆ ॥ ೫ ॥

ಲೇಖಕರು : ತಿಳಿಯದು

(ಮದ್ಯ ನಿಷೇಧ ಪದ್ಯಾವಲೀ, ಶಿರಸಿ, 1939)

೯೧. ಸೆರೆಯಿಂದ ಸುಖವೇ ?

(ಬನೇ ಹಂ ಹಿಂದಕೇ ಯೋಗಿ—ಎಂಬಂತೆ)

ಸಖರೇ, ಸೇಂದಿ ಸೆರೆ ಕುಡಿದು | ಸುಖವನು ಪೊಂದಿದವರಾರು ? || ಪ ||

ದೇವತೆಗಳು ಸುಖವ ಬಯಸಿ | ಸೇವಿಸಿ ಸೆರೆಯ ಮಿತಿಮೀರಿ |
ದೈವಾಸುರರ ಯುದ್ಧದಲಿ | ನೋವಿಗೆ ಓಡಿದರು ಬಳಲಿ || ೧ ||

ಪೂರ್ವದಿ ವೇನ ಮಹರಾಜ | ಗರ್ವದಿ ಋಷಿಗಳುಪದೇಶ |
ಮೀರುತ ಈ ವ್ಯಸನ ಪಿಡಿದು | ಪೂರಾ ನಾಶ ಪೊಂದಿಹನು || ೨ ||

ರಾಕ್ಷಸ ರಾಜನಾಗಿರುವ | ದಕ್ಷ ಹಿರಣ್ಯ ಕಶ್ಯಪನು |
ಅಕ್ಷಯ ಬಾಳಲೀ ಸೆರೆಯ ಭಕ್ಷಿಸಿ ನಾಶ ಪೊಂದಿಹನು || ೩ ||

ಗುರುವರ ಶುಕ್ರ ಮುನಿವರರು | ಸೆರೆಯನು ಸೇವಿಸುತಲಿರಲು |
ವರ ಸಂಜೀವಿನೀ ಬಲವ | ಮರೆಯುತೆ ಕಳೆದು ಕೊಂಡಿಹರು || ೪ ||

ಯಾದವ ಸೋದರರು ಕುಡಿದು | ಕ್ರೋಧಕೆ ಕೊಟ್ಟು ಬುದ್ಧಿಯನು |
ಭೇದಿಸಿ ಒಬ್ಬರೊಬ್ಬರನು | ಹೋದರು ಹೊಂದಿ ನಾಶವನು || ೫ ||

ಛತ್ರಪತಿ ಶಿವಾಜಿಯ | ಪುತ್ರನು ತಾನು ಸಂಭಾಜೀ |
ರಾತ್ರಂದಿನದಿ ಸೆರೆ ಕುಡಿದು | ರಾಷ್ಟ್ರವ ಕಳೆದುಕೊಂಡಿಹನು || ೬ ||
ಹೋರೆಯ ಹೊಲದಿ ಗೈವವರು | ಗಿರಣಿಗಳಲ್ಲಿ ದುಡಿವವರು |
ಸೆರೆ ಸೇಂದಿಗಳ ಕುಡಿಯುವರು | ಪರದಾಸ್ಯದಲಿ ನರಳುವರು || ೭ ||

ಭೋಳೆ ಭಾವಿಕರು ಕುಡಿದು | ಕೂಳನು ಕಾಣದಲೆ ಉಳಿದು |
ಸಾಲದ ಶೂಲವನು ತಳೆದು | ಗೋಳಿಡುತಿಹರು ಹಗಲಿರುಳು || ೮ ||

ಸೆರೆಯನು ಸೇವಿಸಲು ಸುಖವು । ದೊರೆಯುವದೆಂಬುವದು ಭ್ರಮೆಯು ।
ಸೆರೆ ಸುಖ ಎಂಬ ಶಬ್ದಗಳೇ ಎರಡೂ ಸೇರವೊಂದೆಡೆಗೆ ॥ ೬ ॥

ಲೇಖಕರು : **ತಿಳಿಯದು**

(' ಮದ್ಯ ನಿಷೇಧ ಪದ್ಯವಲಿ ' ಶಿರಸಿ, 1939)

೬೨ ಕುಡುಕರ ಪಾಡು

(ಎನ್ನದು ಈ ಕನ್ನಡ ನಾಡು– ಎಂಬಂತೆ)

ಸೆರೆಗುಡುಕರ ಬಾಳುವೆ ಕೆಡುಕು । ವರಣಿಸುವದಕಾಗದ ಬದುಕು ॥ ಪ ॥

ಮನೆಮಾರನು ಕಳಕೊಳ್ಳುವರು । ಧನ ಕನಕಗಳನು ಸುರಿಯುವರು ।
ಮನೆ ಮನೆ ಬೇಡುತ ತಿರುಗುವರು । ಉಣಲುಡಲಿಲ್ಲದೆ ಬಳಲುವರು ।
ನಾನಾ ರೋಗವ ಪೊಂದುವರು । ನಾನಾ ತರದಲಿ ತೊಳಲುವರು ।
ಹೀನರಿವರು ಎಂದೆನಿಸುವರು । ದೀನತೆಯಲಿ ದಿನಗಳೆಯುವರು ।
ಹಸಿವೆಯ ಬೆಂಕಿಯೊಳುರಿಯುವರು ।
ವಸನಗಳಿಲ್ಲದೆ ನಡುಗುವರು ।
ವ್ಯಸನದಿ ಬಾಡುತ ಬಾಳುವರು ॥
ಪೊಂದಿರುವರೆ ಸುಖವನು ಹೇಳು । ಸೇಂದಿ ಸೆರೆಯ ಕುಡಿದವರ್‍ಯಾರು ? ॥ ೧ ॥

ಇದ್ದ ಒಡವೆಗಳ ಮಾರುವರು । ಗದ್ದೆ ಹೊಲವ ಕಳಕೊಳ್ಳುವರು ।
ಬುದ್ಧಿ ಶ್ಯೂನತೆಯ ಪೊಂದುವರು । ಗುದ್ದಾಡುತ ಜಗಳಾಡುವರು ।
ಬಿದ್ದು ಗಟಾರದೊಳುರುಳುವರು । ಹೊದ್ದ ಬಟ್ಟೆಯನು ಮರೆಯುವರು ।
ಇದ್ದು ಮಾನವನು ಮೃಗದ ಪರಿ । ತಿದ್ದಿ ತೋರುವರು ವರ್ತನದಿ ॥
ಆಡದ ಮಾತುಗಳಾಡುವರು ।
ಮಾಡದ ಕಾರ್ಯವ ಮಾಡುವರು ।
ಕಾಡು ಪಶುಗಳಂತಾಗುವರು ॥
ಕುಡುಕರು ಸುಖವನು ಕಾಣುವದು । ಪೊಡವಿಯೊಳಗೆ ಮೃಗಜಲ
ವಿಹುದು ॥ ೨ ॥

ಮೀರಿ ಮಿತಿಯ ಸೆರೆ ಕುಡಿಯುವರು । ದಾರಿ ತಪ್ಪಿ ಕಾಲಿಡುತಿಹರು ।
ಚೀರಾಡುತ ಬೈದಾಡುವರು । ಮಾರಾ ಮಾರಿಗೆ ಮುಟ್ಟುವರು ।
ಮಾರಿ ಬುದ್ಧಿ ಕಳಕೊಳ್ಳುವರು । ಕ್ರೂರತನದಿ ಕಡಿದಾಡುವರು ।
ದೂರುತ ಕೋರ್ಟು ಕಚೇರಿಯಲಿ । ಸೇರುತ ಕಾರಾಗಾರದಲಿ ॥

ಪರಿ ಪರಿ ಭಂದನ ಭವಣೆಯನು ।
ಹೊರುವರು ಮಣ್ಣಿನ ಬುಟ್ಟಿಯನು ।
ಕೊರಗಿಸುವರು ತನು ಮನಗಳನು ।
ಪರಿ ಪರಿ ಪೀಡೆಯ ಪೊಂದುವರು । ಸೆರೆ ಮಾರಿಗೆ ವಶರಾದವರು ॥ ೩ ॥

ಬಲವೆಲ್ಲವ ಕಳಕೊಳ್ಳುವರು । ಬಲಹೀನತೆಯಲಿ ಬಳಲುವರು ।
ಹೊಲಮನೆಯಿಲ್ಲದೆ ತೊಳಲುವರು । ಕುಲ ನೀತಿಯ ಸಹ ತೊರೆಯುವರು ।
ಸಾಲವ ಮಾಡಲು ಪೋಗುವರು । ಕಾಲನ ಕೈಯಲಿ ಬೀಳುವರು ।
ಸಾಲದ ಶೂಲದ ಬಾಧೆಯನು । ತಾಳಲಾರದೆ ಬಳಲುವರು ॥
ನೋಡಲು ಸಣ್ಣದು ಈ ವ್ಯಸನ ।
ಮಾಡಿದವರಿಗೀವುದು ವ್ಯಸನ ।
ಕಡೆಗವರನು ಹೂಳುವ ಮಸಣ ॥
ಸೆರೆಯನು ಜನ ಕುಡಿಯುವದಿಲ್ಲ । ಸೆರೆ ಜನರನು ತಿನುತಿಹುದಲ್ಲ! ॥ ೪ ॥

ಲೇಖಕರು: ತಿಳಿಯದು

(ಮದ್ಯ ನಿಷೇಧ ಪದ್ಯವಳಿ; ಶಿರಸಿ, 1939)

೯೩. ಮಾರಿಯ ಓಡಿಸಬೇಕು

(ಶಿಪಾಯಿಯು ಆಗು– ಎಂಬಂತೆ.)

ಓಡಿಸಬೇಕು । ಸೆರ ಮಾರಿಯ ಓಡಿಸಬೇಕು ॥ ಪ ॥
ಸರ್ವಧರ್ಮ ತತ್ವಂಗಳನರಿದು ।
ದುರ್ವ್ಯಸನಂಗಳನೆಲ್ಲವ ತೊರೆದು ।
ನಿರ್ವ್ಯಸನದಿ ಜೀವನವನು ಕಳೆದು ॥
ಜೀವಿಸಬೇಕು । ನವಜೀವನ । ಜೀವಿಸಬೇಕು ॥ ೧ ॥

ಮಾದಕ ಮದ್ಯದ ಮೋಹವ ಬಿಟ್ಟು ।
ಓದಲು ಬರೆಯಲು ಸಾಧನೆ ಇಟ್ಟು ।
ಮೋದದಿ ಭಾರತ ಸೇವೆಯ ತೊಟ್ಟು ।
ಸಾಧಿಸಬೇಕು । ಸ್ವರಾಜ್ಯವ । ಮೋದಿಸಬೇಕು ॥ ೨ ॥

ಆಂಗ್ಲರ ಸ್ವಾರ್ಥದ ಧೋರಣೆ ತಿಳಿದು ।
ಭಂಗಿ ಅಫೀಮುಗಳೆಲ್ಲವ ತೊರೆದು ।
ಹಂಗಿನ ಬಾಳುವೆಯನು ಬಹು ಜರಿದು ।
ಸಾಗಿಸಬೇಕು । ಸಂಗ್ರಾಮವ । ಸಾಗಿಸಬೇಕು ॥ ೩ ॥

ಕೊಂಗ್ರೆಸ್ಸಿನ ಸರಕಾರವು ಬಂದು ।
ಕಂಗಾಲ ಜನರ ಸಲಹಲಿಕೆಂದು ।
ಸಂಗ್ರಾಮದ ಹೂಡಿರುವದು ಇಂದು ।
ಕಾಡಲು ಬೇಕು । ಸೆರೆಮಾರಿಯಂ । ದೂಡಲುಬೇಕು ॥ ೪ ॥

ಮಾತೆ ಭಾರತಿಯ ಅಭ್ಯುದಯಕ್ಕೆ ।
ಭೂತಳದಲಿ ಸ್ವರ್ಗವ ತರಲಿಕ್ಕೆ ।
ಖ್ಯಾತಿಯ ಲೋಕದಿ ದೊರಕಿಸಲಿಕ್ಕೆ ।
ಗೆಲ್ಲಲುಬೇಕು । ಸೆರೆಮಾರಿಯ । ಕೊಲ್ಲಲು ಬೇಕು ॥ ೫ ॥

ಗಾಂಧಿ ಮಹಾತ್ಮರ ತತ್ವಕೆ ಬಾಗಿ ।
ಬಂಧುಗಳೆಲ್ಲರು ಜಾಗ್ರತರಾಗಿ ।
ಹಿಂದ ಸ್ವರಾಜ್ಯದ ಸಾಧನೆಗಾಗಿ ।
ದುಡಿಯಲುಬೇಕು । ಈ ಕಾರ್ಯಕೆ । ಮಡಿಯಲುಬೇಕು ॥ ೬ ॥

ಲೇಖಕರು : **ತಿಳಿಯದು**

(' ಮದ್ಯ ನಿಷೇಧ ಪಧ್ಯಾವಲಿ ' ಶಿರಸಿ, 1939)

೯೪. ಹೊಡೆದೋಡಿಸು

(' ಯೆಡಕರಿ ತಯಾರ ವಾವಾ ' – ಎಂಬಂತೆ)

ಹೊಡೆದೋಡಿಸಿಬಿಡಿರೀಗ । ಈಗ । ॥ ಪ ॥
ತಡಮಾಡದೆ ಸೆರೆಮಾರಿಯ ಬೇಗ । ॥ ಅ. ಪ ॥

ಲಕ್ಷಾವಧಿ ಬಡವರ ಸಂಸಾರವ ।
ಭಕ್ಷಿಸಿದೀ ರಾಕ್ಷಸನನ್ನಿಗ ॥
ತಾಮಸ ಮಾದಕ ಮಾರಿಯ ಬಿಡದೆ ।
ನೇಮದಿ ಜನರೆಲ್ಲರು ಬಂದೀಗ ॥

ದಾರಿದ್ರ್ಯವ ದಾವಾನಲ ಸಾಕು ।
ಸ್ವರಾಜ್ಯವ ಸಂಪಾದಿಸಲೀಗ ॥
ಹೆಂಡರ ಮಾರಿಯು ಗಾಂಜಾ ಪಿಶಾಚಿಯು ।
ಬ್ರಾಂಡಿಯ ಭೂತನನೋಡಿಸಿರೀಗ ॥
ಕೋಲು ಕಠಾರಿಗಳಿಂದಲಿ ಥಳಿಸಿ ।
ಕಾಲಿನಿಂದಲೊದ್ದೋಡಿಸಿರೀಗ ॥
ವಂಶದ ಮೂಲಕೆ ದೋಷದ ಭಾಂಡಕೆ ।
ಮೋಸಗೊಂಡುದಕೆ ಹೇಸುತಲೀಗ ॥

ಲೇಖಕರು : ತಿಳಿಯದು

(' ಮದ್ಯನಿಷೇಧ ಪದ್ಯಾವಲಿ ' ಶಿರಸಿ, 1939)

೯೫. ಇದು ನೀತಿ ಧರ್ಮ

(ಗಾಂಧಿ ಮಹಾತ್ಮರ ಬೀಜಮಂತ್ರ–ಎಂಬಂತೆ)

ಸರ್ವಧರ್ಮ ತತ್ವಂಗಳ ಸಾರವು । ನೀತಿ ಧರ್ಮ ।
ಇದು ನಿಜ । ॥ ಪ ॥

ಹೆಂಡದ ನಿಶೆಯೊಳು ಕುಣಿವುದು ಸಾಕು ।
ಹೆಂಡರ ಮಕ್ಕಳ ಹೊಡೆವುದು ಸಾಕು ।
ಭಂಡತನವೇ ತೊರೆವುದು ಬೇಕು ॥ ॥ ೧ ॥

ಘೋರ ಪಾಪಗಳಗೈವುದು ಬೇಡ ॥
ರೌರವ ನರಕಕ್ಕೈವುದು ಬೇಡ ।
ಭಾರವು ಭಾರತಕ್ಕಪ್ಪುದು ಬೇಡ ॥ ॥ ೨ ॥

ಚಟಗಳನ್ನೆಲ್ಲವ ತೊರೆಯಲು ಬೇಕು ।
ದಿಟದಲಿ ಹಠವನು ಹಿಡಿಯಲು ಬೇಕು ।
ಕಟುಕತರ ನಿಯಮದಿ ನಡೆಯಲು ಬೇಕು ॥ ॥ ೩ ॥

ತನುವನು ಕೆಡಿಸದೆ ಕಾಯಲು ಬೇಕು ।
ಮನವನು ಸಂಯಮ ಮಾಡಲು ಬೇಕು ।
ಗುಣಯುತರೆಂಬುದ ತೋರಲು ಬೇಕು ॥ ॥ ೪ ॥

ಹೀನಗುಣಂಗಳ ಹಿಂಗಿಸಬೇಕು ।
ಜ್ಞಾನ ಮಾನ ಸಂಪಾದಿಸಬೇಕು ।
ಮಾನವರಂದದಿ ಜೀವಿಸಬೇಕು ॥ ॥ ೫ ॥

ಜಾತಿಯ ಭೇದವ ನಳಿಸಲು ಬೇಕು ।
ಪ್ರೀತಿಯ ಧರ್ಮವ ಬೆಳಿಸಲು ಬೇಕು ।
ಭೂತಳದಲಿ ಸ್ವರ್ಗವ ತರಬೇಕು ॥ ॥ ೬ ॥

ಸೇಂದಿ ಪಿಶಾಚಿಯು ಸಂಗವು ಹಾಳು ।
ಹಿಂದೀ ಜನರಿಗೆ ಕೊಟ್ಟಿತು ಗೋಳು ।
ಗಾಂಧಿ ಮಹಾತ್ಮರ ತತ್ವವು ಮೇಲು ॥ ॥ ೭ ॥

ಪರತತ್ವಂಗಳ ಯೋಚಿಸಿ ನೋಡು ।
ನರಕ ಪಿಶಾಚಿಯು ರಾಜ್ಯವ ಮಾಡು ।
ಧರೆಯೊಳು ಜನ್ಮವ ಸಾರ್ಥಕ ದೂಡು ॥ ॥ ೮ ॥

ಲೇಖಕರು : ತಿಳಿಯದು

('ಮಧ್ಯ, ನಿಷೇಧ ಪದ್ಯವಲ್ಲಿ', ಶಿರಸಿ, 1939)

೯೬. ಸುರೆಯನ್ನು ತೊರೆಯಯ್ಯ

ರಾಗ : (ರಾಷ್ಟ್ರದೇಳಿಗೆಗೆ ನೀ ಮನವ ನೀನಿರಿಸು ಎಂಬಂತೆ)

ಸುರೆಯನ್ನು ತೊರೆಯಯ್ಯ ।
ಅದರ ಹಾವಳಿಯ ಅರಿತು ವಿವೇಕದಿ ಬಾಳಯ್ಯ ಗೆಳೆಯ ॥ ಪಲ್ಲ ॥

ಸುರೆಯೆಂಬ ಕಲಿಯಿಂದ ಕಲಿಯುಗವಿದು ;
ಭರತ ಭೂಮಿಗೆ ಕೆಡುಗಾಲ ಬಂತಿಂದು ।
ಮರೆಯದಿರಣ್ಣ ಜೀವಿಗಳಲ್ಲಿ ನರನು
ಅರಸನಾದರು, ಸುರೆಯಿಂದ ವಾನರನು ॥ ೧ ॥

ಸುರೆಯಲ್ಲಿ ಆಹಾರ ಎಳ್ಳನಿತಿಲ್ಲ ;
ಸುರೆಯು ಕುಡಿಕನನ್ನೆ ಬಲಿಗೊಂಬುದಲ್ಲ ; ।
ಸುರೆಯು ಗುತ್ತಿಗೆಯೆಂಬ ಹುತ್ತಿಗೆ ನಡೆದು
ತೊರೆಯ ಬೇಡೈ ಜೀವ–ವಿಷವನ್ನು ಕುಡಿದು ॥ ೨ ॥

ಸುರೆಯಿಂದ ಮನೆಮಾರು ಮಾರಿ ಹೋಗುವುದು ;
ಸುರೆ ತಲೆಗೇರಲು, ಕುಲ ಮಣ್ಣಾಗುವುದು ; ।
ಸುರೆಯು ಬೆಳ್ನೊರೆಯಂತೆ ಸುಖಮಾಯವಹುದು ।
ಸುರೆಯ ವಾಸನೆಯಂತೆ ಅಪಕೀರ್ತಿಯಹುದು ॥ ೩ ॥

ಸುರೆಯಾಳು ಸೆರೆಯಾಳು ಎಂಬುದನು ನಂಬು ;
ಸುರೆಕುಡಿವಾತಗೆ ಮತ್ತೆಲ್ಲಿ ಇಂಬು ?
ನರಜನ್ಮ ದೊರೆವುದು ದುರ್ಲಭವಿರಲು
ದೊರೆತುದ ಹಾಳಾಗಿಸುವುದೆಂಥ ಮರುಳು ? ॥ ೪ ॥

ನಡೆಗೆಟ್ಟು, ನುಡಿಗೆಟ್ಟು, ಮತಿಗೆಟ್ಟು,
ನಡುಬೀದಿ ಹಾಸಿಸೊಳೊರಗುವರೊಟ್ಟು ; ।
ಕಡೆಗಣ್ಣೆನಿಂದಲು ನೋಡನು ಬಂಧು,
ಒಡೆಯನಾದವನೆ ಆಳಿನ ಆಳು ಮುಂದು ॥ ೫ ॥

ಗೋವು ಹಾಲು ಕೊಡೆ, ಸೀಯಾಳ ತೆಂಗು,
ಭಾವಿನೀರಿರೆ, ಸುರೆಗೇಕಿನ್ನು ಹಂಗು ? ।
ಯೌವನದಲಿ ಜರೆಹುಟ್ಟಿಸಿ ಸುರೆಯು,
ಜೀವದ ಬಲಿಗೊಂಡು ಮೆರೆಯುವ ಸುರೆಯು ; ॥ ೬ ॥

ಧರಣಿಯ ಸರ್ವಭಾಗ್ಯವನಪಹರಿಪ,
ನರಕದ ಗೋಳಾಟವಿಲ್ಲೂ ಪಸರಿಪ,
ಸುರೆಯ ಹಿಡಿವ ಪಾತ್ರೆ ಮತ್ತದೇ ಗೆರಟೆ
ತಿರುಪವೆತ್ತಲು,-ಮತ್ತನಿಗೆ ಬೇರೆಯುಂಟೆ ? ॥ ೭ ॥

ಲೇಖಕರು : ಎಂ. ಎನ್. ಕಾಮತ್

(ಮುದ್ರಿತ)

೯೭. ಹರಿಜನ ಸಂಧಾನ

ಸ್ಪರ್ಶನ
(ದಾಟಿ : ಹೊಲೆಯ ಹೊರಗಿಹನೆ ?")

(1)

ನಮ್ಮನೇತಕೆ ದೂರ–ದೂರ ನಿಲಿಸುವಿರಿ ? ‖ ಪ ‖
ನಿಮ್ಮಂತೆ ನಾವು ಹಿಂದುಗಳು ಭಾವಿಸಿರಿ ! ‖ ಅ. ಪ. ‖

ವಿಶ್ವಾತ್ಮನಾದ ಪರಮಾತ್ಮನೀ ಸೃಷ್ಟಿಯಲಿ ।
ವಿಶ್ವಜೀವಿಗಳೊಳಗೆ ಭೇದಕೆಡೆಯೆಲ್ಲಿ ?" ‖
ವಿಶ್ವಬಂಧುಗಳೆಲ್ಲರೊಂದೆಂಬ ಮತದಲ್ಲಿ ।
ವಿಶ್ವಭಾರತದಲ್ಲಿ ನಮಗೆ ನೆಲೆಯಿರಲಿ ! ‖ ೧ ‖

ಸರ್ವಮಾನವರಂತೆ ಮಾನವರು ಹರಿಜನರು ।
ಸರ್ವಾಂಗದೊಳಗೆ ಭಾರತರಕ್ತಮಯರು ।
ಸರ್ವೇಶನಿದಿರಿನಲಿ ಸರ್ವರಂತಿರುವರು ।
ಸರ್ವವಿಧದಲ್ಲಿ ಹಿಂದುಗಳು ನಮ್ಮವರು ‖ ೨ ‖

ಪಂಚಭೂತಗಳಿಂದ ಕೂಡಿರುವ ಕಾಯದಲಿ ।
ಪಂಚೇಂದ್ರಿಯಂಗಳಿಂದೆಸೆದು ರೂಢಿಯಲಿ ‖
ಪಂಚತ್ವವನು ಮಿಕ್ಕ ಜನರಂತೆ ಪಡೆವವರು ।
ಪಂಚಮರು–ನಿಮ್ಮವರು–ನಾವು–ಹರಿಜನರು ‖ ೩ ‖

ನೋಡಿದಾ ನಿಮ್ಮ ನಯನಂಗಳಿಗೆ ಹೊಲೆಯುಂಟೆ ? ।
ಪಾಡಕೇಳಿದ ಕರ್ಣಗಳಿಗೆ ಹೊಲೆಯುಂಟೇ ‖
ಆಡಿದಾ ನಾಲಿಗೆಗೆ ಹೊಲೆಯುಂಟೆ ? ಮೈಗಾಳಿ ।
ಹೀಡಿದಾ ನಾಸಿಕಕೆ ಹೊಲೆಯುಂಟೆ ? ಪೇಳಿ ! ‖ ೪ ‖

ನೋಡಲೀ ಪಂಡೇಂದ್ರಿಯಂಗಳಲಿ ನಾಲ್ಕರಲಿ ।
ಕೂಡಿದರೆ ಹೊಲೆಯಿಲ್ಲ–ನಿಮ್ಮ ಚಿತ್ತದಲಿ ॥
ನಾಡಿನಲಿ ನಮ್ಮನ್ನು ಮುಟ್ಟಿದಾ ಮಾತ್ರದಲಿ ।
ನಾಡಿಯಲಿ ಹೊಲೆಯಹುದೆ ? ಬಲ್ಲವರು ಪೇಳಿ ! ॥ ೫ ॥

(2)

ಹರಿವ ಹೊಳೆಯನು ನಾವು ಮುಟ್ಟಿರಲು ಮುಳುಗುವಿರಿ ।
ಹರಿಜನರು ಕಬ್ಬುಗಳ ಕೊಡಲು ಕೊಳ್ಳುವಿರಿ ॥
ಹರಕೆಗೆಳನೀರು ಮಧುಗಳ ತರಲು ಪಡೆಯುವಿರಿ ।
ಹರಿಹರರಿಗಭಿಷೇಕ ಮಾಡಿ ಕುಡಿಯುವಿರಿ ॥ ೧ ॥

ಮುಟ್ಟಲಾಗದ ಜನರು ಹಿಂಗಾರಕೇದಿಗೆಯ ।
ಕಷ್ಟದಿಂ ತರಲು ದೇವರಿಗಿಡುವಿರಯ್ಯಾ ॥
ಕಷ್ಟವಿಲ್ಲದೆ ಕೊಯ್ಯಲಿಟಕುವಾ ಕುಸುಮಗಳ ।
ನಿಷ್ಟೆಯಿಂ ಕೊಡಲವುಗಳನು ಬಿಡುವಿರಲ್ಲಾ! ॥ ೨ ॥

ಲೋಕಪಾವನೆಯಾದ ಗೋವಿನಾ ಕ್ಷೀರವನು ।
ಜೋಕೆಯಲ್ಲಿ ನಮ್ಮವರು ತರಲು ನೀವದನು ॥
ಸ್ವೀಕರಿಸದಿದ್ದರೂ ನಾವು ಕೊಡುವ ಮಧುವ ।
ಸ್ವೀಕರಿಸುವಾ ನಿಮ್ಮ ಮತವೇನು ದೇವಾ ? ॥ ೩ ॥

ನಿಮ್ಮವರು ಹೊಯ್ಲಿನಲಿ ಸಿಕ್ಕಿ ಸಂಕಟಪಡಲು ।
ನಮ್ಮವರು ಹಾರಿ ಬದುಕಿಸುವರೆಂದಿರಲು ॥
ನಮ್ಮ ಹಸುಗೂಸುಗಳು ಬಾವಿಯಲಿ ಬಿದ್ದರೂ ।
ನಿಮ್ಮವರು ಕೆಳಗಿಳಿದು ಮುಟ್ಟಲಂಜುವರು ! ॥ ೪ ॥

ನಿಮ್ಮ ಮನೆಗಳಿಗಗ್ನಿ ಭಯಗಳಾದರೆ ನೀವು ।
ಜನ್ಮ ಚಂಡಾಲರನು ಹೋಗಿಸುವುದು ದಿಟವು ॥

ನಮ್ಮ ಗುಡಿಸಲುಗಳೇನಾದರೂ ಬರುವಿರೇ ?
ಧರ್ಮಾತ್ಮರೇ ! ನೀತಿಧರ್ಮ ಬೋಧಕರೇ ! ॥ ೧೦ ॥

ಪಟ್ಟಣಗಳಲ್ಲಿ ಪಾದಾಚಾರವೆನ್ನುವಿರಿ ।
ಭ್ರಷ್ಟರಾಗದೆ ಧೂಮಶಕಟವೇರುವಿರಿ– ॥
ಕಷ್ಟ ಬರಲನುಕೂಲಶಾಸ್ತ್ರವನು ಬಿಚ್ಚುವಿರಿ– ।
ಕಟ್ಟಳೆಯದೆಂದು ಹಾರುವರೆ ! ಸಾರುವಿರಿ ! ॥ ೧೧ ॥

ಅನ್ಯಮತಗಳಿಗಿಳಿದು ಗೋಮಾಂಸವನು ತಿಂದು ।
ಶೂನ್ಯ ಭಾವದ ಕೆಲರು ನಮ್ಮವರು ಬಂದು ॥
ಪುಣ್ಯಾತ್ಮರೇ ! ನಿಮ್ಮ ಮನೆಯ ಹೊಕ್ಕರೆ ನೀವು ।
ಪುಣ್ಯಪದರವರ ಕುಳ್ಳಿರಿಸುವುದು ನಿಜವು ॥ ೧೨ ॥

ನಮ್ಮೆಂಜಲನ್ನುಂಡ ನಾಯಿ ಬೆಕ್ಕುಗಳೆಲ್ಲ ।
ನಿಮ್ಮ ಮನೆಯೊಳ ಹೊಕ್ಕು ತಿಂದರೇನಿಲ್ಲ ॥
ನಿಮ್ಮಂತೆ ನರಜನ್ಮದಿಂದಿರುವ ನಾವೆಲ್ಲ ।
ನಿಮ್ಮಿಂದ ದೂರ ನಿಲಬೇಕೆನುವಿರಲ್ಲಾ ! ॥ ೧೩ ॥

(3)

ಇಳೆಯ ಜೀವಕ್ಕನ್ನ ಕೊಡುವ ಕೆಲಸಕ್ಕಾಗಿ ।
ಹೊಲದ ಬಳಿಯಲಿ ಗುಡಿಯನೆಸಗಿ ಧರೆಗಾಗಿ ॥
ಬೆಳೆಗಳನು ಬೆಳೆಸಿ ಕೊಟ್ಟುದನು ತಿನ್ನುವ ಜನರೆ ! ।
ಹೊಲೆಯರೆಂದೆಮ್ಮನ್ನು ದೂರ ನಿಲಿಸುವಿರೇ ? ॥ ೧೪ ॥

ಮಕ್ಕಳಶುಚಿಯನೊಗೆದು ಶುಚಿಗೈವ ಜನನಿಯನು ।
ಮಕ್ಕಳೇ ದೂರ ನಿಲಿಸಿದರೆ ಗತಿಯೇನು ? ॥
ಸೊಕ್ಕಿದಂಥವರೊಡನೆ ನಾವಸಹಕಾರವನು ।
ಧಿಕ್ಕನೆಸಗಿದರೆ ' ಮುಷ್ಕರ ' ದ ಫಲವೇನು ? ॥ ೧೫ ॥

ಲೋಕಜೀವನಳಾಗಿ ನಿರ್ಮಲೋದಕದಿಂದ ।
ಲೋಕದಶುಚಿಯ ತೊಳೆದು ಜನಸೇವೆಗೈದ ॥
ಲೋಕಮಾನ್ಯತರಂಗೆ ಶಿವನಿಗಾದಳು ಗಂಗೆ– ।
ಲೋಕಸೇವೆಗೆ ನಮಗೆ ನೆಲೆಯೆಲ್ಲಿ ಕೊನೆಗೆ ? ॥ ೧೬ ॥

ಸೃಷ್ಟಿಗೊಳಗಾರೋಗ್ಯ ಖಾತೆಯುದ್ಯೋಗದಾ ।
ಕಷ್ಟವನು ಸಹಿಸಿ ಬಂದಿರುವ ನಮ್ಮಿಂದ ॥
ಭ್ರಷ್ಟರಾದವರಾರು ? ಗಟ್ಟಿಯಲಿ ನುಡಿವಿರೇ ? ।
ಗಟ್ಟಿಗರೆ ! ಬಿಟ್ಟಿವಿದೊ ! ವಹಿಸಿಕೊಳ್ಳುವಿರೇ ? ॥ ೧೭ ॥

ಶ್ರೇಷ್ಠಕುಲದವರೆನಿಸುವಾ ಬುಧರ ನಿಲ್ಲಿಸಲಿ ।
ಕಷ್ಟಪಡುವೀ ಪಂಚಮಸ್ಥಾನದಲ್ಲಿ ॥
ಎಷ್ಟು ಸಂಕಟವಾಗಬಹುದಾಗಳೆಂಬುದನು ।
ದೃಷ್ಟಾಂತವಾಗಿ ನೋಡುವಿರೆ ! ನೀವದನು ? ॥ ೧೮ ॥

ಮಾನವೀಚಕ್ರದಾ ಮೇಲೆ ನಿಂತಾ ಬುಧರೆ ।
ತ್ರಾಣದಿಂದಾನತರನೊದೆಯುಲೆಳಸಿದರೆ ॥
ಮಾನವ ಸ್ಥಿತಿಗಳೇನಾಗುವುವು ಬಲ್ಲಿರೇ ?
ದೀನರಾದೆಮ್ಮನ್ನು ಬಲದೊಳೊದೆಯುವಿರೇ ? ॥ ೧೯ ॥

(4)

‘ ಹೊಲೆಯ ಹೊರಗಿಹನೇ ? ಊರೊಳಗಿಲ್ಲವೇ ? ’ ಹಲರು ।
ಕುಲಜರಲಿ ‘ ಕರ್ಮಚಂಡಾಲ ’ ರಾಗಿಹರು ! ॥
ಸುಲಭದಲಿ ‘ ಜನ್ಮಚಂಡಾಲ ’ ರೆಂದೆಮ್ಮನ್ನು ।
ಹಳಿಯದಿರಿ ಶ್ರೀ ಪುರಂದರ ತತ್ವವಿದನು ॥ ೨೦ ॥

ನಮ್ಮ ಪೂರ್ವಜರಲ್ಲಿ ಕೆಲವರಾ ಚಂಡಾಲ– ।
ಕರ್ಮವೆಸಗಿರಬಹುದು ಮಡಿದರವರೆಲ್ಲ ! ॥

ನಿರ್ಮಲರು ನಾವು ಚಂಡಾಲ ಕರ್ಮದೊಳಿಲ್ಲ ।
ಧರ್ಮಪಥದಲಿ ನಡೆದು ಕೊಂಡಿರುವೆವಲ್ಲಾ ! ॥ ೨೧ ॥

'ಕೊಂದವಗೆ ಕೊಲೆ' ಯಲ್ಲವೇ ?' ಮಿಕ್ಕವರಿಗೇನು ?' ।
ಹಿಂದಿನವರಪರಾಧದಲ್ಲಿ ನಮಗೇನು ? ॥
ಇಂದೀಗ ತೋಳ ಕುರಿಗಳಾ ವಾದವನು ।
ಮುಂದಿರಿಸಿ ನಮ್ಮೊಡನೆ ವಾದಿಸುವಿರೇನು ?' ॥ ೨೨ ॥

ಕೆಸರಿನಲಿ ಹುಟ್ಟಿದರೆ–ಕಮಲದಲಿ ಕೆಸರುಂಟೆ ? ।
ವಿಷಧರನ ಫಣೆಯು–ಮಣಿಯಲ್ಲಿ ವಿಷವುಂಟೇ ?' ॥
ಹಸುಗಳಾ ಕ್ಷೀರದಲಿ–ರಕ್ತದಾ ಕಲೆಯುಂಟೇ ?' ।
ರಸಪೂರ್ಣ ಜೇನಿರಲಿ ನೊಣದೆಂಜಲುಂಟೇ ?' ॥ ೨೩ ॥

ಬಲ್ಲಿರೇ ಋಷಿ, ನದೀ, ನದ, ಮಹಾತ್ಮರ ಮೂಲ ।
ವೆಲ್ಲಿಂದ ಪುಣುಗು ಕಸ್ತೂರಿಗಳ ಮೂಲ ? ।
ಬಲ್ಲಿರೇನ್ನೈ ವಿಶ್ವಮೂಲವನು ಶೋಧಕರೆ– ।
ಬಲ್ಲವರೆ ! ಜನ್ಮಚಂಡಾಲರೆನ್ನುವಿರೇ ?' ॥ ೨೪ ॥

ಹಿಂದೆ ಗುರು ಶಂಕರನು ಚಂಡಾಲಗಿದಿರಾದ ।
ಸಂಧಿಯಲಿ ನಡೆದಾತ್ಮದಾ ವಾದದಿಂದ– ॥
ಸಂಧಿಸಿದ 'ಹೊಲೆ' ಯಾರಿಗೆಂದಾಯ್ತು ಬಲ್ಲಿರೇ ! ।
ಬಾಂಧವರೆ ! ಸರ್ವಾತ್ಮ ತತ್ವ ಬೋಧಕರೇ ! ॥ ೨೫ ॥

(5)

ಉತ್ತಮೋತ್ತಮ ಜಾತಿಯಲಿ ಹುಟ್ಟಿ ಕೆಲರು ಪುರು ।
ಷೋತ್ತಮರು 'ಚಂಡಾಲಕರ್ಮ' ವೆನಗುವರು! ॥
ಹತ್ತಿರಕೆ ಬರಬೇಡಿರೆಂದು ನಾವಂಥವರ ।
ನೊತ್ತಟಿಗಟ್ಟಲೇ ಗುಣವಿಲ್ಲದವರ ॥ ೨೬ ॥

ಮುಟ್ಟಲಾಗದ ಜನರು ಯಾರೆಂದು ತಿಳಿದಿರೇ ?
ಹುಟ್ಟೂರ ಸೋದರರ ಹೊರಗಟ್ಟುವರೇ ! ॥
ಮುಟ್ಟಲಾರೆವು ನಾವು - ದೂರ ನಿಲ್ಲಿರಿ ನೀವು - ।
ನಿಷ್ಠೆಯಲಿ ನಿಂತಿಹೆವು - ಶುದ್ಧರಾಗಿಹೆವು-! ॥ ೨೭ ॥

ಮಕ್ಕಳೈವರ ಬಣ್ಣವೇನಾದರೇನಿನ್ನು ।
ಮಕ್ಕಳನು ಮುಟ್ಟದಿರುವಳೆ ತಾಯಿ ತಾನು? ॥
ಚಿಕ್ಕಾ ಸಹೋದರರಗೆ ಹಿರಿಯನಾಲ್ವರು ಸರಿಯ ।
ಹಕ್ಕಿನಂಶವನೀಯಬೇಡವೇನಯ್ಯಾ ? ॥ ೨೮ ॥

ಮಿಕ್ಕ ಹಿಂದೂ ಜನರು ನಡೆವ ಪಥದಲಿ ಪದವ ।
ನಿಕ್ಕಲೆಮಗಾತಂಕವೆಸಗದಿರಿ ಛಲವ - - ॥
ಚಿಕ್ಕವರು ನಮ್ಮವರು ಭೇದಪಿದ ಸೈರಿಸರು ।
ಧಿಕ್ಕರಿಸಿ - ಮುಂದರಿಸಿ - ಕಾಲನಿಡುತಿಹರು ॥ ೨೯ ॥

ಪತಿತರಾದವರನುದ್ಧರಿಸಿ ಪಾವನಗೈವ ।
ಕೃತಿಯಿಂದ 'ಪತಿತಪಾವನ' ನಾದ ದೇವ - ॥
ಕ್ಷಿತಿಯೊಳಾ ಪತಿತ ಪಾವನ ದೇವಮಂದಿರವ ।
ಪತಿತರೆಂದೆನಿಸಿದವರಿಗೆ ಬಿಡಿರಿ ಪಥವ ॥ ೩೦ ॥

(6)

ನಿಮ್ಮ ವರನನುಸರಿಸಿ ಭೇದಬುದ್ಧಿಯ ಗಳಿಸಿ ।
ನಮ್ಮೊಳಗೆ ಹಲವು ಪಂಗಡಗಳು ಬೆಳೆಸಿ - ॥
ನಮ್ಮವರು ಕೆಟರೈ - ನಿಮ್ಮ ಕಟ್ಟುಗಳಿಂದ ।
ನಮ್ಮ ಜನರೆಲ್ಲರೊಂದಾದೆವಿಂದಿಂದ ॥ ೩೧ ॥

ಸುರೆಯು ತೊರೆದೆವು ನೀಚಕರ್ಮಗಳ ತೊಲಗಿದೆವು ।
ಧರಣಿಯುಲಿ ಶುಚಿಯಾಗಿ ನಡೆದುಕೊಳ್ಳುವೆವು ॥
ಅರಿತು ಸದ್ವಿದ್ಯೆಯುನು ಕಲಿತು ಬಂದೆವು ನಾವು ।
ಸರಿಯಾದ ಹಿಂದೀಯರೆನಿಸಿ ಬಾಳುವೆವು ॥ ೩೨ ॥

ನಿರ್ಮಲಾಂತ:ಕರಣ ಶುದ್ಧರಾಗಿರುತಿಹೆವು ।
ಧರ್ಮಕರ್ಮದೊಳಿಹೆವು ನೀತಿಯನು ಬಿಡೆವು ॥
ನಮ್ಮ ಹಕ್ಕುಗಳನಿಂದೆಮಗೆ ಬಿಡಿರೈ ನೀವು ।
ಸುಮ್ಮನೆಮ್ಮನು ಕೆಣಕಬೇಡಿರೆನ್ನುವೆವು ॥ ೩೩ ॥

ದೂರ ಬಿಟ್ಟಿರಿ ನೀವು - ದಾರಿ ಬಿಟ್ಟೆವು ನಾವು ।
ದೂರದವರಿಗೆ ದಾರಿಯನ್ನು ತೋರಿದೆವು ॥
ದೂರ ಬಿಡದಿರಿ ನೀವು – ದಾರಿ ಬಿಡೆವೈ ನಾವು
ದೂರದವರಿಗೆ ಬಂದ ದಾರಿ ತೋರುವೆವು ॥ ೩೪ ॥

ನಿಮ್ಮಂತೆ ಭಾರತಾಂಬಿಕೆಯ ಮಕ್ಕಳು ನಾವು ।
ನಿಮ್ಮಂತೆ ಹಿಂದೀಯರಾಗಿ ಜನಿಸಿದೆವು – ॥
ನಿಮ್ಮಂತೆ ಭಾರತದೆ ಬದುಕಬೇಕೆಂದಿಹೆವು ।
ನಿಮ್ಮಂತೆ ನಾವೆಂದು ಭಾವಿಸಿರಿ ನೀವು ॥ ೩೫ ॥

ಊರ ಕೆರೆ ಭಾವಿಯಲಿ–ಸತ್ರಸಾಲೆಗಳಲ್ಲಿ ।
ದಾರಿಕೇರಿಗಳಲ್ಲಿ–ದೇಗುಲಂಗಳಲಿ–।
ಸೇರಿ ಸರ್ವರ ತೆರದೊಳಿರಲು ನಮಗೆಡೆಯಿರಲಿ ।
ಭಾರತೀಯರಲಿ ಸಮಭಾವವೆಸೆದಿರಲಿ! ॥ ೩೬ ॥

(7)

ಪರದಕರವಿತ್ತಿ ಹನಜಾಮಿಳಗೆ ಕನಕನಿಗೆ ।
ವರ ವಿತೂ ನಂದ ಚೋಖಾಮೇಳಾದ್ಯರಿಗೆ - ॥
ವರದಹಸ್ತನ ಪತಿತಪಾವನನ ಪದವಿರುವ ।
ವರ ಪುಣ್ಯಭೂಮಿಯಲಿ ಹೊಲೆಯುಂಟೆ? ದೇವಾ! ॥ ೩೭ ॥

ಪಂಚಬಾಣನ ಪಿತನು - ಪಂಚಾಸ್ಯ ಪರಶಿವನು ।
ಪಂಚಾಂಗ ಕೋವಿದನು - ದೇವಷಣ್ಮುಖನು ॥
ಪಂಚಕಜ್ಜಾಯವನು ಬಯಸುವ ಗಜಾನನನು ।
ಪಂಚಮರು ಬಂದೊಡನೆ 'ಹೊಲೆ' ಯೆನುವರೇನು? ॥ ೩೮ ॥

ಪಂಚವಾದ್ಯಪ್ರಿಯಳು ಶ್ರೀ ಭಾರತೀ ದೇವಿ ।
ಪಂಚಾಮೃತಪ್ರಿಯಳು ಪಾರ್ವತೀ ದೇವಿ ॥
ಪಂಚಾರತಿಪ್ರಿಯಳು ಧನಲಕ್ಷ್ಮಿ ದೇವಿಯರು ।
ಪಂಚಮರ ಭಕ್ತಿಯನು ಬಯಸರೇನವರು? ॥ ೩೯ ॥

ಪಂಚಮೋದ್ಧಾರಕ ವಸಿಷ್ಠ - ವಿದ್ಯಾರಣ್ಯ! ।
ಪಂಚಮಶರಣ್ಯ ರಾಮಾನುಜವರೇಣ್ಯ! ॥
ಪಂಚಮಹಿತಾಳವಂದಾರ ಬಸವೇಶ್ವರರು! ।
ಪಂಚಮರ ಬಿಡುವರೆ ಮಹಾತ್ಮರಾದವರು? ॥ ೪೦ ॥

ಪಾಂಚಜನ್ಯದ ಬಲವ ಶ್ರೀಕರಗೆ ಸಿರಿಯಾಯ್ತು! ।
ಪಂಚಪಾಂಡವ ಬಲದಬಲೆಗೆ ಶುಭವಾಯ್ತು! ॥
ಪಂಚಮ ಸ್ವರಬಲದ ಕೋಗಿಲೆಗೆ ಹೆಸರಾಯ್ತು! ।
ಪಂಚಮಾಶ್ರಿತಬಲದ ಧರೆಗನ್ನವಾಯ್ತು! ॥ ೪೧ ॥

ಪಂಚಭೂತಂಗಳೊಲವಿಂದಲೀ ಪ್ರಕೃತಿಯಿದೆ - ।
ಪಂಚವಾಯುಗಳ ಸುಗತಿಯಲಿ ಜೀವವಿದೆ - ॥
ಪಂಚಾಗಬಲದಲೀ ವಿಶ್ವದಲಿ ಶಕ್ತಿಯಿದೆ - ।
ಪಂಚಮರ ಬಲದಿಂ ಪ್ರಪಂಚ ಬೆಳಗುತಿದೆ ॥ ೪೨ ॥

ಐದು ಬೆರಳುಗಳೈದೆ ಕೂಡಿದಾ ಮುಷ್ಟಿಯಲಿ ।
ಸೋದರರೆ! ಬಲವಧಿಕವೆನಲು ಲೋಕದಲಿ ॥
ಐದನೇ ವರ್ಣದವರೆಂದು ಪಂಚಮ ಜನರ ।
ಬೈದು ಬಹುದೂರದಲಿ ನಿಲ್ಲಿರೆನ್ನುವಿರಾ? ॥ ೪೩ ॥

ಸರ್ವತ್ರ ಸಾರ್ವಜನಿಕ ಪ್ರೇಮ ಹರಡಿರಲಿ? ।
ಸರ್ವಜನರೊಳಗೈಕಮತ್ಯವೆಸೆದಿರಲಿ! ॥
ಸರ್ವ ಹರಿಜನರು ಹಿಂದುಗಳೆಂಬ ತಿಳಿವಿರಲಿ! ।
ಸರ್ವ ಭಾರತದಲ್ಲಿ ಸ್ವಾತಂತ್ರ್ಯವಿರಲಿ! ॥ ೪೪ ॥

(ಸ್ವದೇಶೀ ಪ್ರಚಾರಕ ಅಕ್ಟೋಬರ–1933)

ಲೇಖಕರು : **ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯಿ**

('ಸ್ವರಾಜ್ಯ ಗೀತಾಮೃತ,' ಕಾಸರಗೋಡು, 1947)

೯೮. ದರ್ಶನ

ದೇವ ದರ್ಶನಕಾಗಿ ಬಂದಿಹೆವು–ನಾವು– ॥ ಪ ॥
ಪಾವನ ಸುಮೂರ್ತಿಯನು ಕಾಣಲಿಚ್ಛಿಪೆವು ॥ ಅ.ಪ ॥

ಆ ದಯಾ ನಿಧಿಯಾದ ಜಗದೀಶನಾತನಿಗೆ ।
ಭೇದವಿರುವುದೆ ಸಕಲ ಜಗದ ಜನಗಳಲಿ ? ॥
ಸೋದರರೆ! ದಯಮಾಡಿ ನಮಗೆ ದಾರಿಯ ಬಿಡಿರಿ- ।
ಕ್ರೋಧವನು ಮಾಡದಿರಿ - ಹೊರಗೆ ದೂಡದಿರಿ ! ॥ ೧ ॥

ಆದಿಕವಿ ವಾಲ್ಮೀಕಿ ಮುನಿಯು ನುಡಿಸಿದ ದೇವ - ।
ಸಾಧುವಾದಾ ಕಬೀರನಿಗೊಲಿದ ದೇವ - ॥
ಸಾದರದೊಳಾ ಕನಕನಿಗೆ ಕಾಣಿಸಿದ ದೇವ - ।
ಮೋದದಿಂ ಕರುಣಿಸುವನೆಮಗೆ ದರುಶನವ - । ॥ ೨ ॥

ವಾನರಾನೀಕದೊಡನಾಡಿ ತರುಗಿದ ದೇವ - ।
ದಾನವೇಂದ್ರನ ಮಗನ ಸಲಹಿರುವ ದೇವ - ॥
ದೀನಗೋವಳರೊಡನೆ ನಲಿದಾಡಿದಾ ದೇವ - ।
ದೀನಬಾಂಧವ ಕೊಡುವನೆಮಗೆ ದರುಶನವ - । ॥ ೩ ॥

ಶಬರಿಯೆಂಜಲ ತಿಂದ ಭಕ್ತವತ್ಸಲ ದೇವ - ।
ನಭಯ ಹಸ್ತವನಜಾಮಿಳಗಿತ್ತ ದೇವ - ॥
ಪ್ರಬಲ ಪಾಂಡವರೈವರರಸಿಗೊಲಿದಾ ದೇವ - ।
ಶುಭ ವಿಭವ ಪಾಲಿಸುವನೆಮಗೆ ದರುಶನವ ॥ ೪ ॥

ಆ ಸುರಾ ರಾಕ್ಷಸಿಯ ನಾಡಿನಿಂದಟ್ಟಿದೆವು - ।
ದೋಷ ಹಿಂಸಾಕ್ರಮದ ಪಥವ ಬಿಟ್ಟಿಹೆವು ॥

ದೇಶ ಸೇವೆಗೆ ನಮ್ಮ ಸರ್ವವನ್ನಿಯುವೆವು ।
ದೇಶಬಂಧುಗಳೇ! ನಿಮ್ಮೊಡನಿಹೆವು - ನಾವು - ॥ ೫ ॥

ಹಿಂದಿನಪರಾದ ಶತವಿದ್ದರೂ ಕ್ಷಮಿಸಿರೈ ।
ಬಂಧುಗಳೆ! ದೇವ ದರ್ಶನವ ಕರುಣಿಸಿರೈ - ॥
ಹಿಂದುಗಳು ನಾವು - ನಿಮ್ಮವರೆಂದು ನೆನೆಸಿರೈ - ॥
ಗಾಂಧಿ ಸಂದೇಶವನು ತಿಳಿದು ಪಾಲಿಸಿರೈ! - ॥ ೬ ॥

(ನವಯುಗ, ಬಡವರ ಬಂಧು 1-2-1933)

ಲೇಖಕರು : **ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯಿ**

('ಸ್ವರಾಜ್ಯ ಗೀತಾಮೃತ' ಕಾಸರಗೋಡು, 1947)

೯೯ ಹಿಂದೂ ದೇಶಕ್ಕಾಗಿ ರವೀಂದ್ರನಾಥ ಠಾಕೂರರ ಪ್ರಾರ್ಥನೆ

॥ ಕಂದ ॥

'ಎಲ್ಲಿ ತಲೆ ಬಾಗಿರದೊ' ಎಂದು
ಮುಂದೆ ತಿದ್ದಲಾಯಿತು. ।

ಎಲ್ಲಿ ಮನಕಳುಕಿರದೊ, ಎಲ್ಲಿ ತಲೆ ಎತ್ತಿಹುದೋ,
ಎಲ್ಲಿ ತಿಳಿವಿಗೆ ತೊಡಕುತೋರದಿಹುದಿಲ್ಲಿ; ।

ಎಲ್ಲಿ ಮನೆಯಿಕ್ಕಟ್ಟು, ಸಂಸಾರ ನೆಲೆಗಟ್ಟು
ದೂಳೊಡೆಯದಿಹುದೊ, - ತಾ ನಾ ತಾವಿನಲ್ಲಿ; ।

ಎಲ್ಲಿ ಸತ್ಯದಗಾಧನೆಲೆಯಿಂದ ಸವಿವಾತು
ಸಲ್ಲಲಿತ ನಡೆಯಿಂದ ಹೊರಡುತಿರುವಲ್ಲಿ; ।

ಎಲ್ಲಿ ದಣಿವಿರದ ಸಾಧನೆಯು ಸಫಲತೆ ಕಡೆಗೆ
ತೋಳ ನೀಡಿಹುದೊ - ತಾ ನಾ ನಾಡಿನಲ್ಲಿ; ।

ಎಲ್ಲಿ ಸುವಿಚಾರ ಜಲದೊಸರು ಮುಂಬರಿದಳಿದ
ಕಾಳುರೂಢಿಗಳ ಹಳೆಮಳಲ ಬೀಡಿನಲೀ
ಬಾಳುಗೆಡದಲ್ಲಿ; - ನೀನೆಮ್ಮ ಚಿತ್ತವನು ಸುವಿ -
ಶಾಲ ಭಾವನೆಗೆ ಕೃತ್ಯಕ್ಕೆ ನಡೆಸುವಲ್ಲಿ; -

ಅಲ್ಲಿಯಾ ಬಂಧನರಹಿತ ಸುಖದ ಸ್ವರ್ಗದಲಿ
ಪಾಲಿಸೈ ಪಿತನೆಮ್ಮ ನಾಡೆಚ್ಚರಿಸಲಿ;

(ಕವಿ ರವೀಂದ್ರರ ಹಾಡಿನ ಕನ್ನಡ ಭಾಷಾಂತರ; ಎಂ. ಎನ್. ಕಾಮತ್)

೧೦೦ ಬದಲಾವಣೆಯೇ ಜೀವನದ ನಿಯಮ

ಇದ್ದಂತೆಯೆ ನಾವಿರೋಣವೆಂಬುವ ಮುಗ್ಧ ದೋರಣೆಲಿ ಹುರುಳಿಲ್ಲಾ ।
ಶುದ್ಧಮನದೊಳಿದ ತಿಳಿದುನೋಡೆ, ಜೀವಂತತನದ ಲಕ್ಷಣವಲ್ಲಾ ॥
ಮುದ್ದು ಪ್ರಕೃತಿಯು ಇದ್ದಂತಿರುವುದೇ ? ಬುದ್ಧಿವಂತರಿದನರಿತೆಲ್ಲಾ ।
ತಿದ್ದಿದ ನವನವ ಯೋಜನೆಕಾಲದಿ ಬುದ್ಧಿಶೂನ್ಯರಾಗೆ ಫಲವಿಲ್ಲಾ ॥
ಇದ್ದಂತೆಯೆ ಇರಲೆಂದುಕೊಳ್ವ ಮಹಮನ್ವಂತರ ದಾಟಿಹುದಲ್ಲಾ ।
ಇದ್ದುದನೆಲ್ಲವ ಬದಲಾಯ್ಸುವ ಘನ ಎದೆಗಾರಿಕೆಯುಗವೀಗೆಲ್ಲಾ ॥
ಯುಗಬದಲಾವಣೆ ಗನುಗುಣವಾಗಿ ಸಮಾಜದ ಸ್ಥಿತಿಗತಿಗಳು ಯಲ್ಲಾ ।
ಬಗೆಬಗೆಯಿಂದಲಿ ಬದಲಾವಣೆಯಾಗಿರುತಿರಬೇಕಾಗಿದೆಯಲ್ಲಾ ॥
ಈ ಬದಲಾವಣೆಯಿಂದ ಪ್ರಯೋಜನ ಮಂದಿಗೆ ಸಿಗುವಂತಿಹುದೆಲ್ಲಾ ।
ವಿಭವದಿವ್ಯಕ್ತಿಯ ಮತ್ತು ಸಮಾಜವ ಸಾಧನೆಯಾಗಿರಬೇಕಲ್ಲಾ ॥

ಲೇಖಕರು : ಎನ್. ವಿಷಕಂಠರಾವ್

('ಕಾಂಗ್ರೆಸ್ ವಿಶೇಷ ಲಾವಣಿ' ಮೈಸೂರು-1939)

೧೦೧. ಬಡ ಬೋರೇಗೌಡನ ಹಳ್ಳಿಯ ಜೀವನ

ಬಡ ಬೋರೇಗೌಡನ ಹಳ್ಳಿಯ ಜೀವನ ಏನೇಳಲಿ ॥ ನಾನೇನೇಳಲಿ ॥ ಪ ॥

ಬಡವನು ಬೋರೇಗೌಡನುಯೆಲ್ಲಾ । ಕಾಡಿನ ಕಟ್ಟಿಗೆ ಕಡಿಯುವನಲ್ಲಾ ॥
ಒಡಲನು ದಂಡಿಸಿಮಾರುವನಲ್ಲಾ ಮಡದಿ ಮಕ್ಕಳನು ಸಾಕುವುದೆಂತೋ ॥ ೧ ॥

ದಣಿಯುವನನುದಿನ ಬಿಸಲಿನೊಳೆಲ್ಲಾ ।
ಮಣಿಯುವ ದನಕರು ಭೂಮಾತೆಗೆಲ್ಲಾ ।
ಕುಣಿಯುವ ಸುಗ್ಗಿಯ ಕಾಲದೊಳೆಲ್ಲಾ ।
ಕಣವೇ ಮುಖ್ಯವು ಯೆನುತಿಹುದೆಂತೋ ॥ ೨ ॥

ಕೇಡನು ಪರರಿಗೆ ಬಗೆಯದ ಪ್ರೌಢ ।
ನಾಡಿನ ಹಿತವನು ಬಯಸುವ ಗೌಡ ॥
ಮೋಡಿಮಂತ್ರಗಳ ಅರಿಯದ ಮೂಢ ।
ಕಾಡು ಮನುಷ್ಯನ ತೆರವಿಹುದೆಂತೋ ॥ ೩ ॥

ಕೊಳಕು ಬಟ್ಟೆಗಳ ಬಾಳ್ವೆಯೊಳ್ ಬಳಲಿ ।
ಬೆಳಕು ಗಾಳಿಗಳು ಇಲ್ಲದ ಮನೇಲಿ ॥
ಕೊಳೆತ ಗೊಬ್ಬರ ಹೂಡುತ ಕೊನೆಲಿ ।
ಸಾಲದ ಹುಳುವಾಗಿರುತಿಹುದೆಂತೋ ॥ ೪ ॥

ಕಾಯಕಷ್ಟದಲಿ ಗಳಿಸಲು ಧನವ ।
ದಯಾಧರ್ಮಗಳ ಧ್ಯೇಯದೊಳಿರುವ ॥
ತಾಯಿತಂಗಿಯರ ದುಡಿಸುವ ಭಾವ ।
ಬಾಯಿಮಾತಿನಲಿ ಪೇಳುವುದೆಂತೋ ॥ ೫ ॥

ಎಸ್. ವಿಷಕಂಠರಾವ್

('ಜಯಂತಿ ಶ್ರಾವಣಿ ಕಾಣಿಕೆ' 1949)

೧೦೨. ಧಾಟಿ (ಅಗಸನಿಂದಲೆ ಜಗಕ್ಕೆ ಸೊಗಸು ಕಾಣ್ಕೊ) ಎಂಬಂತೆ

ಎಂತ ಕಾಲ ಬಂದುಬಿಡ್ತು ನಮ್ಗೆ ಕಾಣ್ಕೊ ।
ಎಂಗೊ ಕಾಣೆ ಬದುಕುದೆಂತೊ ಕಾಣೆ ಕಾಣ್ಕೊ ॥ ಪ ॥

ಬೆಳಗಾಯಿತೆಂದರೆ ಒಳಗಿದ್ದರೆನ್ಕೊಂಡು ।
ಒಳೆಹೊಕ್ಕು ಸಾಲಗಾರ ಬರ್ತಾನೆ ಕಾಣ್ಕೊ ॥
ಎಂಗೊ ಕಾಣೆ ಬದುಕುದೆಂತೊ ಕಾಣೆ ಕಾಣ್ಕೊ ॥ ೧ ॥

ಹಿಟ್ಟು ಬಟ್ಟೆ ಕಳೆವುದಂತು ಕಷ್ಟ ಕಾಣ್ಕೊ ।
ಇಷ್ಟರಮಟ್ಟಿಗೆ ಬಾಳು ನಮ್ದು ಕೆಡ್ತು ಕಾಣ್ಕೊ ॥
ಕೂರ್ಪ ತಕ್ಕೊಂದು । ಜೋಪಾನ್‌ದಲಿಟ್ಕೊಂಡು ।
ಪಾಪಿಗ್ಹೋಗಿ ಅಕ್ಕಿತಂದ್ರೆ ಅನ್ನ ಕಾಣ್ಕೊ ॥
ಎಂಗೊ ಕಾಣೆ ಬದುಕುದೆಂತೊ ಕಾಣೆ ಕಾಣ್ಕೊ ॥ ೨ ॥

ಎಂದು ಕಾಣ್ದ ರೋಗ ನಾವು ಕಂಡೊ ಕಾಣ್ಕೊ ।
ಮಂಗನಂತೆ ರೂಪು ನಮ್ದು ಆಯ್ತು ಕಾಣ್ಕೊ ।
ಮುಸಗಹಾಕ್ಕೊಂಡು । ಬಿಸಿಲ ಮರ್ರೆಸ್ಕೊಂಡು ।
ಬಸಿರಿ ಹೊಟ್ಟೆಯಂತೆ ನಾವು ಅದೊ ಕಾಣ್ಕೊ ॥
ಎಂಗೊ ಕಾಣೆ ಬದುಕುದೆಂತೊ ಕಾಣೆ ಕಾಣ್ಕೊ ॥ ೩ ॥

ಒಂದಕ್ಕೆರಡು ದಂಡ ನಾವು ತೆತ್ತೊ ಕಾಣ್ಕ ।
ಮುಂದೆ ಯಾದರು ಸುಖ ನಮಗೆ ಇಲ್ಲ ಕಾಣ್ಕ ॥
ಬಾಳು ಹಾಳಾಯ್ತು । ಮೋಳ ಮುರಿದೋಯ್ತು ।
ಸಾಲಗಾರ್ರ ಮಕ್ಕಳಾಗಿ ಉಳಿದೊಕಾಣ್ಕ ॥
ಎಂಗೊ ಕಾಣೆ ಬದುಕುದೆಂತೊ ಕಾಣೆ ಕಾಣ್ಕ ॥ ೪ ॥

ಲೇಖಕರು : ಜಿ. ನಾರಾಯಣ

('ರಾಷ್ಟ್ರೀಯ ಪದಗಳು' ಸಂಗ್ರಹದಿಂದ, ದೇಶ ಹಳ್ಳಿ, 1946)

೧೦೩. ನಾವು ಬಂದದ್ದು ಯಾತಕ್ಕೆ

ನಾವು ಬಂದೇವ (3 ಸಾರೆ) ರಾಷ್ಟ್ರ ಸ್ವಾತಂತ್ರ್ಯ ಮಾಡೋದಕ್ಕ ।
ರಾಷ್ಟ್ರ ಸ್ವಾತಂತ್ರ್ಯ ಮಾಡೀ ಕಷ್ಟಾ ಕಳಿಯೋದಕ್ಕ ॥ ಪಲ್ಲ ॥

ನಿಷ್ಟಾನಂತ್ರಾಗೀಯಲ್ಲಾರ್ನಾವು ದುಡಿಯ್ಯೋದ್ಕ ।
ರಿಷ್ಟ (ವರಿಷ್ಟ) ಮಂದಿನ್ಕರದೇವೀ ಸಭಾಕ್ಕ ।
ಶ್ರೇಷ್ಠ ಭಾರತಮಾತೇ ಸೇವಾ ಮಾಡೋದ್ಕ ।
ರಾಷ್ಟ್ರ ಸ್ವಾತಂತ್ರ್ಯ ಮಾಡಿ ಕಷ್ಟಾಕಳಿಯೋದಕ್ಕ ॥ ೧ ॥

ಕಟ್ಟ ಕಡೆಯಲ್ಲಿ ಬಿಷ್ವಂಣ ಬಂದ ಹಾಡೋದ್ಕ ।
ಬಿಟ್ಟ ಹಾಡೋದಿಲ್ಲ ನಿಷ್ಟೂರಾಗಿ ಮನಕ್ಕ ।
ಅಷ್ಟೂರೊಟ್ಟಾಗೀ ನಿಂದ್ರೂ ನಮ್ಮ ಕಡತಕ್ಕ ॥ ಕಷ್ಟಸೋಸೋದ ।
ಕಷ್ಟ ಸೋಸೋದ ಬಿಟ್ಟ್ಯೋಡ್ತತೀ ಹೊತಕ್ಕ ।
ರಾಷ್ಟ್ರ ಸೇವಾ ಮಾಡೀ ಕಷ್ಟಾಕಳಿಯ್ಯೋದ್ಕ ನಾವು ॥ ॥ ೨ ॥

ಕಷ್ಟಸೋಸೋದ್ಕ ಒಟ್ಟಾಗ್ರೆಪ್ಪಾ ಚೊಕ್ಕ ।
ಶ್ರೇಷ್ಠಗಾಂಧೀ ಅಹಿಂಸಾ ತತ್ವಕ್ಕ ।
ಭ್ರಷ್ಟರಾಳಿಕೇ ಮುದ್ದ ಮಾಲಿಗೊತ್ತೋದ್ಕ ॥ ನಿಷ್ಟೂರಾಗೀ ।
ಅಷ್ಟೂರೊಟ್ಟಾಗ್ರೆಪ್ಪಾ ನೀವು ತಾತ್ಕಾಲಿಕ್ಕ ।
ರಾಷ್ಟ್ರಸೇವಾಮಾಡೀ ಕಷ್ಟಾ ಕಳಿಯೋನಕ್ಕ ನಾವು ॥ ೩ ॥

ವಟ್ಟಿಗೊಂದ್ಮಾತ ಹೇಳುವೆನಾರೀಕ ।
ಅಟ್ಟಾಯೇರಿ ಬಂದ ಹೇಳಿದ್ದ ಕವನಕ್ಕ ।
ರಾಷ್ಟ್ರಿಯೋಧರಾಗೀ ರಾಷ್ಟ್ರಸೇವಾದಲಕ್ಕ ॥ ನಿಷ್ಠೆಯಿಂದ ।
ನಿಷ್ಠೆಯಿಂದ ಬಂದಕಷ್ಟಾಬಿಡಸೋದಕ್ಕ ।
ರಾಷ್ಟ್ರ ಸ್ವಾತಂತ್ರ್ಯ ಮಾಡೀ ಕಷ್ಟಾಕಳಿಯೊದಕ್ಕ ನಾವು ॥ ೪ ॥

ಕವಿ : ಭಿಷ್ಟಪ್ಪ ಕುಬೇರಪ್ಪ ಮಂಡೇದ

(ಹಸ್ತ ಪ್ರತಿಯಿಂದ)

೧೦೪. ಆರ್ತಾಲಾಪ

(ಸಮತವಾದ)

ಧಾಟಿ–(ಕರ್ಣಾಟವೀರರೇಳಿ.)

ಶ್ರೀಮಾನ್ಯರೆಲ್ಲ ಕೂಡಿ । ಪ್ರೇಮಾತ್ಮರಾಗಿ ನೋಡಿ ॥ ಪ ॥

ಸಾಮಾನ್ಯಜನಕೆ ದಯಮಾಡಿ । 'ಸಾಮ್ಯತೆ' ಯ ನೆಲೆಯ ನೀಡಿ ॥ ಅ.ಪ. ॥

ಜಗದೀಶನೊಬ್ಬನವ ತಾನು । ಜಗವಿದನು ಸೃಷ್ಟಿಮಾಡಿದನು ॥
ಜಗದೆಲ್ಲ ಜೀವರಾಶಿಯನು । ಮಿಗೆ ಸಮತೆಯಿಂದ ನೋಡುವನು ॥ ೧ ॥

ಸರ್ವೇಶನೊಡೆತನದ ಜಗವು । ಸರ್ವರ ಸಮಾನ ಮಂದಿರವು ॥
ಸರ್ವಾಧಿಕಾರಿಗಳ ನೀವು । ನಿರ್ವಹಿಸಲೇನು ಕಾರಣವು ॥ ॥ ೨ ॥

ದಿಕ್ಕಿಲ್ಲವೇನು ದೀನರಿಗೆ? । ಹಕ್ಕಿಲ್ಲವೇನು ಧಾರಿಣಿಗೆ? ॥
ಸೊಕ್ಕಿಲ್ಲವೇನು ಧನಿಗಳಿಗೆ? । ಮಿಕ್ಕವರ ಸುಲಿವ ಧನಿಕರಿಗೆ? ॥ ೩ ॥

ಉರಿ ಬಿಸಿಲು, ಸಿಡಿಲು, ಮಳೆಗಳಲಿ । ಬಿರುಗಾಳಿ ಸುಳಿವ ಚಳಿಗಳಲಿ ॥
ಮರೆಸಿರಲು ಮನೆಗಳೆಮಗೆಲ್ಲಿ? । ಮೊರೆಯಿದನು ಕೇಳ್ವಾರಾರಿಲ್ಲಿ? ॥ ೪ ॥

ಅರೆಹೊಟ್ಟೆಗಿಲ್ಲದಂಥವರು। ನೆರೆಬಟ್ಟೆಗಿಲ್ಲದಿರುವವರು–॥
ದೊರೆತನದ ನಿಮ್ಮ ಸೇವಕರು–। ಪರಿಕಿಸಲು ಸ್ವರ್ಣಧರೆಯವರು! ॥ ೫ ॥

ಒಡಲುರಿಸಿ, ದಣಿಸಿ, ರಕ್ತವನು । ಕುಡಿವಂತೆ ಹೀರಿ ಬಡವನು ॥
ದುಡಿಸುತ್ತ ಪಡೆವ ಭೋಗವನ್ನು ; ಸುಡಿರಿನ್ನು ಧನದ ದರ್ಪವನು ॥ ೬ ॥

ಒಡೆತನಕೆ ಬಾಗಿಕೊಂಡಿರೆವು । ಬಡತನದೆ ಬಾಳಿಕೊಂಡಿರೆವು ॥
ಕಡೆಗೊಳಲಿ ದಾಸ್ಯಬಂಧನವು । ತೊಡಗಿರಲಿ 'ಸಾಮ್ಯ' ಜೀವನವು! ॥ ೭ ॥

ಒಡೆತನವು ಸಾಕು ಕೆಲವರಿಗೆ । ಬಡತನವು ಸಾಕು ಹಲವರಿಗೆ ॥
ಒಡಹುಟ್ಟಿದವರ 'ಸಾಮ್ಯತೆ' ಗೆ ನಡೆಯುವುದು ಲೇಸು ಸಕಲರಿಗೆ ॥ ೮ ॥

ಗುಡಿಸಲಿಗೆ ಬೇಕೆಮಗೆ ನೆಲವು । ಕುಡಿಯಲಿಕೆ ಬೇಕೆಮಗೆ ಜಲವು ॥
ದುಡಿಯಲಿಕೆ ಬೇಕೆಮಗೆ ಹೊಲವು । ತಡೆಯಿರದೆ ಸಾಗಲೀ ಜಗವು ! ॥ ೯ ॥

ಕೊಡಿರೆಮಗೆ ನಮ್ಮ ಪಾಲುಗಳ । ಬಿಡಿರೆಮಗೆ ನಮ್ಮ ಹಕ್ಕುಗಳ ॥
ಒಡಲುರಿಸಿ 'ಸಾಮ್ಯವಾದಿ' ಗಳ ॥ ಕಿಡಿಯಿಂದ ನಿಮಗೆ ಕೆಡುಗಾಲ ! ॥ ೧೦ ॥

ನೀತಿಯಲಿ ಭರತಖಂಡದಲಿ । ಪ್ರೀತಿಯಲಿ ಸಮತೆ ನೆಲೆಸಿರಲಿ ! ।
ಸ್ವಾತಂತ್ರ್ಯಭೇರಿ ಮೊಳಗಿರಲಿ ; ॥ ಖ್ಯಾತ ಸ್ವರಾಜ್ಯ ರಾಜಿಸಲಿ ! ॥ ೧೧ ॥

ಸರ್ವತ್ರ ಬಂಧುಜನ ಭಾವ । ಕಳೆಗೊಳಲಿ ಸಮತಾಪ್ರಭಾವ ॥
ಸರ್ವ ಸ್ವತಂತ್ರ ಭಾರತವ । ಬೆಳಗಿಸಲಿ ಕೀರ್ತಿಯಲಿ ದೇವ ! ॥ ೧೨ ॥

(ನವಯುಗ 24-2-1938)

ಲೇಖಕರು : ಪುಂಡೂರು ಲಕ್ಷ್ಮಿನಾರಾಯಣ ಪುಣಿಂಚತಾಯಿ

('ಸ್ವರಾಜ್ಯಗೀತಾಮೃತ', ಕಾಸರಗೋಡು, 1947)

೧೦೫. ನಾಡವರು

ನಾಡವರೇ ನಿಜ ನಾಡಿಗರು
ನೋಡು ಕಾಳಗದ ಹೂಡಿಹರು

ಸ್ವಾತಂತ್ರ್ಯದ ಸುಖದೂಟವನುಂಡು
ವಿಜಯನಗರದಲಿ ಕಾದಿದ ದಂಡು
ನಾಡವರಿಂದಿನ ದಾಸ್ಯವ ಕಂಡು
ಉಪ್ಪುಮಾಡುವರು ಮುಂದಕೆ ಬಂದು ॥

ಹಿಂದಿನ ಹುರುಪೇ ಇಂದಿಗೆ ಮೂಡಿ
ನಾಡವರೆಲ್ಲ ಒಂದೆಡೆಗೂಡಿ
ಗಾಂಧಿಮಹಾತ್ಮರ ಕೊಂಬನು ಕೇಳಿ
ನೆಗೆದು ಕಾದುವರು ಧೈರ್ಯವ ತಾಳಿ ॥

ಲೇಖಕರು : ದಿನಕರದೇಸಾಯಿ

(ಶ್ರೀ ಜೋಗಿ ಬೀರಣ್ಣ ನಾಯಕರು ಕೆಟಗೇರಿ, ಒದಗಿಸಿದ್ದು)

೧೦೬ ಕ್ರಾಂತಿ

ಶ್ರೀ ಘನಸರಕಾರದ ಘನತರಮಹಿಮೆಯು । ಏನೇಳಲೀ ‖ ಪಲ್ಲವಿ ‖
ಸರಕಾರದಸ್ಥಿತಿ ಭ್ರಾಂತಿಯೊಳಿಪುದು ।
ಸರಕಾರದ ಗತಿ ಬದಲಾಗಿಹುದು ।
ಸರಕಾರದ ಕೃತಿ ಬಲವಾಗಿಹುದು ।
ವರಕಾಂಗ್ರೆಸ್‌ಧೃತಿ ಬೆಳೆಯುತಲಿಹುದು । ಏನೇಳಲೀ ॥ ೧॥

ಪ್ರಸಿದ್ಧ ಬೊಂಬಾಯ್ ನರಿಮನ್ ಬಂದು ।
ಮೈಸೂರ್ ದೇಶ ಪ್ರವಾಸದಿನಿಂದು ।
ಅಸಂತೋಷ ಬೆಳೆ ಬೆಳೆಸಿದರೆಂದು ।
ಕೈಸೆರೆಹಿಡಿಸಿತು ಸರ್ಕಾರ್ ಅಂದು । ಏನೇಳಲೀ ॥ ೨ ॥

ಗಂಡುಗಲೀಗಳ ಕೈಮೇಲಂದು ।
ಗುಂಡಿನಸುರಿಮಳೆ ರಭಸದೊಳಂದು ।
ಗುಂಡಪ್ಪನ ಘನಪ್ರಾಣದೊಳಂದು ।
ಗುಂಡಾರಾಜ್ಯವೆಂಬೆಹೆಸರಾಯ್ತೆಂದು । ಏನೇಳಲೀ ॥ ೩ ॥

ಪ್ರಜಾಮತದ ಸಂಪಾದಕರೊಂದು ।
ಪ್ರಜೆಗಳಮನವನು ಕೆಡಿಸುವರೆಂದು ।
ಸುಜನಶಿರೋಮಣಿಯಾಜ್ಞೆಯು ತಂದು ।
ನಿಜಸ್ಥಳದಿಂದಲಿ ಹೊರಡಿಸಿತಂದು । ಏನೇಳಲೀ ॥ ೪ ॥

ಜನಮನಮಕುಟದ ದಿನಮಣಿಯೊಂದು ।
ದಿನದಿನ ಕ್ರಾಂತಿಯು ನಡೆಸುವದೆಂದು ।
ಘನತೆಯು ಇದರಿಂದುಳಿಯದು ಯೆಂದು ।
ಜನವಾಣಿಯು ಕೃತಿಗಳಿಸಿತು ಅಂದು । ಏನೇಳಲೀ ॥ ೫ ॥

ಲೇಖಕರು : **ಎಸ್. ವಿಷಕಂಠರಾವ್**

(ಕಾಂಗ್ರೆಸ್ ವಿಶೇಷ ಲಾವಣಿ, ಮೈಸೂರು, 1939)

೧೦೭ ಶ್ರೀ ವಂದೇಮಾತರಂ

ಸಂಸ್ಥಾನದವರಂದರ ಸಾಧಾರಣ ಮನುಷ್ಯರಲ್ಲ ವಜನದಾರ ಇದ್ದರ ಮನಲಿನವರು । ತಮ್ಮ ಸಂರಕ್ಷಣ ತಾಂವಮಾಡಿಕೊಂತಿದ್ರ ಈಗಿನವರು ಇಂಗ್ಲೀಷರಿಗಾಧೀನರು ।। ಪಲ್ಲವಿ ।।
ವಾಡೆಪ ಮುಂದ ಬಡರೈತ ಹೋದರ । ಬೆದರಿಸಿ ಕಳಿಸೂರ ಪೋಲಿಸರಾ ।
ಗೌರ್ನರ ಬರತಾರಂತ ತಾರ ಬಂದರ । ಕರಿಲಾಕ ಹೊರಡುರು ಮಹಾರಾಜರಾ ।।

ಹಾರಿಮುದ್ದ ತಾರ ನಳಿಗಿ ಬಾಣ ತೋಫ । ಹಾರಸುತ ಮೆರವಣಿಗಿ ಮಾಡಿ ಕರೆತ-ರುವುದಕಾ । ಪಾನಸುಪಾರಿ ಅಂತ ಪನ್ನಾಸ ಹಜಾರ ಕೊಟ್ಟ ಕಾಲಮಾಲ ಬಿದ್ದ ಕಳಿಸುವರಾ ।।

ಬೆಳದಿಲ್ಲಂತ ರೈತ ಬಿರಾಡ ಬಿಡ ಅಂದರ । ಜಪ್ತಿ ಮಾಡಸಲಾಕ ಹಚ್ಚುವರಾ ।
ವಕ್ಕಲಿಗರೆಲ್ಲಾರು ವಕ್ಕಟ್ಟು ಆದರ । ಮಿಲ್ಟ್ರಿ ತರಲಾಕ ಓಡಿಹೋಗುವರಾ ।।

ಮಿಲ್ಟ್ರಿತಂದ ಗೋಳಿಬಾರ ಮಾಡಿ । ಲಾಠಿ ತಿರಿವ್ಯಾಡಿ ರೈತರನು ಕಾಡಿ ।
ಗಾಬರಿಮಾಡುತಾ, ಪುಣ್ಯ ಪಡಕೊತಾರಯಂಥಾದಾ ॥

ಸಜ್ಜಾಗಿದಾರ ಈಗಗಟ್ಟೆ । ಯಲಾಹಕು ಮಂದಿ ತಟ್ಟಿ । ನಿಂತಾರ ನಡಕಟ್ಟಿ ಹೊಟ್ಟೆಯು ದಳೆಯಿಂದಾ । ಹೋಗಲೆಂತಾರ ರುಂಡ ನಮ್ಮದಾ ।।

ಹಂಗ ಸಾಯುವಕಿಂತ ಹಿಂಗ ಸಾಯುಸಂತಾರ । ಕಂಗಾಲ ಕಿಚ್ಚಿಗೆದ್ದ ಅನ್ನುವರಾ ।।

ವಕ್ಕಲಿಗರ ಮಕ್ಕಳಿಗೆ ಶಿಕ್ಷಣ ಕೊಡಲಿಕ್ಕ ।ರೊಕ್ಕ ಖರ್ಚು ಮಾಡುದಿಲ್ಲ ದೇಸಾ-ಯರಾ । ಬೆಕ್ಕ ನಾಯಿ ಹುಲಿ ಕರಡಿ ಸಾಕಿ । ಸಾಕಿ ದಿಕ್ಕಿಲ್ಲದ ರೊಕ್ಕಾ ಕಳೆಯುವರಾ ।।

ನೀರ ಇಲ್ಲದ ಹಳ್ಳಿ ಜನರು । ಮರಗುವರಾ ಹೊರಳಿ ನೋಡುದಿಲ್ಲ ಯಾರ್‍ಯಾರಾ ।
ಕಾರಂಜಿ ಹಚ್ಚಿ ಕೊಂಡ ಆರಾಮ ಕುಂಡ್ರುರು ಸರ್ಕಾರಿ ನೌಕರಿ ಮಾಡುವರಾ ।।

ಹೆಣ್ಣ ಹುಡುಗರ ಕನ್ನಡ ಸಾಲಿ । ಸಂಸ್ಥಾನ ಹಳ್ಳ್ಯಾಗ ಇಲ್ಲರಿ ಪೂರಾ ।। ಪಾತರದವರಿಗೆ ಬೇಡಿದಷ್ಟು ಕೊಟ್ಟು । ನಾಚ ಮಾಡಲಿಕ್ಕೆ ಹಚ್ಚುವರಾ ।।

ಆನೆ ಕುದರಿ ಒಂಟಿ ಸಾಕುರ । ತಂದ ಮೋಟರ ಹತ್ತಿ ತಿರುಗುರ ಪೆಟ್ರೋಲ-ಕಳತಿಲ್ಲಾ ಈ ಜೈನಾ ಎಲ್ಲಾ ಪ್ರಜಗಳ ಮ್ಯಾಲಾ । ಹಳ್ಳಿಒಳಗಿನ ಹಾದಿಯ-ಮ್ಯಾಲ ದಾದ ಇರುದಿಲ್ಲ । ಇಲ್ಲ ಸವಸೆಲಾ । ತಗ್ಗದಿನ್ನಿಲ್ಲಾ । ಅಲ್ಲಿ ಸವಾ ಮಾಡಿಸುವ ದಿಕ್ಕಿಲ್ಲಾ ।।

ದುಡಿಯುವರದಾದ ಜೈನಿ ಹೊಡೆಯುವರಿಗೆ ಇರುದಿಲ್ಲಾ । ತಮ್ಮ ತಾವ ನೋಡಿಕೊಳ್ಳುವರಾ ।।

ಪ್ರಜಾ ಸಂಗದ ಠರಾವ ಬಂದಂತೆ ಅನುಮತಿ ಕೊಡಬೇಕ ದರಬಾರಾ ।। ಮಾತ್ರ ಭಾಷೆಯು ಕನ್ನಡ ಆಗಬೇಕ ಕಚೇರಿಯೊಳಗಿನ ಕಾಗದಪತ್ರಾ ।। ಹುಲಬನ್ನಿ ತೆಂಗಿ ಕಮ್ಮ ಮಾಡಿದರ ಹಾಡಿ ಹರಸತಾರ ಬಡಬಗ್ಗರಾ ।। ಕೈಗಾರಿಕೆಯು ಮ್ಯಾಗ ಕರಾ ಹೇರಿದರ ಪುರವಟ್ಟೆ ಆಗುವುದಿಲ್ಲ ಅಯಗಾರಾ ।।

ಮದಲ ಅಳವನ ಹೇಣತಿ ಸತ್ತಂತೆ ಅಗತತೀ ನೇಕಾರ ಶೆಡಗಾರಾ ।। ಕಂಡ ಕಂಡದ್ದಕ್ಕೆಲ್ಲಾ ದಂಡಾ ಕಟ್ಟಿದರ ಹೆಂಗ ಆಗಬೇಕರಿ ಪಾಡಾ ।।

ಅನ್ಯಾಯಗಳನ ತೆಗಿಬೇಕ । ಸನ್ಮಾರ್ಗ ಹಿಡಿಬೇಕ । ಪ್ರಜಾ ರಕ್ಷಣಕ ಸಂಸ್ಥಾನಾ-ಧೀಶರಾ । ಕೇಳಬೇಕ ಪ್ರಜರ ತಕರಾರಾ । ಗಾಂಧಿಯವರ ವಚನ ಪಾಲಿಸುವ ಔಂದಧನಿಯವರ । ಹೌದ ಅನಿಸಿಕೊಂಡ್ರು । ಸ್ವರಾಜ್ಯ ಕೊಟ್ಟರಾ । ನಡಿಶ್ಯಾರ ಶಿಕ್ಷಣ ಪ್ರಸಾರಾ ।। ಭೀಮಕವಿ ಭೂಮಿ ಮ್ಯಾಲ ಪ್ರಖ್ಯಾತ ಹೋಂದಿ ಸೌಮ್ಯದಿಂದ ತಿಳಿ ಹೇಳುವರ ಪೂರಾ ।। 3 ।।

ಲೇಖಕರು : **ಹುಲಕುಂದ ಭೀಮಕವಿ**

(' ರಾಷ್ಟ್ರೀಯ ಗೀಗೀ ಪದಗಳು ')

೧೦೮ ಬೆಂಗಳೂರು ಗಣಪತಿ ಗಲಾಟೆ ಲಾವಣಿ

ದಾಟಿ:– (ಖಡೀಚಾಲ್)

ಶ್ರೀಕರ್ಪನಿಸಿದ ಈ ಕರ್ನಾಟಕ ಲೋಕದಿ ಬೆಂಗಳ್ಳೂರ್ ಮೆರೆಯುತಲಿ ।
ಅಕಾರಸಕಾರ–ಮಕಾರರೇಕದಿ - ಕುಕ್ಕುಟವಿಕ್ರಮ ತೋರುತಲಿ ॥ ಪ ॥

ವಿದ್ಯಾಶಾಲೆಯು ಇದ್ದಿತು ಬೆಂಗ್ಳೂರ್ ಸಿದ್ದಿಕಟ್ಟೆ ಸಮೀಪದಲಿ ।
ಸಿದ್ಧಿಗಣಪತಿಯು ಮೊದಲಿಂದಿದ್ದಿತು ಪ್ರಸಿದ್ಧಮಿಡ್ಲಿಸ್ಕೂಲಿನಲಿ ॥
ಮುದ್ದುಗಣಪತಿಗೆ ಮಂಟಪಕಟ್ಟಿಸಿ ಇದ್ದರು ಬಾಲರುಭಕ್ತಿಯಲಿ ।
ಎದ್ದು ಬರಲು ಖಾನ್ ಬಹದ್ದೂರರರು ಮುದ್ದುಗಣಪ ಮುಂಬಾಗಿಲಲಿ ॥
ರೌದ್ರ ವೇರಿತತಿ ಕ್ಷುದ್ರಖಾನರಿಗೆ ಸಿದ್ಧಿಗಣಪತಿಯ ವಿಷಯದಲಿ ।
ಭದ್ರ ಪಡಿಸಿದರು ಸಿದ್ಧಿಗಣಪತಿಯ ವಿದ್ಯಾಶಾಲೆಯ ಕೊಠಡಿಯಲಿ ॥

ಜೊ ಡ್ಡು ಡ ನ್

ದಿನದಿನಕೇರಿತು ಖಾನರಕಪಟಾ ಗಣಪತಿ ತೆಗೆಸಲುಮಸಲತ್ತು ।
ದಿನಮಣಬಾಲರು ಖಾಸರ ಕಪಟವ ಅಣಗಿಸಲೊರಟರು ಘೋಷಿಸುತ ॥
ಒಣಗಿತು ಮುಖಕಳೆ ಖಾನರಿಗೀಕ್ಷಣ ದಿನಮಣಿ ಬಾಲರದೂಷಿಸುತ ।

ಉ ಡ ನ್

ಹಠವನೇಹಿಡಿದರು ಸ್ಕೂಲಿನ ಬಾಲಕರೆಲ್ಲ ।
ಪಟ ಒಂದನು ಮೆರೆಸುತಗಣಪತಿ ವಿಷಯವನೆಲ್ಲ ।
ಘಠ ಬಿದ್ದರು ಸಮ್ಮತ ಗಣಪತಿಬಿಡುವವರಲ್ಲ ।
ದಿಟವೆನೇ ಸಾರಿದರು ಬೆಂಗ್ಳೂರ್ ಪ್ರಜೆಗಳಿಗೆಲ್ಲ ।

ಗು ಲ್ಲು ಡ ನ್

ಹುಡುಗರೂ ಧ್ಯಾನಿಸಿಗಣಪತಿಯ ।
ನಡೆದರೂ ಕೂಗುತ ಪರಿಪರಿಯ ।

ಹಿಡಿದರೂ ಮುಷ್ಕರ ದಿನಚರಿಯು
ಕೊಡಿಸಿರಿ ಗಣಪನ ನಡೆಸೇವ್ ಪೂಜೆಯು ನೋಡ್ವಿರಿ ವೈಖರಿಯು ॥

ಶ್ಲೋಕ

ಹಿಂದು ಬಾಲರು ಬಂದು ಬೇಡಿದರ್ ತಂದುಕೊಡಿ ನಮ್ ಗಣಪನ ।
ಎಂದು ಪರಿಪರಿ ಘೋಷಿಸುತ್ತಲಿ ಹೊರಟರ್ ಹುಡುಗರು ಅದಿನ ॥

ಚಾಲು

ಕೇಕೆಯನಾಕುತ ಹೊರಟರು ಬೀದಿಲಿ-ಸಾಲಂಕೃತ ಸುಮ್ಮಾನದಲಿ ।
ಅಕಾರ್‌ಸಕಾರ್-ಮಕಾರ್‌ರೇಕದಿ ಕುಕ್ಕುಟ ವಿಕ್ರಮ ತೋರುತಲಿ ॥ ೧ ॥

ಹುಡುಕುತ ಬಂದರು ವಡಕುಗಾರರು ಸುಬ್ರಮಣ್ಯರ ಬಿರಬಿರಿಯು ।
ಬಿಡದೆಲೆ ಹಿಡಿದರು ಭೀಮರಾಯರನು ಒಡನೆ ರಾಮಲಾಲ್‌ತಿವಾರಿಯು ॥
ಹಿಡಿದು ಮುವ್ವರನು ನುಡಿದರು ಈ ಪರಿ ನೋಡಿಬನ್ನಿ ನೀವ್ ಸೆರೆಮನೆಯು ।
ಹುಡುಗರ್ ಮುಖಂಡರಹಿಡಿದರೆನ್ನುತಲಿ ಪಡೆದರಿಮಾನೀಜನ ಖುಷಿಯು ॥

ಗುಲ್ಲುಡನ್

ಶ್ಲೋಕಿಲಿ ಬಂದರು ಮಿರ್ಜಾ ॥ ಚಾಲು ॥ ವಜೀರರು ಜೈಲಿನ ಬಳಿ ಮೋಟಾರಿನಲಿ।

ಅಕಾರ್‌ಸಕಾರ ಮಕಾರರೇಕದಿ-ಕುಕ್ಕುಟ ವಿಕ್ರಮ ತೋರುತಲಿ ॥ ೨ ॥
ಬಂದದಿವಾನರ ವಂದಿಸಿಬಾಲರು-ಬಂದಬಿಡಿಸಿಆತ್ರಿ ಜನರನ ।
ಎಂದು ಬೇಡಿದರು ಹಿಂದೂಬಾಲರು-ಮುಂದೆಸಾರಿ ಆ ಸಚಿವರನ ।
ಕಂದರಕುಂದನು ಒಂದು ಕೇಳದೆಲೆ ಮುಂದು ಮಾಡೆ ಮೋಟಾರ್‌ಗಮನ ।
ಎಂದರಡೇಟಿಗೆ ಚಿಂದಿಯಗೈದರು-ಮಂದಪ್ರಾಜ್ಞನಾ ಸುಲೋಚನ ॥

ಶ್ಲೋಕ

ಪೇಳಲಸದಳ ಜೈಲಬಳಿಯೊಳು ಬಾಲಕರ ಕೋಲಾಹಲ ।
ಕೇಳಿಬಂದಿತು ಮಿಲ್ಟ್ರಿಪೌಜ ಸಾಲು ಕುದುರೆ ಸವಾರ್ದಳ ॥

ಚಾಲು

ಶೋಕದಿ ಬಾಲರು ಕೇಕೆಯನಾಕುತ ಏಕದಿಹೊರಟರು ಬೀದಿಯಲಿ ।
ಅಕಾರ್‌ಸಕಾರ ಮಕಾರ ರೇಕದಿ ಕುಕ್ಕುಟ ವಿಕ್ರಮತೋರುತಲಿ ॥ ೩ ॥

(ಅಪೂರ್ಣ?)

ಬಿ. ನೀಲಕಂಠಯ್ಯ (ಹಸ್ತಪ್ರತಿ)

೧೮೯. ಕಾಂಗ್ರೆಸ್ ಲಾವಣಿ

ಧಾಟಿ–(ಖಡೀಚಾಲ್)

ಶೃಂಗಾರದ ನವರಂಗದ ಮೈಸೂರಾ ಕಾಂಗ್ರೆಸ್ ಘನವೆನ್ನುವನೊಬ್ಬ ।
ಕಾಂಗ್ರೆಸ್‌ನ ಸಂಗ್ರಾಮದ ಕೇಳಿದ ಅಂಗ್ಲರಿಗಾಯಿತು ಅಬ್ಬಬ್ಬಾ ॥ಪ॥

ಅಬ್ಬಬ್ಬಾ ಈ ದಬ್ಬಾಳಿಕೆ ಅವನೊಬ್ಬನ ದೆಶೆಯಿಂದೆನ್ನುತೊಬ್ಬಾ ।
ದಬ್ಬಾಳಿಕೆಯನು ಎಬ್ಬಿಸಿದವನಿಜ ತಬ್ಬಲಿಎಂದನು ಮತ್ತೊಬ್ಬ ॥

ಒಬ್ಬನಿಂದಲ್ಲವು ಶಿಬ್ಬಂದಿಬಳಾ ಕಬ್ಬಕ್ಕಿ ಎಂತಿಹರೆನುತೊಬ್ಬ ।
ಕೊಬ್ಬಿದ ದರ್ಪದ ಮೊಬ್ಬಿನೊಳಿರುವರ ಹಬ್ಬವಿದೆಂದನು ಹುಡುಗೊಬ್ಬ ॥
ದಬ್ಬಾಳಿಕೆಸುಳಿ ಅಬ್ಬರ ಅಣಗಲಿ ದೆಬ್ಬೆಯುಬಿತ್ತೆನಗೆನು ತೊಬ್ಬ ।
ದಬ್ಬಾಳಿಕೆ ಮಹ ಬೊಬ್ಬೆಯಕೆಳುತ ತಬ್ಬಬ್ಬಿಯಾದನು ಕಡೆಗೊಬ್ಬ ॥

ದೊಡ್ಡುಡಾನ್

ಎಂತಕಾರ್ಯವಿದು ಎಂತಚೋದ್ಯವಿದು ಹೊಂತಕಾರಿಗಳೆಯೋಚಿವುದು ।
ಅಂತುಯಿಂತು ಈ ಶಾಂತಿಯುಸಮರವು ಕ್ರಾಂತಿಯರೂಪಾವರಿಸಿಹುದು ।
ಅಂತರದೊಳಗಿನ ಅನಂತ ಆಸೆಗೆ ಅನರ್ಥ ಫಲ ಕೈಸೇರುವುದು ।
ಇಂತಭ್ರಾಂತಿಯನು ಕಂತೆಯುಕಟ್ಟಿಸಿ ಸಂತೆಗೆ ಸಾಗಿಸೆ ಸುಖವಹುದು ॥

ಉಡಾನ್

ನ್ಯಾಯವೆಂಬುದೆ ಸಾಧನ ಕಾಂಗ್ರೆಸ್ಸಿನ ಘನ ಧ್ಯೇಯು ।
ಧ್ಯೇಯವಿದೊಂದೆ ಶಾಂತಿಯೆ ಸಮರದೊಳಿಡುವುದೆಕಾಯು ।
ಕಾಯುವಿಟ್ಟಂತೆ ಪ್ರಮುಖರ ಸುಕೀರ್ತಿಪುಂಜದಛಾಯು ।
ಛಾಯು ಪ್ರಜ್ವಲ ಭಾರತ ದೇಶದ ಉನ್ನತಿನ್ಯಾಯಾ ॥

ಗುಲ್ಲುಡನ್

ಪ್ರಜೆಗಳಾಜನ್ಮಹಕ್ಕನಿಟ್ಟು । ನಿಜದೇಸ್ವಾತಂತ್ರ್ಯಗಳನುಕೊಟ್ಟು । ರಾಜ್ಯವನ್ನಾ
ಳಲು ಬಿಕ್ಕಟ್ಟೊ ॥ ಪೂಜ್ಯಬಾಂಧವರ ಬಂಧನದಿಂದಲಿ ಬಿಡಲತಿ ಫಲವುಂಟೂ ॥

ಶ್ಲೋಕ

ಎಂದು ಬೇಡುತ ಬಂದಜನರಿಗೆ ಬಂಧವೆನಿಜವೆಂದರು ।
ಮುಂದಿನೊಳು ನೂರ್ನಲ್ವತ್ನಾಲ್ಕನೆ ಸೆಕ್ಷ ಜಾರಿಗೆ ತಂದರು ॥

ಚಾಲು

ಇಂಗ್ಲೇಷ್ ದೇಶದ ಇಂಗ್ಲೀಷರಿಂದಲಿ ಕಂಗೆಟ್ಟವುನಾವೆನುತೊಬ್ಬ ।
ಕಾಂಗ್ರೆಸ್ ಸೆಕ್ಷನ್ ಸಂಗ್ರಾಮವಕೇಳಿದ ಅಂಗ್ಲರಿಗಾಯಿತು ಅಬ್ಬಬ್ಬಾ ॥೧॥
ಅಟ್ಟಹಾಸದಿಟ ನಲವತ್ತೈದನೆ ಸೆಕ್ಷನ್ ಜಾರಿಯ ಒಳಗುಟ್ಟು ।
ಬೆಟ್ಟದಿಸೆಕ್ಷನ್ ಶ್ರವವನುಮಾಡಿ ಹೊತ್ತನು ಸಂಭಾಜಿ ಶ್ರಮಪಟ್ಟು ॥
ಬಿಟ್ಟರೆ ಸಿಕ್ಕದ ಕೊಟ್ರೆ ನಂಜಪ್ಪನ ತಟ್ಟನೆ ಹಿಡಿದರು ಕಣ್ಣಿಟ್ಟು ।
ಕೊಟ್ಟರು ಸಜವನು ಹೊಸಕೋಟೆಯ ಮಹದೇವಶಾಸ್ತ್ರಿಗಳನಿಡಿದಿಟ್ಟು ॥
ಕಷ್ಟ ಕಷ್ಟಮಹ ಕಷ್ಟವಿದೆನ್ನುವ ಎಷ್ಟೋ ಜನರಿಗೆ ಛಡಿಪಟ್ಟು ।
ಇಷ್ಟರೊಳಗೆ ನೂರೇಳನೆ ಸೆಕ್ಷನ್ ಬಿಟ್ಟರು ತಟ್ಟನೆ ಗುರಿಯಿಟ್ಟು ॥

ದೊಡ್ಡುಡನ್

ಒಡನೆಯೆ ಶಿದ್ದಲಿಂಗಯ್ಯನವರನು ಹಿಡಿದರು ಖಾನೂನ್ ಅನುಸರಿಸಿ ।
ಬಿಡದೆಲೆ ಸೀತಾರಾಮ ಶಾಸ್ತ್ರಿಗಳನಿಡಿದರು ಕೇಸಿನ ಕ್ರಮನಡೆಸಿ ।
ತಡಕುತಗಡೂರ್ ರಾಮಚಂದ್ರನು ಹಿಡಿದುತ್ರಿಜನರಂಜೊತೆಗೊಳಿಸಿ ।
ಹಿಡಿಯಿರಿ ಸೆರೆಮನೆದಾರಿ ನೀವೆನ್ನುತ ನುಡಿದರು ದರ್ಪದಿದಡಬಿಡಿಸಿ ॥

ಉಡಾನ್

ಮುಂದಾದಪರಿಯನೀವ್ ಚಂದದಿ ಕೇಳಿರಿಯಲ್ಲಾ ।
ಬಂಧನದಿ ಬಿದ್ದ ನಮ್ ದೇಶಮುಖಂಡರಿಗೆಲ್ಲ ।

ಒಂದಾದರು ಸರಿ ಅನುಕೂಲವಿಲ್ಲದೋಯ್ತಲ್ಲ ।
ಎಂದೆಂದಿಗುಸರಕಾರ್ ನಡತೆ ಇದುವೆ ಸರಿಯಿಲ್ಲಾ ॥

ಗುಲ್ಲುಡಸ್

ಕೂಡಿತೂ ಸರ್ಕಾರದಕೂಟ । ಮಾಡಿದರು ಯೋಚನೆಯುಃ ದೀಟ । ಹೂಡಿ ನೂರಿಪ್ಪತ್ನಾಲ್ಕರೇಟ ॥ ಕೂಡಲೆಕಾಂಗ್ರೆಸ್ ವೀರಮುಖಂಡರ ಹಿಡಿದರು ಅಕಟಕಟಾ ॥

ಶ್ಲೋಕ

ಕೆ.ಟಿ. ಭಾಷ್ಯಂ, ಎಸ್.ಸಿ. ತಿಮ್ಮಾರೆಡ್ಡಿಯುಪರುಗಳ್ ನಿಶ್ಚಯ ।
ಕೋರ್ಟಿನೊಳು ಕೇಸ್‌ವಾದವಿಲ್ಲದೆಪೊಂದಿದರುಸಹ ಶಿಕ್ಷೆಯು ॥

ಚಾಲ್

ಢಂಗಾದರುನಮ್ ಬೆಂಗ್ಳೂರ್ ಪ್ರಜೆಗಳು ಹಿಂಗ್ಯಾಕ್ ಮಾಡಿದರೆನುತೊಬ್ಬ ॥
ಕಾಂಗ್ರೆಸ್ ಘನ ಸಂಗ್ರಾಮನಕೇಳಿದ ಆಂಗ್ಲರಿಗಾಯಿತು ಅಬ್ಬಬ್ಬಾ ॥೨॥

ಶ್ರೀ ನರಿಮನ್ನರು ಭಾಷಣಮಾಡಿದ ಬಸಪ್ಪಪಾರ್ಕಿನ ವಿವರಗಳು ।
ಏನೇಳಲಿನಾ ಮುವತ್ತೊಂಭತ್ತನೆ ಸೆಕ್ಷನ್ ಜಾರಿಯು ಗಲಭೆಗಳು ॥
ಶ್ರೀನರಿಮನ್ನರ ಭಾಷಣಕೇಳಲು ಅನೇಕ ಪ್ರಜೆಗಳು ಕೂಡಿರಲು ।
ಆ ನರಿಮನ್ನರ ಅಕ್ಷಣ ಹಿಡಿಯಲು ಅನಂತ ಜನಗಳ ಜೋಡುಗಳು ॥
ಖಾನೂನೆಂಬುವ ಜ್ಞಾನವೆಯಿಲ್ಲದೆ ಮೇಲಿಂದಬಿದ್ದವು ಬೂಡ್ಸುಗಳು ।
ದೀನ ಗುಂಡಪ್ಪನ ತ್ರಾಣವೆಹಾರಿತು ಮಾರನೆದಿನ ಗುಂಡೇಟಿನೊಳು ॥

ದೊಡ್ಡುಡಸ್

ಕೇಳಿರೆಲ್ಲ ಮುವತ್ತೇಳನೆ ಇಸವಿಯ ಅಕ್ಟೋಬರಿಪ್ಪತ್ತೈದರೊಳು ।
ಪೇಳಲಿಕಸದಳ ಗಲಭೆಯುಹಾವಳಿ ಕೆಂಪೇಗೌಡರ ಚೌಕದೊಳು ।

ತಳಮಳಗೊಳ್ಳುವ ಗೋಲಿ ಏಟುಗಳು ನೋಡಿಮರುಗೆವಿದ್ಯಾರ್ಥಿಗಳು ।
ತಾಳದೆ ಪೆಟ್ಟನು ಬಿದ್ದರೆಪ್ಪೊಜನ ವಿಕ್ಟೋರಿಯ ಆಸ್ಪತ್ರೆಯೊಳು॥

ಉಡನ್

ಕ್ಷಣಮಾತ್ರದೊಳೀರಣ ಕ್ಷೇತ್ರಗಲಭೆ ಬಯಲಾಗಿ ।
ಘನಪೊಂದಿದ ಲಾಯರ್ ಜನಗಳೆಲ್ಲ ಗುಂಪಾಗಿ ।
ದಣಯುತಲಿ ದ್ವಿಪಕ್ಷಕು ಬೇಡಿದರತಿ ಬೆಂಡಾಗಿ ।
ಅಣಗಿಸಿದರು ಘನತೆಯುಗಲಭೆಯನ್ನು ಸಮವಾಗಿ॥

ಗುಲ್ಲುಡನ್

ಮೇಲಿನಧಿಕಾರಿಗಳನು ಕಂಡು । ತಾಳಿನೀವ್ ಸಹನೆಯನುರಿಗೊಂಡು । ಪೇಳಲತಿ
ನೀತಿಯ ಶ್ರಮಗೊಂಡೂ । ಕಾಲಿಗೆ ಬುದ್ಧಿಯನೇಳಿದರಾಕ್ಷಣಕಳವಳ
ಕೈಗೊಂಡೂ ॥

ಶ್ಲೋಕ

ಇಲ್ಲಪೋಲೀಸ್‌ಡ್ಯೂಟಿ ಇಲ್ಲವು ಇಲ್ಲಸರ್ಕಾರಾದಿನ ।
ಎಲ್ಲಿನೋಡಿದರಲ್ಲಿ ಗುಲ್ಲು ಎಲ್ಲನಿಂತಿತುಮರುದಿನಾ ।

ಚಾಲು

ಕಾಂಗ್ರೆಸ್ ಒಂದನೆ ಬೆಂಗ್ಳೂರ್ ಮೂರನೆ ಜಂಗಾಯಿತು ಇದು ಎನುತೊಬ್ಬ ।
ಕಾಂಗ್ರೆಸ್‌ಘನಸಂಗ್ರಾಮವ ಕೇಳಿದ ಆಂಗ್ಲರಿಗಾಯಿತು ಅಬ್ಬಬ್ಬಾ ॥೩॥
ಈ ಕರ್ಣಾಟಕ ಸ್ವರಾಜ್ಯ ಪಕ್ಷದ ಕಾಂಗ್ರೆಸ್ಸಿನ ಘನ ಶೋಭಾನ ।
ಶ್ರೀ ಕೆ. ಚಂಗಲರಾಯರೆಡ್ಡಿಗಳ ಸರ್ವಾಧಿಕಾರದ ಸುಧಾರಣ ।
ಲೋಕದಿ ವಿ. ಎಸ್. ನಾರಾಯ್ಣರಾಯರ ಕಾರ್ಯದರ್ಶಿತನಮಹಾಘನ ।
ಶ್ರೀಕರ ಹೆಚ್. ಸಿ, ದಾಸಪ್ಪನವರಾಶೀರ್ಘಾಲೋಚನ ಸುಭಾಷಣ ।

ಸ್ತ್ರೀಕುಲಭೂಷಿಣಿ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರಾ ಧೀರತನ ।
ವ್ಯಾಕುಲವಳಿಯುವ ಬಂಧುಭಗಿನಿಯರ ಸ್ವದೇಶಭಕ್ತಿಯು ಅಭಿಮಾನ ॥

ದೊಡ್ಡುಡನ್

ದೇಶದ ಸೇವೆಯು ಮಾಡುವುದೆ ಈ ದೇಶಬಾಂಧವರ ಉದ್ದೇಶ ।
ದೇಶದ ಬಡತನ ನಾಶನಮಾಡಲು ಹೇಸದೆ ದುಡಿಯುವದತಿಹರುಷ ॥
ದೇಶಪ್ರೀತಿಗಿದು ವಿಶೇಷಭೂಷಣ ಚಂದೂರರ ಮಹ ಉಪವಾಸ ।
ದೇಶದದುಸ್ಥಿತಿ ದೂಡುವುದೇ ನಮ್ ಕಾಂಗ್ರೆಸ್ಸಿನ ಕಡೆ ಸಂದೇಶ ॥

ಉಡನ್

ರೈತಾಪಿಯು ಕಷ್ಟವೆ ತಮ್ಮಯಕಷವೆಂದಿವರು ।
ರೈತಾಪಿಸುಧಾರಣೆ ಸಾಧಿಸುತಲಿರುಶಿಪರು ॥
ರೈತಾಪಿಜನಾಂಗರ ಕುಂದುಕೊರತೆ ಅರಿತಿವರು ।
ರೈತಾಪಿಯಕಷ್ಟಗಳೆಲ್ಲ ಬಿಡದೆ ಹರಿಸುವರು ॥

ಗುಲ್ಲುಡನ್

ಇದುವೆನಿಜ ಬೂಟಕವೇನಲ್ಲ । ಬುಧರೆ ಇದು ಯೋಚಿಸಿನೀವೆಲ್ಲ । ಚದುರ ಸರಿಯಿಲ್ಲವರರಿಗೆ ॥ ಮದರಾಸಿನಘನ ಪ್ರಧಾನಮಾತ್ಯರ ಉದಾರ ವ್ಯಾಕಿಲ್ಲಾ ॥

ಶ್ಲೋಕ

ವಾಕ್, ಸಭಾಮೇಣ್‌ಪತ್ರಿಕಾಸ್ವಾತಂತ್ರ್ಯಮೈಸೂರ್‌ಜನರಿಗೆ ॥
ಬೇಕಾಗಿರುವುದು ಜವಾಬ್ದಾರ್ ಸರಕಾರಘನ ಮೈಸೂರಿಗೆ ॥

ಚಾಲು

ಮಂಗಳ ಸುಬ್ರಹ್ಮಣ್ಯಂ ಜೋಯಿಸ್‌ರಂಗರಾಮರಿಗೆ ಎನುತೊಬ್ಬ ।
ಕಾಂಗ್ರೆಸ್‌ಘನ ಸಂಗ್ರಾಮವಕೇಳಿದ ಆಂಗ್ಲರಿಗಾಯಿತು ಅಬ್ಬಬ್ಬಾ ॥೪॥

ಘಾತುಕಜನರಿಗೆ ನೀತಿಯಬೋಧಿಸಿ ಖ್ಯಾತಿಯುಪೊಂದಿದೆ ನಮ್‌ಕಾಂಗ್ರೆಸ್ ।
ಜೋತೆರ ದೀನಾನಾಥರ ಪರಿಪರಿ ಯಾತನೆ ಕಳೆಯುವುದೀ ಕಾಂಗ್ರೆಸ್ ।
ಪ್ರೀತಿಲಿಸರ್ವಜನಾಂಗರ ಹಿತವನೆ ಸಾಧಿಸುತ್ತಿರುವುದು ನಮ್ ಕಾಂಗ್ರೆಸ್ ।
ಕಾತುರದಿಂದಲಿ ನೂತನ ವ್ಯಥೆಗಳ ಪಾತಕ ಹರಿಸುವುದೀ ಕಾಂಗ್ರೆಸ್
ಜಾತಿಯ ಭೇಧದ ರೀತಿಯವರ್ಜಿಸಿ ಕೀರ್ತಿಯುಪೊಂದಿದೆ ನಮ್‌ಕಾಂಗ್ರೆಸ್ ।
ರೈತರು ಏಳಿಗೆ ಕರ್ತವ್ಯಲಾಲಿಸಿ ಪ್ರಾರ್ಥಿಸುತ್ತಿರುವುದು ನಮ್ ಕಾಂಗ್ರೆಸಾ

ಲೇಖಕರು : ಬಿ. ನೀಲಕಂಠಯ್ಯ

(ಮುದ್ರಿತ ಪುಸ್ತಿಕೆಯಿಂದ)

೧೧೦. ಬೇ ಜವಾಬ್ದಾರಿ ವರ್ತನೆಯುಳ್ಳ ಅಧಿಕಾರಿ ಬಂಧುಗಳಲ್ಲಿ ವಿನಂತಿ

(ಧಾಟಿ 'ಮಾತಾ ದೇಶಹಿತ' ಎಂಬಂತೆ)

ತರವೇ ತರವೆಯಿದು ಎಮ್ಮ ಬಂಧುಗಳಾ। ಅರಿತು ಎಮ್ಮಯ ಕಷ್ಟ ಸುಖಗಳ
ತರವೇ ನಿಮಗಿದು ಮಾನ್ಯರೆ! ಧರೆಯೊಳ್ ರೈತರು ಕುರಿಗಳೆನ್ನುತ ಕರುಣ
ವಿಲ್ಲದೆ ನೋಡ್ವಿರಿ ॥ಪ॥

ದುಡಿವ ರೈತನ ಒಡಲ ಉರಿಸಲು ತೊಡಗಬೇಡಿರಿ ಮಿತ್ರರೆ।
ಕಡುದುರಾತ್ಮರ ಛಲವ ಪಿಡಿದು ದುಡುಕಬೇಡಿರಿ ಧನ್ಯರೆ ॥೧॥

ಗೆಳೆಯ ರೈತನ ಕೂಳತಿಂದು ತುಳಿಯುತಿರುವುದು ನ್ಯಾಯವೆ।
ಅಳಿಯಬೇಡಿರಿ ಬಳಲುತಿರುವನು ಇಳೆಯ ದೇವಿಯ ಪೂಜಿಸಿ ॥೨॥

ಲಂಚ ಲಂಚವು ಲಂಚವೆನ್ನುತ ಲಂಚದಿಂದಲೆ ಸರ್ವವು।
ಲಂಚಕೊಟ್ಟರೆ ಮಂಚಕ್ಕೇರುವ ಕೊಂಚ ಬುದ್ಧಿಯ ತ್ಯಜಿಸಿರಿ ॥೩॥

ಯೋಗಿರೈತಗೆ ಬಾಗಿ ತಲೆಯನುರಾಗದಿಂದಲಿ ಮೆರೆವಿರಿ।
ಆಗ ನಿಮ್ಮಯ ತ್ಯಾಗ ಗುಣಕೆ ನಾಗಭೂಷಣ ಮೆಚ್ಚಲಿ ॥೪॥

ನೀರಮೇಲಣ ಗುಳ್ಳೆಯಂದದಿ ತೋರಿ ಹೋಗುವ ದೇಹವ।
ಮೀರಿನಂಬಿ ಮೋಹ ತೊರೆಯದೆ ಪಡೆವಿರಲ್ಲೊ ದುಃಖವ ॥೫॥

ಪರರ ಬಳಿಯಿಹ ದಾಸ್ಯತನವನು ತೊರೆದು ಸುಖದಿಂ ಬಾಳಿರಿ।
ಹಿರಿಯರಡಿಯಲಿ ಮೊರೆಯನಿಡುವೆವಂದೆ ಮಾತರಂ ಪಾಡಿರಿ ॥೬॥

ಭಾರತಾಂಬೆಯು ಬಳಲುತಿರುವಳು ಬಂಧನಾದಿಂ ಬಿಡಿಸಿರಿ ।
ಭಾರಿ ಭಾರಿಗು ಸಾರಿ ಪೇಳುವೆ ರಾಷ್ಟ್ರಸೇವೆಯ ಮಾಡಿರಿ ॥೭॥

ದೇಶಸೇವೆಯೆ ಈಶಸೇವೆಯು ರಾಷ್ಟ್ರಸೇವೆಯ ಸಲ್ಲಿಸಿ ।
ಈಶನಾ ಅಡಿಗಡಿಗೆ ಮನದೊಳು ಪೋಷಿಸೆನ್ನುತ ಧ್ಯಾನಿಸಿ ॥೮॥

ಲೇಖಕರು : ಜಿ. ನಾರಾಯಣ

(ರಾಷ್ಟ್ರೀಯ ಪದ್ಯಗಳು 1946)

೧೧೧ ಇಂದಿನ ಪರಿಸ್ಥಿತಿ

ವಂದೇಮಾತರಂ ಯೆಂದು ಸಾರುತಿಹ ಗಾಂಧಿಯುಮಾರ್ಗವೆ ಸ್ಥಿರವಾಯ್ತು
ನಮ್ಮ । ಇಂದಿನಪರಿಸ್ಥಿತಿ ಬದಲಾಯ್ತು ।
ಇನ್ನು । ಮುಂದಿನೇಳಿಗೆಯು ಯೆದುರಾಯ್ತು ।
ಇಂದಿನದು ಸ್ಥಿತಿ ತೊಂದರೆ ಹರಿಸುವ ತಂದೆಯುಯಿರುವುದು ಒಳಿತಾಯ್ತು ||ಪ||

ವಾಕ್ ಸ್ವಾತಂತ್ರ್ಯವು ಬೇಕ್ ನಮಗೆನ್ನುವ ಠೀಕ್ ಒಂದೆಮ್ಮೊಳಗುದಿಸಾಯ್ತು
ನಮ್ಮ । ಸ್ಟ್ರೈಕ್‌ಸ್ಥಿತಿ ಸಚಿವರರರಿತಾಯ್ತು।
ಅವ । ರಾಹಕ್ ಸೆರೆಗೆಮ್ಮನು ಯೆಂದಾಯ್ತು ।
ಲೋಕ್ ನಡೆನುಡಿಗಳಿ ಗೇಕ್ ಪ್ರತಿಬಂಧಕ ಸಾಕ್ ದಬ್ಬಾಳಿಕೆ ಹೆಚ್ಚಾಯ್ತು ।|೧॥

ಶುಭವನೆಕೋರುವ ಸಭಾ ಸ್ವಾತಂತ್ರ್ಯಕೆ ನಿಬಿಡಶಾಸನವು ಬಂದೋಯ್ತು ।।
ಬಹು | ಸಭೆಗಳ ಕಾಂಗ್ರೆಸ್‌ನಡೆಸಾಯ್ತು
ಇನ್ನು | ಅಭಯುಪ್ರಧಾನವು ಬರದೋಯ್ತು ।।
ಸಭೆಗಳು ಸೇರಲು ಧಬಧಬ ಬಡಿಯುವ ಪ್ರಭುಗಳ ಪೆಟ್ಟು ಗಳತಿಯಾಯ್ತು ।।೨||

ಧಾತ್ರಿಯೊಳಗ್ಗಳ ಮೈತ್ರಿಯುನುಳಿಸುವ ಪತ್ರಿ ಕೆಸ್ವಾತಂತ್ರ್ಯವು ಹೋಯ್ತು ।।
ರೂಲ್ಸ್ | ಕತ್ರಿ ಹತ್ರಿಯನು ಹೊಡೆದಾಯ್ತು |
ನಮ್ಮ । ಮಿತ್ರರಕಾರ್ಯಕೆಕುಂದಾಯ್ತು ।
ಕ್ಷಾತ್ರಧರ್ಮಕ್ಕಿದು ಮಾತ್ರ ಅಸಂಭವ ಯಾತ್ರ ಪ್ರಸಂಗವೋ
ಮರತೋಯ್ತು || ೩ ||

ಜವಾಬ್ದಾರಿ ಬೇಜವಾಬ್ದಾರಿಯೆಂಬುವಮಿಗೆ ಕೂಗೊಂದು ಹೆಚ್ಚಾಯ್ತು ।
ಜನ । ಜವಾಬ್ದಾರಿ ಬೇಕೆಂದಾಯ್ತು ।
ಬೇ | ಜವಾಬ್ದಾರಿ ಬೇಡೆಂದಾಯ್ತು।
ಅವನಿಪನಂಘ್ರಿಗೆ ನಾವೆರಡನು ಬಗೆಯುವರಲೆನ್ನುತ ಸಾರಾಯ್ತು ||೪||

ಅಂಬಲಿಗಿಲ್ಲದೆ ಹಂಬಲಿಸುವ ಜನ ತುಂಬಿದಸೆಂಬಿಲ್ಲಿ ನೆರೆದಾಯ್ತು ।
ಸೌ । ರಂಬದ ಸಚಿವರರೆಮರಾಯ್ತು ।
ನಿಮ್ಮ ಸಂಬಳವಿಳಿಸಿರಿ ಯೆಂದಾಯ್ತು ।
ನಂಬಿದ ಪ್ರಜೆಗಳ ಕಂಬಳಿಮಾರಿಸಿ ಸಂಬಳ ತಿನ್ನುವದತಿಯಾಯ್ತು ||೫||

ನೈಜಸುನೀತಿಯ ಮಾಜದೆಪೇಳಲು ರಾಜದ್ರೋಹವೆಂಬಬಿರುದಾಯ್ತು ।
ಮತ್ತು । ಸಜವನು ಅನುಭವಿಸುವದಾಯ್ತು ।
ಈ । ಗಜಬಿಜಿನೀತಿಯೆ ಬಲವಾಯ್ತು ।
ಪ್ರಜಾಭಿಪ್ರಾಯವ ನಿಜದೊಳಗರಿಯದೆ ಪ್ರಜೆಗಳಕೊಂದರೆಯೇನಾಯ್ತು ||೬||

ಮಂಡಲಕಿಲ್ಲದ ಗುಂಡಿನ ಪ್ರಕರಣ ಗಂಡಾಂತರವದು ನಮಗಾಯ್ತು ।
ಭೂ । ಮಂಡಲ ಜನಮನಗಂಡಾಯ್ತು ।
ಬಹು । ಖಂಡನೆನಿರ್ಣಯಗಳು ಆಯ್ತು ।
ದಂಡಧರನ ಬದಲುಂಡುತೇಗ್ವ ಯಮದಂಡಿದೆಂಬ ಘನ ಬಿರುದಾಯ್ತು ||೭||

ವರ್ತಕರ ಹೆಸರಲಿ ಆರ್ತರುಕೆಲರು ನಿರರ್ಥಕಕಾರ್ಯವ ನಡೆಸಾಯ್ತು
ಜನ್ಮ ಸಾರ್ಥಕವಾಯ್ತೆಂದರಿತಾಯ್ತು
ಜನ ರಾರ್ತದಧ್ವನಿಯನು ಮರೆತಾಯ್ತು
ಕರ್ತರಾಗಿ ಜನ ಕರ್ತವ್ಯಮಾಡದೆ ಕೀರ್ತಿಯಪಡೆದರೆ ಯೇನಾಯ್ತು ||೮||

ಮಾದರಿಮಾತಿನ ಮುದಸರಕಾರಕೆ ಹೋದೆಡೆಕುಂದುಗಳತಿಯಾಯ್ತು
ಗದ ಗದಿಸುವ ಟೀಕೆಗಳು ಹೆಚ್ಚಾಯ್ತು
ಈ ವಿಧಾನ ಮಾದರಿನಡೆಯಾಯ್ತು
ನಿಧಾನ ದ್ರೋಹಿಗಳೊದರುವ ಸಕ್ಕರೆಬಾದಾಮಿ ಮಾತುಗಳತಿಯಾಯ್ತು ||೯||

ಇಂದಿನ ದುಸ್ಥಿತಿಯೆಂದರೆ ಹೇಳಲು ಗೊಂದಲಜಿಹ್ವೆಗೆ ಬರದೋಯ್ತು
ದುಂದು ಸಂಧಿಸಮಾಗಮವತಿಯಾಯ್ತು
ನಮ್ಮ ತೊಂದರೆ ಕೇಳುವರಿಲ್ಲದಾಯ್ತು
ಬಂದಿದೆ ಕಷ್ಟವು ಬಂದರೆಬರಲೀ ಯಿಂದು ನಿಮ್ಮ ದಯವಿದ್ದರಾಯ್ತು ||೧೦||

ಜಯಜಯವಾಗಲಿ ಜಯಶುಭವಾಗಲಿ ಜಯಕೃಷ್ಣೇಂದ್ರರ ಸಂಪದಕೆ
ಜಯ । ಜಯಸಂಪತ್ತಿರಲೀಜಗಕೆ ।
ಜಯ । ಜಯವುಂಟಾಗಲಿ ನಮ್ಪಥಕೆ ।
ಜಯ ಜಯವಾಗಲಿ ಜಯಶುಭವಾಗಲಿ ಜಯಕಾಂಗ್ರೆಸ್ಸಿನ ವರವರಧ್ವಜಕೆ ॥೧೨॥

ಲೇಖಕರು : **ಎನ್. ವಿಷಕಂಠ ರಾವ್**

(ಕಾಂಗ್ರೆಸ್ ವಿಶೇಷ ಲಾವಣಿ; ಮೈಸೂರು, 1939)

೧೧೨. ಶಿವಪುರ ಮತ್ತು ವಿದುರಾಶ್ವತ್ಥದ ಲಾವಣಿ

ಧಾಟಿ– (ಖಿಡೀಜಾಲ್)

ಸತ್ಯಸಮರದಾ ಹತ್ಯಪೇಳುವೆಸು ಚಿತ್ತದಿಲಾಲಿಸಿರಿದುಸತ್ಯ ।
ಮರ್ತ್ಯದೊಳಾರ‍್ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥ ಪ ॥

ವಿಶಾಲಮೈಸೂರ್ ಪ್ರಸಾರಕಾಂಗ್ರೆಸ್ ಪ್ರಸಂಗಲಾವಣಿ ಕವಿಸರಸ । ಪಾಷಾಣ ಹೃದಯದ ದೇಶೀಯಜನರಿಗೆ ಲೇಸಾದರಿಲ್ಲವು ಕರುಣರಸ ॥ ಆಶೀವಪುರದೊಳು । ದೇಶಿಯಪ್ರಜೆಗಳು ಬೋಶಿಸ್ತು ತೋರಿದರೊಮ್ಮನಸ । ದೇಶೀಯ ಪ್ರಮುಖರು ನಿಶಾನಿಯೇರಿಸಿ ಬಾರ್‍ಸಿದರ್ಭೇರಿಯ ಜಯಘೋಷ ॥ ಕುಶಾಗ್ರನೀತಿಯ ಮೈಸೂರ್ ಸರ್ಕಾರವು ಸೆಕ್ಷನ್‌ಚಲಾಯ್ಸಲು ಬಲುಬಿರುಸ । ದೇಶೀ ಮುಖಂಡರು ಸೆಕ್ಷನ್ ಉಲಂಘಿಸಿ ಸೈಸೈಎಂದೆನಿಸಿದರಾದಿವಸ ॥

ದೊಡ್ಡು ಡಸ್

ಶಿವಪುರದೊಳು ನಮ್ ಸುವಿಮಲಚರಿತರು ತ್ರಿವರ್ಣರಾಟೆಯ ಧ್ವಜವೆತ್ತೆ ।
ಭವಣೆಯಪಡುತಲಿ ಅವಿರಳಪೋಲಿಸ್ ಕೋವಿಲಾಠಿಗಳ ನಿಡಿಯುತ್ತೆ ।
ತನಕದಿಬಂದಿತು ಕವಿಯುತಕಾಂಗ್ರೆಸ್ ಸುವಿಮಲಚರಿತರ ಪಿಡಿಯುತ್ತೆ ।
ಶಿವಶಿವ ಈ ಪರಿ ಅವಿಚಾರದಿ ಉದ್ಭವಿಸಿತು ಕ್ರಾಂತಿಯುಸುತ್ತಮುತ್ತೆ ॥

ಶ್ಲೋಕ

ಮುದದಿಕಾಂಗ್ರೆಸ್ ಧ್ವಜವನೆತ್ತಿದ ಮಹಿಮರಿಗೆ ಜೈಲಾಯಿತು ।
ಇದುವೆವಿದುರಾಶ್ವತ್ಥ ಗಲಭೆಗೆ ಮುಖ್ಯಕಾರಣವಾಯಿತು ॥

ಚಾಲು

ಸತ್ಯಮಹಾತ್ಮರ ಸತ್ವವನರಿಯದೆ ಹತ್ಯವಗೈಯ್ಯುವದ್ಯಾವ್‌ಕೃತ್ಯ ।
ಮರ್ತ್ಯದೊಳಾರ‍್ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥ ೧ ॥

ಘನಸರ್ದ್ದಾರರ ರಣದಬ್ಬಾಳಿಕೆ ದಿನಚರಿ ಅಬ್ಬರವೇರಿಹುದು । ಜನಗಣವೆಂಬುವ ಗಣನೆಯ ಇಲ್ಲದೆ ಜನರನೆ ಜರ್ಜರಗೊಳಿಸಿಹುದು ॥ ಜನರಿಂದಲ್ಲವೆ ಘನಸರ್ಕಾರಕೆ ಧನದಾನ್ಯಂಗಳುಒದಗುವುದು । ಜನಗಳಕೊಂದರೆ ಘನರಾಜ್ಯಾಂಗದ ಘನತೆಯು ಮತ್ತೆಲ್ಲುಳಿಯುವುದು ॥ ಜನತೆಯುಕಾಡುವ ಘನತೆಯು ರಾಜ್ಯಕೆ ಹೀನಭೂತವೊಂದಿಡಿದಿಹುದು । ಹೀನಭೂತಕಾ ದೇವನಹಳ್ಳಿಯು ಜ್ಞಾನಪೂಜೆ ಬೇಕಿರಬಹುದು ॥

ದೊಡ್ಡ್ದಿನ್

ಒಂಭೈನೂರ್ಮುವ್ವತ್ತೆಂಟನೆ ಏಪ್ರಿಲ್ ತಿಂಗಳ ಇಪ್ಪತ್ತೈದರೊಳು ।
ತುಂಬಿರೆ ಬಹುಪ್ರಜೆಸಂಭ್ರಮದಿಂದಲಿ ವಿದುರಾಶ್ವತ್ಥದ ಜಾತ್ರೆಯೊಳು ।
ಸ್ತಂಭದಿ ಮೆರೆಯುವ ಧ್ವಜ ಸತ್ಯಾಗ್ರಹ ಕಾಂಗ್ರೆಸ್‌ಕೂಟದಿ ಕೂಡಿರಲು ।
ಢಂಬಕರಾ ಪ್ರಜದ್ರೋಹಿಗಳಲವರು ಢಂಢಂ ಹೊಡದರು ಗುಂಡುಗಳು ॥

ಶ್ಲೋಕ

ಸುತ್ತ ಮುತ್ತಲು ಲಾರಿ ಹೊಡೆತಗಳ್ ಮತ್ತೆ ಗುಂಡಿನ ಏಟುಗಳ್ ।
ಸತ್ತ ಹೆಣಗಳ ಲೆಖ್ಖವಿಲ್ಲವು ಹೊತ್ತರೆಷ್ಟೋ ಗುಪ್ತದೋಳ ॥

ಚಾಲು

ಸತ್ಯವು ಕೇಳಿರಿ ಮಿತ್ಯವಿದಲ್ಲವು ಹತ್ಯ ಹತ್ಯಸ್ತ್ರೀ ಶಿಶುಹತ್ಯ ।
ಮರ್ತ್ಯದೊಳಾರ್ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥೨॥

ಗೌರಮ್ಮ ಎಂಬುವ ಗರ್ಭಿಣಿಹೆಣ್ಣನು ಗರ್ವದಿಕೊಂದು ಕೈಯ್ಯಾರ । ಸಾರ್ವ ಜನರಮೇಲ್ ಗುಂಡಿನ ಸುರಿಮಳೆ ಸುರಿಸಿದರಘೋರ ವೈಯ್ಯಾರ ॥ ವಿರಾಟ ಪುತ್ರರ ಭರಾಟ ಭಾರತ ಕರಾಟಕ್ಕಿಂತಲ ವಿಸ್ತಾರ । ನಿರಾಳಗೈದರು ನಿರಾಯು ಧಾಮೇಣ್ ನಿರಾಪರಾಧಿಗಳ್ ಸಂಹಾರ ॥ ಏರಿಸಿಗುಂಡನು ಹಾರಿಸಿದಾಕ್ಷಣ ನೂರಾರು ಕಪಿಗಳು ಭಯಂಕರ । ಕಿರ್ರೆನೆ ಕಿರುಚುತ ಕೊರ್ರೆಂದು ಕೊರಗುತ ಗಿರ್ರೆಂದು ಸತ್ತವು ತರಾತರ ॥

ದೊಡ್ಡುಡನ್

ಇಡೀ ಪ್ರಪಂಚವೆ ನಡುಗಿತು ಈ ಘನ ಗಡಿಬಿಡಿ ಕೇಳಿದ ಕ್ಷಣದೊಳಗೆ ।
ಗೌತಖಲೀಲರು ಹೂಡಿದ ತಂತ್ರದಿ ಕೇಡೆಲೆ ಒದಗಿತು ಕಡೆಯೊಳಗೆ ।
ಬಡತನದೊಳಗೆಲಿ ಬೆಳೆದಾವೃಷಭನ ಬಡಾಯಿ ಬಹಳಾರಣದೊಳಗೆ ॥
ಹಿಡಿದು ರಿವಲ್ವಾರ್ ಹೊಡೆದರು ಪ್ರಜೆಗಳ ವಡೇ ಚಕ್ಲಿಗಳ ಸವಿದಾಹಾಗೆ ।

ಲೇಖಕರು : **ಬಿ. ನೀಲಕಂಠಯ್ಯ**

(' ಕಾಂಗ್ರೆಸ್ ಲಾವಣಿ ')

೧೧೩. ಲಾವಣಿ

('ಕ್ವಿಟ ಇಂಡಿಯಾ' ಚಳವಳಿ ಬಗ್ಗೆ)

ಸರ್ಕಾರದ ದಬ್ಬಾಳಿಕೆಯುಬ್ಬರ ಜಗತ್ತಿನಲ್ಲಿಯೇ ಅತಿಯಾಯ್ತು ।
ಹೆಣ್ಮಕ್ಕಳ ಮೇಲೆ ಗೋಲಿ ಬಾರಾಯ್ತು ।
ಶಾಲೆ ಕಾಲೇಜುಗಳೆಲ್ಲ ಬಂದಾಯ್ತು । ಜೈಲುಗಳೆಲ್ಲ ತುಂಬೊಯ್ತು ।
ನವತರುಣ ದಸ್ತಗಿರಿ ಬಹಳಾಯ್ತು ॥ ೧ ॥

ಎ. ಐ. ಸಿ. ಸಿ. ಸಭೆಗೆ ಹೋದ ಮುಖಂಡರು
ಬರುವುದರೊಳು ದಸ್ತಗಿರಿಯಾಯ್ತು ॥
ಮೈಸೂರ್ ಪ್ರಜೆಗಳಿಗಚ್ಚರಿಯಾಯ್ತು ।
ನಮ್ಮ ಪ್ರಭುಗಳ ವರ್ಣನೆ ಬರಿದಾಯ್ತು ।
ಆಂಗ್ಲೇಯರಂದದಿ ಆಳರಸರ ಸರ್ಕಾರದ ನೀತಿಯು ತಿಳಿದುಹೊಯ್ತು ॥ ೨ ॥

ಗೋಳಿಬಾರಿನ ಪ್ರಕರಣ ಮೊದಲು ಬೆಂಗಳೂರು
ನಗರದೋಳ್ ಶುರುವಾಯ್ತು ।
ಸ್ಕೂಲ್ ಮಕ್ಕಳ ಮೇಲ್ ಲಾಟಿ ಛಾರ್ಜಾಯ್ತು ।
ಭದ್ರಾವತಿಯಲಿ ಮುಷ್ಕರವಾಯ್ತು ।
ವಿವೇಕವಿಲ್ಲದ ಸರ್ಕಾರದ ನೀತಿಯು ಎಲ್ಲರಿಗೂ ಅರಿವಾಯ್ತು ॥ ೩ ॥

ತಂತಿ ಟೆಲಿಗ್ರಾಫ್ ಕಟ್ಟಾಯ್ತು ।
ರೈಲ್ವೆ ಹಳಿಗಳು ಎಲ್ಲಾ ಸಡಿಲಾಯ್ತು ।
ಬ್ರಿಡ್ಜ್ ಮೋರಿಗಳೆಲ್ಲಾ ಕಿತ್ತೋಯ್ತು ।
ಈಸೂರ್ ಪ್ರಕರಣ ಜರಗೋಯ್ತು ।
ಸರ್ಕಾರದ ನೀತಿಯು ಬಯಲಾಯ್ತು ॥ ೪ ॥

ಹಳ್ಳಿಪಳ್ಳಿಯಲಿ ಬಗನೆಯ ಮರಗಳು ಲೆಕ್ಕವಿಲ್ಲದೇ ಉರುಳಿಹೋಯ್ತು ।
ಅಂಟುಜಾಡ್ಯ ತಗಲಿ ಮರ ಸುಟ್ಟುಹೊಯ್ತು ।

ಶೇಂದಿ ಅಂಗಡಿಗಳು ಬಂದಾಯ್ತು ।
ಕುಂಟಸೆಪದಿ ನಮ್ಮೆಂಟರಸೇಕರ ಲಾಕಪಿನೊಳಗೆ ಇಟ್ಟಾಯ್ತು ॥ ೫ ॥

ವೈಸರಾಯ್ ಕೌನ್ಸಿಲ್ ಮೆಂಬರಗಳೆಂದು ಕತ್ತೆಗಳೆ ದಸ್ತಗಿರಿಯಾಯ್ತು ।
ಮೋಣಿ ಕತ್ತೆ ಮೇಲೆ ಕಟ್ಟೆಯು ಬಿತ್ತು ।
ಕತ್ತೆಗಳೆಲ್ಲಾ ಕೋರ್ಟಿಗೆ ಹೋಯ್ತು ।
ಕತ್ತೆಗಳಿಗೆ ಬಿಡುಗಡೆಯಾಯ್ತು ।
ಈ ಕುತ್ತಿನಿಂದ ಅವು ಪಾರಾಯ್ತು ॥ ೬ ॥

ಪುಂಡು ಕಂದಾಯವು ಹೇರಾಯ್ತು ।
ಜನದಂಗೆ ಏಳಲು ಮೊದಲಾಯ್ತು ।
ರೂಲ್ಸ್ ಟ್ಯಾಕ್ಸುಗಳೆಲ್ಲಾ ಹೆಚ್ಚಾಯ್ತು ।
ಧನದವಲತ್ತಿನ ದುರಹಂಕಾರವು ನಾಶದ ದಾರಿಯು ಹಿಡಿದಾಯ್ತು ॥ ೭ ॥

ಕಾಂಗ್ರೆಸ್ ಸಂಸ್ಥೆಯು ಅಕ್ರಮಕೂಟಗಳೆಂದು ಮೊದಲು ಇವರ ಸಾರಿಯಾಯ್ತು।
ದೇಶ ಪ್ರೇಮಿಗಳ್ಬಂದನ ಶುರುವಾಯ್ತು ।
ದೇಶದಲ್ಲೆಲ್ಲಿಯೂ ಚಳವಳಿಯಾಯ್ತು ।
ಕಾಂಗ್ರೆಸ್ ಮುಖಂಡರು ಹೊರಗೆ ಇಲ್ಲದೆ
ಕ್ರಾಂತಿಯು ಜಗದೊಳು ಬಲವಾಯ್ತು ॥ ೮ ॥

ದಬ್ಬಾಳಿಕೆ ದರ್ಪವು ಆಯ್ತು ।
ಇನ್ನು ಮುಂದಿನ ದಾರಿಯು ಸಿಗದಾಯ್ತು ।
ಸರ್ಕಾರವು ಎಲ್ಲಾ ಬೆಪ್ಪಾಯ್ತು ।
ಕಂದಾಯದ ಹಪ್ತೆಯು ಬಂತು ।
ಇನ್ನು ಬಾಯಿ ಬಾಯಿ ಬಡಕೊಂಡೂ ಕುಂತರಾಯ್ತು ॥ ೯ ॥

ಧೈರ್ಯವು ತಾಳಿರಿ ಬಂಧು ಭಗಿನಿಯರೆ ಸ್ವರಾಜ್ಯವು ಹತ್ತಿರ ಬಂತು ।
ಎದೆಗುಂದದೆ ಹೇಳುವೆ ಈ ಮಾತು ।
ಗಾಂಧಿಯವರ ಕೃಪೆ ನಮಗುಂಟು ।
ಮಲ್ನಾಡಿನ ತಮ್ಮ ಸೇವೆಯು ಗಯ್ಯುವ ಸೇವಕನಾಡುವ ಈ ಮಾತು ॥ ೧೦ ॥

ಲೇಖಕರು ; ತೀರ್ಥಹಳ್ಳಿಯ **ಬಿ. ವಿ. ಕಾಮತ್**

(ಕಿರು ಪುಸ್ತಿಕೆ, 1942)

೧೧೪. ದೇಶೀ ದುಮುದುಮ್ಮಿ

ಪ್ರಾರ್ಥನೆ

ಪರದಾಸ್ಯ ಪಾಶದ ಬೇಡಿಯ ಕಡೆಯುವ ಬಗೆಯನು ಕೇಳಿರಿ ದೇಶದ ಜನರೇ
ಮಾತರಂ ವಂದೇ ಮಾತರಂ ॥ ಪಲ್ಲವಿ ॥

ಅರವಿಂದನಾಭನ ಸುರವಂದ್ಯ ಪಾದವ ಶಿರಬೊಳು ವಿನಯದಿ
ಧರಿಸುವೆನು । ನಾನು । ಸರಸತಿ ಪಾದಕೆ ನಮಿಸುವೆನು । ಬಲು ।
ಕರುಣದಿಮತಿಯನು ಬೇಡುವೆನು ॥ ಪರದಾಸ್ಯ ಬೇಡಿಯ ಕಡಿಯಲು
ಬೇಡುವೆ ಸಾಸಿರ ಹೆಸರಿನ ಜಗದೀಶನನ್ನು ॥ ೧ ॥

ತನುಮನ ಧನಗಳ ಸರಿಯನು ಸುರಿಸುವ ಭರತಮಾತೆಯ ಚರಣ
ಕಮಲವನು । ವರ । ತನಿಭಕ್ತಿ ರಸದಿಂದಲೆರೆಯುವೆನು । ಬಲು ।
ಕನಿಕರದಿಂದಲಿ ಬೇಡುವೆನು ॥ ಮನದ ಬಯಕೆಯನ್ನು ಕೊನೆಗಾಣಿಸುವ
ನನ್ನ ಮನೊದೊಳು ಹುರುಪನ್ನು ನಮಿಸಿ ಕೇಳುವೆನು ॥ ೨ ॥

ದೇಶಕೋಶವಬಿಟ್ಟು ದೇಶ ಸೇವೆಯಮಾಡಿ ತೊಳಲುವ ಮೋಹನ ದಾಸರನು ।
ಆಹಾ । ಗಾಸಿಯಾಗಿರುವಂಥ ದಾಸರನು । ಬಲು
ಸೋಸುವ ಲಜಪತರಾಯರನು ॥ ದೇಶದೇವಿಯ ವರಚರಣಕಮಲವನ್ನು
ಶಿರದೊಳು ಧರಿಸಿದ ತಿಲಕರ ನಮಿಸಿ ॥ ೩ ॥

ಪರದೇಶಿಗಳ ಆಗಮನ ಹಾಗೂ ಪರಿಣಾಮ

ತಕ್ಕಡಿ ಹಿಡಕೊಂಡು ಬೇಸಾಯ ಮಾಡುತ ಬಿಳುಪಾದ ಪರಕೀಯ
ಜನರೆಲ್ಲರೂ । ಬಂದು । ಕಕ್ಕಸಬಡುತಲಿ ಕೂಡಿದರು । ನಮ್ಮ ।
ಉಕ್ಕುವ ನಾಡನು ಕೆಡಿಸಿದರು ॥ ಯುಕ್ತಿಯ ಬಲದಿಂದ ನೆಕ್ಕುತ
ರಾಜ್ಯವ ರಾಜಕಾರಣವನ್ನು ಭರದಿ ಹೂಡಿದರು ॥ ೪ ॥

ಬಗೆಬಗೆ ಬೆಳೆಯಿಂದ ಸೊಗಸಾಗಿ ಮೆರೆಯುವ ಮಿಗಿಲಾದ ಬಂಗಾಲ
ರಾಷ್ಟ್ರವನು । ಬಲು । ಸೊಗಸಾದ ಕರ್ನಾಟದೇಶವನು । ವೀರ ।
ಮೊಗದ ಪಂಜಾಬದ ಭೂಮಿಯನು ॥ ಮಿಗಿಲಾದ ಮಹಾರಾಷ್ಟ್ರ
ದೇಶವ ಮೋಸದಿ ಭರದಿಂದ ಸಮನಾಗಿ ವಶಮಾಡಿಕೊಂಡರು ॥ ೫ ॥

ವೇದಾಂತದಾಕಾಶದೊಳಗೆ ಮಿನುಗುವಂಥ ಸಾಧು ಸಂತರ ಭಾಷೆ
ಯೊಳಗೆ ಮೂಡಿ । ತನ್ನ । ಕದಲದ ಹೊಳಪನು ಜಗಕೆ ನೀಡಿ । ನಮ್ಮ
ಕದಲಾದ ಹಾದಿಯ ತಿರುಗಿ ತೀಡಿ ॥ ಕಾದುತ ಜಗವನು ಮರೆಯಾದ
ನಯ್ಯಯ್ಯೋ ಹಾದಿಯ ತೋರುವ ಸ್ವಾತಂತ್ರ್ಯ ರವಿಯು ॥ ೬ ॥

ವೀರರ ಕರದೊಳು ಮಿನುಗುವ ಕತ್ತಿಗಳೆಲ್ಲಿ ಲ್ಲಿ ನೋಡಲು ಹೋದ
ವಯ್ಯ । ಚಾಕು । ಚೂರಿ ಕತ್ತರಿ ಕತ್ತಿ ಬಂದವಯ್ಯ । ಮಾರು ।
ಮಾರುದ್ದ ಚತ್ತರಗಿ ರತ್ನವಯ್ಯ ॥ ಕಾರುತ್ತವಿಷವನು ಪರದಾಸ್ಯ
ರಾಹುವು ನುಂಗಿದ ನಯ್ಯೊಯ್ಯೋ ಸ್ವಾತಂತ್ರ್ಯ ಶಶಿಯಾ ॥ ೭ ॥

ಶೂರರ ಶೌರ್ಯವ ಕಡಿದರು ನೋಡಿರಿ ವೀರರ ವೀರ್ಯವ ಕುಕ್ಕಿದರು । ಸರ
ಕಾರದ ದಾಸರು ಸೊಕ್ಕಿದರು । ದರ । ಕಾರವಿದೆ
ರಾಜ್ಯವಾಳಿದರು ॥ ಧೀರ ತನವ ತುಂಡು ತುಂಡಾಗಿ ಕಡಿದರು
ಗಂಡಸು ತನವನು ಮೊಂಡಮಾಡಿದರು ॥ ೮ ॥

ಪರದೇಶದರಸನ ದಾಸರು ಸರಸಾಗಿ ರಕ್ಷಣೆ ಮಾಡುತ್ತಲಿರುತಿಹರು
। ನಮ್ಮ । ಸುರವಂದ್ಯ ದೇಶದಲಿರುತಿಹರು । ತಮ್ಮ । ವರರಾಜ್ಯ
ರಥವನು ಹೂಡಿದರು ॥ ಕರ ರೂಪದಿಂದಮ್ಮ ರೈತರ ಹಣವನು ಹಗಲಿರುಳಿಲ್ಲದೆ
ನುಂಗುತ್ತಲಿಹರು ॥ ೯ ॥

ಜಾಡಬುಡ್ಡವು ತನ್ನ ಗಾಢ ಜಾಳಿಗೆಯಿಂದ ನೋಡದೆ ನೊಣವನು
ಬಗಿಯುವಂತೆ । ಕಾಡು । ಮೋಡವು ಮುಗಿಲನು ಮುತ್ತುವಂತೆ । ನಿಷ

ನಾಡಿಯು ಹಾಡಸು ಕಡಿಯುವಂತೆ ॥ ಕಾಡಶೈಲಿನ ಗಾಢ ಜಾಳಿಗೆ ಯೊಳಗೆಮ್ಮ
ನಾಡನು ಬಿಗಿಯಾಗಿ ನಡಿಸಿದರಯ್ಯೋ ॥೧೦॥

ಪರಕೀಯ ರಾಷ್ಟ್ರದ ರೇಲಿನವರು ಬಂದು ಗಾಡಿಕಾರರ ದುಡ್ಡು ನುಂಗಿದರು । ನಮ್ಮ । ಸರಸಾದ ಭೂಮಿಯು ಕೆಡಿಸಿದರು । ನಮಗೆ । ಪರಮ ಕಲ್ಯಾಣವ ಮಾಡಿದರು ॥ ಕರರೂಪದಿಂದೆಮ್ಮ ಧನವನ್ನು ಹೀರುತ್ತ ತಿರುಕರಾಗಿರಿಯೆಂದು ಹರಿಸಿದರೆಮ್ಮನು ॥೧೧॥

ವ್ಯಾಪಾರ ಮುಳುಗಿತು ಬೇಸಾಯ ಬಾಡಿತು ಬರಗಾಲ ಬಿದ್ದಿತು ನಾಡಿನೊಳು । ಬೇನೆ । ತಾಪದಿ ಬಳಲುತ ಸೀಮೆಯೊಳು । ಜನಕೆ । ಶಾಪವ ನೀಯುತ ನಾಡಿನೊಳು ॥ ಶೀಪುತ್ತ ಹುಲ್ಲನ್ನು ಕುಡಿಯುತ್ತ ನೀರನ್ನು ಸತ್ತರಲ್ಲವೆ ನೂರು ಸಾವಿರ ಜನರು ॥೧೨॥

ತಾರು ಪೋಸ್ಟುಗಳೆಲ್ಲ ಬಂದವು ನಮ್ಮನ್ನು ಪರದಾಸ್ಯದೊಳು ನೂಕಿ ತುಳಿಯಲಿಕ್ಕೆ । ನಮ್ಮ । ಬೇರುಗಳೆಲ್ಲನು ಕಿತ್ತಲಿಕ್ಕೆ । ತಮ್ಮ । ನೂರಾರು ಕಪಟವ ಬಿತ್ತಲಿಕ್ಕೆ ॥ ಸೂರಿಮಾಡಿದ ನಮ್ಮ ಸ್ವಾತಂತ್ರ್ಯ ವೃಕ್ಷದ ನೂರಾರು ಹರಿಗಳ ತರಿದು ಬಿಡಲಿಕ್ಕೆ ॥೧೩॥

ಅಂಗ್ಲರ ರಾಜ್ಯಭಾರ

ದಾಸ್ಯ ಪಾಶವ ಬಂದು ಕೊರಳನು ಬಿಗಿದಿತು ನಾಡೆಲ್ಲ ದುಃಖದಿ ಮರುಗುವಂತೆ । ಅಮಾ । ವಾಸ್ಯೆಯು ಜಗವನು ಮುತ್ತುವಂತೆ । ಯಮನಾಸ್ಯವು ಜನರನ್ನು ನಗುವಂತೆ ॥ ಹಾಸ್ಯದ ಮಾತಲ್ಲ ರೈತರ ದಾಸ್ಯವು ಯಮರಾಜನಾಸ್ಯದ ತಲೆಯ ಮೇಲಾಯ್ತು ॥೧೪॥

ಕೂಳಿಲ್ಲದಂತಹ ರೈತರ ಗೋಳನ್ನು ಬಣ್ಣಿಸಬೇಕ್ಯಾರು ಜಗದೊಳಗೇ । ವಿಷ । ಚೇಳಿನ ತಾಪವ ಮನದೊಳಗೇ । ನೀವು । ತಿಳಿದುಕೊಳ್ಳಿರಿ ಮಾತು ಒಡಲೊಳಗೇ ॥ ಜೋಳವಿಲ್ಲದ ಬಡ ರೈತರ ಧನವನು ಹೀರುವ ಸರಕಾರ ಸರಕಾರವಲ್ಲಾ ॥೧೫॥

ಗವ್ಹರ್ನರ ಜನರಲ್ಲನೆಂಬುವ ದಾಸಗೆ ಎರಡೂವರಿಲಕ್ಷ ರೂಪಾಯ್ಗಳೂ । ಎಂಟು । ಗವ್ಹರ್ನರ ಜನರೀಗೆ ಲಕ್ಷಗಳೂ । ಅವರ । ನೂರಾರು । ದಾಸರ ಕೋಟಿಗಳೂ ॥ ಎಷ್ಟೆಂದು ಹೇಳಲಿ ಕಷ್ಟದಿ ಹೇಳುವೆ ಕರಡಿಯ ನುಣುಪಾದ ಕೂದಲ ದಷ್ಟು ॥೧೬॥

ಎರಡೆರಡು ಸಾವಿರ ಕಲೆಕ್ಟರ ಜನರಿಗೆ ತಿಂಗಳದೊಳಗಿಷ್ಟು ಬರಿದಾಯಿತು । ನಮ್ಮ । ಕರಿಗಾಲದೊಳು ಪ್ಲೇಗು ತಲೆಯೆತ್ತಿತು । ನಾಡ । ಗಾರರು ತೊಳಲುವ ಕಾಲ ಬಂತು ॥ ಪರದೇಶದಿಂ ಬಂದ ಪರಕೀಯ ಜನರಿಗೆ ಸೂರಿಯಾಯಿತು ನಮ್ಮ ದ್ರವ್ಯದ ಸುಗ್ಗಿ ॥೧೭॥

ಭಾರತ ದೇಶವ ಪರತಂತ್ರ್ಯ ಕೆಸರೊಳು ಹಾಕಿ ತುಳಿಯುವಂಥ ಬಿಳಿಯರಿಗೆ । ನಮ್ಮ । ನೂರಾರು ಸೋಲ್ಜರ ಗೆಳೆಯರಿಗೆ । ಮತ್ತೆ । ಕರಿಯಾಳುಗಳ ಕೋಟಿ ಜನಗಳಿಗೆ ॥ ಕರುಣದ ಸರಕಾರ ಒಡಲೊಡೆಯುವ ಹಾಗೆ ಸುರಿದಿತು ರೈತರ ರಕ್ತದ ಧನವಾ ॥೧೮॥

ಕಷ್ಟವ ಮಾಡುತ ಹೊಟ್ಟೆಯ ಹೊರೆಯುವ ಆಂಗ್ಲ ದೇಶದ ಕೀಳು । ಜನ ಗಳನು ನೀತಿ ಭ್ರಷ್ಟರಾಗಿರುವಂಥ ಹೊಲೆಯರನು ಅತೀ । ದುಷ್ಟತನದ ಹಾಳು ಮನುಜರನು ಕಷ್ಟದಿ ಬಾಳುವ ಧರ್ಮವ ದೇಶದಿ ತಡೆಯಿಲ್ಲದಲೆ ತಂದು ತುಂಬುತ್ತಲಿಹರೈ ॥೧೯॥

ಬಡವರ ಕಡೆಗೊಮ್ಮೆ ನೋಡಿರಿಯೆಂದರೆ ಕಾಲೊಳು ಬೇಡಿಯ ಜಡಿಯುವರು ಕಪ್ಪು । ಕಡಲಿನ ನೀರನು ಕುಡಿಸುವರು । ತಮ್ಮ । ಬಡಿವಾರ ನಾಡೊಳು ನಡಿ ಸುವರು ॥ ಪೊಡವಿಯೊಳಗೆ ಯಶ ಬಡೆದಂಥೆ; ಬಡವರ ಒಡಲಿಗೆ ಕರುಣದಿ ಬಡೆವರು ಕೇರು ॥೨೦॥

ಪರದೇಶದೊಡವೆಗಳು

ಪರದೇಶದೊಡವೆಯ ಪಿಡುಗು ಬಂದಿತುನಮ್ಮ ಪರಮಪಾವನವಾದ ನಾಡಿ ನೊಳು । ತರ । ತರದ ಬಣ್ಣದ ಮಾಯಾ ಮೊಹಗಳು । ಬಲು । ಸರಸಾದ ಸೊಗಸು ಸಾಮಾನುಗಳು ॥ ಶಿರದಿಂದ ಹಿಡಿಕೊಂಡು ಕಾಲ್ತುದಿ ತನಕೆಲ್ಲ ಬಡಿದಿತು ಪರದೇಶಿ ಮಾಲಿನ ಮೈಲಿ ॥ ೨೧ ॥

ಶೂರರ ಕೈಯಲ್ಲಿ ಹೊಳೆಯುವ ಶಸ್ತ್ರವು ಸ್ವಾತಂತ್ರ್ಯವಿರುವಾಗ ಮಿಸುಗುವದು । ಈಗ । ಕರದೊಳು ಕರವಸ್ತ್ರ ಮಿನುಗುವದು ।ಬಲು । ಭರದಿಂದ ಚತ್ತುರಿಗಿ ಕುಣಿಯುವದು ॥ ಪರದೇಶಿ ಮಾಲಿನ ಗುಡು ಗೊಡೆದಿತು ನಮ್ಮ ಬಡವರ ದೋರೆಯ ನುಣುಪಾದ ಎದೆಯಾ ॥ ೨೨ ॥

ನುಣುಪಾದ ಕಾಜಿನ ಸೊಗಸಾದ ಸಾಮಾನು ಗಿರಣಿಯ ನಯವಾದ ಅರಿವೆಗಳೂ ।ಬಣ । ಬಣಗಿನ ಚೀಟಿನ ಥಾನುಗಳೂ । ಕಣ । ಕಣಿಸುವ ಕಬ್ಬಸಿ ಭಾಂಡಿಗಳೂ ॥ ಪ್ರಣತೀಯ ಸ್ಥಾನಕ್ಕೆ ಬಂತಲ್ಲೊ ಬಿದ್ದರೆ ಪಳ್ಳೆಂದು ಒಡೆಯುವ ಕಾಜಿನ ದೀಪಾ ॥ ೨೩ ॥

ಭತ್ತದ ಗಿರಣಿಯು ಹಳ್ಳಿಯ ಜನಗಳ ಹೆಂಡರ ಹೊಟ್ಟೆಗೆ ಬರೆಗೊಟ್ಟಿತು । ಮತ್ತೆ । ಭತ್ತದ ವ್ಯಾಪಾರ ಕಟ್ಟಾಯಿತು । ಸುತ್ತು ಮುತ್ತಿನ ಜನರಿಗೆ ಕುತ್ತಾಯಿತು ॥ ತುತ್ತಿಲ್ಲದಂತಹ ರೈತನ ಮಡದಿಯ ಒಡೆದು ಹೋಯಿತು ಚೆಲ್ವ ಮಾನದ ಮುತ್ತು ॥ ೨೪ ॥

ಗಿರಣಿಯ ಅರಿವೆಯು ಬಂದಕಾಲಕ್ಕೆ ನಮ್ಮ ಜಾಡರ ಹೊಟ್ಟೆಯು ಹೋಳಾಯಿತು ಬಲು ಸರಸಾದ ನೇಯಿಗೆ ಹಾಳಾಯಿತು । ಅತಿ । ವಿರಸವಾಗಿರುವಂಥ ಬಾಳಾಯಿತು ॥ ಜರದಿಂದ ಕೊರೆಯುತ್ತ ಜಾಡರ ಕರಳನ್ನು ಮೆರೆಯುತ್ತ ಬಂದಿತು ಮ್ಯಾಂಚೆಸ್ಟರರವಿ ॥ ೨೫ ॥

ಮುತ್ತೈದೆ ಕೊರಳೊಳು ಮುತ್ತು ಮಾಣಿಕದಿಂದ ಕೆಚ್ಚಿದ ವಜ್ರದ ಪದಕಗಳೂ ತೋರ ಮುತ್ತಿನ ನೀರುಳ್ಳ ಮಾಲೆಗಳು ಸುತ್ತು ಮುತ್ತಲೆ ಹೊಳೆವ ಕಟ್ಟಾಣಿಗಳೂ ॥ ಹತ್ತು ನಿಮಿಷದೊಳು ಬದಲಾಗಿ ಬಂದವು ಪರದೇಶಿ ಕರಿಮಣಿ ಪೈಗೊಂದು ಸಾಲು ॥ ೨೬ ॥

ಮುಟ್ಟೇರಿ ಮುಟ್ಟೇರಿ ಮೈಲಿಗಿ ಎಂದೆಂದು ಮಡಿಯ ಮಾಡಿರುವಂಥ ಮನೆಯೊಳಗೆ ಬಲು ಶಿಷ್ಟರ ದೇವರ ಮನೆಯೊಳಗೆ । ಬಂತು । ಕೆಟ್ಟ ಸಮಯ ನಮ್ಮ

ನಾಡೊಳಗೆ ॥ ಕೆಟ್ಟ ಬಣ್ಣದ ಬಲು ನಯುವಾದ ಮಡಿಗಳು ಬಂದವು ಅಡಿಗೆಯು ಮನೆಯೊಳಗೆಲ್ಲ ॥ ೨೭ ॥

ಎಷ್ಟೆಂತ ಹೇಳಲಿ ! ದೇವರ ಗುಡಿಯೊಳು ದೇವರು ಪರದೇಶಿಯಾದನಲ್ಲ ! ಅವನ । ಭ್ರಷ್ಟ ಪೂಜಾರಿಯು ದೇಹವೆಲ್ಲ । ಬಲು ದುಷ್ಟಾದ ಬಟ್ಟೆಯು ಬಂದಿತಲ್ಲ ॥ ಕಷ್ಟದಿ ಹೇಳುವೆ ಮನಸಿಟ್ಟು ಕೇಳಿರಿ ಮ್ಯಾಂಚೆಸ್ಟರರವಿಯು ನಮ್ಮ ಹೆಣಕೆಲ್ಲ ॥ ೨೮ ॥

ಇದ್ದರೆ ಪರದೇಸಿ ಸತ್ತರೆ ಪರದೇಶಿ ಸುಟ್ಟರೆ ಪರದೇಶಿಯಾಯಿತಯ್ಯ । ತನ್ನ । ಸದ್ದನು ತೋರದೆ ಬಂದಿತಯ್ಯ ।ಇದು । ಮುದ್ದು ಕೆಂಡದ ಮಳೆ ಸುರಿಯಿತಯ್ಯ ॥ ಇದ್ದರೆ ಹುರಿದಿತು ಸತ್ತರೆ ಸುಟ್ಟೀತು ಮೆದ್ದರೆ ಒಡಲನು ಸುಡುವದಯ್ಯಯ್ಯೋ ॥ ೨೯ ॥

ಬಡಿಗನು ಹರತಾದ ಬಾಚಿಯು ಮೊನೆಯಿಂದ ಎಳೆಯನು ಸಮನಾಗಿ ತರಿಯುವಂತೆ । ಬಡ । ಆಡನ್ನು ಕಟಕನು ಕಡಿಯುವಂತೆ । ಬೇಟೆ । ಬಡಕನು ಮೊಲವನು ಸುಲಿಯುವಂತೆ ॥ ಬಡವರ ಒಡಲೀನ ಕರಳನು ಕೊರೆದೀತು ಪರದೇಶೀ ಸರಕಿನ ಹರಿತಾದ ಚೂರಿ ॥ ೩೦ ॥

ವಕೀಲರು

ಇಂಥ ಸೌಂದರ್ಯದ ರಾಜ್ಯವು! ಇದರೊಳು ನ್ಯಾಯದ ಕಥೆಯನು ಹೇಳುವೆನು । ಕಲಿ । ತಂಥ ವಕೀಲರ ಗುಣಗಳನು ! ಸಾಯು । ವಂಥ ಒಕ್ಕಲಿಗರ ದಾಳಿಯನು ॥ ಪಂಥ ಹಾಕುವೆ ನಾನು ರೈತರ ರಕ್ತವ ಸುರಿಯದ ವಕೀಲರು ಭೂಮಿಯೊಳಿಲ್ಲ ॥ ೩೧ ॥

ವೇದಗಳರ್ಥವ ತಿಳಿಹೇಳಿ ಜಗಕೆಲ್ಲ ದಾರಿಯು ತೋರುವ ಬ್ರಾಹ್ಮಣರು । ಬಲು ಕಾದುತ್ತ ಮಡಿಯುವ ಕ್ಷತ್ರಿಯರು । ಮತ್ತು । ಬೀದಿ ಬೀದಿ ಕೂಳು ಕೊಡುವವರು ॥ ಭೇದವಿಲ್ಲದೆ ವೈಶ್ಯ ಶೂದ್ರರು ಕಳಕೊಂಡು ಸ್ವಾತಂತ್ರ್ಯ ರತ್ನವ ತಿರುಕರಾಗಿಹರು ॥ ೩೨ ॥

ಒಳಗೊಂದು ಶರ್ಟಾತು ಮೇಲೊಂದು ಜಾಕೀಟು ಆಮೇಲೆ ಬಂತೊಂದು ಹೊಳೆವ ಕೋಟು । ತಲೆ । ಮೇಲೆ ಹಾಕುವರಯ್ಯ ಡಬರಿ ಹ್ಯಾಟು । ತಮ್ಮ । ಕಾಲೊಳು ಪರದೇಶಿ ಪ್ಲಲ್ಲಬೂಟು । ಹುಳತಂಥ ತಲೆಯೊಳು ಕೊಳತಂಥ ಕಾಯಿದೆ ! ಎಷ್ಟೆಂದು ಹೇಳಲಿ ವಕಿಲರ ಥಾಟು ॥ ೩೩ ॥

ಸಿಗರೇಟು ಸೇದುತ್ತ ಬಡವರ ಒಡಲಿಗೆ ಬೆಂಕಿಯನಿಡುವಂಥ ಮನುಜರಿಗೆ ! ಬಗೆ ! ಬಗೆಯು ಒಯ್ಯಾರದ ಪಶುಗಳಿಗೆ । ಬಂತು ಸೊಗಸಾದ ಧನವೆಲ್ಲ ಕಟುಕರಿಗೆ ॥ ಬಗೆಬಗೆ ಬಂಣದ ನ್ಯಾಯವು ಬಂದಿತು ಪರಕೀಯ ರಾಜ್ಯದ ಕೋರ್ಟಿನೊಳಗೆಲ್ಲ ॥ ೩೪ ॥

ಬ್ರಿಟಿಶ ನ್ಯಾಯದೇವತೆಯು

ದುಡ್ಡಿದ್ದ ಮನುಜಗೆ ನ್ಯಾಯವು ಶಿಗುವದು । ದುಡ್ಡಿಲ್ಲದವನಿಗೆ ನ್ಯಾಯವಿಲ್ಲ । ಬಲು । ಹೆಡ್ಡ ವಕೀಲರು ಬಂದರಲ್ಲ । ನಮ್ಮ । ದುಡ್ಡನು ಹೀರುತ್ತ ಬೆಳೆವರಲ್ಲ ॥ ದುಡ್ಡಿದ್ದ ದುರುಳನ ಹಾಳು ಬಾಳುವೆಗಿಂತ ದುಡ್ಡಿಲ್ಲದಂತಹ ಬೊಡ್ಡಿಯೆ ಲೇಸು ॥ ೩೫ ॥

ಪಂಚಾಯತೆಂಬುವ ನಾಡಿನ ನ್ಯಾಯವು ಬದಲಾಯಿತ್ತೈ ದುರ್ದೈವದಿಂದ । ಒಂದು । ಪಂಜೆಯುಳಿಯಲಿಲ್ಲ ನ್ಯಾಯದಿಂವ ಬಂತು ಗಂಜಿಯು ಪಕ್ವಾನ್ನ ಜಗಳ-ದಿಂದ ॥ ಪಂಜಾಬದೊಳಗಾದ ಕೊಲೆಯನು ನೆನೆಯಿರಿ । ಜನರನು ಕೊಂದಿತು ನ್ಯಾಯ ಕೈಯಿಂದ ॥ ೩೬॥

ಬಿಸಿಲೊಳು ಕಾದಂಥ ಹುಡಿಯೊಳು ಹೊಟ್ಟೆಯು ಹೊಸೆದಂಥ ಜನರಿಗೆ ಕೊಟ್ಟ ನ್ಯಾಯ । ನಮ್ಮ ! ಸೋಸುವ ಜನರಿಗೆ ಶಿಕ್ಕ ನ್ಯಾಯ ರಕ್ತ ಬಸಿದಂಥ ಪಂಜಾಬೀ ಜನರ ನ್ಯಾಯ ॥ ಹೊಸದು ಹೇಳುವದಿಲ್ಲ ನೆನೆಯಿರಿ ಪಂಜಾಬದೊಳಗಾದ ಕೊಲೆಯಂಥ ಘೋರ ಅನ್ಯಾಯ ॥ ೩೭ ॥

ಬಿಸಿಲನು ನೋಡದೆ ಪರದೆಯೊಳಿರುವಂಥ ಮಾನವಂತಿಯನ್ನು ಹಿಡಿದೆಳೆದು ।

ಅವರ ಬೀಸುವ ಬುರುಖೆಯು ಕದತೆಗೆದು ಅವರ ಮಾಸಿದ ಮೋರೆಯು ತಿವಿತಿವಿದು ಗಾಸಿಯಾಗಿರುವಂಥ ಹೆಣ್ಣುಮಕ್ಕಳ ಮೋರೆ ಮೇಲುಗುಳಿದಂಥಹ ಕ್ರೂರ ಅನ್ಯಾಯ ॥೩೮॥

ಹೆಂಡವ ಕುಡಿದರೆ ಹೆಂಡತಿಯನ್ನು ಮಾರಿ ಭಂಡರಾಗುವಿರೆಂದು ನುಡಿವರಿಗೆ ಕಂಡ ಕಂಡ ಕುಡುಕರ ಪಾದ ಹಿಡಿವರಿಗೆ ಬಲು ಪುಂಡರ ಕಾಲನು ತೊಳೆ-ವರಿಗೆ ಮೊಂಡಾದ ನ್ಯಾಯವು ಕೊಟ್ಟೀತು ಜನರಿಗೆ ಬಂದಿಯ ವಾಸದ ಸವಿ-ಯಾದ ಸುಖವ ॥೩೯॥

ಹಕ್ಕುಗಳೆಲ್ಲವು ಬಿಕ್ಕುತ ಮಡಿದವು ಸೊಕ್ಕಿತು ಅಧಿಕಾರ ಭೂಮಿಯಲಿ ತಕ್ಕ ಕಾಯಿದೆ ಹೋದವು ಧೂಳಿಯಲಿ ನ್ಯಾಯ ಶಿಗುವಂಥ ಭೂಮಿಯು ಸ್ವರ್ಗದಲಿ ಸೊಕ್ಕಿನ ಅಧಿಕಾರ ಸರ್ಪವು ತೊರೆದಿತು ನ್ಯಾಯವೆಂಬುವ ಠಕ್ಕಿನ ಪರಿಯ ॥೪೦॥

ತೂತುಳ್ಳ ಹಡಗವು ಮುಣುಗುತ್ತ ಮುಣುಗುತ್ತ ಕಡಲಿನ ತಳವನು ಕಾಣು ವಂತೆ । ಕಾದಿ । ಸೋತಂಥ ವೀರನು ಮಡಿಯುವಂತೆ ವಿಷ ವಾತದಿ ಪ್ರಾಣ ವು ಬಾಡುವಂತೆ । ಸೋತಂಥ ಭೂಮಿಯು ಪರದಾಸ್ಯಕದ ತಸಿಗಿಚ್ಚಿ ನೊಳು ಬಿದ್ದು ಬೂದಿಯಂತಾಯ್ತು ॥೪೧॥

ಹೆಂಡವು

ಹಳ್ಳಿಪಳ್ಳಿಗಳೊಳಗಿರುವಂಥ ಜನರಿಗೆ ಸುಖವನು ಕೊಡುವಂಥ ಸರಕಾರವು । ಪ್ರತಿ । ಹಳ್ಳಿಗೆ ಶಿಗಲೆಂದು ಶೆರೆಶಿಂದಿಯು । ಇಟ್ಟ । ತಲ್ಲಿಗಲ್ಲಿಗೆ ಹೆಂಡ ದಂಗಡಿಯ ॥ ಸುಳ್ಳು ಹೇಳೇವದಿಲ್ಲ ಕಣ್ಣಿಟ್ಟ ಕಂಡಂಥ ಕಥೆಯನು ಹೇಳುವೆ ಕೇಳಿರಿ ಜನರೇ ॥೪೨॥

ಶೆರೆಯನು ಕುಡಿಯುತ್ತ ಮರೆವರು ದೇಹವ ಸುರಿಯುತ್ತ ಹಣವನು ಸರಕಾರಕ್ಕೆ । ಹಣ । ಸೇರುತ್ತ ಹೋಯಿತು ಪರದೇಶಕ್ಕೆ । ನಮ್ಮ । ಮೊರೆ ಕೇಳುವವರಾರು ಈ ಕಾಲಕ್ಕೆ ॥ ಕ್ರೂರ ರಾಜ್ಯದ ತರವು ಹೆಚ್ಚಿತು ರೈತರ ಕೂಳಿಲ್ಲದಂಥಹ ಒಡಲಿಗೆ ಕೊಳ್ಳಿ ॥೪೩॥

ಶಿಂದಿಯ ಕುಡಿಯುತ್ತ ಬತ್ತಲೆಯಾಗುತ್ತ ಶೆರೆಯನು ಮನವಣಿ ಕುಡಿ ಕುಡಿದು ।
ಬಂದು । ಸಂದಿಯೊಳಗೆ ಸೂಳಿಮನೆಗಿಳಿದು । ಮನವ । ಕೊಂದು ನಾಚಿಕೆ
ಯನ್ನು ಮನೆಗೆ ಬಂದು ॥ ಮಂದ ಬುದ್ಧಿಗಳಯ್ಯೊ ಒಂದೊಂದು ದಿವಸಕ್ಕೆ
ಒಂದೊಂದು ವ್ಯಸನವ ಕಲಿಯುತ್ತಲಿಹರು ॥೪೪॥

ಹೆಂಡವ ಕುಡಿಯುತ ಹಣವನು ಕಳಕೊಂಡು ಹೆಂಡತಿಯನು ಬಲು ಬಡಿಯು
ವರು । ತನಿ । ಗೆಂಡದ ಬಡತನ ಸೇರುವರು ತಮ್ಮ ಗಂಡಸುತನವನು
ಮಾರುವರು ॥ ಹೆಂಡದ ದೆಶೆಯಿಂದ ಹೊಲ ಮನಿ ಕಳಕೊಂಡು ಹೆಂಡತಿ
ಯನು ಮಾರಿ ಷಂಢರಾಗಿಹರು ॥೪೫॥

ಈಚಲ ರಸದಿಂದ ನಾಚಿಕೆ ಮುಣುಗಿತು ಹೊಲ ಮನೆ ಹಣವೆಲ್ಲ ಹಾಳಾಯಿತು
। ಏನು । ಸೋಜಿಗ ಪ್ರಾಣವು ಬಲಗುಂದಿತು । ಬಲು ।
ಮೋಜಿನ ರಾಜ್ಯವು ಉಕ್ಕೇರಿತು ॥ ಈಚಲ ರಸವೆಂಬ ಗಡಚಾದ ಜೀಕಳಿ
ಮನದಣಿ ಹೀರಿತು ಬಡವರ ರಕ್ತವ ॥೪೬॥

ಒಂದಲ್ಲ ಎರಡಲ್ಲ ಎಷ್ಟೆಂತೆ ಹೇಳಲಿ ಹಿಂದೀ ಜನರ ಬಲ ಮಂದಾಯಿತು
। ರೈತ । ಮಂದಿಯ ಬಡತನ ಮುಂದಾಯಿತು । ಎಂದು । ಕುಂದದ
ವೀರ್ಯವು ಬಂದಾಯಿತ ॥ ಕುಂದು ಕೊರತೆಗಳ ಸುರಿಮಳೆ ಸುರಿ
ಯಿತು ಎಷ್ಟೆಂತ ಹೇಳಲಿ ಬಡವರ ಗೋಳು ॥೪೭॥

ಬಿಳಿಯರ ನ್ಯಾಯವು ಬೆಳ್ಳಗೆ ಆಯಿತು ಕರಿಯರ ನ್ಯಾಯವು ಕರಿದಾ
ಯಿತು । ಏನು । ತಿಳಿಯದ ಹೊಳೆಯದ ಬಾಳಾಯಿತು । ಮಳೆ । ಗಾಲದ
ಅಮಾವಾಸ್ಯಯೆಂತಾಯಿತು ॥ ಹೊಳೆವ ಸ್ವಾತಂತ್ರ್ಯವು ಬಯಲಾಗಿ
ಹೋಯಿತು ಪರತಂತ್ರ್ಯ ಕತ್ತಲೆ ಮುಸುಕಿತು ದೇಶ ॥೪೮॥

ಕಾರು ಕತ್ತಲೆಯಿಂದ ಕಪ್ಪಾದ ನಾಡೋಳು ರಾಮಮೋಹನರಾಯರೆಂಬುವರು
। ಬಲು । ಧೀರ ಮಹರ್ಷಿನವರೋಜಿಯುವರು । ನಮ್ಮ । ವೀರ

ಸುರೇಂದ್ರ ಬ್ಯಾನರ್ಜಿಯವರು ॥ ಶೂರತನದ ಸುರಿಮಳೆಯನು ಸು
ರಿಸುತ್ತ ಸ್ವಾತಂತ್ರ್ಯ ದೇವಿಗೆ ದಾರಿ ತೋರಿದರು ॥೪೯॥

ಕಾರು ಕತ್ತಲೆಯನ್ನು ತರಿಯುತ್ತ ಬೆಳಗಿನ ಸಮಯಕ್ಕೆ ಸೂರ್ಯನು
ಜನಿಸುವಂತೆ । ಅತಿ । ಖೂಳರ ಜಾಳಿಗೆ ಕಡಿಯುವಂತೆ । ದುಷ್ಟ । ಹುಳುಗಳ
ಬಾಳನು ತಡೆಯುವಂತೆ ॥ ಆಳುತನದ ಗೋಳು ಹಾಳುಮಾಡುತ
ಬಂದ ಬಾಳನೆಂಬುವ ಶೂರ ಸ್ವಾತಂತ್ರ್ಯ ತಿಲಕ ॥೫೦॥

ಉರಿವಂಥ ಕಿರಣದ ಬೆಳಕನು ನೀಡುತ ಬಾಡಿ ಬಾಗಿರುವಂಥ ನಾಡೊಳಗೆ । ಬಲು ।
ಸುರಿಯುತ್ತ ಜೀವದ ಮನದೊಳಗೆ ॥ ಭರದೀ ಸುರಿದನು
ಧೈರ್ಯವ ಜನರೊಳಗೆ ॥ ಕಾರುತ್ತ ವಿಷವನು ಏರುತ್ತ ಬರುವಂಥ
ಅಧಿಕಾರಿಗಳ ಸೊಕ್ಕು ಮುರಿದ ತಾನೆಲ್ಲ ॥೫೧॥

ಪರದಾಸ್ಯ ಪಾಶವ ಕಡಿಯುತ್ತ ಕಾದಲು ಶೂರತನದ ಶೆಳಕು ಹೊಡೆ
ಯಿತಲ್ಲ । ನಮ್ಮ । ಪರವಶರಾದಂಥ ಮನುಜರೆಲ್ಲ । ನಿದ್ದೆ । ಅರಿದೆದ್ದು
ಯುದ್ಧಕ್ಕೆ ನಿಂತರಲ್ಲ ॥ ಆರು ವರುಷ ಕೈದು ಭೋಗಿಸಿ ಮಡಿದನು ಕಾ
ದುರೆಮ್ಮಯ್ಯ ವೀರ ದಳವಾಯಿಯಲ್ಲಾ ॥೫೨॥

ತಿಲಕರ ಪರಲೋಕದೊಳಗಿನ ಚರಣಕೆ ಶಿರದಿಂದ ಬಾಗುತ ಮೋದದಿಂದ
। ಬಂದ । ಸುಲಲಿತ ಮೋಹನ ಚಂದದಿಂದ । ಮುದ್ದು । ಬೆಳಕನು
ಹರವುತ್ತ ಗಾಂಧಿ ಬಂದ ॥ ಕಳೆಯಿಂದ ತುಂಬಿದ ಬೆಳದಿಂಗಳನು
ಸೂಸಿ ಸುರಿವಂಥ ಹುಣ್ಣಿಮೆ ಚಂದ್ರಾಮ ಬಂದ ॥೫೩॥

ನಿಲ್ಲಿರಿ ನಿಲ್ಲಿರಿ ಬೆದರ ಬೇಡಿರಿ ಎದೆಗುಂದದೆ ನಿಲ್ಲಿರಿ ನಾಡೊಳಗೆ
। ಬಂದು । ಇಲ್ಲಿ ನಿಲ್ಲಿರಿ ನನ್ನ ರಣದೊಳಗೆ । ಇನ್ನು । ಸಲ್ಲದ ಮಾ
ತೊಂದು ಬೇಡೆನಗೆ ॥ ಗೊಲ್ಲರೆ, ಭ್ರಾಂಬರೆ ಬನ್ನಿರಿ, ಎಲ್ಲರು
ಬನ್ನಿರಿ ನನ್ನ ರಣದೊಳಗೆ ॥೫೪॥

ಜಾತಿಯ ಬೇಧವ ಮರೆಯಿರಿ ಬೇಗನೆ ನೀತಿಯೊಂದೇ ಎಲ್ಲ ಮನುಜ ರಿಗೆ । ಸಾಕು । ಜಾತಿಯ ಭೇದವು ಕೀಳರಿಗೆ । ಒಂದೇ । ಮತವೆಲ್ಲ ಬಳಲುವ ಬಡವರಿಗೆ ॥ ಶಾಪವ ನಿತ್ತರೆ ತಾಪದ ರಾಜ್ಯವು ಮಣ್ಣುಗೂ ಡುವದೆಂದು ತಿಳಿದಿರಿ ಮರುಳರೆ ॥೫೫॥

ಸ್ವಾತಂತ್ರ್ಯವೆಂದರೆ ರೈತರ ರಾಜ್ಯವು ರೈತರ ಹಿತವೊಂದೇ ಹಿತವು ನಮಗೆ । ಬಡ । ರೈತರ ಸುಖವೊಂದೆ ಸುಖ ನಮಗೆ । ಬಡ । ರೈತರ ಶ್ರಮವೆಲ್ಲ ಶ್ರಮ ನಮಗೆ ॥ ರೈತರ ರಕ್ತದ ಬಲವೆಲ್ಲ ಕುಂದಿತು ಪರದಾಸ್ಯರೋಗದ ಕಡು ದುಃಖದೊಳಗೆ ॥೫೬॥

ಜಗಕೆಲ್ಲ ಅನ್ನವ ಕೊಡುವಂಥ ರೈತರ ಬಾಗಿರಿ ಚರಣ ಕಮಲಗಳಿಗೆ । ಅವರ । ರೋಗದ ಮೂಲವ ಕಿವಿಯೊಳಗೆ । ಬಲು । ಸೊಗದಿಂದ ಪೇಳುವೆ ನಾನಿಮಗೆ ॥ ಬಗೆ ಬಗೆ ರೋಗದ ಬೀಜವು ಬಂದಿದೆ ಬಗೆ ಬಗೆ ಬಣ್ಣದ ಪರದೇಶರಿವಿ ॥೫೭॥

ಪರದೇಶಿ ಗಿರಣಿಯ ನಯವಾದ ವಸ್ತ್ರವು ರೈತರ ಕೊರಳಿಗೆ ಉರಲಾಯಿತು । ನಮ್ಮ । ಸರಸಾದ ರಾಟಿಯು ಬಯಲಾಯಿತು । ಬಲು । ಬರೆಗು ಮಾಡುವ ಮಗ್ಗ ಮುಗ್ಗಾಯಿತು ॥ ಕೊರಳಿಗೆ ಕುತ್ತಾದ ಕರಳಿನ ಗಾಯವು ಮಾಯಬೇಕೆಂದರೆ ಖಾದಿಯೆ ಹಾದಿ ॥೫೮॥

ತರತರಬಣ್ಣದ ಹೊಳೆವಂಥ ಸರಸಾದ ಮಲಮಲಗಳನ್ನೆಲ್ಲ ತುಳಿ ತುಳಿದು । ಭರ । ಜರತಾರಿ ಉಡುಪನು ಶೆಳಿಶೆಳೆದು । ಎಲ್ಲ । ಪರದೇಶಿ ಸಾಮಾನು ಹಿಡಿದೆಳೆದು ॥ ಭರದಿಂದ ಉರಿವಂಥ ತನಿತನಿ ಬೆಂಕಿಯ ಹೆಚ್ಚುವ ಕಿಚ್ಚಿನ ರೊಚ್ಚಿನಲಿಡಿರಿ ॥೫೯॥

ಖಾದಿಯೇ ತಳಹದಿ ಖಾದಿಯೇ ಗೋಡೆಯು ಖಾದಿಯೆ ಮುಡಿಗೆಯು ಬಡಜನರ । ಖಾದಿ । ಹಾದಿಯು ಅನ್ನಕೆ ಹೆಂಗಸರ । ನಮ್ಮ । ಖಾದಿ

ಯ ಹೊಟ್ಟೆಗೆ ನೂಲುದರ ॥ ಖಾದಿಯೇ ಕಾಮಧೇನು ಪಿಂಜಾರ ಜನರಿಗೆ
ಖಾದಿಯೆ ಸ್ವಾತಂತ್ರ್ಯಗಳಿಸುವ ಹಾದಿ ॥೬೦॥

ರಾಟೆಯು ತಿರುವಿರಿ ಕಾಟವ ಕಳಿಯಲು ರೈತರ ಹಸಿವನು ಹಿಂಗಿಸಲು
। ಕಷ್ಟ । ರಾಟೆಯೆ ಪರದಾಸ್ಯ ಕರಗಿಸಲು । ನಮ್ಮ । ರಾಟೆಯೆ
ಬಡತನವನೋಡಿಸಲು ॥ ರಾಟೆಯು ಕಾಟವ ತಡೆಯಂದೆ ಮಡಿದರು
ಸೊಕ್ಕಿನ ಪರದೇಶಿ ವ್ಯಾಪಾರದವರು ॥೬೧॥

ರಣರಂಗದೊಳು ತಮ್ಮ ನೀರುಳ್ಳ ಖಡ್ಗವ ತಿರುವುತ ನೂರಾರು ಜನ
ಗಳನು । ಖಣ । ಖಣಿಸುವ ಬೆಡಗಿನ ಚಾಲೆಯನು । ಹಿಡಿದು । ಹಣಿಯುತ
ಕಾದುವ ವೈರಿಯನು ॥ ರಣದೊಳು ಮಡಿವಂಥವೀರಗೆ
ಬಹಾದ್ದರನೆಂಬುವ ಹಿರಿದಾದ ಬಿರುದು ॥೬೨॥

ಈ ರಾಜ್ಯದೊಳಗೆಲ್ಲ ವೀರರು ಹೋದರು ಹೊಸ ಹೊಸ ವೀರರು
ಬರುತಿಹರು । ಬಲು । ಕ್ರೂರತನದಿ ಕಾರ್ಯ ನಡಿಸುವರು ॥ ನಮ್ಮ
ವೀರ್ಯದ ರಸವನು ಹೀರುವರು ॥ ಶೂರತನದಿ ನಮ್ಮ ಬಡವರ ಕೊರಳ
ನ್ನು ಕೊರೆಯುವ ಹೊಲೆಯರು ಬಹದ್ದೂರರಾದರು ॥೬೩॥

ಬಹದ್ದೂರ ಮನುಜರೇ ಬಣಗಿನ ಪದಕವ ಬಿಟ್ಟುಬಿಡಿರಿ ನಾನು ಕೈ
ಮುಗಿವೆ । ದೇಶ । ದ್ರೋಹವು ಸಾಕಿನ್ನು ಹೊಲೆ ಬಾಳುವೆ । ನಿಮ್ಮ ।
ಕುಹಕತನದ ನಾನು ಬಿಡಿರೆನ್ನುವೆ ॥ ಮೋಹವ ತೊರೆಯುತ ರೈತರ
ಹಿತವನು ಕಾದುತ್ತ ಪಡೆಯುವ ಯುದ್ಧಕ್ಕೆ ನಿಲ್ಲಿರಿ ॥೬೪॥

ಬಿಸಿ ಬಿಸಿ ರಕ್ತದ ತರುಣರೆ ಏಳಿರಿ ॥ ಬನ್ನಿರಿ ಸ್ವಾತಂತ್ರ್ಯ ರಣದೊಳಗೆ
। ನಾನು । ಲೇಸಾಗಿ ಕಲಿಸುವೆ ಮನೆಯೊಳಗೆ । ನೀವು ॥ ಕೂಸಾದಿ
ರಯ್ಯೊಯ್ಯೊ ನಾಡೊಳಗೆ ॥ ಬೆಸಿಗೆಯ ಮಾತಲ್ಲ ದೇಶದ ಇತಿಹಾಸ
ಸೊಗಸಾಗಿ ಹೊಸೆಯುವ ವಿದ್ಯೆಯ ಕಲಿಸುವೆ ॥೬೫॥

ಹಳ್ಳಿ ಹಳ್ಳಿಗಳೊಳಗಿರುವಂಥ ರೈತರ ಮನೆಗಳ ನಿಮ್ಮ್ರಯ ಶಾಲೆಗಳು । ಎಲ್ಲ ।
ಹಳ್ಳಿಯ ಜನರೆಲ್ಲ ಗ್ರಂಥಗಳು । ಅವರ । ಪೊಳ್ಳಾದ ಹೊಟ್ಟೆಯ ಶಾಸ್ತ್ರಗಳು
ಸುಳ್ಳು ಹೇಳುವುದಿಲ್ಲ, ಮರುಳಾಗಬೇಡಿರಿ, ಶೆರೆಗಾರರಂಗಡಿ ಧರ್ಮದ
ಮಠವು ॥೬೬॥

ಪರದೇಶಿ ಶಾಲೆಗೆ ಶರಣು ಹೊಡೆದು ಬನ್ನಿ ಲೇಸೆಮ್ಮ ಬೆಡಗನು ಮರೆಯುವದು॥
।ನಿಮ್ಮ । ಹೊರತಾಗಿ ದೇಶವು ಕರಗುವದು । ಕೆಟ್ಟ । ನರಕದ ತಳವನು ಕಾಣು
ವದು ॥ ಶೂರತನದಿ ಬಂದು ಧೈರ್ಯದಿ ಕಾದಿರಿ ಸ್ವಾತಂತ್ರ್ಯದ ಯುದ್ಧದ
ರಣರಂಗದೊಳಗೆ ॥೬೭॥

ರೈತರ ರಕ್ತವ ತಡೆಯಿಲ್ಲದೆ ಹೀರಿ ಗುದುಗರಾಗಿರುವಂಥ ಧನವಂತರೆ । ಧರ್ಮ ।
ನೀತಿಯ ತೊರೆವಂಥ ವಕೀಲರೇ । ಬನ್ನಿ । ಜಾತಿ ಭೇದವ ಬಿಟ್ಟು ಕುಲವಂತರ॥
ರೈತರ ಧನವನು ಹಿತಕ್ಕೆಲ್ಲ ರೈತರ ಸುರಿಸಿರಿ ಬಣಗಿನಬಿಂಕವ
ತೊರೆದು ॥೬೮॥

ಕೈ ಕಾಲು ಹಿಡಂಕೊಂಡು ವಿನಯದಿ ನಮಿಸಿರೆ ಹೆಂಡವ ಕುಡಿವಂಥ
ಅನುಜರನು । ನನ್ನ । ವಕೀಲರೆ ಕೇಳಿರಿ ನುಡಿಗಳನು॥ ನಿಮ್ಮ ಸಾಕಿನ್ನು ಬಡಿವಾರ
ಸಾಗಿರಿನ್ನು ॥ ನೇಕಾರ ಸಮಗಾರ ವಾಲಗದವನ್ನು ಉಳಿಸಿರಿ ಹೆಂಡದ ಉರಿವಂಥ
ಕೆಂಡದಿ ॥೬೯॥

ಹೊಲೆಯರ ಚರಣವ ಗಟ್ಟಿ ಹಿಡಿದುಕೊಂಡು ಹೇಳಿರಿ ಕರುಣದಿ ನುಡಿಗಳನು ॥
ಬಲು ॥ ತೊಳಲುವ ಮನುಜರ ಅಡಿಗಳನು । ಕ್ರೂರ ಗಾಲಿಯೊಳಗೆ ಸಿಕ್ಕು
ಮಡಿವರನು ॥ ಕಾಲಿಗೆ ಬಾಗಿರಿ ಕರುಣನ ನೀಡಿರಿ, ಸರಸಾದ ನುಡಿಗಳ ಮಳೆ–
ಯನು ಸುರಿಸಿರಿ ॥೭೦॥

ಹೊಡೆಯದೆ ಬಡೆಯದೆ ಜರಗಿದ ಕಾರ್ಯವು ನೂರಾರು ವರ್ಷಲ್ಲ ಬಾಳುವದು।
ಹೊಸ । ಗಿಡದಂತೆ ಬಲವಾಗಿ ಬೆಳೆಯುವದು । ಸವಿ । ಗಿಡದಂತೆ ಸುಧೆಯನು
ಸುರಿಯುವದು ॥ ಹೊಡೆದರೆ ಹೋಯಿತು ಬಡೆದರೆ ಬಾಡೆತು ಜಡಿದರೆ ಜಾರಿತು
ಸ್ವಾತಂತ್ರ್ಯ ಸಸಿಯು ॥೭೧॥

ಪಂಜಾಬದೊಳಗಾದ ಕೊಲೆಯನು ನೆನೆಸಿರಿ ತುರಕರ ಅಪಮಾನ ಮನದೊಳಗೆ ।ನೆನೆದು। ನಂಜೇರಿ ಹೋಗುವ ಮನದೊಳಗೆ ।ಕಡಿ। ದಂಜಿಕೆಯನು ಒಂದು ಕ್ಷಣದೊಡೆ॥ ಪಂಜಾಬಿ ಜನರಂಥ ಧೈರ್ಯವ ಬಿತ್ತಿರಿ ಹಿಂದು ಮುಸಲ್ಮಾನರೆಲ್ಲ ರೊಂದಾಗಿ ॥೭೨॥

ಕಾವಿಲ್ಲದಂಥಹ ಕೊಡಲಿಯು ಗಿಡವನ್ನು ಕಡಿಯುವುದೇನಯ್ಯ ಜಗದೊಳಗೆ ॥ನಮ್ಮ। ಸಾವೆಲ್ಲ ತಿಳಿಯಿರಿ ನುಡಿಯೊಳಗೆ। ಹುಚ್ಚು ಭಾವ ಬಂದಿತು ನಮ್ಮ ನಾಡೊಳಗೆ॥ ಕಾವಿಲ್ಲದಿದ್ದರೆ ಬೆಣ್ಣೆಯು ಕರಗದು। ಒಂದಾಗಿ ಹೋಗಿರಿ ಈ ಕಾಲದೊಳಗೆ ॥೭೩॥

ನ್ಯಾಯವಿಲ್ಲದ ಕೋರ್ಟು ನ್ಯಾಯವಿಲ್ಲದ ರಾಜ್ಯ, ನ್ಯಾಯವೆಲ್ಲಿಹುದಯ್ಯಾ ಬಡವರಿಗೆ ।ಬಿದ್ದ। ಗಾಯವು ಪಂಜಾಬೀ ಕೊಲೆಯೊಳಗೆ ।ಪೂರ್ಣ। ಮಾಯುವ ಹಾದಿಯು ಮನದೊಳಗೆ॥ ಸಾಯುವ ಸಮಯದ ಮರುವಿನೊಳಗು ಸಹ ಮರೆಯಬೇಡಿರಿ ನನ್ನ ದೇಶದ ಜನರೇ ॥೭೪॥

ಆರ್ಯರೇ ಕೇಳಿರಿ ಕಿವಿಗೊಟ್ಟು ನುಡಿಯನು ಇನ್ನೊಂದು ಸಲ ನಾನು ಹೇಳುವೆನು ।ನಿಮ್ಮ। ಕಾರ್ಯವ ಮಾಡಲು ಬೇಡುವೆನು ।ನಮ್ಮ। ಆರ್ಯರ ಬಿರುದನ್ನು ನುಡಿಯುವೆನು॥ ಕಾರ್ಯವ ತೊರೆಯುತ್ತ ಹಿಂದಾಗಿ ನಡೆಯುವ ಮುಂದ ಬಾಳುವೆಗಿಂತ ಮರಣವೇ ಲೇಸು ॥೭೫॥

ಸ್ಥಿರವಲ್ಲದಂಥಹ ಚಂಚಲ ತನುವನು ನೆರೆನಂಬಿ ಇರುವಂಥ ಬಾಳುವೆನ ।ಇದು। ತರವಲ್ಲ ಆತ್ಮವೆ ಸಾಧನವು ।ದೇಹ। ನೆರೆನಂಬಿ ಇರುವದು ಬಡ ಮನವು॥ ಪಾರತಂತ್ರ, ನರಕದಿಹೊರಳುವ ಭೂಮಿಯು ಬಿಡಿಸಲು ಸವಿಸಿರಿ ಸುಕುಮಾರ ತನುವನು ॥೭೬॥

ಒಣಗಿದ ಕುಸುಮವು ಹಿಂಡಿದ ಹಾಗೆಲ್ಲ ಪರಿಮಳವನು ಬಲು ಹರವುವದು ।ಬಿಗಿದ। ವೀಣೆಯು ಸರಸಾಗಿ ನುಡಿಯುವದು ।ಕೊಂದ। ಪುನುಗೆಲ್ಲ ಗಮಗಮ ನಾರುವದು॥ ಗುಣವುಳ್ಳ ಚಂದನ ಬೆಂದರೆಯುರಿದರೆ ಕೊಡುವುದು ಜಗಕೆಲ್ಲ ಸರಸಾದ ಸುಖವ ॥೭೭॥

ಪಡೆದಂಥ ತಾಯಿಯು ಏಳು ಆತ್ಮದ ಸಾಲ ಮರುಳ ಜನರ ನೀವು ಮರೆ
ತಿಹಿರಿ ।ಯಾವ। ಒಡಲಿನ ಹಾಲನ್ನು ಕುಡಿದಿಹಿರಿ ॥ ಯಾವ ನುಡಿಯಿಂದ
ಹಗಲೆಲ್ಲ ನುಡಿಯುವಿರಿ ॥ ಪೊಡವಿಯೊಳಗೆ ಯಶ ಬಡೆದಂಥ ತನಯರ
ಪಡೆದಂಥ ಜನನಿಯು ಋಣವ ತೀರಿಸಿರಿ ॥೭೮॥

ಮದ್ದಿಲ್ಲ ಗುಂಡಿನ ಮಳೆಯಿಲ್ಲ ತೋಫಿನ ಸದ್ದಿಲ್ಲ ನೋಡಿರಿ ರಣದೊಳಗೆ
।ಆತ್ಮ। ಶುದ್ಧಿಯು ಬಲವಾದ ಬಲ ನಮಗೆ ಕ್ರೂರ ಯುದ್ಧ ಬೇಕಿಲ್ಲ
ಜಗದೊಳಗೆ ಕದ್ದು ಹೇಳುವುದನ್ನು ಮರೆಯಿರಿ ಧೈರ್ಯದಿ ನುಡಿಯಿರಿ
ಸ್ವಾತಂತ್ರ್ಯ ಯುದ್ಧವಿದೆಂದು ॥೭೯॥

ಸ್ವಾತಂತ್ರ್ಯ ವಿಷಯುದಸೌಖ್ಯದಿಂದಲಿ ಸ್ವಾತಂತ್ರ್ಯ ಪರ
ಭಾಷೆ ಬಲಿಯಾಗಲಿ ।ನಮಗೆ। ಸ್ವಾತಂತ್ರ್ಯವಿರಬೇಕು ನಾಡಿನಲಿ ।ಎಲ್ಲ।
ಸ್ವಾತಂತ್ರ್ಯ ಬೇಕಮ್ಮ ಆತ್ಮದಲಿ॥ ಸ್ವಾತಂತ್ರ್ಯದಿಂದಲೆ ಪರಮಾತ್ಮ ಪ್ರಾಪ್ತಿಯು
ಟೊಂಕವ ಕಟ್ಟಿರಿ ಸ್ವಾತಂತ್ರ್ಯರಣದೊಳು ॥೮೦॥

ಹೀಗೆಂದು ಧೈರ್ಯದಿ ನುಡಿಯಲು ಗಾಂಧಿಯು ನೂರಾರು ಸಾವಿರ ಜನ
ರೆಲ್ಲರು ।ಮುಂದೆ। ಸಾಗುತ್ತ ಕಾರ್ಯವ ನಡೆಸಿದರು ।ತಮ್ಮ। ಸೊಗಸಿನ
ತನುಮನ ಸವಿಸಿದರು ॥ ಬಾಗದೆ ಕಡೆಯುತ್ತ ಪರದಾಸ್ಯ ಪಾಶವ ನಡೆದರು
ಗಾಂಧಿಯ ಕಡು ಹಾದಿಯಿಂದ ॥ ೮೧ ॥

ಬಂಗಾಲದೊಳಗಿಂದ ಪಂಜಾಬದೊಳಗಿಂದ ಹೊರಬಿದ್ದು ಬಂದರು ಬಲು
ಜನರು ।ಮತ್ತೆ। ಭಂಗವಿಲ್ಲದೆ ಮುಂದೆ ಸಾಗಿದರು ।ಶಸ್ತ್ರ। ಸಂಗವಿಲ್ಲದೆ
ನಿಂತು ಕಾದಿದರು ॥ ಗಂಗಾಧರನೆಂಬ ಕರ್ನಾಟ ವೀರನು ಕಾದಿದ ಕರ್ನಾಟ
ರಾಜ್ಯದೊಳೆಲ್ಲ ॥೮೨॥

ರೈತರ ಧನವನು ಹೀರುತ್ತ ಬಲವಾಗಿ ಧನವಂಥರಾದಂಥ ಬಲುಜನರು
।ತಂದು। ರೈತರ ಕಾರ್ಯಕ್ಕೆ ಸುರವಿದರು ।ಎಲ್ಲ। ರೈತರ ಹಣವನು
ನೀಡಿದರು॥ ಮೋತಿಲಾಲರು ಚಿತ್ತರಂಜನದಾಸರು ಅಂಜದೆ ಯುದ್ಧಕ್ಕೆ ಬಂದು
ಕೂಡಿದರೆ ॥೮೩॥

ಸ್ವಾತಂತ್ರ್ಯ ರಣದೊಳು ತನುವನು ಸವಿಸಿದ ಲಜಪತರಾಯರು ಮುಂದಾದರು ।ಕೀಚಲು। ಮೋಹನ ಅಜಮಲ್ಲ ಸಿದ್ಧಾದರು ।ಪರ। ತಂತ್ರವ ಕಡಿಯಲು ಹೆಣಗಿದರು ॥ ಸ್ವಾತಂತ್ರ್ಯದೇವಿಯ ಹಿಸಿದಾದ ಹುಲಿಗಳು ಅಲ್ಲಿ ಬಂಧುಗಳೆಲ್ಲ ಬಂದು ಕಾಡಿದರು ॥೮೪॥

ಕರ್ನಾಟಕ ಸೀಮೆಯ ಶೂರವೀರರು ಕೂಡಿ ಗಾಂಧಿಯವರ ಮುಂದೆ ಒಂದಾದರು ।ನಮ್ಮ। ಕರ್ನಾಟ ಸೂರ್ಯ ಗಂಗಾಧರರು। ಜಯ ಕರ್ನಾಟವೆಂದೆಂದು ಕಾದಿದರು। ಕರ್ನಾಟ ನಾಡೆಂಬ ಅಭಿಮನ್ಯು ನಿದ್ದೆಯ ॥ ಅರಿದೆದ್ದು ನಿಂತನು ಸ್ವಾತಂತ್ರ್ಯ ರಣದೊಳು ॥೮೫॥

ಶೆರೆಶೀಂದಿ ಕುಡಿತವು ಬಂದಾಗಿ ಹೋಯಿತು ಶೆರೆಶೀಂದಿಯಂಗಡಿ ಬಂದಾದವು ।ಸರಸ। ಪರದೇಶಿಯಂಗಡಿ ಬರಿದಾದವು ।ನಮ್ಮ। ಕುರುಡರ ಕಣ್ಣೆಲ್ಲ ಬೆರಗಾದವು ॥ ಹಿರಿದಾದ ಪರದೇಶಿ ಅರಿವೆಯ ಕಾಮನಹೋಳಿಯ ಬೆಳಕನು ಹರವಿತ್ತು ಮುಗಿಲೊಳು ॥೮೬॥

ಸೊಗಸಾದ ಚಂದ್ರನ ಬೆಳ್ಳಬೆಳದಿಂಗಳ ತೆರೆಗಳು ಬೆಳಕನು ಚಂದದಿಂದ ।ಬಗೆ। ಬಗೆಯಿಂದ ಹರವುವ ಹಾದಿಯಿಂದ ।ಬಲು। ಸೊಗಸಿನ ಖಾದಿಯು ಅಂದ ದಿಂದ ॥ ನಗೆಮೊಗದರಸನ ಬಲದಿಂದ ಬಂದಿತು ಪತ್ರಿಯೊಂದು ಮನೆಯಾಳೇ ತನ್ನ ಕೈಯಿಂದ ॥೮೭॥

ಹೆಣ್ಣುಮಕ್ಕಳು ತಮ್ಮ ಝಣಝಣ ಝಣರೆಂದು ಧನಿಯನು ಕೊಡು ವಂಥ ಕರದಿಂದಲಿ ।ಬೆಳ್ಳ। ಬಣ್ಣದ ಹಂಜಿಯ ಹಿಡಿಯುತ್ತಲಿ ।ಅಚ್ಚ। ಸಣ್ಣದ ನೂಲನ್ನು ತೆಗೆಯುತಲಿ ॥ ಬೆಣ್ಣೆಯಂತಹ ತಮ್ಮ ಕರದಿಂದ ಗರಗರ ತಿರುವುತ್ತ ದಣಿದರು ಕೈರಾಟಿಯನ್ನು ॥೮೮॥

ಜಯಗಾಂಧಿ ಜಯಗಾಂಧಿ ಜಯಗಾಂಧಿಯೆನ್ನುತ್ತ ಬೆಳಕನು ಸುರಿಸುತ್ತ ನಾಡೊಳಗೆ ।ಏನು! ಭಯವಿಲ್ಲದಂತಹ ರಣದೊಳಗೆ ಬಂದು ಕೊಯಿದರು ಪರದಾಸ್ಯ ಕ್ಷಣದೊಳಗೆ ॥ ಭಯವೆಂದರೇನೆಂದು ಕೇಳುವ ತರುಣರು ಹೊಕ್ಕರು ದಬ್ಬಾಳಿಕೆಯ ಕಿಚ್ಚಿನೊಳಗೆ ॥೮೯॥

ಸಿಕ್ಕಲ್ಲಿ ಹೊಡೆದರು ಸಿಕ್ಕಲ್ಲಿ ಹಿಡಿದರು ಸಿಕ್ಕಲ್ಲಿ ಬಡೆದರು ಆರಸಾಳರು । ಬಲು । ಸೊಕ್ಕಿನ ಬಲದಿಂದ ನಡೆಸಿದರು । ನಮ್ಮ ಕುಕ್ಕುತ ಬಲವನು ಸಾಗಿಸಿದರು ॥ ಉಕ್ಕುತ ಬರುವಂಥ ದಬ್ಬಾಳಿಕೆಯು ನೋಡಿ ಬೆರಗಾದರು ನಮ್ಮ ಸ್ವಾತಂತ್ರ್ಯ ವೀರರು ॥೯೦॥

ಭರತಭೂಮಿಯು ಚೆಲ್ವ ತೊಡೆಯು ಮೇಲಾಡುವ ನೂರಾರು ಸ್ವಾತಂತ್ರ್ಯ ಸೈನಿಕರು । ಕಡು । ವೀರರಾಗಿರುವಂಥ ಬಾಂಧವರು । ನಮ್ಮ । ಶೂರತನದ ಲಜಪತರಾಯರು । ಶೂರ । ಹಿಂದು ಮುಸಲ್ಮಾನ ಬಾಂಧವರೆಲ್ಲ ಭಂಗವಿಲ್ಲದೆ ಸಾಗಿ ಬಂದಿ ಸೇರಿದರು ॥೯೧॥

ಬೆಳದಿಂಗಳನ ಚೆಲ್ವ ಮಳೆಯನು ಕರೆಯುತ್ತ ಗಗನದಿ ಬರುವಂಥ ಚಂದ್ರನನು । ಬಲು । ಹೊಳೆಯುವ ತೇಜದ ಹಿರಿಯನನು । ಬಂದು । ಸೆಳೆದಿತು ವಿಷವು ಮಹಾತ್ಮನನು ॥ ಬೆಳಗುವ ಚಂದ್ರನ ತೆರೆಹಿಡಿದಿತು ಬಂದು ಸರಕಾರವೆಂಬುವ ಹಿರಿದಾದ ರಾಹುವು ॥೯೨॥

ರಾಮಮೋಹನರಾಯ ಸರೋಜಿನಿ ತಿಲಕರು ಜನಮನ ಹೊಲವನು ಹರಗಿದರು । ನಮ್ಮ । ಭೂಮಿಯ ಹದವನು ಮಾಡಿದರು । ಬಲು । ಕೈಮಲ ಬೀಜವ ಬಿತ್ತಿದರು ॥ ಭೂಮಿಯ ಸ್ವಾತಂತ್ರ್ಯರತ್ನದ ಸಸಿಯನು ಬೆಳೆಸಿದರಲ್ಲವೆ ಸ್ವಾರ್ಥವ ಸುರಿಸಿ ॥೯೩॥

ತಿಲಕರ ಮರಣದ ಬಿಸಿಲನು ತಾಳದೆ ಬಳಲುತ್ತ ಬಾಡುವ ಭೂಮಿಯಲಿ । ಮತ್ತೆ । ಬೆಳಕನು ಸುರಿಸುತ ಆತ್ಮದಲಿ । ಬಂದು । ಹೊಲಸನು ತೆಗೆಯಿಸಿ ಸೀಮೆಯಲಿ ಬಲವಾದ ಮೋಹನ ಸ್ವಾತಂತ್ರ್ಯ ಸಸಿಯನು ಬೆಳೆಸಿದ ಬಿಸಿಬಿಸಿ ರಕ್ತವ ಹಣಿಸಿ ॥೯೪॥

ಸ್ವಾರ್ಥವ ತುಳಿದೆದ್ದು ಸ್ವಾರ್ಥವ ತೊರೆಯುತ್ತ ಸ್ವಾರ್ಥದ ಬೇಡಿಯ ಕಡಿಕಡಿದು । ಪರ । ಮಾರ್ಥದ ತತ್ವವ ತಿಳಿತಿಳಿದು । ಜನ್ಮ । ಸಾರ್ಥಕ ಮಾಡಿರಿ ಸ್ವಾರ್ಥತ್ಯಾಗದ ಸರಸಾದ ರಸದಿಂದ ಗಿಡವಾಗಿ ಬೆಳೆವದು ಸ್ವಾತಂತ್ರ್ಯ ಸಸಿಯು ॥೯೫॥

ಹಡೆದಂಥ ತಾಯಿಯ ಕೋಮಲ ಕರಳೊಳು ಕರುಣವಿಲ್ಲದೆ ಖಡ್ಗ ಹೊಡೆಬಹುದು । ಅದೆ । ಪಡೆದಂಥ ಹಸುವನು ಕಡೆಬಹುದು । ತಮ್ಮ । ಒಡಲನು ಕರಕರ ಕೊರೆಬಹುದು ॥ ಹೇಡಿಯಾಗಿರುವಂಥ ಪರತಂತ್ರನ ರಕ್ತದ ಕುಂಡದೊಳೆಂದೆಂದು ಜನ್ಮವು ಬೇಡಾ ॥ ೯೬ ॥

ಭಗ ಭಗ ಉರಿವಂಥ ಕೆಂಡದ ಕಿಚ್ಚಿನ ಶಯ್ಯದಿ ಸುಖದಿಂದ ಮಲಗುವದು । ಬಗೆ । ಬಗೆಯಿಂದ ಮರಣವ ಹೊಂದುವದು । ವಿಷದ । ಹೊಗೆಯಿಂದ ಮೂಗಿನಲೇ ತುಂಬುವರು ॥ ಸೊಗಸಾದ ಕೊಂಡದ ಕೊಡವನು ಕುಡಿಯುವ ಜನ್ಮವಿದ್ದರೆ ಬೇಕು ಪರದಾಸ್ಯ ಬೇಡಾ ॥ ೯೭ ॥

ಏಳಿರಿ ಬಿಸಿ ಬಿಸಿ ರಕ್ತದ ತರುಣರೆ ಇಳಿಯಿರಿ ಸ್ವಾತಂತ್ರ್ಯ ರಣದೊಳಗೆ । ನಮಗೆ । ಹೊಳೆಯುವ ಸಹನವೆ ಸುಖ ನಮಗೆ ನಮ್ಮ ಬೆಳೆಯುವ ಆತ್ಮವೆ ಬಲ ನಮಗೆ ಹೊಳೆಯುವ ಅಸಹದ ಸರಸಾದ ಶಸ್ತ್ರವ ಹಿಡಿಯಿರಿ ಕರದೊಳು ಕಡು ಧೈರ್ಯದಿಂದ ॥ ೯೮ ॥

ಯುದ್ದದ ಮಾತಿಲ್ಲ; ಬಡಿಯುವ ಮಾತಿಲ್ಲ ಕಡೆಯುವ ಮಾತಿಲ್ಲ ರಣದೊಳಗೆ । ಆತ್ಮ । ಶುದ್ಧಿಯ ಸ್ವಾತಂತ್ರ್ಯ ಸುಖ ನಮಗೆ । ನಮ್ಮ । ಬುದ್ಧಿಯು ಹಿರಿದಾದ ಬಲ ನಮಗೆ ಶುದ್ಧಿಯ ಮನದಿಂದ ಬುದ್ಧಿಯು ಬಲದಿಂದ ಬಿಡಿಸಿರಿ ಬುದ್ಧನ ಬಂಧನದಿಂದ ॥ ೯೯ ॥

ತತ್ತ್ರಿಯೊಳಿರುವಂಥ ತಿಳಿಯಾದ ರಸವೆಲ್ಲ ದಿನದಿನ ಬಲಿಯುತ್ತ ನಡೆಯುವದು । ತನ್ನ । ಹೊತ್ತಿಗೆ ಬಲುವಾಗಿ ಬೆಳೆಯುವದು । ಒಮ್ಮೆ । ಕುತ್ತದ ಕವಚವ ಕಡೆಯುವದು ಕುತ್ತನು ಕಡೆಯಲು ಹಕ್ಕಿಯ ಹಾದಿಯು ನೆನೆಯಿರಿ ಜಾನಕಿ ತನಯನ ವಚನವ ॥ ೧೦೦ ॥ ಮಾತರಂ ವಂದೇ ಮಾತರಂ ॥

ಲೇಖಕರು: **ಸೀತಾತನಯ**

ಕಾವ್ಯನಾಮಾಂಕಿತ ಶ್ರೀಧರ ಖಾನೋಲ್ಕರ
(ಗೋಕರ್ಣ ಸ್ಟಡಿ ಸರ್ಕಲ್‌ನಲ್ಲಿದ್ದ ಮುದ್ರಿತ ಪ್ರತಿ ಶ್ರೀ ಸುರೇಂದ್ರ ದಾನಿಯವರು ದೊರಕಿಸಿದ್ದು.)

ಗೇಯ ಗೀತೆಗಳ ಅಕಾರಾದಿ

೧೩. ಐಕ್ಯವೊಂದೆ ಮಂತ್ರ ಐಕ್ಯದಿಂದೆ ಸ್ವತಂತ್ರ

೧೪. ಒಂದಾಗದೆ ಸಾಧನೆಗಳು ಫಲಿಸವು

೧೫. ಓಡಿಸಬೇಕು ; ಸೆರ ಮಾರಿಯು ಓಡಿಸಬೇಕು

೧೬. ಕಂಡ ಮೇಲಾದರೂ ಕಣ್ತೆರೆಯದಿಹರೇ

೧೭, ಕರ್ನಾಟ ವೀರರೇಳಿ ; ರಣಭೇರಿ ಕೊಂಬ ಕೇಳಿ

೧೮. ಕರವ ಮುಗಿದು ಪೇಳುವೆನು, ಭರತ ವಾಸಿಗಳೇ

೧೯. ಕಾಂತನ ಕಳಕೊಂಡು ಕಾಮಿನಿಯಂತೆ ಭಾರತ ಹಾಕ್ವದು ಕಣ್ಣೀರ

೨೦. ಕುಡಿ ಕುಡಿ ಕುಡಿ ಹೆಂಡ ! ಜಗದೊಳ ! ಗಾಗಲು ನೀ ಭಂಡ

೨೧. ಕುಡಿಯದಿರಿ ಕುಡಿಯದಿರಿ ! ಸೆರೆ ಸೇಂದಿ ಬ್ರಾಂದಿಗಳ ಕುಡಿಯದಿರಿ

೨೨. ಕುಡಿಯ ಬೇಡಿರಣ್ಣ ! ಕಳ್ಳನು ! ಕುಡಿಯ ಬೇಡಿರಣ್ಣ

೨೩. ಕುಡಿಯಂ ಬೇಡಿ ಸೆರೆ ಸೇಂದಿಗಳ ! ಬಿಡಿರಿ ಬಿಡಿರಿ ದುರ್ವ್ಯಸನಗಳ

೨೪. ಕೂಗಿತ್ತೈ ಮಹಾತ್ಮಾಗಾಂಧಿ ಕೋಗಿಲೆ ಕೈಮೀರಿ ತೆಸುತಲೇ

೨೫. ಕೂಗುತಿಹುದುದು ನಮ್ಮ ಕಹಳೆ ನಾಡವೀರರೇ

೨೬. ಕೊತ್‌ಗೊಂಡ ಕೇಳರಿನ್ನ ! ಪ್ರೀತಿಯಿಂದ ಕೇಳರಿನ್ನ

೨೭. ಕೋಳಿ ಕೂಗಿತು ! ಕನ್ನಡದ ರಣಕಾಳೆ
ಮೊಳಗಿತು ಜನರೆ ಕೇಳಿರಿನ್ನೇಳಿಕೇಳಿರಿ

೨೮, ಕ್ರಾಂತಿವೀರ ವಾಲಿ ಚನ್ನಪ್ಪನವರ ಕಥಿ
ಪ್ರೀತಿಲಿಂದ ಕೇಳಿರಿ ಕೂತ ಜನರಾ

೨೯. ಖರೇ ಖರೇ ಹೇಳತೀನಿ ಬರಬರತ ದಿನಮಾನ ಭರತಾವ ಬಾಳಚಂದ

೩೦. ಖಾದಿಯು ಸುಖ ಜೀವನಕ್ಕೆ ಸಮೀಪದ ಹಾದಿ

೩೧. ಗಾಂಧಿಯೇ ಗಾಂಧಿ ಸರ್ವತ್ರ ಗಾಂಧಿ

೩೨. ಗಾಂಧೀ ಮಹಾತ್ಮರ ನುಡಿಯ ! ಕೇಳಿ !
ಮುಂದೆ ಮುಂದಕೆ ಮಾಡಿರಡಿಯಾ

೩೩. ಚಳವಳಿ ಅಂದರೇನ ತಿಳಿಸಿ ಹೇಳತೀನಿ ಕೂತು ಕೇಳಿರಿ ಸರ್ವಜನ

೩೪. ಚಿತ್ತವಿಟ್ಟು ಕೇಳಿರಿ ಶಿಸ್ತಿನ ಮೊಹರಂದ ಕಥನಾ

೩೫. ಜನಗಣಮನ ಅಧಿನಾಯಕ ಜಯಹೇ ಭಾರತ ಭಾಗ್ಯವಿಧಾತಾ

೩೬. ಜಪಿಸಿರಿ ಸ್ವರಾಜ್ಯ ಮಂತ್ರವನೂ ಧರಿಸಿರಿ ಸ್ವದೇಶಿ ವಸ್ತ್ರವನೂ

೩೭. ಜೈ ಭಾರತ ಭೂಮಿಗೆ ಮಾತೆಗೆ

೩೮. ಜೈ ದೇಶ ಹಿತಾರ್ಪಿತ ಗಾಂಧಿ ! ಮಹಾತ್ಮ ಭಾರತ
ಮಾತೆಯ ಜೀವಾತ್ಮ

೩೯. ತರವೇ ತರವೆಯಿದು ಎಮ್ಮ ಬಂಧುಗಳಾ

೪೦. ತೂಕಡಿಕೆಯುನು ಕಳೆಯು ; ದೇಕೆ ಕುಳಿತಿಹೆ ಗೆಳೆಯು

೪೧. ದೇವ ದರ್ಶನಕ್ಕಾಗಿ ಬಂದಿಹೆವು–ನಾವು

೪೨. ದೇಶಸೇವೆ ಮಾಡ್ವರಾರ್ ; ಈಶಸೇವೆ ಗೈಯ್ವರಾರ್
ದೇಶಕಾಗಿ ಸಾಯ್ವರಾರ್

೪೩. ದಿಗಂತದಾಚೆಗೆ ನದಿವನದಾಕಡೆ ! ಆ ಬೆಟ್ಟದ ಮರೆಗಿದೆ ತಾಯ್ನಾಡು

೪೪. ಧಗಧಗಿಸುತಿದೆ ಭಾರತ ಹೃದಯದೆ ದುಃಖಾಃ ನಲ ಪ್ರಜ್ವಲಿಸುತಿದೆ

೪೫. ಧನ್ಯ ಭಾರತ ವೀರ ಕೇಸರಿಗಳೇ ಭಾಪು

೪೬. ಧರಣಿಯೊಳು ಭರತಖಂಡದ ಸಿರಿಗೆ ಸರಿಗಾಣೆವೆಂದು

೪೭. ನನ್ನ ನಾಡ ಚಿನ್ನ ನಾಡ ಬನ್ನ ಬಡುತ ಪೊರೆಯುವಾ

೪೮. ನಮ್ಮದೀ ನಮ್ಮದೀ ಭರತ ಭೂಮಿ

೪೯. ನಮ್ಮನೇತಕೆ ದೂರ--ದೂರ ನಿಲಿಸುವಿರಿ ?

೫೦. ನಮ್ಮವರು ನಾವು ನಮ್ಮದು ಭರತದೇಶಾ

೫೧. ನವಯುಗ ಪದ್ಧತಿ ನವಸ್ತ್ರೀ ಪುರುಷರ ನವರಂಗಾಟಗಳೆಚ್ಚಾಯ್ತು

೫೨. ನಾಡವರೇ ನಿಜ ನಾಡಿಗರು

೫೩. ನಾವು ಬಂದೇವ ರಾಷ್ಟ್ರ ಸ್ವಾತಂತ್ರ್ಯ ಮಾಡೋದಕ್ಕ
೫೪. ನಾವೆಂತ ಮನುಜರೇಳಿ ; ಸ್ವಾತಂತ್ರ್ಯವಿಲ್ಲದವರು
೫೫. ನೀ ಧರಿಸೈ ನಮ್ಮ ದೇಶಿ ಖಾದಿ
೫೬. ನೋಡಿರಿವನು ನಾಡಿನಜ್ಜನು ; ನೀವೆಲ್ಲರಿಲ್ಲಿ
೫೭. ಪದಹಕ ಹೊಂದಿಸಿ ಹಾಡುವೆನು
೫೮. ಪರದಾಸ್ಯ ಪಾಶದ ಬೇಡಿಯ ಕಡಿಯುವ ಬಗೆಯನು
ಕೇಳಿರಿ ದೇಶದ ಜನರೇ
೫೯. ಪರ--ದೇಶದ ಬಟ್ಟೆಯ ಬಿಡು ಬಿಡು ಸುಡು ಸುಡು
೬೦. ಪುಣ್ಯಭೂಮಿ ಭಾರತೀ, ರಮ್ಯಭೂಮಿ ಭಾರತೀ
೬೧. ಬಡ ಬೋರೇಗೌಡ ಹಳ್ಳಿಯ ಜೀವನ ಏನೇಳಲಿ ! ನಾನೇನೇಳಲಿ
೬೨. ಬನ್ನಿ ಬನ್ನಿ ಕಲಿಗಳೇ, ರಾಷ್ಟ್ರಕಿಂದು ಹೊಸಕಳೆ
೬೩. ಬರುವುದು ಬರಲೆಂದೆನ್ನುವೆವು
೬೪. ಬಾಬಾ ನೋಡೋಣ ಕನ್ನಡ ಕೇಸರಿಯಾ
೬೫. ಭಪ್ಪರೆ ನನ್ನ ಖಾದಿ ಅಂಗಿ
೬೬. ಭರತ ಖಂಡವೆಂಬ ನಭದಿ ತರಣಿ ತೆರದಿ ಕನ್ನಡ ದೇಶ
೬೭. ಭಾರತಮಾತೆ ಪಾಲಿಸೆಮ್ಮನು ಕರುಣದಿಂದ
೬೮. ಭಾರತಮಾತೆಯ ಮಕ್ಕಳು ನಾವು ಸೇವಾದಲದ ಸೈನಿಕರು
೬೯. ಭಾರತೀಯರು ನಾವು ಭಾರತೀಯರು
೭೦. ಭಾರತೀಯರೆಲ್ಲ ಕೇಳಿ ! ಭೂರಿ ಚರಕ ಮಹಿಮೆಯನ್ನು
೭೧. ಭಾರತೀಯರೆ ನಮ್ಮ ಭಾಗ್ಯ ಸಂಪತ್ತು
೭೨. ಭಾರತಾಂಬೆಯ ಹೀನಸ್ಥಿತಿಯನು ಕಣ್ಣು ತೆರೆಯುತ ನೋಡಿರಿ
೭೩. ಮಂಗನ್ನ ನೋಡಿದೆನೋ ನಾನೊಂದು

೭೪. ಮನಃ ಪೂರ್ವಕ ಸಾಧಿಸು ಮನುಜ ಸ್ವರಾಜ್ಯಕೆ

೭೫. ಮರೆತೆ ಏತಕಯ್ಯ ನಿನ್ನ ಮಾತೃ ಭೂಮಿಯ

೭೬. ಮಹದೇವಪ್ಪ ಮೈಲಾರರೆಂಬ ! ಮಹಾತ್ಮ ನಮ್ಮ ಊರಿಗೆ ಬಂದು

೭೭. ಮಹಾತ್ಮಾ ಗಾಂಧಿಯವರ ಉಪದೇಶವು ನಮಗಿದು
ರಾಷ್ಟ್ರಕಾರ್ಯಾ ವಿಜಯಾ

೭೮. ಮಾತೃಭೂಮಿ ಜನನಿ ನಿನ್ನ ಚರಣ ಸೇವೆ ಮಾಡುವಾ

೭೯. ಮಾತೆ ಭಾರತೀಯ ಸ್ವತಂತ್ರ ಮಂತ್ರ ವೆಂದೆ ಮಾತರಂ

೮೦. ಮಾತೇ ಜಯ ಜಯ ಜಯ ಭಾರತೀಜಯ

೮೧. ಮುಳಗಳ್ಯೋ ಈದು ! ರಾಜ್ಯದ ! ಮುಳಗಳ್ಯೋ ಈದು

೮೨. ಮೂಲ ಗಾಂಧಿಯ ಮಂತ್ರ ! ಮೇಲೆ ನೂಲುವ ಯಂತ್ರ

೮೩. ಮೂಲ ಮಾತ ನಿಮಗ ಕಾಲ ಬಿದ್ದ ಹೇಳತೀನಿ
ಕೇಳಿಕೊಂಡು ನಡಿಬೇಕ್ರಿ ಸರ್ವಜನಾ

೮೪. ಮೊಹರಂದ ಹಬ್ಬವ ಮಾಡಿ ಮೋದವ ಪಡೆಯಿರಿ ಸರ್ವರಾ

೮೫. ರಾಷ್ಟ್ರೀಯ ದೇಳಿಗೆಗೆ ಮನವ ನೀನಿರಿಸು

೮೬. ವಂದೆ ಮಾತರಂ ಎಂದು ಸಾರುತಿಹ ಗಾಂಧಿ ಮಾರ್ಗವೆ ಸ್ಥಿರವಾಯ್ತು

೮೭. ವಿರಾಟ ಪುರುಷನ ಭರತ ಪ್ರಪಂಚದಿ ಜಯ ಕರ್ನಾಟಕ ಶೃಂಗಾರ

೮೮. ಶರಣು ಮೋಹನ ದಾಸಗೆ ; ಶರಣು

೮೯. ಶೂರನಾದ ಸಂಗೊಳ್ಳಿಯ ರಾಯನಾಯ್ಕ ಪುಂಡಾ

೯೦. ಶೃಂಗಾರದ ನವರಂಗದ ಮೈಸೂರ್ ಕಾಂಗ್ರೆಸ್ ಘನವೆನ್ನುವನೊಬ್ಬ

೯೧. ಶ್ರೀಕರವೆನಿಸಿದ ಈ ಕರ್ನಾಟಕ ಲೋಕದಿ ಬೆಂಗಳ್ಳೂರ್ ಮೆರೆಯುತಲಿ

೯೨. ಶ್ರೀ ಘನಸರಕಾರದ ಘನತರ ಮಹಿಮೆಯ ಏನೇಳಲಿ

೯೩. ಶ್ರೀಸಾಮಾನ್ಯರೆಲ್ಲ ಕೂಡಿ ; ಪ್ರೇಮಾತ್ಮರಾಗಿ ನೋಡಿ

೯೪. ಶ್ರೇಷ್ಠವಾಗಿಹುದೆಮ್ಮ ಭರತಭೂಮಿ

೯೫. ಸಂದೇಶಾ ಪೂಜ್ಯ ಗಾಂಧಿಯರಾ ! ಜಗತ್ತಿನ ಮುಂದಿಡುವೆ ನಿದರಾ

೯೬. ಸಂಸ್ಥಾನದವರಂದರ ಸಾಧಾರಣ ಮನುಷ್ಯರಲ್ಲ

೯೭. ಸರ್ಕಾರದ ದಬ್ಬಾಳಿಕೆಯುಬ್ಬರ ಜಗತ್ತಿನಲ್ಲಿಯೇ ಅತಿಯಾಯ್ತು

೯೮. ಸರ್ಕಾರದ ದಬ್ಬಾಳಿಕೆಯುಬ್ಬರ ಜಗತ್ತಿನೆಲ್ಲೆಯ ವ್ಯಾಪಿಸಿದೆ

೯೯. ಸಖರೆ, ಸೇಂದಿ ಸೆರೆ ಕುಡಿದು ಸುಖವನು ಪೊಂದಿದವರಾರು ?

೧೦೦. ಸತ್ಯ ಸಮರದಾ ಹತ್ಯ ಪೇಳುವೆನು ಚಿತ್ತದಿ ಲಾಲಿಸಿರಿದುಸತ್ಯ

೧೦೧. ಸತ್ಯಾಗ್ರಹ ಸ್ವಾತಂತ್ರ್ಯ ಸುಪಂಥವ ! ಬಿಡಬ್ಯಾಡಿ ಬಿಡಬ್ಯಾಡಿ

೧೦೨. ಸರ್ವಧರ್ಮ ತತ್ವಂಗಳ ಸಾರವು ! ನೀತಿ ಧರ್ಮ ಇದು ನಿಜ

೧೦೩. ಸ್ವಾತಂತ್ರ್ಯ ಎಂದು ದೊರಕುವದು ನಮ್ಮ ದೇಶಕಾದಿನ

೧೦೪. ಸಿಪಾಯಿ ಆಗು ! ಸ್ವಾತಂತ್ರ್ಯ ವಿಜಯಿ ನೀನಾಗು

೧೦೫. ಸ್ಥಿರವಾಗಿ ಬೆಳೆಯುತಿದೆ ; ಭಾರತ ಮಹಾ ಸಭೆಯು

೧೦೬. ಸುರೆಯನ್ನು ತೊರೆಯಯ್ಯಾ

೧೦೭. ಸುಮ್ಮನೆ ಕುಳಿತರೆ ಸಿಗದು ಸ್ವರಾಜ್ಯವು

೧೦೮. ಸುಮ್ಮನೆ ದೊರಕುವುದೇ ಸ್ವರಾಜ್ಯವು

೧೦೯. ಸೂರೆಯಾದುದು ನಮ್ಮ ಭರತ ಭೂಮಿ
ಸೈರಿಸುವದೆಂತಿದನು ಮಾರಿ ಹೋಗಿಹೆವು

೧೧೦. ಸೆರೆಗುಡುಕರ ಬಾಳುವೆ ಕೆಡುಕು ; ವರಣಸುವುದಕಾಗದ ಬದಕು

೧೧೧. ಸೇವಿಸಬೇಡಿ ; ಸೇವಿಸಬೇಡಿ

೧೧೨. ಹೆಂಡವನ್ನು ಕುಡಿಯಬೇಡಣ್ಣ ; ಈ ಲೋಕದೊಳಗೆ

೧೧೩. ಹೇಯನ್ನ ಧರತಮಾತೆ ; ಏನಿದಾಯ್ತು ಏನಿದಾಯ್ತು

೧೧೪. ಹೊಡೆದೋಡಿಸಿ ಬಿಡಿರೀಗ ; ಈಗ

ಬಿ. ಎಂ. ಶ್ರೀ ಪ್ರತಿಷ್ಠಾನ ★ ಬೆಂಗಳೂರು-19 ★

ಭಾರತೀಯ ಸ್ವಾತಂತ್ರ್ಯ ಚಳುವಳಿ, ಭಾರತದಲ್ಲಿ ಸಂಭವಿಸಿದ ಮೊಟ್ಟ ಮೊದಲ ರಾಷ್ಟ್ರವ್ಯಾಪಿಯಾದ ಒಂದು ಸಮಗ್ರ ಆಂದೋಲನವಾಗಿದೆ. ಪರಕೀಯ ಪ್ರಭುತ್ವದಿಂದ ಈ ದೇಶವನ್ನು ಬಿಡುಗಡೆ ಮಾಡಲು ಮಹಾತ್ಮಾ ಗಾಂಧಿಯವರ ಮುಂದಾಳು ತನದಲ್ಲಿ ನಡೆದ ಈ ಅಭೂತ ಪೂರ್ವ ಹೋರಾಟ ಇಡೀ ಭಾರತದ ಎಲ್ಲ ಸ್ತರಗಳವರನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡು, ಹೇಗೆ ಕ್ರಿಯಾಶೀಲವೂ, ಯಶಸ್ವಿಯೂ ಆಯಿತೆಂಬುದು ಈಗ ಚರಿತ್ರೆಯ ಒಂದು ಭಾಗವಾಗಿದೆ. ಚಾರಿತ್ರಕವಾದ ಈ ಹೋರಾಟದಲ್ಲಿ ಪಾಲುಗೊಂಡ ಶ್ರೀ ಸಾಮಾನ್ಯ ಹಾಗೂ ಅಸಾಮಾನ್ಯರನ್ನು ಕುರಿತು, ಅವರ ತ್ಯಾಗ, ಸೇವೆ-ಬಲಿದಾನಗಳನ್ನು ಕುರಿತು, ಅವರು ಎತ್ತಿಹಿಡಿದ ಮೌಲ್ಯಗಳನ್ನು, ನಂಬಿಕೊಂಡ ಆದರ್ಶಗಳನ್ನು ಕುರಿತು, ಕನ್ನಡ ನಾಡಿನ ಶಿಷ್ಟ ಹಾಗೂ ಜಾನಪದೀಯ ದನಿಗಳು, ಕವಿತೆಗಳ ಮೂಲಕ, ಹಾಡುಗಳ ಮೂಲಕ, ಲಾವಣಿ - ಗೀಗೀ ಪದ - ದುಂದುಮೆಗಳ ಮೂಲಕ, ಎಂಥ ಸಮೃದ್ಧವಾದ ಅಭಿವ್ಯಕ್ತಿಯನ್ನು ನೀಡಿ ಅಂದಿನ ಆಂದೋಲನಕ್ಕೆ ನೆರವಾದವು ಎಂಬುದನ್ನು, ಡಾ. ಸೂರ್ಯನಾಥ ಕಾಮತ್ ಅವರು ಸಂಪಾದಿಸಿರುವ 'ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು' ಎಂಬ ಈ ಸಂಗ್ರಹ, ದಾಖಲಿಸಿರುವ ಕ್ರಮ ವಿಶೇಷ ರೀತಿಯದಾಗಿದೆ.

ಭಾರತೀಯ ಸ್ವಾತಂತ್ರ್ಯ ಚಳುವಳಿಯಿಂದ ಸ್ಫೂರ್ತಿಗೊಂಡ ಹಾಗೂ ಅಂದಿನ ಹೋರಾಟಗಾರರಿಗೆ ಸ್ಫೂರ್ತಿ ನೀಡಿದ ಈ ಗೇಯ ಗೀತೆಗಳು ಅಂದಿನ ಕುದಿಗೊಂಡ ಪರಿಸರದ ಚಿತ್ರವೊಂದನ್ನು ತೆರೆಯುತ್ತಾ, ಒಂದು ಅರ್ಥದಲ್ಲಿ ಪ್ರತಿಭಟನಾ ಸಾಹಿತ್ಯದ ಎಲ್ಲ ಲಕ್ಷಣಗಳನ್ನೂ ಒಳಕೊಳ್ಳುವ ಸ್ವರೂಪದವುಗಳಾಗಿವೆ.